
# ಮನದಾಳದ ಕನಸುಗಳು



ಸಂಪಾದಕರು
ಪ್ರೊ. ಕಾಳೇಗೌಡ ನಾಗವಾರ
ಡಾ. ಮೀರಾಸಾಬಿಹಳ್ಳಿ ಶಿವಣ್ಣ



# ಮನದಾಳದ ಕನಸುಗಳು

ಸಹಸ್ರಮಾನ ಜಾನಪದ : ೧೭

# ಮನದಾಳದ ಕನಸುಗಳು

## ಜನಪದ ಕಲಾವಿದರ ನೋವು-ನಲಿವು : ಸಂಪುಟ ಎರಡು

ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ

ಪ್ರೊ. ಮೀರಾಸಾಬಿಹಳ್ಳಿ ಶಿವಣ್ಣ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು - ೫೬೦ ೦೦೨

MANADĀLADA KANASUGALU

JOY AND SORROW OF FOLK ARTISTS:

VOLUME TWO

EDITED BY

DR. KALEGOWDA NAGAVARA

PROFESSOR OF KANNADA

UNIVERSITY OF MYSORE, MANASAGANGOTRI

MYSORE - 570 006

DR. MEERASABIHALLI SHIVANNA

PROFESSOR OF KANNADA

GOVT, FIRST GRADE COLLEGE

CHALLAKERE - 577 522, CHITRADURGA DIST.

PUBLISHED BY

KARNATAKA JANAPADA AND

YAKSHAGANA ACADEMY

KANNADA BHAVANA

J.C. ROAD, BANGALORE - 560 002

FIRST EDITION : 2001 PAGES: XXIV + 304

© ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಬೆಲೆ : ರೂ. 200/- (ಎರಡುನೂರು ರೂಪಾಯಿಗಳು)

ಸಂಪಾದಕರು

ಪ್ರೊ. ಕಾಳೇಗೌಡ ನಾಗವಾರ

ಪ್ರೊ. ಮೀರಾಸಾಬಿಹಳ್ಳಿ ಶಿವಣ್ಣ

ಪ್ರಕಾಶಕರು

ಕೆ. ಸುಧೀಂದ್ರ, ರಿಜಿಸ್ಟ್ರಾ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

ಮುಖಪುಟ ವಿನ್ಯಾಸ : ಎಂ ಎಸ್ ಮೂರ್ತಿ

ರೇಖಾ ಚಿತ್ರಗಳು : ಜಿ ಕೆ ಶಿವಣ್ಣ

ಅಕ್ಷರ ಜೋಡಣೆ ಮತ್ತು ಮುದ್ರಣ:

ರಶ್ಮಿ ಮುದ್ರಣ

ಸುಧಾಮನಗರ, ಬೆಂಗಳೂರು. ದೂರವಾಣಿ : ೨೨೪೩೫೫೦

## ನಿತ್ಯಮಂಗಳಕರತತ್ತ್ವ

### ಪ್ರೊ. ಕಾಳೇಗೌಡ ನಾಗವಾರ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ನಾಡಿನ 'ಎಲ್ಲ ಬಗೆಯ ಜನಪದ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ತುಂಬು ಹಂಬಲವನ್ನುಳ್ಳ ಸಾಂಸ್ಕೃತಿಕ ಸಂಸ್ಥೆಯಾಗಿದೆ. ಪ್ರಕೃತಿಯ ಕಂದಮ್ಮಗಳಾದ ಹಳ್ಳಿಗಾಡಿನ ಜನತೆಯು ಹೃದಯವಂತಿಕೆಯಿಂದ ರೂಪಿಸಿರುವ ಈ ಜಗತ್ತು, ಅತ್ಯಂತ ಮಹತ್ವಪೂರ್ಣವೂ, ವೈವಿಧ್ಯಮಯವೂ ಆಗಿರುವ ಸೂಕ್ಷ್ಮತಮ ಸಾಂಸ್ಕೃತಿಕ ಸಂಪತ್ತನ್ನು ಹೊಂದಿದೆ. ನೂರಾರು ಪ್ರದರ್ಶನ ಕಲೆಗಳು, ಚೇತೋಹಾರಿಯಾದ ದೃಶ್ಯಕಲೆಗಳು, ವಸ್ತ್ರವಿನ್ಯಾಸ, ಅಪೂರ್ವ ಗುಡಿಕೈಗಾರಿಕೆಗಳು, ದಟ್ಟ ಅರಣ್ಯದ ನಡುವೆ ಅಡಗಿರುವ ಗಿರಿಜನರ ಬದುಕು ಹಾಗೂ ಜೀವವೈವಿಧ್ಯತೆಯಿಂದ ನಿತ್ಯಸಮೃದ್ಧವಾಗಿರುವ ನಮ್ಮ ಜನಪದ ಸಂಸ್ಕೃತಿಯ ಸೃಜನಶೀಲತೆಗೆ ವಿಚಿತ್ರತರ ಆಧುನಿಕತೆಯಿಂದಾಗಿ ಧಕ್ಕೆಯುಂಟಾಗತೊಡಗಿದೆ.

ಈ ಸಂದಿಗ್ಧ ಕಾಲಘಟ್ಟದಲ್ಲಿ ದುಡಿಮೆಗಾರರ ಲೋಕದ ದಟ್ಟ ಜೀವನಪ್ರೀತಿಯ ತಿರುಳಾಗಿರುವ ಚೈತನ್ಯಪೂರ್ಣ ಅಂಶಗಳಿಗಾಗಿ ಹಾರೈಸಿ ಅರ್ಥವತ್ತಾದುದನ್ನು ಕಟ್ಟಕ್ಕರೆಯಿಂದ ನಾವೆಲ್ಲ ಉಳಿಸಿಕೊಂಡು ಜೀವಂತವಾಗಿ ಬೆಳೆಯಬೇಕಾಗಿದೆ. ಈ ಬಗೆಯ ಆರೋಗ್ಯಕರ ಸಾಂಸ್ಕೃತಿಕ ವಾತಾವರಣದ ಹೆಮ್ಮೆಯ ಸಂಗಾತಿಗಳಾಗಿ ಪರಸ್ಪರ ದುಡಿಯಬೇಕೆಂಬ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಕಣ್ಣಮುಂದಿನ ಆದರ್ಶವಾಗಬೇಕಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಕೇವಲ ಕನ್ನಡ ಜಾನಪದಕ್ಕಷ್ಟೇ ಸೀಮಿತವಾದುದಲ್ಲ; ಹಿಂದಿನಿಂದಲೂ ಕನ್ನಡ ನೆಲದ ಅವಿಭಾಜ್ಯ ಅಂಗವಾಗಿಯೇ ನೆಲೆಗೊಂಡಿರುವ ಇಲ್ಲಿನ ತುಳು, ಕೊಡವ, ಕೊಂಕಣಿ, ಉರ್ದು, ಲಂಬಾಣಿ ಮುಂತಾದ ಬಹುಭಾಷಿಕ ಸಮುದಾಯದ

ಸಾಂಸ್ಕೃತಿಕ ವಲಯದಲ್ಲಿನ ಸೂಕ್ಷ್ಮಗಳು ಹಾಗೂ ಪರಸ್ಪರ ಕೊಳು- ಕೊಡುಗೆಗಳನ್ನು ಕುರಿತು ಅಧ್ಯಯನ ನಡೆಸುವುದು ನಮ್ಮ ಪ್ರಮುಖ ಕರ್ತವ್ಯವಾಗಿದೆ.

ಜನತೆಯ ಅನುಭವದ ಸಂಪತ್ತಿನ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಈ ಜ್ಞಾನನಿಧಿಯಲ್ಲಿ ಒಂದು ನಾಡಿನ ಮೌಲ್ಯ, ವಿವೇಕ ಮತ್ತು ಆದರ್ಶಗಳು ಅಡಗಿರುತ್ತವೆ. ಆದರೆ, ಆಧುನಿಕತೆಯ ಅತಿಯಾದ ಧಾವಂತದಲ್ಲಿರುವ ನಮ್ಮಿಂದಾಗಿ, ಪಂಚಭೂತಗಳ ತಾಯ್ತನದ ಮಡಿಲಾಗಿರುವ ಜನಪದ ಸಂಸ್ಕೃತಿಯು ತತ್ತರಿಸತೊಡಗಿದ. ವಿಸ್ಮೃತಿಗೆ ಒಳಗಾಗುತ್ತಿರುವ ಸಮುದಾಯಕ್ಕೆ ಸ್ಥಳೀಯ ಜ್ಞಾನಸಂಪತ್ತಿನ ಮಹತ್ವವನ್ನು ಮನದಟ್ಟುಮಾಡಬೇಕಾದ ಅವಶ್ಯಕತೆಯು ಇದೀಗ ಎಂದಿಗಿಂತ ಹೆಚ್ಚಾಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿರುವ ತತ್ತ್ವ ಪದಗಳ ಸಂಗ್ರಹಕಾರ್ಯ ಮತ್ತು ಅವುಗಳನ್ನು ಕುರಿತ ಚಿಂತನೆಯು ನಮ್ಮಲ್ಲಿ ಸಾಕಷ್ಟು ನಡೆದಿಲ್ಲವೆಂದು ನೋವಿನಿಂದಲೇ ಹೇಳಬೇಕಾಗಿದೆ. ನಮ್ಮ ಸಾಹಿತ್ಯಚರಿತ್ರೆಕಾರರೂ ಸಹ ವಿಶಾಲವಾದ ಜಾನಪದ ಲೋಕದ ಸಮಸ್ತ ಸೂಕ್ಷ್ಮಗಳು, ಅಪಾರ ಸಾಹಿತ್ಯ ಮತ್ತು ತತ್ತ್ವ ಪದಗಳ ಸಮೂಹವನ್ನು ಕಡೆಗಣಿಸುತ್ತಲೇ ಬಂದಿದ್ದಾರೆ. ಕೆಲವು ಬೆರಳೆಣಿಕೆಯ ಅನುಭಾವಿ ಕವಿಗಳನ್ನು ಅಲ್ಲಲ್ಲಿ ಮಾತ್ರ ಉಲ್ಲೇಖಿಸಲಾಗಿದೆ. ಈ ಬಗೆಯ ಅವಜ್ಞೆಗಿರುವ ಕಾರಣವೆಂದರೆ, ಬಹುಪಾಲು ನಮ್ಮ ತತ್ತ್ವಪದಗಳು ಅಸ್ತಿತ್ವದಲ್ಲಿರುವುದು ಮೌಖಿಕ ಪರಂಪರೆಯಲ್ಲಿಯೇ. ಕೇವಲ ಲಿಖಿತದಾಖಲೆಗಳನ್ನಷ್ಟೇ ಸ್ವೀಕರಿಸುವ ಹವ್ಯಾಸದ ಕಣ್‌ಪಟ್ಟಿ ಕಟ್ಟಿಕೊಂಡ ಓಟದ ಕುದುರೆಯಂತಹ ವ್ಯಾಖ್ಯಾನಕಾರರಿಗೆ ನೂರಾರು ವರ್ಷಗಳ ಕಾಲ ಬಾಯಿಂದ ಬಾಯಿಗೆ ಹರಿದುಬಂದು ಪರಂಪರೆಯಲ್ಲೇ ಉಸಿರಾಡುವ ಜನಪದದ ಒಡಹುಟ್ಟಾದ ತತ್ವಪದಗಳ ಮೆಲುದನಿಯಾಗಲಿ, ಜನಪದ ಮಹಾಕಾವ್ಯಗಳ ಮಹತ್ವದ ಧಾರೆಗಳಾಗಲಿ, ಅತಿಮುಖ್ಯವೆನಿಸಲಿಲ್ಲ.

ಬದುಕಿನ ಶ್ರೇಷ್ಠತೆಯನ್ನೇ ನಿರಂತರವಾಗಿ ಧ್ಯಾನಿಸುತ್ತಾ, ಜಾತ್ಯತೀತವೂ, ಮಾನವೀಯವೂ ಆದ ಮೌಲ್ಯಗಳಿಗಾಗಿ ಎಲ್ಲ ಕಾಲದಲ್ಲೂ

ಹಂಬಲಿಸುವ ನಮ್ಮ ಹೆಮ್ಮೆಯ ತತ್ವಪದಕಾರರು ಹಾಗೂ ಇತರ ಜನಪದದ ವಿಶಿಷ್ಟ ಅಭಿವ್ಯಕ್ತಿಗಳು ಕನ್ನಡ ಮಹಾಪರಂಪರೆಯ ಒಟ್ಟಂದದ ಚೆಲುವಿಗೆ ಮುಖ್ಯಕಾರಣವಾಗಿರುವುದನ್ನು ನಾವೆಲ್ಲ ಅಷ್ಟಾಗಿ ಮನಗಂಡಿಲ್ಲವೆಂದೇ ನಾನು ಭಾವಿಸಿದ್ದೇನೆ.

ಹೊಸಗನ್ನಡ ಕಾವ್ಯದ ಅರುಣೋದಯಕ್ಕೆ ಈ ತತ್ವಪದಗಳು ಬೀಜರೂಪಿಯಾಗಿಯೇ ಹೊರಬಂದಿದೆ. ಸುಮಾರು ಹದಿನೇಳನೆಯ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೆ, ಸವೆದ ಜಾಡಿನಲ್ಲಿ ಜಡವಾಗಿಯೇ ಸಾಗಿದ್ದ ಕನ್ನಡ ಕಾವ್ಯಕ್ಕೆ ಹೊಸಹಾದಿ ತೋರಿಸಿ, ಸಾಂಪ್ರದಾಯಿಕ ಸ್ವರೂಪವನ್ನೇ ಬದಲಿಸಿದ ಅಚ್ಚ ದೇಶೀ ಸಂಸ್ಕೃತಿಯ ಅಭಿವ್ಯಕ್ತಿಗಳಾಗಿ ಈ ತತ್ವಪದಗಳು ಕಂಗೊಳಿಸಿವೆ. ಪಂಚಭೂತಗಳ ತಾಯ್ತನದ ಸಕಲ ಸಲ್ಲಕ್ಷಣಗಳನ್ನೂ ತಮ್ಮೊಳಗಿನ ಒಳಗಾಗಿ ಕಾಯ್ದಿಟ್ಟುಕೊಂಡಿರುವ ಅಕ್ಷರವಂಚಿತ ಜನತೆಯಾದ ನಮ್ಮ ಹಿರಿಯರು-ಹೆತ್ತವರ ಅನುಭಾವದ ಜಗತ್ತಿನ ಅಪರೂಪದ ಕಾಣಿಯೇ ಸರಳ, ಸುಂದರ ಜನಪದ ತತ್ವಪದಗಳಾಗಿ ನಮ್ಮ ನಡುವೆ ರೂಪುಗೊಂಡಿವೆ.

ವೈದಿಕ ಪರಂಪರೆಯ ವ್ಯಕ್ತಿಕೇಂದ್ರಿತ ಅಧ್ಯಾತ್ಮಿಕ ಚಿಂತನೆಗಳಿಗಿಂತ ವಿಭಿನ್ನ ನೆಲೆಯಲ್ಲಿನ ಹೆಂಗರುಳಿನ ಈ ಸಾಹಿತ್ಯವು ಆಕಾಶದ ಕೆಳಗಿನ ಸರ್ವಸ್ವವನ್ನೂ ಸೂಕ್ಷ್ಮವಾಗಿ ಗಮನಿಸಬಲ್ಲ ಜಾನಪದದ ನೆಲೆಗಟ್ಟಿನ ಮೇಲೆ ನಿಂತಿದೆ; ಹಾಗೆಯೇ ಎಲ್ಲರ ಬದುಕಿಗೂ ಒಳ್ಳೆಯದನ್ನೇ ಹಾರೈಸುವ ಬೌದ್ಧದರ್ಶನದ ತೆರೆದ ಮನಸ್ಸಿನ ಆಶಯಗಳು, ಸೂಫಿ ಪರಂಪರೆಯಲ್ಲಿರುವ ತುಂಬುಹೃದಯದ ಪ್ರೇಮತತ್ವ ಹಾಗೂ ವಚನಕಾರರಲ್ಲಿರುವ ಸಹಬಾಳ್ವೆಯ ಲೋಕಕಲ್ಯಾಣದ ತುಡಿತಗಳನ್ನು ಇನ್ನಿಲ್ಲದಂತೆ ಏಕಕಾಲಕ್ಕೆ ಒಳಗೊಂಡಿದೆ. ಧಾರ್ಮಿಕ, ಸಾಮಾಜಿಕ ಮತ್ತು ಪ್ರಭುತ್ವಗಳ ಸಂಬಂಧದ ಎಲ್ಲ ಬಗೆಯ ಕೇಂದ್ರೀಕೃತ ಸ್ಥಾವರ- ಮೌಢ್ಯಗಳಿಗೆ ಹರಿದಾರಿ ದೂರದಲ್ಲಿರುವ ಗುಣ ಈ ತತ್ವ ಪದಕಾರರದು. ಲೋಕದ ಸಕಲಜೀವರಾಶಿಗಳನ್ನು ದುಃಖ- ಕ್ಲೇಶಗಳಿಂದ ಬಿಡುಗಡೆಗೊಳಿಸಿ, ಜಗತ್ತನ್ನೇ ಹಲವು ಬಗೆಯ ಪುಷ್ಪಗಳಿಂದ ತುಂಬಿರುವ ಸುಂದರ ಹೂದೋಟವನ್ನಾಗಿ ಮಾರ್ಪಡಿಸಲು ತದೇಕ ಚಿತ್ತದಿಂದ ಹಾರೈಸುವ ನಿತ್ಯಮಂಗಳಕರ

ಸೂತ್ರದ ನಿಲುವುಗಳನ್ನು ತತ್ರ ಪದಗಳು ತಮ್ಮ ಉಸಿರಿನ ಉಸಿರಾಗಿರಿಸಿಕೊಂಡಿವೆ.

ಕನ್ನಡವನ್ನೂ ಒಳಗೊಂಡಂತೆ ಭಾರತದ ವಿವಿಧ ಭಾಷೆಗಳಲ್ಲಿ ನಾನಾ ರೂಪಗಳಲ್ಲಿ, ಬಗೆಬಗೆಯ ಆಚರಣೆಗಳಲ್ಲಿ ಮೈದೋರಿರುವ ತಿಳಿಯಾದ ಹೊಳೆಯಂತಹ ಅನುಭಾವೀ ಲೋಕದ ಈ ಅಸಲೀ ಕಾಣೆಗಳು, ಸಾಮಾನ್ಯ ಜನತೆಯ ಸಮೃದ್ಧ ಅನುಭವರಾಶಿಯ ನಟ್ಟನಡುವೆ, ಪಾರದರ್ಶಕ ಭಾಷೆಯಲ್ಲಿ ಜೀವಂತ ಆಕಾರವನ್ನು ಪಡೆದಿವೆ. ಹದಿನೇಳನೇ ಶತಮಾನದಿಂದ ಹತ್ತೊಂಬತ್ತನೇ ಶತಮಾನದವರೆಗೂ ಅಗಾಧ ಪ್ರಮಾಣದಲ್ಲಿ ರೂಪುಗೊಂಡಿರುವ ಈ ತತ್ತ್ವಪದಗಳು ಜನಪದ ಸಂಸ್ಕೃತಿಯ ಎಲ್ಲ ಬಗೆಯ ಆಹ್ಲಾದಕರ ಸತ್ವರಾಶಿಯನ್ನು ಮೈಗೂಡಿಸಿಕೊಂಡು ಕನ್ನಡ ಸಾಹಿತ್ಯ ಪರಂಪರೆಯ ಮಹತ್ವದ ಭಾಗವಾಗಿವೆ.

ಮನುಕುಲದ ಏಕತೆಗಾಗಿ ಒಂದೇ ಸಮನೆ ಧ್ಯಾನಿಸುವ ಜಾನಪದದ ಒಡಲಿನಿಂದಲೇ ಹುಟ್ಟು ಪಡೆದ ನಮ್ಮ ವಚನಗಳು ಮತ್ತು ತತ್ತ ಪದಗಳು - ಜಾತಿ, ಮತ, ಅಸ್ಪೃಶ್ಯತೆ, ಲಿಂಗಭೇದ ನೀತಿ, ವರ್ಗಭೇದ ಹಾಗೂ ಧಾರ್ಮಿಕ ಮೌಢ್ಯಗಳ ಎಲ್ಲೆ ಮೀರಿ ಬದುಕನ್ನು ನಿಶ್ಚಿಂತಗೊಳಿಸುವ ಪರಿಶುದ್ಧ ಮನಸ್ಸಿನ ಪಾರದರ್ಶಕ ಅಭಿವ್ಯಕ್ತಿಗಳಾಗಿವೆ. ಈ ಬಗೆಯ ಆಶಯಗಳನ್ನೇ ತಮ್ಮ ಪ್ರಾಣಶಕ್ತಿಯನ್ನಾಗಿರಿಸಿಕೊಂಡಿರುವ ನಮ್ಮ ಹೆಮ್ಮೆಯ ಕವಿಗಳಾದ ವಚನಕಾರರು, ಕುಮಾರವ್ಯಾಸ, ಹರಿಹರ, ದಾಸರು, ಸರ್ವಜ್ಞ ಮುಂತಾದವರು ಜಾನಪದದ ಮೊಲೆಹಾಲಿನಿಂದ ದಷ್ಟಪುಷ್ಟವಾಗಿರುವ ಮನೆಮಕ್ಕಳಾಗಿದ್ದಾರೆ. ಇವರ ಅಭಿವ್ಯಕ್ತಿಗಳಲ್ಲಿ ಉಕ್ಕಿ ಹರಿಯುವ ಜನಪದ ಸಂಸ್ಕೃತಿಯ ವಿವರಗಳಿಂದಾಗಿ ಈ ಕಾವ್ಯಗಳು ಲಿಖಿತ ಸಂಸ್ಕೃತಿಯ ಒಣಚೌಕಟ್ಟನ್ನು ದಾಟಿ ಸಹಜವಾಗಿ ಕಾಣಿಸಿಕೊಂಡಿವೆ.

ಮಾನವ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ರೂಪುಗೊಂಡ ಈ ಜನಪದ ತತ್ವ ಪದಗಳು ಪರಂಪರಾನುಗತವಾದ ಜ್ಞಾನ ಹಾಗೂ ವಿಸ್ತಾರವಾದ ಲೋಕಾನುಭವದ ಒಡಲಿನಿಂದ ಮೂಡಿಬಂದಿವೆ. ಸೂಕ್ಷ್ಮಾತಿಸೂಕ್ಷ್ಮ ಚಿಂತನೆ, ಬದುಕನ್ನು ಹಸನುಗೊಳಿಸುವ ಚಿರಂತನ

ಮೌಲ್ಯಗಳ ತಡಕಾಟ ಹಾಗೂ ದೈನಂದಿನ ಬದುಕಿನ ಸಣ್ಣಪುಟ್ಟ ವಿವರಗಳ ಮೂಲಕವೇ ಅನುಭಾವದ ಒಳಬೆಳಕನ್ನು ಮೂಡಿಸುವ ಹಂಬಲ, ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಅಪೂರ್ವ ಕಾವ್ಯರೂಪಗಳ ಗಣಿಯಾದ ಅರಿವಿನ ಪ್ರಶಾಂತಲೋಕದ ಈ ಜನಪದ ತತ್ತ್ವಪದಗಳು ಮಹತ್ವಪೂರ್ಣವಾದುವುಗಳಾಗಿವೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಮತ್ತು ವಿವೇಚನೆಯ ದಾರಿಯಲ್ಲಿ ಒಂದುನೂರು ವರ್ಷಗಳನ್ನು ಸವೆಸಿರುವ ನಾವು, ಒಂದು ನಿರ್ಣಾಯಕ ಘಟ್ಟಕ್ಕೆ ಈಗ ಬಂದು ತಲುಪಿದ್ದೇವೆ. ಜಾಗತೀಕರಣ, ಕಂಪ್ಯೂಟರ್ ನಾಗರೀಕತೆ ಹಾಗು ಹುಸಿಮೌಲ್ಯಗಳನ್ನು ಎಡೆಬಿಡದೆ ಬಿತ್ತುತ್ತಿರುವ ಮಾಧ್ಯಮಗಳ ತೀವ್ರತರವಾದ ದಾಳಿಯ ನಡುವೆ ಕನ್ನಡವೂ ಸೇರಿದಂತೆ ಜಗತ್ತಿನ ಎಲ್ಲ ದೇಶೀಸಂಸ್ಕೃತಿಯ ಅಕ್ಕರೆಯ ಕುರುಹಾದ ಸಹಜಮೌಲ್ಯಗಳು ನುಚ್ಚುನೂರಾಗುತ್ತಿರುವುದನ್ನು ನಮ್ಮ ಕಣ್ಣೆದುರೇ ಕಾಣುತ್ತಿದ್ದೇವೆ. ಇಂಥ ಹೊತ್ತಿನಲ್ಲಿ ಸಮುದಾಯದ ಹಿತಕ್ಕಿಂತ, ಅಹಂ ಕೇಂದ್ರಿತವೂ ವೈವಿಧ್ಯತೆಗೆ ಮಾರಕವೂ ಆಗಿರುವ ಏಕರೂಪ ಸಂಸ್ಕೃತಿಯ ಹಲ್ಲೆಯಿಂದ ನಾವು ಪಾರಾಗುವ ದಾರಿಗಳನ್ನು ನಾವೇ ಹಠದಿಂದ ಹುಡುಕಿಕೊಳ್ಳಬೇಕಾಗಿದೆ.

ಭಾರತದಲ್ಲಿರುವ ಅಲೆಮಾರಿ, ಬುಡಕಟ್ಟು ಜನಾಂಗಗಳನ್ನು ಒಳಗೊಂಡ ಅನಕ್ಷರಸ್ಥಲೋಕದ ಚೈತನ್ಯವಾದ ಜನಪದ ಸಂಸ್ಕೃತಿಯು, ನೂರಾರು ವರ್ಷಗಳಿಂದ ಕೇವಲ ಯಾಂತ್ರಿಕ ಆಚರಣೆಗಳಲ್ಲಿ ಹುದುಗಿರುವ ಶಿಷ್ಟ ಸಂಸ್ಕೃತಿಯ ನಿರಂತರ ದಾಳಿಯಿಂದ ಪಾರಾಗುವುದರಲ್ಲಿ ನಿಸ್ಸೀಮತನವನ್ನೇ ತೋರಿದೆ. ಈ ಸಂಸ್ಕೃತಿಯಲ್ಲಿ ಇಂದಿಗೂ ಬಳಕೆಯಲ್ಲಿರುವ ವಿವಿಧ ಜಾನಪದೀಯ ಆಚರಣೆಗಳು, ನಂಬಿಕೆಗಳು ಹಾಗೂ ಮಹಾಕಾವ್ಯ-ಕಾವ್ಯ-ಗೀತೆ-ಕಥೆ-ಗಾದೆ ಒಗಟುಗಳು ಮುಂತಾದ ಅಭಿವ್ಯಕ್ತಿ ಪ್ರಕಾರಗಳು ಪುರೋಹಿತಶಾಹಿ ಹಿನ್ನೆಲೆಯ ನಂಬಿಕೆ-ಆಚರಣೆ-ಪುರಾಣಗಳಿಗಿಂತಲೂ ಸಮೃದ್ಧವೂ, ಅನನ್ಯವೂ ಆಗಿರುವ ಮಾಧುರ್ಯಪೂರ್ಣ ಆತ್ಮೀಯತೆಯ ಲೋಕವನ್ನೇ ಒಳಗೊಂಡಿವೆ. ಆಳದಲ್ಲಿ ದೇಶೀಸಂಸ್ಕೃತಿಯ ಎಲ್ಲ ಬಗೆಯ ಉದಾತ್ತ ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿವೆ.

ಹೀಗಿದ್ದೂ ನಮ್ಮ ಪರಂಪರೆಯಲ್ಲಿ ಕಂಡುಬರುವ ಜನಸಂಸ್ಕೃತಿಯ ವೈಶಿಷ್ಟ್ಯಗಳು ಹಾಗೂ ಅಸಲೀ ಸೂಕ್ಷ್ಮಗಳು ಕಾಲಕಾಲಕ್ಕೆ ಈ ಬಗೆಯಾದ ಸಾಂಸ್ಕೃತಿಕ ಯಜಮಾನತ್ವದ ದಾಳಿಯಿಂದ ಪಾರಾಗಲು ಕಂಡುಕೊಂಡ ಸಹಜ ಹೊರದಾರಿಗಳಲ್ಲವೇ? ಇಂದೂ ನಮಗೆ ಇವೆಲ್ಲಾ ಮಾದರಿಯಾಗಬಲ್ಲವೆ? ಪರಸ್ಪರ ಚರ್ಚೆ, ಆಲೋಚನೆ-ಪುನಾರಾಲೋಚನೆಗಳ ಮೂಲಕ ಇದಕ್ಕೆಲ್ಲಾ ಉತ್ತರವನ್ನು ಕಂಡುಕೊಳ್ಳಬೇಕಾದ ಸಾಮೂಹಿಕ ಹೊಣೆಗಾರಿಕೆಯು ನಮ್ಮೆಲ್ಲರ ಮೇಲಿದೆ. ಈ ಮೂಲಕ ಮಾನವನ ಸೃಜನಶೀಲ ಪ್ರತಿಭೆಗೆ ಧಕ್ಕೆ ಬಾರದ, ನಮ್ಮದೇ ಆದ ಸ್ವಾವಲಂಬಿ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ತಂತ್ರಜ್ಞಾನ ಹಾಗೂ ಪರಿಸರ ಸಂಬಂಧಿಯಾದ ಯೋಜನೆಗಳನ್ನು ರೂಪಿಸಿಕೊಳ್ಳುವ ತವಕಗಳು ನಮ್ಮ ಸಮುದಾಯದಲ್ಲಿ ಅಂಕುರಿಸಬೇಕಾಗಿದೆ.

ಈ ಬಗೆಯ ನಮ್ಮ ಆಲೋಚನೆಗಳ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನವು ತನ್ನ ಮಡಿವಂತಿಕೆಯ ಒಣಚೌಕಟ್ಟುಗಳನ್ನು ಸಡಿಲಗೊಳಿಸಿಕೊಂಡು, ಮನುಕುಲವನ್ನು ಅರ್ಥಪೂರ್ಣವಾದ ಹೊಸ ವ್ಯವಸ್ಥೆಯ ಕಡೆಗೆ ಸಾಮೂಹಿಕವಾಗಿ ಕೊಂಡೊಯ್ಯುವ ಆಶಯಗಳ ಮೂಲಕ ತನ್ನನ್ನು ತಾನು ವಿಸ್ತರಿಸಿಕೊಳ್ಳಬೇಕಾಗಿದೆ. ಕರ್ನಾಟಕ ಜಾನಪದಕ್ಕೆ ಸಂಬಂಧಪಟ್ಟ ಅಧ್ಯಯನವು ಸ್ವಾತಂತ್ರ್ಯಪೂರ್ವದಿಂದಲೇ ನಮ್ಮಲ್ಲಿ ನಡೆದಿದೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಗ್ರಾಮೀಣಪ್ರದೇಶದಿಂದ ಬಂದ ಅನೇಕ ಪ್ರತಿಭಾವಂತ ಸಾಹಿತಿ- ಸಂಶೋಧಕ-ಆಸಕ್ತರ ತಂಡಗಳು ಜಾನಪದದ ಕನ್ನೆನೆಲವನ್ನು ಹೊಕ್ಕು ಸಂಗ್ರಹ ಮತ್ತು ಅಧ್ಯಯನಕ್ಕೆ ತೊಡಗಿದ್ದು ನಮ್ಮ ಕಣ್ಣ ಮುಂದಿನ ಇತಿಹಾಸದ ಭಾಗವೇ ಆಗಿದೆ.

ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಇನ್ನಿಲ್ಲದಷ್ಟು ಆನಂದಮಯವನ್ನಾಗಿಸಿಕೊಂಡ ನಮ್ಮ ಜನಪದ ಕಲಾವಿದರು ವಾಸ್ತವವಾಗಿ ಗಂಧರ್ವಲೋಕದ ಗೆಣೆಕಾರರಾಗಿದ್ದಾರೆ. ತಾಯಿಯ ಮಡಿಲಿನ ತುಂಬುಅಕ್ಕರೆಯನ್ನು ನೀಡಿರುವ ಇವರ ಸುತ್ತಣ ಜಗತ್ತು ಗಂಧವತಿಪೃಥ್ವಿಯ ಸಕಲಸಲ್ಲಕ್ಷಣಗಳನ್ನು ಒಳಗೊಂಡಿರುವ ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ.

ನೂರಾರು ವರ್ಷಗಳ ಹಿಂದಿನಿಂದಲೂ ಬಾಯಿಂದ ಬಾಯಿಗೆ ಹರಿದು ಬರುತ್ತಿರುವ ಈ ಕಲಾವಿದರ ಸಾಹಿತ್ಯವು ನಮ್ಮ ಸುತ್ತಲೂ ಪರಿಶುದ್ಧ ನೀಲಾಕಾಶದಂತೆ ವ್ಯಾಪಿಸಿರುವುದು ಆನಂದದಾಯಕ ಸಂಗತಿಯಾಗಿದೆ.

ಪ್ರಕೃತಿಯ ಮಡಿಲಲ್ಲಿ ಆಡಿ ಬೆಳೆದು, ಗಾಣದೆತ್ತಿನಂತೆ ನಿರಂತರವಾಗಿ ದುಡಿಯುತ್ತಲೇ ಬಂದು, ಉದ್ದಕ್ಕೂ ಅಕ್ಷರವಂಚಿತರಾಗಿರುವ ನಮ್ಮ ಸೃಜನಶೀಲ ಮನಸ್ಸಿನ ಈ ನಿತ್ಯಮಂಗಳಕರತತ್ತ್ವದ ಆರಾಧಕರಾದ ಜನತೆಯ ಸಂಸ್ಕೃತಿಯಲ್ಲಿ ಸ್ಪಷ್ಟವಾಗಿ ಕಂಡುಬರುವ ಸಹಬಾಳ್ವೆ ಜಾತ್ಯತೀತ ನಿಲುವುಗಳು, ನಿಸರ್ಗಪ್ರೇಮ ಹಾಗೂ ಸಕಲಜೀವಿಗಳ ಏಳಿಗೆಯನ್ನು ಕುರಿತಂತೆ ಇರುವ ತೆರೆದ ಮನಸ್ಸು ಅತ್ಯಂತ ಮುಖ್ಯವಾದುದು. ಆಕಾಶದ ಕೆಳಗಿನ ಎಲ್ಲ ಬಗೆಯ ವೈವಿಧ್ಯತೆಯ ಅಪರೂಪದ ಸಂಗತಿಗಳಿಗೂ ಕಾಲಕಾಲಕ್ಕೆ ಅಭಿವ್ಯಕ್ತಿ ನೀಡುತ್ತಾ ಬಂದಿರುವ ಇಲ್ಲಿನ ಅಪೂರ್ವ ಗಾದೆ-ಒಗಟು-ಕಥೆ- ಕಾವ್ಯರೂಪಗಳ ತಾಜಾ ಅನುಭವಲೋಕವು ನಮ್ಮ ಅರಿವಿನ ಎಲ್ಲೆಗಳನ್ನು ವಿಸ್ತರಿಸಲು ನೆರವಾಗುತ್ತದೆ.

ನಮ್ಮ ಜನಪದ ಕಲಾವಿದರು ಪ್ರಕೃತಿಯ ಮಡಿಲಲ್ಲಿ ಆಡಿ ಬೆಳೆದು, ಗಾಣದೆತ್ತಿನಂತೆ ನಿರಂತರವಾಗಿ ದುಡಿಯುತ್ತಲೇ ಬಂದು ನಾಗರಿಕತೆಯ ಉದ್ದಕ್ಕೂ ಅಕ್ಷರವಂಚಿತರಾಗಿದ್ದಾರೆ. ಭರತಖಂಡದ ಇದುವರೆಗಿನ ಚರಿತ್ರೆಯೆಂದರೆ, ಅದು ಅಕ್ಷರಸ್ಥರು ನೀಡಿರುವ ವಿವರಗಳ ಒಂದು ನಿರ್ದಿಷ್ಟ ಮೊತ್ತ ಮಾತ್ರ ಆಗಿದೆ. ಇದರ ಜೊತೆಗೆ ನಾಡಿನುದ್ದಗಲಕ್ಕೂ ಇರುವ ಬಹುಸಂಖ್ಯಾತ ಅನಕ್ಷರಸ್ಥ ಸಮುದಾಯವು ಕಂಡುಂಡ ವೈವಿಧ್ಯಪೂರ್ಣವಾದ ಸುಡುವಾಸ್ತವಗಳ ಸಾಗರೋಪಮ ವಿವರಗಳು ಎಲ್ಲ ಜ್ಞಾನಾಕಾಂಕ್ಷಿಗಳನ್ನೂ ನಿಬ್ಬೆರಗುಗೊಳಿಸಬಲ್ಲವು. ಅನ್ನ-ಬಟ್ಟೆ-ಆಸರೆ ಅದ್ಧೂರಿಗಳನ್ನೆಲ್ಲ ನಮಗೆ ಶ್ರದ್ಧೆಯಿಂದ ನೀಡಿರುವ ಈ ಶ್ರಮಜೀವಿ ಬಂಧುಗಳು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಅಕ್ಷರಶಃ ಪ್ರಭುಗಳೇ ಆಗಿದ್ದಾರೆ. ಈ ಪ್ರಭುಗಳ ನೇರ ಅನ್ನಿಸಿಕೆಗಳು ಮತ್ತು ಬದುಕನ್ನು ಸಮೃದ್ಧಗೊಳಿಸುವ ಕನಸುಗಳು ಹೇಗಿವೆಯೆಂಬುದನ್ನು ತಿಳಿಯಲು ನಾವೆಲ್ಲ ಪ್ರಯತ್ನಿಸಬೇಕಾಗಿದೆ. ಆಗಮಾತ್ರ ಈ ಅತ್ಯದ್ಭುತ ಲೋಕವು ವಿಸ್ಮಯಪೂರಿತ ಸಂಗತಿಗಳನ್ನು ನಿಜಕ್ಕೂ ತೆರೆದಿಡಬಲ್ಲದು. ಇದರಿಂದಾಗಿ ನಮ್ಮ ಸುತ್ತಣ ಆವರಣದ ಪೂರ್ಣಸತ್ಯದ ಸಕಲ

ಸೂಕ್ಷ್ಮಗಳನ್ನು ಹೊಸದೃಷ್ಟಿಕೋನದಿಂದ ಕಾಣುವ ಅಪೂರ್ವ ಅವಕಾಶವು ನಮ್ಮದಾಗುತ್ತದೆ.

ಒಂದು ಸಮಾಜದ ಅಂತರಂಗವನ್ನು ಅರಿತುಕೊಳ್ಳಲು ಬುದ್ಧದೇವ, ಬಸವಣ್ಣ, ಅಕ್ಕಮಹಾದೇವಿ, ಗಾಂಧೀಜಿ, ಅಂಬೇಡ್ಕರ್, ಲೋಹಿಯಾ, ವಿಶ್ವೇಶ್ವರಯ್ಯ, ಕುವೆಂಪು ಅವರಂತಹ ಮಹನೀಯರ ಆತ್ಮಕಥೆಗಳು ಹೇಗೆ ಮುಖ್ಯವೋ ಹಾಗೆಯೇ ಸತ್ಯ ಮತ್ತು ಸೌಂದರ್ಯಕ್ಕಾಗಿ ನಿರಂತರವಾಗಿ ಹಾರೈಸಿದ ಮತ್ತು ಆ ಮೂಲಕ ತಮ್ಮ ಸಮಸ್ತ ಬದುಕನ್ನೇ ಇನ್ನಿಲ್ಲದಷ್ಟು ಆನಂದಮಯವಾಗಿಸಿಕೊಂಡ ನಮ್ಮ ಜನಪದ ಕಲಾವಿದರ ಆತ್ಮಕಥೆಗಳ ವಿವರಗಳೂ ಕೂಡ ಅತ್ಯಂತ ಮಹತ್ವದವಾಗಿವೆ. ಇದನ್ನೆಲ್ಲ ಚೆನ್ನಾಗಿ ಅರಿತಿರುವ ಜಾನಪದ ಅಕಾಡೆಮಿಯು ಜನಪದ ಕಲಾವಿದರ ಆತ್ಮಕಥೆಗಳ ವಿವಿಧ ಸಂಪುಟಗಳನ್ನು ಪ್ರಕಟಿಸುವ ಸಾಂಸ್ಕೃತಿಕ ಮಹತ್ವದ ಯೋಜನೆಯನ್ನು ಸಂತೋಷದಿಂದ ಕೈಗೆತ್ತಿಕೊಂಡಿದೆ.

ನಾಗರಿಕ ಸಮಾಜದ ಎದೆ ನಡುಗಿಸುವಂತಹ ಹಳ್ಳಿಗಾಡಿನ ಬದುಕಿನ ಅನುಭವಗಳು, ಅಲ್ಲಿನ ಅಪರೂಪದ ಮಾನವೀಯ ಸಂಬಂಧಗಳು, ವಿವಿಧ ಬಗೆಯ ಆಚರಣೆಗಳು, ನಂಬಿಕೆಗಳು. ಕಿತ್ತುತಿನ್ನುವ ಬಡತನದ ದಾರುಣತೆಯ ನಡುವೆಯೂ ಈ ಜನಸಮುದಾಯಕ್ಕಿರುವ ಜೀವನಪ್ರೀತಿಯು ತನ್ನೆಲ್ಲ ನಿಜರೂಪದಲ್ಲಿ ಈ ಸಂಪುಟಗಳಲ್ಲಿ ದಾಖಲಾಗುತ್ತಿದೆ. ಇತಿಹಾಸಕಾರರಿಗೆ, ಮಾನವಶಾಸ್ತ್ರಜ್ಞರಿಗೆ, ಮನೋವಿಜ್ಞಾನಿಗಳಿಗೆ, ಪುರಾಣ-ಸಾಹಿತ್ಯ-ಸಂಸ್ಕೃತಿಗಳ ಬಗ್ಗೆ ಅಕ್ಕರೆಯುಳ್ಳವರಿಗೆ, ಜಾನಪದ ಅಧ್ಯಯನಕಾರರಿಗೆ ಅಪೂರ್ವ ಒಳನೋಟಗಳನ್ನು ನೀಡುವ ಮನದಾಳದ ಕನಸುಗಳು ಜನಪದ ಕಲಾವಿದರ ಆತ್ಮಕಥೆಗಳ ಈ ಎರಡನೆಯ ಸಂಪುಟವು ಭಾರತೀಯ ಜಾನಪದ ಅಧ್ಯಯನದಲ್ಲಿನ ಒಂದು ಮೌಲಿಕ ಗ್ರಂಥವಾಗಿದೆ.

ಪ್ರೀತಿಯ ಶುಭಾಶಯಗಳೊಡನೆ,

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ

ಮಾನಸಗಂಗೋತ್ರಿ, ಮೈಸೂರು - ೫೭೦ ೦೦೬

೦೮-೦೬-೨೦೦೧

# ಸಂಪಾದಕರ ಮಾತು

ನಮ್ಮಲ್ಲಿ ಅನೇಕರ, ಅನೇಕ ಬಗೆಯ ಆತ್ಮಕತೆಗಳಿವೆ - ಆದರೆ ಇದೆಲ್ಲ ಅಕ್ಷರಸ್ಥರ ಆತ್ಮಕಥೆಗಳು, ಶಿಷ್ಟರ ಆತ್ಮಕತೆಗಳು - ಎಲ್ಲೋ ಅಲ್ಲೊಂದು ಇಲ್ಲೊಂದು ದಲಿತರ ಆತ್ಮಕತೆಗಳನ್ನು ಬಿಟ್ಟರೆ. ಆದರೆ ಅನಕ್ಷರಸ್ಥರಿಗೂ ಒಂದು ಆತ್ಮಕತೆ ಇದ್ದರೆ ಅದು ಜನಪದ ಕಲಾವಿದರಿಗೆ ಮಾತ್ರ ಎಂಬುದನ್ನು ಈಗ ಜಾನಪದ ಅಕಾಡೆಮಿಯು ಅಂಥ ಆತ್ಮಕತೆಗಳನ್ನು ಬರೆಸುವ ಮೂಲಕ ಒಂದು ಹೊಸ ಶಕೆಯನ್ನೇ ಪ್ರಾರಂಭಿಸಿದೆ.

ಆಧುನಿಕ ಜ್ಞಾನ ಮಾತ್ರ ಜ್ಞಾನವಲ್ಲ, ನಮಗೆ ಗೊತ್ತಿಲ್ಲದ, ಅಸಡ್ಡೆಗೆ ಒಳಗಾದವರದೂ ಒಂದು ಅದ್ಭುತ ಜ್ಞಾನ ಸಂಪತ್ತು ಇದೆ ಎಂಬುದು ತಡವಾಗಿಯಾದರೂ ಅರಿವಿಗೆ ಬರುತ್ತಿದೆ. ಆಧುನಿಕ ಬದುಕು ನಿರ್ಲಕ್ಷಿಸಿದ, ಆರ್ಥಿಕ ಅವಜ್ಞೆಗೆ ಒಳಗಾದ ನಮ್ಮ ಎಷ್ಟೋ ಜನಪದರ ಬದುಕಿನಲ್ಲಿ ಆಧುನಿಕರ ವಿಕ್ಷಿಪ್ತತೆಗೆ ಪರಿಹಾರಗಳು ಇವೆ, ಮಣ್ಣಿನ ಮಕ್ಕಳ ಸಂಸ್ಕೃತಿಯಿಂದಲೂ ಕಲಿಯುವುದಿದೆ, ನಮ್ಮೆಲ್ಲ ಸಂಸ್ಕೃತಿಯ ಮೂಲ ಬೇರುಗಳು ಇರುವುದು ಜಾನಪದದಲ್ಲಿ, ಅಕ್ಕರ ವಿದ್ಯೆಯೊಂದೇ ವಿದ್ಯೆಯಲ್ಲ, ಕೋಟಿವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂಬ ಪ್ರಜ್ಞೆ ಮೂಡುತ್ತಿದೆ; ಇಲ್ಲಿಯವರೆಗೂ ಮಿಥೆಗಳಲ್ಲಿ ವಿಹರಿಸುತ್ತಿದ್ದ ಭ್ರಮಾಲೋಕದಿಂದ ಹೊರಬರುತ್ತಿದ್ದೇವೆ.

ಶತಶತಮಾನಗಳಿಂದ ನಿರ್ಲಕ್ಷಿಸಿದ ನಮ್ಮದೇ ದೇಸಿ ಜ್ಞಾನಪರಂಪರೆಯ ನಿಜವಾದ ವಾರಸುದಾರರು ಈ ಜನಪದರೇ ಎಂಬುದರ ಬಗ್ಗೆ ಇಲ್ಲಿಯವರೆಗೂ ವಿಸ್ಮರಣೆಗೆ ಒಳಗಾಗಿದ್ದ ನಾವು ಎಚ್ಚೆತ್ತುಕೊಳ್ಳುತ್ತಿದ್ದೇವೆ; ನಮ್ಮ ಸಾಂಪ್ರದಾಯಿಕ ಆಲೋಚನಾ ವಿಧಾನದ ಭೂತಗನ್ನಡಿಯನ್ನು ಬದಿಗಿಟ್ಟು ಆರೋಗ್ಯಕರ ಚಿಂತನೆಯತ್ತ ನಿತ್ಯಮಂಗಳಕರತತ್ವದತ್ತ ನಮ್ಮನ್ನು ಒಡ್ಡಿಕೊಳ್ಳಬೇಕಾದ ಅನಿವಾರ್ಯತೆ, ಇಂದಿನ ಜಾಗತೀಕರಣದ ಕುರುಡು ಕಾಂಚಾಣದ ಕುಣಿತದಲ್ಲಿ ಎಂದಿಗಿಂತ ಹೆಚ್ಚಾಗಿ ಇದೆ ಎಂಬುದು ಮನದಟ್ಟಾಗುತ್ತಿದೆ.

ಇಂದಿನ ಸಂಕ್ರಮಣ ಸಂದರ್ಭದಲ್ಲಿ ನಮ್ಮ ಮೂಲಗಳಲೆ ನಾವು ನೋಡಬೇಕು, ಕಳೆದುಕೊಂಡ ಸಂಪತ್ತನ್ನು ಅಲ್ಲಿಯೇ ಹುಡುಕಬೇಕು, ಅಂಥ ಸಾಂಸ್ಕೃತಿಕ ಹುಡುಕಾಟದ ಹಲವು ಮಜಲುಗಳನ್ನು ಈ ಸಂಪುಟದಲ್ಲಿ ಕಾಣಬಹುದು. ಈ ಸಂಪುಟದಲ್ಲಿ ಚಿತ್ರದುರ್ಗ ಜಿಲ್ಲೆಯ ವಿವಿಧ ಕಲೆಗಳನ್ನು ಪ್ರತಿನಿಧಿಸುವ ವ್ಯಕ್ತಿಗಳ ಆತ್ಮಕತೆಗಳನ್ನು ಸಾಕಷ್ಟು ಪಿಸ್ತಾರವಾಗಿಯೇ ನೀಡಲಾಗಿದೆ.

ಮರೆಯಾಗುತ್ತಿರುವ ಗರಡಿ ಸಂಸ್ಕೃತಿಯ ವಿವರಗಳನ್ನು ತನ್ನೆಲ್ಲ ಆಯಾಮಗಳೊಂದಿಗೆ ದಟ್ಟವಾದ ಸಾಂಸ್ಕೃತಿಕ ವಿವರಗಳೊಂದಿಗೆ ಬಿಚ್ಚಿಕೊಳ್ಳುವುದನ್ನು ಪೈಲ್ವಾನ್ ವಸಂತರಾವ್ ನೆನಪುಗಳು ಭಾಗದಲ್ಲಿ ಕಾಣಬಹುದು. ಪೈಲ್ವಾನನೊಬ್ಬನ ಬದುಕಿನ ಮೂಲಕ ಆ ಕಾಲದ ಅನೇಕ ವಿವರಗಳನ್ನು ಅತ್ಯಂತ ಸೂಕ್ಷ್ಮವಾಗಿ, ಆದರೆ ಅಷ್ಟೇ ವಿಸ್ತಾರವಾಗಿ ಬಿಚ್ಚಿಡುತ್ತಾ ನಿರರ್ಗಳವಾಗಿ ಸಾಗುವ ಕಥನ ಕಾಲಘಟ್ಟದಲ್ಲಿ ನಮ್ಮನ್ನು ಹಿಂದಕ್ಕೆ ಕರೆದೊಯ್ಯುತ್ತದೆ. ಗರಡಿ ಮನೆಯ ಮಟ್ಟಿಪೂಜೆ, ನೂಲು ಹುಣ್ಣಿಮೆಯ ಸಂಪ್ರದಾಯಗಳು ನಮ್ಮಲ್ಲಿ ಕುತೂಹಲವನ್ನು ಉಂಟು ಮಾಡುತ್ತವೆ. ಪೈಲ್ವಾನರ ಪ್ರಪಂಚದಲ್ಲಿ ನಮ್ಮನ್ನು ಒಂದು ಸುತ್ತು ಹಾಕಿಸುವ ಈ ರೋಚಕ ಕಥನ ಗತಗಾಲಕ್ಕೊಂದು ಕಿಂಡಿಯಂತಿದ್ದು, ಪೈಲ್ವಾನರ ಏಳು-ಬೀಳುಗಳನ್ನು ಅತ್ಯಂತ ಹತ್ತಿರದಿಂದ ದರ್ಶನ ಮಾಡಿಸುವಲ್ಲಿ ನಿರೂಪಕ (ಕತೆಗಾರ) ಟಿ. ಆರ್. ರಾಧಾಕೃಷ್ಣ ಮೇಲುಗೈ ಸಾಧಿಸಿದ್ದಾರೆ.

ಗ್ರಾಮದೈವವಾದ ಸೋಮನ ಮೂಲಕ ಸೋಮನ ಕರಿಯಪ್ಪನ ಒಂದು ಕಾಲಕ್ಕೆ ನಿರುಮ್ಮಳವಾಗಿದ್ದ ಗ್ರಾಮೀಣ ಬದುಕಿನ ಚಿತ್ರವೊಂದನ್ನು ನಮ್ಮೆದುರು ತೆರೆದಿಡುತ್ತದೆ. ಸೋಮನೊಂದಿಗೆ ಹಾಸುಹೊಕ್ಕಾಗಿರುವ ಗಾವು ಸಿಗಿಯುವ ಪೋತನಾಯಕ, ಗ್ರಾಮದೇವತೆಯನ್ನು ಹೊಗಳಿ ಹಾಡಿ, ಬಯಳ ಹೊಳೆಯಲ್ಲಿ ಮುಳುಗೇಳಿಸುವ ಆಸಾದಿ ಹೀಗೆ ಒಂದಕ್ಕೊಂದು ತಳಕು ಹಾಕಿಕೊಂಡಿರುವ ಅನೇಕ ಆಚರಣೆಗಳ ದರ್ಶನವೂ ಆಗುತ್ತದೆ, ಬದಲಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ಚಿತ್ರಣವೂ ದೊರೆಯುತ್ತದೆ. ಹೀಗಾಗಿ ಇದು ಸಂಕ್ರಮಣ ಸ್ಥಿತಿಯಲ್ಲಿರುವ ಎಲ್ಲ ಗ್ರಾಮಗಳ ಕತೆಯೂ ಆಗಿರುವುದನ್ನು ಎಚ್. ಶ್ರೀಶೈಲ ಆರಾಧ್ಯ

–

ಅವರು ತಮ್ಮದೇ ಆದ ನಿರರ್ಗಳ ಶೈಲಿಯ ಮೂಲಕ ಇಲ್ಲಿ ಬಿಚ್ಚಿಟ್ಟಿದ್ದಾರೆ.

ಬದುಕೇ ಹಾಡು, ಹಾಡೇ ಬದುಕು ಆಗುವ ಅದ್ಭುತ ಕಥನವೊಂದನ್ನು ಜಿ. ಎಸ್. ಉಜ್ಜನಪ್ಪನವರು ಸೋಬಾನೆ ಸಿದ್ದಮ್ಮ- ನೀಲಮ್ಮ ಬರಹದಲ್ಲಿ ನಿರೂಪಿಸಿದ್ದಾರೆ. ಬಾಳಿ ಬದುಕಿದ ಇಬ್ಬರು ಕೋಗಿಲೆಗಳ ದುರಂತದ ಬದುಕಿನೊಂದಿಗೆ ಒಂದು ಗ್ರಾಮದ ಏಳು- ಬೀಳುಗಳನ್ನು ಅತ್ಯಂತ ಕಲಾತ್ಮಕವಾಗಿ ಚಿತ್ರಿಸಲಾಗಿರುವ ಈ ಕಥನ ಕರುಳು ಹಿಂಡುವ ಕಟುವಾಸ್ತವವನ್ನೂ ತಿಳಿಸುವಲ್ಲಿ ಯಶಸ್ವಿಯಾಗಿದೆ.

ಜಾನುವಾರು ವೈದ್ಯ ತಾಯಜ್ಜಿ ಕರಿಯಣ್ಣನ ಬದುಕಿನಲ್ಲಿಯ ರೋಚಕ ಘಟನೆಯೊಂದನ್ನು ಈ. ಮಹಾಲಿಂಗಪ್ಪನವರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಪಾರಂಪರಿಕವಾದ ನಮ್ಮ ಜ್ಞಾನಪರಂಪರೆಗೆ ಜಾನುವಾರು ವೈದ್ಯನ ಬದುಕು ಒಂದು ನಿದರ್ಶನ ಎಂಬುದರೊಂದಿಗೆ ಅವನ ಅಗಾಧವಾದ ವೈದ್ಯ ಜ್ಞಾನದ ಬಗ್ಗೆ ವಿಸ್ಮಯವೂ ಆಗುತ್ತದೆ.

ಗ್ರಾಮ ರಂಗಭೂಮಿಯ ಅವಾಂತರಗಳನ್ನು ಬಯಲಾಟದ ನೇಮಕಲ್ಲಪ್ಪ ಸೊಗಸಾಗಿ ಚಿತ್ರಿಸುವುದರೊಂದಿಗೆ, ನಾಟಕದ ಗೀಳು ಹಚ್ಚಿಕೊಂಡ ವ್ಯಕ್ತಿಯೊಬ್ಬನ ಬದುಕನ್ನು ಹಿಡಿದಿಡುವ ಬಿ. ಟಿ. ಚಂದ್ರಶೇಖರ ಅವರ ಪ್ರಯತ್ನ ಗಮನಾರ್ಹವಾದುದು, ಇಲ್ಲಿ ಅವರು ಜೀವನ ಚರಿತ್ರೆಯ ಮಾದರಿ ಅನುಸರಿಸಿದ್ದಾರೆ.

ಬಾಗೂರು ನಾಗರಾಜಪ್ಪನವರು ಜಾನಪದ ವಸ್ತ್ರವಿನ್ಯಾಸಕಾರನೊಬ್ಬನ ಅಪರೂಪದ ಕಲೆಯನ್ನು ಅತ್ಯಂತ ಗ್ರಾಮ್ಯ ಶೈಲಿಯಲ್ಲಿ ಪರಿಚಯ ಮಾಡಿಕೊಡುತ್ತಾರೆ. ಸ್ವಾತಂತ್ರಪೂರ್ವದ ಗ್ರಾಮದ ಬದುಕು ಹೇಗಿದ್ದಿರಬಹುದೆಂಬುದನ್ನು ಭೂತ-ವರ್ತಮಾನ ಕಾಲಗಳಲ್ಲಿ ಹಿಂದೆ-ಮುಂದೆ ಸಾಗುತ್ತಾ ಹೇಳುವ ಪರಿ ವಿಶಿಷ್ಟವಾಗಿದೆ.

ಅತ್ಯಂತ ಅಪರೂಪವೂ, ವಿಶಿಷ್ಟವೂ ಆದ ಪಶುಪಾಲನೆಯಲ್ಲೇ ಪರಮಾರ್ಥ ಕಂಡ ಎತ್ತಿನ ಕಿಲಾರಿಯೊಬ್ಬನ ಕತೆಯ ಮೂಲಕ ಭಾರತದ ಪಶುಪಾಲಕ ಪರಂಪರೆಯ ಚಿತ್ರವೊಂದನ್ನು ಸಾಂಸ್ಕೃತಿಕ ಶ್ರೀಮಂತಿಕೆಯ ಮ್ಯಾಸಬೇಡ ಬುಡಕಟ್ಟಿನ ಬದುಕಿನೊಂದಿಗೆ ಹೇಳುವ ಎಸ್. ಎಂ. ಮುತ್ತಯ್ಯನವರ ಪ್ರಯತ್ನ ಅತ್ಯಂತ ಶ್ಲಾಘನೀಯ.

ಪಶುಪಾಲಕ ಸಂಸ್ಕೃತಿಯ ಅನೇಕ ಜಿಜ್ಞಾಸೆಗಳಿಗೆ ಇಲ್ಲಿ ಉತ್ತರ ಹುಡುಕಬಹುದೆಂಬುದೇ ಈ ಕಥನದ ಸಾಂಸ್ಕೃತಿಕ ಮಹತ್ವವನ್ನು ಎತ್ತಿ ಹೇಳುತ್ತದೆ. ಜೊತೆಜೊತೆಗೆ ಬದಲಾವಣೆಯ ಗಾಳಿಗೆ ಸಿಕ್ಕ ಸಂಸ್ಕೃತಿಯೊಂದರ ಸ್ಥಿತ್ಯಂತರಗಳನ್ನು ಸೂಕ್ಷ್ಮವಾಗಿ ದಾಖಲಿಸುವಲ್ಲಿಯೇ ಈ ಕಥನದ ಯಶಸ್ಸು ಅಡಗಿದೆ.

ಅಂಧ ಕತೆಗಾರನೊಬ್ಬನ ಬದುಕಿನ ಹಲವಾರು ತುಣುಕುಗಳನ್ನು ಎಂ. ಸಿದ್ದಪ್ಪನವರು ಇಲ್ಲಿ ಸಂಗ್ರಹಿಸಿದ್ದಾರೆ. ಅಂಧನೊಬ್ಬನ ಬದುಕು ಕಥನಕಲೆಯಿಂದ ಹೇಗೆ ಜೀವಂತಗೊಳ್ಳಬಲ್ಲುದು, ಕತೆ - ಹೇಗೆ ಅನಿವಾರ್ಯ ಸಂಗಾತಿಯಾಗಬಲ್ಲುದು ಎಂಬುದನ್ನು ಹೃದ್ಯವಾಗಿ ಚಿತ್ರಿಸುತ್ತದೆ.

ಈ ಎಲ್ಲ ಕಥನಗಳ ಉದ್ದಕ್ಕೂ ಗಾಢವಾದ ವಿಷಾದವೊಂದು ಸ್ಥಾಯಿಯಾಗಿ ಹರಿದಿದೆ. ಸಂಕ್ರಮಣ ಸ್ಥಿತಿಯಲ್ಲಿರುವ ಬದುಕಿನ ಸೂಕ್ಷ್ಮಗಳನ್ನು ಮೌನವಾಗಿಯೇ ದಾಖಲಿಸಿವೆ.

ಕಮ್ಮಟದಲ್ಲಿ ಭಾಗವಹಿಸಿದ ಬಹುತೇಕ ಬರಹಗಾರರು ಸಕಾಲಕ್ಕೆ ತಮಗೆ ವಹಿಸಿದ ಆತ್ಮಕಥನಗಳನ್ನು ಸಲ್ಲಿಸಲಿಲ್ಲ ಅಥವಾ ಇನ್ನೂ ಬರೆಯುತ್ತಲೇ ಇದ್ದಾರೆ. ಹೀಗಾಗಿ ಕೈಸೇರಿದ ಕೆಲವನ್ನು ಆಯ್ದು ಇಲ್ಲಿ ಸಂಕಲಿಸಲಾಗಿದೆ.

ಗ್ರಾಮಾಯಣದ ಇನ್ನೊಂದು ಮಗ್ಗುಲನ್ನು ದಾಖಲಿಸುವ ಇಂತಹ ಒಂದು ಅಪೂರ್ವ, ಐತಿಹಾಸಿಕ, ಸಾಂಸ್ಕೃತಿಕ ಪ್ರಯತ್ನದಲ್ಲಿ ಚಿತ್ರದುರ್ಗ ಜಿಲ್ಲೆಯ ಜನಪದ ಕಲಾವಿದರ ಆತ್ಮಕಥೆಗಳ ಕಮ್ಮಟವನ್ನು ಸಂಘಟಿಸುವ ಜವಾಬ್ದಾರಿಯನ್ನು ನನ್ನ ಹೆಗಲಿಗೆ ಹಾಕುವುದರ ಮೂಲಕ ತೊಡಗಿಕೊಳ್ಳುವಂತೆ ಮಾಡಿದುದಲ್ಲದೆ, ಈ ಸಂಪುಟದ ಸಹ ಸಂಪಾದಕನಾಗಿ ಕೆಲಸ ಮಾಡುವ ಅವಕಾಶವನ್ನು ನೀಡಿ ಪ್ರೋತ್ಸಾಹಿಸಿದ ಪ್ರೀತಿಯ ಕವಿ, ಕತೆಗಾರ ಮತ್ತು ಜಾನಪದ ವಿದ್ವಾಂಸರಾದ ಪ್ರೊ. ಕಾಳೇಗೌಡ ನಾಗವಾರ ಅವರಿಗೆ ಕೃತಜ್ಞನಾಗಿದ್ದೇನೆ. ಈ ಸಂಪುಟದ ಉದ್ದಕ್ಕೂ ಅವರ ಸಲಹೆ- ಸೂಚನೆಗಳು ಮಿಂಚಿನಂತೆ ಕೆಲಸಮಾಡಿವೆ, ಕೃತಿಗೆ ವಿಶಿಷ್ಟ ತೇಜಸ್ಸನ್ನು ತಂದಿವೆ ಎಂಬುದನ್ನು ಹೇಳಲು ಅತ್ಯಂತ ಸಂತೋಷವಾಗುತ್ತಿದೆ.



ಇಂತಹ ವಿಶಿಷ್ಟ ಕಮ್ಮಟವನ್ನು ಸಂಘಟಿಸಲು ಎಲ್ಲ ರೀತಿಯ ನೆರವನ್ನೂ ನೀಡಿದ ಚಿತ್ರದುರ್ಗದ ಮುರುಘಾಮಠ ಹಾಗೂ ಈ ಕೆಲಸದಲ್ಲಿ ಹೆಗಲಿಗೆ ಹೆಗಲು ಕೊಟ್ಟು ದುಡಿದ ಚಿತ್ರದುರ್ಗದ ಪಾಳೆಯಗಾರ ವಂಶಸ್ಥ ಪಿ. ಆರ್. ವೀರಭದ್ರನಾಯಕರ ಸಹಕಾರವನ್ನು ಹೇಗೆ ಮರೆಯಲಿ? ಇವರೆಲ್ಲರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಈ ಸಂಪುಟವನ್ನು ಹೊರತರುವಲ್ಲಿ ಸಂಪೂರ್ಣ ಸಹಕಾರ ನೀಡಿದ ಜಾನಪದ ಅಕಾಡೆಮಿಯ ರಿಜಿಸ್ಟ್ರಾರ್ ಕೆ. ಸುಧೀಂದ್ರ, ಅಧೀಕ್ಷಕ ಎಂ. ಎನ್. ಹಿರಿಯಣ್ಣ, ಸಹಾಯಕರಾದ ಪ್ರಕಾಶ್, ಪ್ರವೀಣ್, ನಾಗರತ್ನ, ಶಿವಲಿಂಗಯ್ಯನವರನ್ನು ಹಾಗೂ ರಶ್ಮಿ ಮುದ್ರಣದ ರಾಮಕೃಷ್ಣರವರನ್ನೂ ಇಲ್ಲಿ ನೆನೆಯುತ್ತೇನೆ.

೨೮-೦೫-೨೦೦೧ ಪ್ರೊ. ಮೀರಾಸಾಬಿಹಳ್ಳಿ ಶಿವಣ್ಣ


ಚಳ್ಳಕೆರೆ

ಆಲೋಚನೆ-ಪುನರಾಲೋಚನೆಗಳ ನಡುವೆ ಜಾನಪದದ ಅಂತರಂಗಕ್ಕೆ ವಿಶಾಲವಾದ ಅರ್ಥದಲ್ಲಿ ಸಂಕೇತವಾಗಬಲ್ಲ ಲಾಂಛನವನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯು ರೂಪಿಸಿತು. ವಾಸ್ತವವಾಗಿ ಜಾನಪದವು ಗಂಧವತಿಪೃಥ್ವಿಯ ಸಕಲ ಸಲ್ಲಕ್ಷಣಗಳನ್ನು ಒಳಗೊಂಡಿರುವ, ಪಂಚಭೂತಗಳ ವಂಚನೆರಹಿತ ಗುಣಧರ್ಮದ ಆಗರವಾಗಿದೆ. ಭರತಖಂಡದ ಪ್ರಾಚೀನತಮ ಜಾನಪದದ ತುಂಬುಮನಸ್ಸು ನಿರ್ಮಿಸಿರುವ ನಿತ್ಯಮಂಗಳಕರವಾದ ಶಿವತತ್ತ್ವದ; ಅರ್ಧನಾರೀಶ್ವರ ಗುಣದ, ಸಕಲಜೀವರಾಶಿಗಳ ಬಗೆಗಿನ ಅಪಾರ ಅಂತಃಕರಣದ ಶಿವ ಮತ್ತು ಜಾನಪದದ ವೈವಿಧ್ಯಮಯ ಸೂಕ್ಷ್ಮಗಳನ್ನು ಒಂದೇ ಸಮನೆ ಧ್ಯಾನಿಸಿದ ಪರಿಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮುವ ವಿಶಾಲಪ್ರಸನ್ನತೆಯ ಸಾಕ್ಷಾತ್ ಪ್ರತೀಕವಾದ ಬುದ್ಧದೇವ ಹಾಗೂ ಕಾಡಿನ ಬೇಡರ ಹುಡುಗನಾಗಿ ಹುಟ್ಟಿ-ಬೆಳೆದು, ಜ್ಞಾನದ ಬಗೆಗಿನ ಅಪರಿಮಿತ ಆಕಾಂಕ್ಷೆಯಿಂದ ನಿರಂತರ ಶ್ರಮ ಮತ್ತು ಪ್ರತಿಭಾಸಂಪನ್ನತೆಯ ಹಾದಿಯಲ್ಲಿ ಸಾಗಿ ತುತ್ತತುದಿಯನ್ನು ತಲುಪಿದ, ನಮ್ಮ ಸಮಾಜದ ಅಭದ್ರತೆಯ ನಡುವಣ ಎಲ್ಲ ತಬ್ಬಲಿಗಳ ದೃಢಚಿತ್ತದ ಪ್ರತಿನಿಧಿಯಾದ ಏಕಲವ್ಯನನ್ನು ನೆನಪಿಸುವ... ಜಾನಪದದ ಮಹತ್ವವನ್ನು ನಿರಂತರವಾಗಿ ವಿಸ್ತರಿಸುತ್ತಿರುವ ಸೃಜನಶೀಲ ರೂಪಕ ಇದಾಗಿದೆ.

**ಕಾಳೇಗೌಡ ನಾಗವಾರ**

ಮೈತ್ರಿ ಮತ್ತು ಕರುಣಾಭಾವಗಳಿಂದ ಲೋಕದ ಸಕಲಜೀವಿಗಳ ಹಿತಕ್ಕಾಗಿ ಧ್ಯಾನಸ್ಥವಾಗಿರುವ ಪ್ರಸನ್ನ ಮುಖಭಾವ, ಸೃಷ್ಟಿಶೀಲತೆಯ ಸಂಕೇತವಾದ ವೃಕ್ಷ, ಲೋಕವನ್ನು ಸದಾ ಬೆಳಗುವ ಸೂರ್ಯ- ಚಂದ್ರರು, ಜನಪದರ ಸಂಭ್ರಮದಲ್ಲಿ ಪಾಲ್ಗೊಂಡ ಅವರ ನಿತ್ಯಸಂಗಾತಿಗಳಾದ ಸಕಲಜೀವರಾಶಿಗಳು ಇವೆಲ್ಲ ಸೂಕ್ಷ್ಮ ವಿನ್ಯಾಸದೊಂದಿಗೆ ಈ ಲಾಂಛನದಲ್ಲಿ ಅಪೂರ್ವವಾಗಿ ಸಂಯೋಜಿಸಲ್ಪಟ್ಟಿವೆ. ಪ್ರಕೃತಿಯಂತೆ ನಿತ್ಯವೂ ಹೊಸತಾಗುವ ಸತ್ವಗಳನ್ನು ಒಳಗೊಂಡು, ತುಳುಕುವ ಹೊಳೆಯಂತೆ ವಿಸ್ತಾರವೂ ಪಾರದರ್ಶಕವೂ ಆಗಿರುವ ಇಲ್ಲಿನ ಪ್ರತೀಕವು, ಎಲ್ಲ ಮನಸ್ಸುಗಳ ಏಕತೆಯನ್ನು ಸಂಕೇತಿಸುತ್ತದೆ. ಮಾನವೀಯ ತಳಹದಿಯ ಮೇಲೆ ರೂಪುಗೊಂಡಿರುವ ಈ ಲಾಂಛನವು ಅಕಾಡೆಮಿಯ ಚಟುವಟಿಕೆಗಳ ವಿಕಾಸಶೀಲ ಪ್ರತಿಮೆಯಾಗಿದೆ.

**ಜಿ ವಿ ಆನಂದಮೂರ್ತಿ**



**ಪರಿವಿಡಿ**


| | |
|---|---|
| ನಿತ್ಯಮಂಗಳಕರ ತತ್ತ್ವ | v |
| ಸಂಪಾದಕರ ಮಾತು | xiii |
| ಪೈಲ್ವಾನ್ ವಸಂತರಾವ್ ನೆನಪುಗಳು | ೧ |
| ಟಿ ಆರ್ ರಾಧಾಕೃಷ್ಣ | |
| ಗ್ರಾಮದೇವತೆಯ ದೂತ ಸೋಮನ ಕರಿಯಪ್ಪ | ೮೭ |
| ಪ್ರೊ. ಎಚ್ ಶ್ರೀಶೈಲ ಆರಾಧ್ಯ | |
| ಸೋಬಾನೆ ಸಿದ್ದಮ್ಮ - ನೀಲಮ್ಮ | ೧೧೧ |
| ಜಿ ಎಸ್ ಉಜ್ಜನಪ್ಪ | |
| ಜಾನುವಾರು ವೈದ್ಯ ತಾಯಜ್ಜಿ ಕರಿಯಣ್ಣ | ೧೩೭ |
| ಈ ಮಹಾಲಿಂಗಪ್ಪ | |
| ಬಯಲಾಟದ ನೇಮಕಲ್ಲಪ್ಪ | ೧೪೩ |
| ಬಿ ಟಿ ಚಂದ್ರಶೇಖರ | |
| ಜನಪದ ವಸ್ತ್ರವಿನ್ಯಾಸಕಾರ ಮಹೇಶ್ವರರಾವ್ | ೧೫೯ |
| ಬಾಗೂರು ನಾಗರಾಜಪ್ಪ | |
| ಎತ್ತಿನ ಕಿಲಾರಿ ಬೋರಯ್ಯ | ೧೬೬ |
| ಎಸ್ ಎಂ ಮುತ್ತಯ್ಯ. | |
| ಕತೆಗಾರ ಇಮಾಂ ಖಾಸಿಂ | ೧೯೩ |
| ಎಂ ಸಿದ್ದಪ್ಪ | |

ಅನುಬಂಧ


ಕಮ್ಮಟದ ನೆನಪು ೧೭೯

ರಾಜ್ಯಪಾಲರ ಭಾಷಣ ೧೮೮

ಅಧ್ಯಕ್ಷರ ಭಾಷಣ ೧೯೧

ಸಂಪಾದಕರು ೧೯೬



ಆತ್ಮಕಥೆಗಳ ಪುಟಗಳಿಂದ

**ಪೈಲ್ವಾನ್ ವಸಂತರಾವ್ ನೆನಪುಗಳು**

**0 ಆರ್ ರಾಧಾಕೃಷ್ಣ**

ಚಿತ್ರದುರ್ಗ ಹೇಗೆ ತನ್ನ ಪಾಳೆಯಗಾರರ ಇತಿಹಾಸಕ್ಕೆ ಪ್ರಸಿದ್ಧವೋ, ಹಾಗೇ ತನ್ನ ಗರಡಿಮನೆಗಳ ವಿಶಿಷ್ಟ ಸಂಸ್ಕೃತಿಗಾಗಿಯೂ ಪ್ರಸಿದ್ಧ. ಇಂದಿನ ಆಧುನಿಕ ಕಾಲದಲ್ಲೂ ದೊಡ್ಡಗರಡಿ, ಸಣ್ಣಗರಡಿ, ಅಂಜುಮನ್ ಗರಡಿ ಎಂಬ ಅನೇಕ ಗರಡಿಗಳು ಸಕ್ರಿಯವಾಗಿರುವುದನ್ನು ಕಾಣಬಹುದು. ಬೆಟ್ಟದ ಮೇಲಿನ ಕೋಟೆ ಕೊತ್ತಲಗಳಲ್ಲಿ ಇಂದಿಗೂ ಅನೇಕ ಗರಡಿಮನೆಗಳ ಅವಶೇಷಗಳನ್ನು ಕಾಣಬಹುದು. ಇಲ್ಲಿಯ ಗರಡಿ ಮನೆಗಳು ಬರೀ ದೇಹಸಿದ್ಧಿ ಕಡೆಗಷ್ಟೇ ಗಮನ ಕೊಡದೆ, ಸಾಹಿತ್ಯ, ಸಂಗೀತ, ಧಾರ್ಮಿಕ ಕ್ಷೇತ್ರಗಳತ್ತಲೂ ತನ್ನ ಕಾರ್ಯ ಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದು, ಅದು ಕಲೆಗಳ ಬೀಡೂ ಆಗಿರುವುದು ಒಂದು ವಿಶೇಷ. ಹೀಗಾಗಿ ಚಿತ್ರದುರ್ಗದ ಗರಡಿ ಮನೆಗಳಿಗೆ ರೋಚಕ ಇತಿಹಾಸದೊಂದಿಗೆ ತನ್ನದೇ ಆದ ಸಂಸ್ಕೃತಿಯೂ ಇದೆ.

ವಸಂತರಾವ್ ಅವರ ಆತ್ಮಕಥನದ ಮೂಲಕ ಗತಕಾಲದ ಚಿತ್ರದುರ್ಗದ ಗರಡಿಮನೆಗಳ ಸಂಸ್ಕೃತಿ ನಮ್ಮ ಕಣ್ಣಮುಂದೆ ಸಾಗುತ್ತಾ ಹಳೆಯ ಕಾಲವನ್ನು ಮೆಲುಕು ಹಾಕುವಂತೆ ಮಾಡುತ್ತದೆ. ಉತ್ಪನನ ಮೋಕ್ಷಪಕ್ಷಿಯ ಆತ್ಮ ಕಥಾಸಂಕಲನಗಳು, ನಿಂತು ನೋಡುವೆ ಅವುಗಳತ್ತಲೆ ಲಲಿತ ಪ್ರಬಂಧ ಸಂಕಲನದ ಮೂಲಕ ತಮ್ಮದೇ ಛಾಪು ಮೂಡಿಸಿರುವ ಸೃಜನಶೀಲ ಕತೆಗಾರ ಟಿ. ಆರ್. ರಾಧಾಕೃಷ್ಣ ಮರೆಯಾಗುತ್ತಿರುವ ಗರಡಿ ಸಂಸ್ಕೃತಿಯ ನಾಡಿ ಮಿಡಿತವನ್ನು ಈ ಆತ್ಮಕಥನದಲ್ಲಿ ಕಂಡರಿಸಿದ್ದಾರೆ.

---

ಪೈಲ್ವಾನ್ ವಸಂತರಾವ್ ಮೊಸಳೆ, ಟೈಲ

ದೊಡ್ಡಗರಡಿ ಹತ್ತಿರ, ಚಿತ್ರದುರ್ಗ-೫೭೭೫೦೧



**ನಮ್ಮೂರು, ಗರಡಿ ಮನೆ**

ನಾನು ನನ್ನ ಕಥೆ, ನಮ್ಮ ಮನೆ ಕಥೆ, ಗರಡಿ ಕಥೆ, ಪೈಲ್ವಾನರ ಕಥೆ, ನಮ್ಮ ದೊಡ್ಡ ಗರಡಿ ಕಥೆ, ಇವನ್ನೆಲ್ಲ ಹೇಳೋಕೆ ಮೊದಲು ಯಾವುದನ್ನು ಹೆಂಗೆ ಆರಂಭಿಸಬೇಕು ಅಂತ ತಿಳೀತಿಲ್ಲ. ನಾವು ಬಂದು ಚಿತ್ರದುರ್ಗದಲ್ಲಿ ನೆಲೆಸಿ ವಾಸೋ ಮಾಡೋಕೆ ಶುರುವಾಗಿ ಏನು ಕಡಿಮೆ ಎಂದರೂ ನೂರುವರ್ಷದ ಮೇಲಾದರೂ ಆಗಿರಬಹುದು. ಮೂಲದಲ್ಲಿ ನಮ್ಮ ವಂಶದವರು ಮಹಾರಾಷ್ಟ್ರದವರು. ಇಲ್ಲಿಗೆ ಎಂದು ಬಂದರು ಎಂಬುದು ನಮಗೆ ಗೊತ್ತಿಲ್ಲ. ನಮ್ಮ ತಾತ ಅವರು ಕೊಂಡಪ್ಪ ಅಂತ, ಅವರು ಕೋಟೆ ಮಿಡ್ಸ್ ಸ್ಕೂಲಿನಲ್ಲಿ ಟೈಲರಿಂಗ್ ಮೇಷ್ಟ್ರಾಗಿ ಇಲ್ಲಿ ಕೆಲಸ ಮಾಡ್ತಾ ಇದ್ದರು. ಅವರಿಗೆ ಐದು ಜನ ಗಂಡುಮಕ್ಕಳು. ಅವರಲ್ಲಿ ನಮ್ಮ ತಂದೆ ನಾರಾಯಣರಾವ್ ಮೂರನೆಯವರು. ಅವರೂ ಟೈಲರಿಂಗ್ ಕಲ್ಲುಕೊಂಡು ಅದರಲ್ಲೇ ಜೀವನ ಮಾಡ್ತಾ ಇದ್ದರು. ಆದರೆ ನಮ್ಮ ತಾತರ ಹಂಗೆ ಸರ್ಕಾರೀ ಕೆಲಸ ಏನೂ ಮಾಡ್ತಾ ಇರಲಿಲ್ಲ.

ನಮ್ಮ ತಾತವರ ಕಾಲದಲ್ಲಿ ಅಥವಾ ನಮ್ಮ ತಾತವರಿಗಿಂತ ಹಿಂದೆ ನಮ್ಮ ವಂಶದಲ್ಲಿ ಯಾರು ಕುಸ್ತಿಪಟು ಆಗಿದ್ದರು, ಪೈಲ್ವಾನರಾಗಿ ಬೆಳೆದರು ಅನ್ನೋದು ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ ನಮ್ಮ ಅಪ್ಪವರು ಅಂದರೆ ನಾರಾಯಣರಾವ್ ಅವರು ಪೈಲ್ವಾನ್

ನಾರಣಪ್ಪ ಅಂತಾನೇ ಪ್ರಖ್ಯಾತರಾಗಿದ್ದರು. ಅವರು ಪೈಲ್ವಾನ್ ಆಗಿದ್ದುದರ ಜೊತೆಗೆ ಗರಡಿಯ ಉಸ್ತಾದ್ ಕೂಡಾ ಆಗಿದ್ದರು. ನಮ್ಮ ತಂದೆ ನಾರಣಪ್ಪರು ಪೈಲ್ವಾನ್ ಹೆಂಗಾದರು, ಅವರಿಗೆ ಯಾರು ಗುರು ಆಗಿದ್ದರು ಅನ್ನೋದು ನನಗೆ ಗೊತ್ತಿಲ್ಲ. ನಮ್ಮ ತಂದೆಯವರ ಕಾಲಕ್ಕೆ ಮತ್ತು ನಾನು ಹುಟ್ಟಿಬೆಳೆದ ಕಾಲಕ್ಕೆ ಗರಡಿಗಳು, ಪೈಲ್ವಾನರುಗಳು ಎಂದರೆ ಬಹಳ ಮರ್ಯಾದೆ ಇದ್ದ ಕಾಲ. ನಮ್ಮ ತಾತವರ ಕಾಲದಲ್ಲಿ ನಮ್ಮ ಮನೆ ದೊಡ್ಡ ಪೇಟೆಯಲ್ಲಿ ಇತ್ತು. ಆಮೇಲೆ ನಮ್ಮ ಮನೆ ಈಗಿರೋ ದೊಡ್ಡಗರಡಿಯ ಮುಂದೆ ಇದೆ. ನಮ್ಮ ಮನೆ ಹಂಗೆ ನೋಡಿದರೆ ದೊಡ್ಡಗರಡಿಗೆ ಅಂಟಿಕೊಂಡೇ ಇದೆ.

ನಮ್ಮ ಮನೆ ಮುಂದಕ್ಕೆ ಗೊಲ್ಲರ ಪೈಕಿ ನವಣೆ ಮುದ್ದೆ ಗಂಗಜ್ಜಿ ಎಂಬಾಕೆ ಇದ್ದಳು. ಆಕೆಯದೇ ಒಂದು ವಟಾರ. ಆ ವಟಾರ ಈಗಲೂ ಇದೆ. ಆದರೆ ಕರುವಿನ ಕಟ್ಟೆ ಮತ್ತು ಗರಡಿ ಕಡೆಗೆ ಸಂಬಂಧ ಕಲ್ಪಿಸುವ ಹಂಗೆ ಒಂದು ಸಣ್ಣ ರಸ್ತೆ ಆಗಿದೆ. ಆಕೆಯ ವಟಾರದಿಂದ ಕೆಳಕ್ಕೆ ಬಂದ್ರೆ ಕರುವಿನ ಕಟ್ಟೆಯಲ್ಲಿ ತಿಪ್ಪಿನಗಟ್ಟಮ್ಮನ ಗುಡಿ ಇದೆ. ದುರ್ಗದ ಗ್ರಾಮದೇವತೆಗಳಲ್ಲಿ ತಿಪ್ಪಿನಗಟ್ಟಮ್ಮ ಒಬ್ಬ ಮಹಿಮಾವಂತ ದೇವತೆ. ತಿಪ್ಪಿನಗಟ್ಟಮ್ಮನ ಗುಡಿಯೊಳಗೆ ಅಕ್ಕಪಕ್ಕದಲ್ಲಿ ಮತ್ತೆರಡು ಗ್ರಾಮದೇವತೆಗಳಾದ ಅಂತರಗಟ್ಟಮ್ಮ, ಗಾಳಿಮಾರಮ್ಮನ ಗುಡಿಗಳೂ ಇವೆ. ತಿಪ್ಪಿನಗಟ್ಟಮ್ಮ ಮತ್ತು ಬುರಜನಹಟ್ಟಿಯಲ್ಲಿರುವ ಬರಗೇರಮ್ಮ ಅಕ್ಕ ತಂಗಿಯರಂತೆ. ಬರಗೇರಮ್ಮನಿಗೆ ಮಕ್ಕಳಿಲ್ಲ. ತಿಪ್ಪಿನಗಟ್ಟಮ್ಮನಿಗೆ ಬೇಕಾದಷ್ಟು ಮಕ್ಕಳು. ಅಕ್ಕ ಒಂದ್ದಾರಿ ನೋಡೋಕೆ ಅಂತ ಬಂದಾಗ ತಿಪ್ಪಿನಗಟ್ಟಮ್ಮ ಮಕ್ಕಳನ್ನೆಲ್ಲಾ ಒಂದು ಕಡೆ ಕುಂಡ್ರಿಸಿ ಪುಟ್ಟಿ ಮುಚ್ಚಿದಳಂತೆ. ಅಕ್ಕ ಬರಗೇರಮ್ಮನಿಗೆ ಈ ವಿಷಯ ತಿಳಿದು ಮುನಿಸಿಕೊಂಡಳಂತೆ. ಹಿಂಗಾಗಿ ವರ್ಷಕ್ಕೊಂದೇ ಸಾರಿ ಮುಖ ನೋಡೋದು ಅಂತ ಅಕ್ಕ ತಂಗಿಯರ ಮಧ್ಯೆ ಮಾತಾಯಿತಂತೆ. ಅದರ ಅಂಗವಾಗಿ ಅಕ್ಕ ತಂಗಿಯರು ಒಬ್ಬರಿಗೊಬ್ಬರು ಮುಖ ನೋಡಲು ಬರುವ ದಿನವನ್ನು ಭೇಟಿ ಅಂತ ಒಂದು ಭರ್ಜರಿ ಹಬ್ಬ, ಜಾತ್ರೆ ಮಾಡ್ತಾರೆ. ಆ ಹಬ್ಬದ ದಿನ ಕರುವಿನ ಕಟ್ಟೆಯಲ್ಲಿ ಬಯಲು ನಾಟಕ ಆಡ್ತಾ ಇದ್ದರು. ಈಗ ನಿಲ್ಲಿಸಿಬಿಟ್ಟಿದ್ದಾರೆ.

ನಮ್ಮ ದೊಡ್ಡ ಗರಡಿ ಏನೈತೆ ಅದರ ಸುತ್ತ-ಮುತ್ತ ಹೆಚ್ಚಾಗಿ ಗೊಲ್ಲರು, ಅಗಸರು ಮೊದಲಾದ ಜಾತಿಯವರು ಇದ್ದಾರೆ. ಈಗ ಐವತ್ತು ಅರವತ್ತು ವರ್ಷಗಳ ಹಿಂದೆ ಕರುವಿನ ಕಟ್ಟೆಯಲ್ಲಿ ನಾನು ಕಂಡಂಗೆ ಹೆಚ್ಚು ಜನ ವ್ಯವಸಾಯ ಮಾಡ್ತಾ ಇದ್ದರು. ಅನೇಕರು ವ್ಯವಸಾಯ ಮಾಡಿ ಜೀವನ ಸಾಗಿಸುತ್ತಿದ್ದುದರಿಂದ ಕರುವಿನಕಟ್ಟೆಯ ಆಸುಪಾಸಿನ ಅನೇಕ ಮನೆಗಳ ಮುಂದೆ ಎತ್ತಿನ ಗಾಡಿಗಳು ನಿಂತಿರುತ್ತಿದ್ದುದು ತೀರಾ ಸಾಮಾನ್ಯ. ಈಗಿನ ಆಸ್ಪತ್ರೆ ಹಿಂದಿನ ಜಾಗದಿಂದ ಜೋಗಿಮಟ್ಟಿ ರಸ್ತೆಯಲ್ಲಿ ಸುಣ್ಣದಗುಮ್ಮಿಯ ತನಕ ಬರೀ ಹೊಲಗಳೇ, ಸೈನ್ಸ್ ಕಾಲೇಜ್, ಆರ್ಟ್ಸ್ ಕಾಲೇಜಿನ ಫೀಲೆಲ್ಲಾ ಆಗ ಹೊಲಗಳೆ.

ಆದರೆ ಅವೆಲ್ಲಾ ಈಗಿಲ್ಲ. ಈಗ ನಮ್ಮ ಆಜುಬಾಜಲ್ಲಿ ಎತ್ತಿನಗಾಡಿ ಯಾವ ಮನೆ ಮುಂದೂ ನಿಲ್ಲೋದನ್ನು ನೋಡಿಲ್ಲ. ಈವಾಗಿನ ರಿಕ್ಷಾಗಳ ಓಡಾಟದಲ್ಲಿ ಎತ್ತಿನಗಾಡಿ ಹೋಗ್ಲಿ ಜಟ್ಕಾಗಾಡೀನೂ ಇಲ್ಲ!

ನಮ್ಮೂರ್ನಲ್ಲಿ ಗರಡಿ ಪ್ರೇಮ ಬೆಳೆಯೋಕೆ ನಮ್ಮ ಚಿತ್ರದುರ್ಗದ ಮದಕರಿನಾಯ್ಕರೂ ಕಾರಣ. ಅವರು ನಮ್ಮ ಕಾಲಕ್ಕೆ ಸತ್ತು ನೂರು ನೂರೈವತ್ತು, ವರ್ಷವಾಗಿದ್ದ ರೂ ಅವರ ಹೆಸರು ಆವೊತ್ತು ಮನೆ ಮಾತಾಗಿತ್ತು. ಇವೊತ್ತೂ ಮನೆಮಾತಾಗಿದೆ. ಅವರು ಬಾಳಾ ಶೌರ್ಯವಂತರು. ಕೋಟೆ ಕೊತ್ತಳ ಕಟ್ಟಿ ಸುತ್ತು - ಮುತ್ತಲ ಪಾಳೆಗಾರರಿಂದ ಹಿಡಿದು, ಮೈಸೂರಿನ ಹೈದರಾಲಿ ತನಕ ಹೆಸರು ಮಾಡಿದ ದೊಡ್ಡ ಪಾಳೇಗಾರರು, ನಾನು ಹೇಳ್ತಾ ಇರೋ ನನ್ನ ಕಥೆ ಮತ್ತು ನಮ್ಮ ದೊಡ್ಡ ಗರಡಿ ಕಥೆಯಲ್ಲಿ ಇಂಥ ಶೌರ್ಯವಂತನಾದ ಮದಕರಿನಾಯಕನನ್ನೇ ಕುರಿತು ನಾವು ದೊಡ್ಡ ಗರಡಿಯವರು ನಾಟಕ ಮಾಡಿ ಕೀರ್ತಿ ಪಡೆದದ್ದನ್ನು ಆಮೇಲೆ ಹೇಳೀನಿ. ಅದೂ ಕೂಡಾ ಒಂದು ದೊಡ್ಡ ಕಥೆ.

ನಮ್ಮ ಊರಲ್ಲಿ ಬಹಳ ಹಿಂದಿನಿಂದಲೂ ಎಂಟೊಂಬತ್ತು ಗರಡಿಗಳಿವೆ. ಬೆಟ್ಟದ ಮೇಲೆ ಏಕನಾಥೇಶ್ವರಿ ಗುಡಿ ಹತ್ರಾನೆ ಮದಕರಿನಾಯ್ಕನ ಕಾಲದ್ದು ಒಂದು ಗರಡಿ ಇದೆ. ಇನ್ನು ಊರೊಳಗೆ ಹೆಸರು ಮಾಡಿದ ಅನೇಕ ಗರಡಿಗಳಿವೆ. ದೊಡ್ಡಗರಡಿ, ಸಣ್ಣಗರಡಿ, ಬುರುಜನಹಟ್ಟಿ ಗರಡಿ, ಹಗಲು ದೀವಟಿಗೆ ಗರಡಿ - ಇವೆಲ್ಲಾ ಬಾಳಾ ಕಾಲದಿಂದಲೂ ಹೆಸರು ಮಾಡಿದ ಗರಡಿಗಳು. ಈ ಎಲ್ಲಾ ಗರಡಿಗಳಿಗೂ ಪ್ರೋತ್ಸಾಹ ಕೊಡೋವಂತ ಅನೇಕ ದೊಡ್ಡ ಮನುಷ್ಯರುಗಳು, ಯಜಮಾನರುಗಳು ಆಗಿನ ಕಾಲದಲ್ಲಿದ್ದರು. ಗರಡಿಗೆ ಪ್ರೋತ್ಸಾಹ ಕೊಡೋ ಅಂತ ಅಭಿಮಾನಿಗಳಿದ್ದರು. ಪ್ರೋತ್ಸಾಹ ಕೊಡೋ ಅಂತ ಜನ ಇದ್ದರು. ಈಗ ಅಂತ ಪ್ರೋತ್ಸಾಹ ಕೊಡೋ ಅಂತ ಜನಾನೂ ಇಲ್ಲ. ನಮ್ಮದು ನಾವು ನೋಡಿಕೊಂಡ್ರೆ ಸಾಕಪ್ಪ ಅನ್ನೋರೆ ಈಗಿರೋ ಬಾಳಾ ಜನ ಜೊತೆಗೆ ಗರಡಿಗೆ ಬಂದು ಸಾಧನೆ ಮಾಡೋರೆ ಸ್ವಲ್ಪ ಅನುಕೂಲವಿರಬೇಕು. ಸಾಧನೆ ಮಾಡೋರಿಗೆ ಒಳ್ಳೆ ಊಟ ಬೇಕು. ಸಾಧನೆ ಮಾಡಿ ಮನೆಗೆ ಬಂದ್ರೆ ವಿಶ್ರಾಂತಿ ಬೇಕು. ಆಗ ಸುಭಿಕ್ಷದ ಕಾಲ. ಪೈಲ್ವಾನರುಗಳು ಹಾಲು, ಬೆಣ್ಣೆ, ಬಾದಾಮಿ ಎಲ್ಲಾ ಬೇಕು ಬೇಕಾದಷ್ಟು ಉಪಯೋಗಿಸರು. ಸಂಜೆ ಅಚ್ಚೇರು, ಬೆಳಿಗ್ಗೆ ಆಚ್ಚೇರು ಹಾಲು ಕುಡಿದು ಗರಡಿಗೆ ಓಡಾಡೋರು. ಈಗ ಅದೆಲ್ಲಾ ಇಲ್ಲ. ಹಂಗಾಗಿ ಜನಾನೂ ಗರಡಿಗೆ ಬರೋರು ಕಡಿಮೆಯಾಗಿದ್ದಾರೆ.

ನಾವು ಹುಡುಗರಾಗಿದ್ದಾಗ ಯಾರು ನೋಡಿದರೂ 'ನಾನೇ ಮದಕರಿನಾಯ್ಕ ಅನ್ನೋ ಹಂಗೆ ಮೀಸೆ ಮೇಲೆ ಕೈಹಾಕೋರು! ಅಂದ್ರೆ ನಮ್ಮೂರ ಜನ ಶೌರ್ಯ, ಧೈರ್ಯ ಅಂದ್ರೆ ಬಾಳಾ ಇಷ್ಟ ಪಡೋರು, ಹಂಗಾಗಿ ಅಂತವರೆಲ್ಲಾ ಆಗ ಗರಡಿಗೆ ಬಂದು ಸಾಧನೆ

ಮಾಡೋರು, ಇಂಥ ಕಾಲ ಅದಾಗಿದ್ದರಿಂದ ಬಹುಶಃ ನಮ್ಮ ತಂದೆ ನಾರಣಪ್ಪರು ಪೈಲ್ವಾನರಾಗಿರಬೇಕು. ಆಮೇಲೆ ಬೇಕಾದಷ್ಟು ಕುಸ್ತಿ ಆಡಿ ಪಟ್ಟು-ವರಸೆಗಳನ್ನು ಚೆನ್ನಾಗಿ ಕಲಿತುಕೊಂಡಿರಬೇಕು. ಹಂಗಾಗಿ ಅವರು ಪೈಲ್ವಾನರಾಗೋದರ ಜೊತೆಗೆ, ದೊಡ್ಡಗರಡಿಯಲ್ಲಿ ಬಹಳಷ್ಟು ವರ್ಷ ಉಸ್ತಾದ್ ಆಗಿ ಕೂಡಾ ಹೆಸರು ಮಾಡಿದರು. ಮನೆ ಹತ್ತಿರಾನೆ ದೊಡ್ಡಗರಡಿ, ದೊಡ್ಡಗರಡಿಯಲ್ಲಿ ದೊಡ್ಡ ದೊಡ್ಡ ಪೈಲ್ವಾನರುಗಳು, ನಮ್ಮ ತಂದೆ ನಾರಣಪ್ಪರು ಉಸ್ತಾದ್ ಆಗಿದ್ದರು ಇದೆಲ್ಲಾ ಸೇರಿಕೊಂಡು ನಾನೂ ಕೂಡಾ ಪೈಲ್ವಾನ್ ಆದೆ, ಕುಸ್ತಿಪಟುವಾದೆ.

**ನಮ್ಮ ತಂದೆ-ದುರ್ಗದ ಗರಡಿಗಳು**

ನಮ್ಮ ತಂದೆ ನಾರಣಪ್ಪನವರು ಉಸ್ತಾದಾಗಿದ್ದರು. ದೊಡ್ಡಗರಡಿಗೆ ಅಂಟಿ ಕೊಂಡೇ ನಮ್ಮ ಮನೆ. ಹಂಗಾಗಿ ನಾನು ದೊಡ್ಡಗರಡಿ ವಿಷಯಾನೇ ಜಾಸ್ತಿ ಹೇಳೀನಿ ಅನ್ನೋದು ನಿಜ. ಅದಕ್ಕೆ ಸರಿಯಾಗಿ ನಂಜಪ್ಪ, ರಾಮಪ್ಪನವರಂಥ ಪೈಲ್ವಾನರುಗಳು ಇದ್ದುದು, ಪಂಜಾಬಿನ ಪರಿಪೈಗರ್ ದೊಡ್ಡಗರಡಿಗೆ ಬಂದಿದ್ದು - ಇವೆಲ್ಲಾ ಸೇರೊಂಡು ದುರ್ಗದಲ್ಲಿ ನಮ್ಮ ಗರಡಿ ದೊಡ್ಡ ಹೆಸರು ಮಾಡಿದ್ದರೂ ನಮ್ಮ ದುರ್ಗದಲ್ಲಿ ಬೇರೆ ಗರಡಿಗಳೇನು ಕಮ್ಮಿ ಹೆಸರು ಮಾಡಿರಲಿಲ್ಲ. ಮತ್ತೆ ಪೈಲ್ವಾನರೂ ಅಷ್ಟೆ, ಅವರೂ ಕೂಡಾ ಒಳ್ಳೆ ಜೋರಾಗಿದ್ದರು.

ನಮ್ಮ ದೊಡ್ಡಗರಡಿಗೆ ಹತ್ತಿರದಲ್ಲಿಯೇ ಶೃಂಗೇರಿ ಮಠದ ಬಳಿ ಸಣ್ಣಗರಡಿ ಇದೆ. ಅಲ್ಲಿ ಪೀರ್ ಸಾಬ್, ಮಲ್ಲಿಕ್, ಕಚ್ಚಿ - ಇಂಥ ದೊಡ್ಡ ದೊಡ್ಡ ಪೈಲ್ವಾನರುಗಳು ಅಲ್ಲಿದ್ದರು. ಆ ಗರಡಿಯನ್ನು ಬೆಳೆಸಿದವರಲ್ಲಿ ವಕೀಲ ಕೆಂಚಪ್ಪನವರದು ದೊಡ್ಡ ಹೆಸರು. ಅವರಿಗೆ ಕುಸ್ತಿ ಅಂದ್ರೆ ಪ್ರೇಮ. ಅವರು ಸಣ್ಣಗರಡಿಯಲ್ಲಿ ಉಸ್ತಾದ್ ಆಗಿದ್ದರು. ವಕೀಲ್ ಕೆಂಚಪ್ಪನವರು ಬೆಳಗಿನಜಾವ ಐದುಗಂಟೆಗೆ ಎದ್ದು ಬಂದು ಸಣ್ಣ ಗರಡಿಯ ಬೇರೆ ಪೈಲ್ವಾನರ ಜೊತೆ ಅಂಗ ಸಾಧನೆ ಮಾಡೋರು. ಮತ್ತೆ ಕೋರ್ಟಿನಲ್ಲಿ ವಕಾಲತ್ತು ಮುಗಿಸಿ ಸಂಜೆ ಆರು ಗಂಟೆಗೆ ಬಂದ್ರೆ ಮಟ್ಟಿಯಲ್ಲಿ ಅನೇಕ ಪೈಲ್ವಾನರ ಜೊತೆಯಲ್ಲಿ ಲಡತ್ ಮಾಡೋರು. ಅವರು ಅಸೆಂಬ್ಲಿಗೆ ಒಂದ್ದಾರಿ ಮೆಂಬರ್ ಆಗಿದ್ದರು. ಹಂಗಿದ್ದರೂ ಅವರು ಗರಡಿ ಸಂಬಂಧವನ್ನೇನೂ ಹರ್ಕಂಡಿರಲಿಲ್ಲ.

ಬುರುಜನ ಹಟ್ಟಿಯ ಗರಡಿಯಲ್ಲಿ ಸ್ಟೀಲ್ ಕರಿಯಪ್ಪ, ಕೆಂಚಪ್ಪ, ವೀರಬಸಪ್ಪ - ಮೊದಲಾದ ಒಳ್ಳೆಯ ಪೈಲ್ವಾನರುಗಳು ಇದ್ದರು. ಬುರುಜನಹಟ್ಟಿ ಗರಡಿಯ ವೀರಬಸಪ್ಪ ಲಿಂಗಾಯಿತರ ಪೈಕಿ ಆರು ಆರೂವರೆ ಅಡಿ ಎತ್ತರವಿದ್ದ ಭಾರೀ ಆಳು ಆತ. ಮೈಸೂರಿನಲ್ಲಿ ವೀರಬಸಪ್ಪನ ಗಾತ್ರ-ಎತ್ತರಕ್ಕೆ ಸರಿಯಾದ ಜೊತೆ ಸಿಗದೆ ಕುಸ್ತಿ ಫಿಕ್ಸ್ ಮಾಡೋದೆ ಕಷ್ಟ

ಆಗ್ತಾ ಇತ್ತು. ಎಷ್ಟೋ ಸಾರಿ ಆತನ ಜೊತೆ ಕುಸ್ತಿಗಾಗಿ ಪಂಜಾಬಿನಿಂದ ಪೈಲ್ವಾನರುಗಳನ್ನು ಕರೆಸುತ್ತಿದ್ದರು. ಅಂಥ ಆಳು ವೀರಬಸಪ್ಪ.

ಹಗಲುದೀವಟಿಗೆ ಗರಡಿಯಲ್ಲಿ ಕಲಂದರ್ ಸಾಬ್, ಸಾಬ್ಜಾನ್, ಖಾದರ್ ಸಾಬ್ ಅನ್ನೋ ಪೈಲ್ವಾನರುಗಳಿದ್ದರು. ಹೊರಪೇಟೆಯಲ್ಲಿ ಬುಡೇನ್ ಸಾಬ್ ಅಂತ ಒಬ್ಬ ಪೈಲ್ವಾನ್ ಇದ್ದ. ಆತನ ಮಗ ಸೈಯದ್ ಅಹಮದ್ ಅಂತ, ಆತ ಹತ್ತಾರು ಕಡೆ ಕುಸ್ತಿ ಮಾಡಿ ಹೆಸರು ಮಾಡಿದ್ದ. ಆತನನ್ನು ಸೈದಿ ಅಂತಾನೆ ಕರೆಯೋರು. ವೀರಬಸಪ್ಪ, ಸಣ್ಣಗರಡಿ ತಿಪ್ಪೇರುದ್ರಪ್ಪ, ದೊಡ್ಡಗರಡಿ ಮಹೇಶ್ವರಪ್ಪ, ನಮ್ಮ ತಂದೆ ನಾರಣಪ್ಪ - ಮೊದಲಾದವರು ಸಾಧನೆ ಮಾಡಿ ಒಳ್ಳೆ 'ಬಾಡಿ ಇಟ್ಟುಕೊಂಡಿದ್ದರು. ಇಂಥವರನ್ನು ಸಣ್ಣ ಸಣ್ಣ ಪೈಲ್ವಾನರುಗಳು ನೋಡಿದಾಗ ನಾವು ಹಂಗೆ 'ಬಾಡಿ ಮೈನ್‌ಟೈನ್ ಮಾಡೋಕು ಅಂದೊಳ್ಳತ್ತಿದ್ದರು.

ನಮ್ಮ ತಂದೆ ನಾರಣಪ್ಪರಿಗೆ ಮೂರುಜನ ಗಂಡು ಮಕ್ಕಳು, ಮೂರು ಜನ ಹೆಣ್ಮಕ್ಕಳು. ಗಂಡುಮಕ್ಕಳಲ್ಲಿ ನಾನು ಮತ್ತು ನನ್ನ ತಮ್ಮ ಎಲ್ಲಪ್ಪ ಮಾತ್ರ ಗರಡಿಗೆ ಹೋಗುತ್ತಾ ಇದ್ದೆವು. ನಮ್ಮ ತಂದೆ ಉಸ್ತಾದರಾಗಿದ್ದಕ್ಕೆ ಗರಡಿಗೆ ಹೋಗಿದ್ದು ಕಾರಣವಾದರೆ, ನಂಜಪ್ಪ-ರಾಮಪ್ಪನಂಥ ಪೈಲ್ವಾನರೂ ನಮ್ಮ ಮೇಲೆ ಪ್ರಭಾವ ಬೀರಿದ್ದು ಕಾರಣವಿರಬೇಕು. ನನ್ನ ತಮ್ಮ ಎಲ್ಲಪ್ಪ ಸ್ವಲ್ಪ ದಿವಸದಲ್ಲೇ ಗರಡಿಗೆ ಬರುವುದನ್ನು ಬಿಟ್ಟ. ಎಲ್ಲಪ್ಪ ಗರಡಿಗೆ ಬಂದು ಒಂದು ದಿವಸ ಸಾಧನೆ ಮುಗಿಸಿದ ಮೇಲೆ, ಜೋಕಾಲಿ ಆಡೋಕೆ ಅಂತ ಹೋಗಿ ಮಟ್ಟೆಯಲ್ಲಿ ಬಿದ್ದ. ಆಗ ಆಯತಪ್ಪಿ ಕೈ ಮುಂದಕ್ಕೆ ಬೀಳುವುದರ ಬದಲು ಬೆನ್ನಡಿಗೆ ಬಿತ್ತು. ಕೈ ಫ್ರಾಕ್ಚರ್ ಆಯಿತು. ಕೈ ಸರಿ ಹೋಗಬೇಕಾದರೆ ಬಹಳ ದಿವಸ ಬೇಕಾಯಿತು. ಸರಿಹೋದಮೇಲೆ ಅವರು ಗರಡಿಗೆ ಬರಲಿಲ್ಲ. ಆದರೆ ನಾನು ನನ್ನ ಸಾಧನೆ ಮುಂದುವರೆಸಿದೆ.

ಆಗಿನ ದಿನಗಳಲ್ಲಿ ನಾನು ಬೇಕಾದಷ್ಟು ಕುಸ್ತಿಗಳನ್ನು ನೋಡಿದ್ದೀನಿ. ನಮ್ಮ ತಂದೆ ದೊಡ್ಡ ಗರಡಿ, ಸಣ್ಣಗರಡಿಗಳೆರಡಕ್ಕೂ ಉಸ್ತಾದರಾಗಿದ್ದರು ಎಂದಮೇಲೆ ಅದಕ್ಕೆ ಮುಂಚೆ ಬಹಳ ಕುಸ್ತಿಗಳನ್ನು ಮಾಡಿರಬೇಕು. ಅವರು ನಾವು ಚಿಕ್ಕಹುಡುಗರಾಗಿದ್ದಾಗ ಆಡಿದ ಕುಸ್ತಿಗಳ ಬಗ್ಗೆ ಏನೂ ಹೇಳಿದಂತೆ ನೆನಪಿಲ್ಲ. ನನಗೆ ತಿಳುವಳಿಕೆ ಬಂದಮೇಲೆ ಅವರು ಎರಡು ಕುಸ್ತಿಮಾಡಿದ್ದನ್ನು ನಾನು ನೋಡಿದ್ದೇನೆ. ಆಗ ಕುಸ್ತಿ ಅಂದ್ರೆ ದುರ್ಗದ ಸುತ್ತ-ಮುತ್ತ ಚಳ್ಳಕೆರೆ, ಹೊಳಲ್ಕೆರೆ, ದಾವಣಗೆರೆ, ಹರಿಹರ, ನಾಯಕನ ಹಟ್ಟಿ ಮುಂತಾದ ಕಡೆಗಳಲ್ಲಿ ನಡೆಯುತ್ತಿದ್ದವು. ಇವುಗಳ ಜೊತೆಗೆ ಕೆಲವು ಊರುಗಳಲ್ಲಿ ಜಾತ್ರೆ ನಡೆದಾಗ ಜಾತ್ರೆ ಕುಸ್ತಿಗಳು ಅಂತ ನಡೆಯುತ್ತಿದ್ದವು.

ನಾನು ನಮ್ಮ ತಂದೆ ಮಾಡಿದ ಕುಸ್ತಿ ನೋಡಿದಾಗ ಅವರಿಗಾಗಲೆ ಐವತ್ತು ವರ್ಷ. ಚಿತ್ರದುರ್ಗದಲ್ಲಿ ಈಗಿನ ವಾಸವಿ ಸ್ಕೂಲ್ ಇದೆಯಲ್ಲ - ಅಲ್ಲಿ ಒಂದು ಕುಸ್ತಿ. ಆ ಕುಸ್ತಿಯನ್ನು ದಾವಣಗೆರೆಯ ನಿಟ್ಟುವಳ್ಳಿ ದುರ್ಗಪ್ಪ ಅನ್ನೋನ ಮೇಲೆ ಮಾಡಿದ್ದು, ಅದು 'ಡ್ರಾ ಆಯ್ತು. ಇನ್ನೊಂದು ಕುಸ್ತಿ, ನಾಯಕನಹಟ್ಟಿಯಲ್ಲಿ ಜಾತ್ರೆ ನಡೆಯುತ್ತಿದ್ದಾಗ ಏರ್ಪಾಡಾಗಿತ್ತು, ಆಗ ಅಲ್ಲಿಗೆ ಪಂಜಾಬಿನಿಂದ ಬಿಧ್ದೂ ಪೈಲ್ವಾನ್ ಅನ್ನೋನು ಬಂದಿದ್ದ. ಬಿಧ್ದೂ ಅನ್ನುವುದು ಅವನ ಹೆಸರೇನಲ್ಲ. ಬಿಧ್ದೂ ಅಂದ್ರೆ ಚೇಳು. ಚೇಳು ಹೆಂಗೆ ಮುಂದುಗಡೆ ಇರುವ ಮುಳ್ಳು ಕೈಗಳಿಂದ ಬಿಗಿಹಿಡಿದು, ಕೊಂಡಿಯಿಂದ ಕುಟುಕುತ್ತದೆಯೋ ಹಂಗೆ ಈ ಪೈಲ್ವಾನ್ ಎದುರಾಳಿ ಪೈಲ್ವಾನ್‌ರನ್ನು ಹಿಡಕೊಂಡು ಕುಕ್ಕುತ್ತಾನೆ ಅಂತ ಪ್ರೇಕ್ಷಕರು ಅವನಿಗೆ ಅಂಥ ಬಿರುದು ಕೊಟ್ಟಿದ್ದರಂತೆ. ಪೈಲ್ವಾನ್ ನಾರಣಪ್ಪರೂ ಬಿಚ್ ಪೈಲ್ವಾನ್ ಇಬ್ಬರೂ ಸ್ಟ್ರಾಂಗ್ ಆಗಿದ್ದರು. ಮುಕ್ಕಾಲು ಗಂಟೆ ಕುಸ್ತಿ ನಡೆದರೂ ಯಾರೂ ಸೋಲಲಿಲ್ಲ. ಜನಕ್ಕೆ ಕುಸ್ತಿ ನೋಡಿ ಸಮಾಧಾನ ಆಗಿತ್ತು. ಸಾಕು ಅಂದರು, ಹಿಂಗಾಗಿ ಅದೂ ಡ್ರಾ 'ಆಯ್ತು, ಇಷ್ಟು ಬಿಟ್ಟರೆ ನಮ್ಮ ತಂದೆ ಕುಸ್ತಿ ಬೇರೆ ಯಾವನ್ನೂ ನೋಡಿದ ನೆನಪಿಲ್ಲ.

**ಹಂಗಿತ್ತು ಆ ಜಮಾನ !**

ಈಗ ಐವತ್ತು - ಅರವತ್ತು ವರ್ಷಗಳ ಹಿಂದೆ ನಮ್ಮೂರು ಗರಡಿಗಳು ಹೆಂಗಿದ್ದವು? ಪೈಲ್ವಾನರು ಹೆಂಗಿರ ಇದ್ದರು? ಉಸ್ತಾದ್‌ಳು ಅವರ ಶಿಷ್ಯರು ಎಂತ ಸಂಬಂಧ ಇಟ್ಟುಕೊಂಡಿರ್ತ ಇದ್ದರು, ಗರಡಿ ಮೇಲಿನ ಪ್ರೇಮ ಎಂಥದ್ದು ಇವನ್ನೆಲ್ಲಾ ಯೋಚನೆ ಮಾಡ್ತಾ ಹೋದರೆ ನನಗೆ ನಮ್ಮ ದುರ್ಗದ ಗರಡಿಗಳು, ಜನ ಎಲ್ಲಾ ನೆನಪಾಗ್ತಾ ಹೋಗ್ತಾರೆ.

ನಮ್ಮೂರಿನಲ್ಲಿ ಎಂಟು ಗರಡಿಗಳಿದ್ದರೂ, ಹೆಚ್ಚು ಹೆಸರು ಮಾಡಿದ ಗರಡಿಗಳು ಅಂದ್ರೆ ದೊಡ್ಡಗರಡಿ, ಸಣ್ಣಗರಡಿ, ಬುರಜನಹಟ್ಟಿ ಗರಡಿ, ಹಗಲುದೀವಟಿಗೆ ಗರಡಿ ಮೊದಲಾದವು. ಎಂಟು ಗರಡಿಗಳು ಊರೊಳಗೆ ಇದಾವೆ ಅಂದ್ರೆ, ಎಷ್ಟು ಜನ ಪೈಲ್ವಾನರುಗಳು ಗರಡಿಯಲ್ಲಿ ಬಂದು ಸಾಧನೆ ಮಾಡ್ತಾ ಇದ್ದರು ಎನ್ನುವುದನ್ನು ನಾವು ಯೋಚನೆ ಮಾಡಿ ತಿಳ್ಕಬೇಕು. ಪ್ರತಿಯೊಂದು ಗರಡಿಗೂ ಊರಿನವರು, ಊರಿನವರಿಗಿಂತ ಗರಡಿಯ ಸುತ್ತ-ಮುತ್ತ ಇದ್ದ ದೊಡ್ಡ ಮನುಷ್ಯರು, ಯಜಮಾನರು, ಅಭಿಮಾನಿಗಳು ಯಾವಾಗಲೂ ಪ್ರೋತ್ಸಾಹ ಕೊಡೋರು. ಗರಡಿಯಲ್ಲಿ ಸಾಧನೆ ಮಾಡೋ ಸಣ್ಣ ಪೈಲ್ವಾನರು-ದೊಡ್ಡ ಪೈಲ್ವಾನರು ಇವರುಗಳಿಗೆಲ್ಲಾ ನಿಜವಾದ ಸ್ಫೂರ್ತಿ ಅಂದ್ರೆ ಹಿಂದೆ ದುರ್ಗಾನ ನಮ್ಮ ಆಳಿದ ಪಾಳೆಯಗಾರರೇ ಕಾರಣ ಅನ್ನಬೇಕು. ಮದಕರಿ ನಾಯಕ

ಬರೀ ಸಿಂಹಾಸನದ ಮೇಲೆ ಕೂತ್ಕಂಡು ಅಧಿಕಾರ ಚಲಾಯಿಸ ಪೈಕಿಯಲ್ಲ. ಗರಡಿಯಲ್ಲಿ ಸಾಮು ತೆಗೆದು ಗಟ್ಟಿ ಮುಟ್ಟಾಗಿದ್ದ ಜಟ್ಟಿಗಳವರು. ಅವರಂತೆಯೇ ಧಿಮಾಕಿನಿಂದ ದರ್ಪದಿಂದ, ಗಂಡಸ್ತನದಿಂದ ಬದುಕಬೇಕು ಅಂತ ಇಲ್ಲಿನ ಜನಗಳ ಮನಸ್ಸಿನಲ್ಲಿ ಇರುತ್ತದೆ. ಹಂಗಾಗಿ ಜನ, ಮತ್ತೆ ಯಜಮಾನರುಗಳು - ನಮ್ಮ ಹುಡುಗರು ಹಿಂಗೇ ಬೆಳೀಬೇಕು, ಊರಿಗೆ ಹೆಸರು ತರಬೇಕು ಅಂತ ಇಷ್ಟ ಪಡೋರು.

ಗರಡಿಗೆ ಬರುತ್ತಿದ್ದ ಪೈಲ್ವಾನರಾದರೂ ಅಷ್ಟೆ. ಅವರು ಓಡಾಡೋ ರೀತಿ ನೋಡಿದರೆ ದೂರದಿಂದ ಜನ ತಿಳಕೊಳ್ಳದೇ ಬೇರೆ. ಅವರನ್ನು ಹತ್ತಿರದಿಂದ ನೋಡಿ ತಿಳಕೊಳ್ಳದೇ ಬೇರೆ. ಅವರ ಎತ್ತರ, ಗಾತ್ರ, ದಪ್ಪ-ಗಿಪ್ಪ, ಓಡಾಡೋ ರೀತಿಯಿಂದ ಕೆಲವು ಜನ ಪೈಲ್ವಾನರ ಬಗ್ಗೆ ಕೆಟ್ಟ ಅಭಿಪ್ರಾಯ ತಾಳಿ ಬಿಡುತ್ತಾರೆ. ಗರಡಿಯಲ್ಲಿ ಸಾಧನೆ ಮಾಡಿದ, ಮಟ್ಟಿಯಲ್ಲಿ ಲಡತ್ ಮಾಡಿದ ಮೈ ಅಂದರೆ ಮೈ, ಪೈಲ್ವಾನ್ ದೇಹ ಅಂದ್ರೆ ಹೈಕ್ಲಾಸ್ ದೇಹ ಅದು. ಕಲ್ಲಿನಲ್ಲಿ ಬೇಕಾದರೆ 'ಮಿಸ್ಟೇಕ್ ಬರಬಹುದು, ಆದರೆ ಸರಿಯಾದ ಪೈಲ್ವಾನ್ ದೇಹದಲ್ಲಿ 'ಮಿಸ್ಟೇಕ್ ಬರುವುದಿಲ್ಲ. ಅವನು ಒಂದು ಕೊಬ್ಬಿದ ಗೂಳಿ ಕಂಡಂಗೆ ಕಾಣಿಸ್ತಾನೆ. ಗೂಳಿ ನೋಡಿದ್ದಂಗೆ ಜನ ಹೆದರುತ್ತಾರೆ, ಭಯ ಪಡ್ತಾರೆ. ಆದರೆ ಅದರ ಕಾಲಡಿ ಒಂದು ಮಗು ತೂರಿ ಬಂದರೂ ಇರಿಯುವುದಿಲ್ಲ. ಅದು ಸಾಧು ಪ್ರಾಣಿ! ಈ ಪೈಲ್ವಾನ್ ಅನ್ನೋನು ಕೂಡಾ ಸಾಧು ಮನುಷ್ಯ - ಗೂಳಿಯಂತೆ ಕಂಡರೂ. ಹತ್ತಿರ ಬಂದು ನಮ್ಮನ್ನು ನೋಡಿದರೆ, ಮಾತಾಡಿದ್ರೆ ಇದು ಗೊತ್ತಾಗುತ್ತೆ.

ಪೈಲ್ವಾನರುಗಳ ಗುರು-ಶಿಷ್ಯ ಸಂಬಂಧ ಕೂಡಾ ಅಂಥಾದ್ದೆ. ಅನುಭವಿಸಿ ಅರ್ಥಮಾಡಿಕೊಳ್ಳೋ ಅಂಥಾದ್ದು. ಉಸ್ತಾದ್ ಕಣ್ಣು ಯಾವಾಗಲೂ ತನ್ನ ಶಿಷ್ಯನ ಮೇಲೆ ಇರುತ್ತೆ, ಅವನ ಮೈಕಟ್ಟು, ಅವನು ಕಲಿತಿರೋ ಪಟ್ಟು - ಇವನ್ನು ಉಸ್ತಾದ್ ಎಚ್ಚರಿಕೆಯಿಂದ ನೋಡ್ತಾ ಇರ್ತಾನೆ. ಗಬ್ಬದ ಕುರಿ ಹಿಂಡಿನಲ್ಲಿದ್ದಾಗ ಕುರುಬ ಹೆಂಗೆ ಅದನ್ನು ಕಣ್ಣಿಟ್ಟು ಕಾಯ್ತಾ ಇರ್ತಾನೋ, ಹಂಗೇನೆ ಶಿಷ್ಯನನ್ನು ಉಸ್ತಾದ್ ಯಾವಾಗಲೂ ಗಮನಿಸುತ್ತಿರುತ್ತಾನೆ. ಗುರುವಿಗೆ ತನ್ನ ಶಿಷ್ಯ ಗೆಲ್ಲಬೇಕು, ಹೆಸರು ಮಾಡಬೇಕು ಅನ್ನೋದೇ ಬಾಳಾ ದೊಡ್ಡ ಚಿಂತೆ. ಶಿಷ್ಯ ಏನಾದರೂ ಆಖಾಡದಲ್ಲಿ ಬಿದ್ದ ಅಂದ್ರೆ, ಅವನ ತಳಮಳ ಚಿಂತೆ, ಆತುಕೊಳ್ಳೋ ಗುಣ ಇವನ್ನು ನಾನು ಆಗ್ಗೆ ತಿಳಿಸಿದಂತೆ ಅನುಭವಿಸಿ ಅರ್ಥಮಾಡಿಕೊಳ್ಳೋ ವಿಷಯಗಳು. ಇವು ನಿಮಗೆ ಅರ್ಥವಾಗಬೇಕಾದರೆ ಗರಡಿ ಹೊರಗೆ ನಿಂತ್ಕಬಾರದು. ಗರಡಿ ಒಳಕ್ಕೆ ಬರೇಕು. ಉಸ್ತಾದ್ ಪೈಲ್ವಾನರುಗಳನ್ನು ನೋಡೋಕು. ಆಗ ಮಾತ್ರ ಇವೆಲ್ಲಾ ತಿಳಿಯುತ್ತೆ.

ನಮ್ಮ ದೊಡ್ಡಗರಡಿಯಲ್ಲಿ ಬಹಳ ಹಿಂದಿನಿಂದಲೂ ಅರಬ್ಬರು, ಜಟ್ಟಿಗಳು ಅನ್ನೋ ಜನಾಂಗದವರು ಬಂದು ಸಾಧನೆ ಮಾಡ್ತಾ ಇದ್ದರು ಅನ್ನುವುದನ್ನು ಕೇಳಿದ್ದೀನಿ. ನನಗೆ ಗೊತ್ತಿರುವ ದೊಡ್ಡಗರಡಿ ವಿಷಯ ಅಂದ್ರೆ ಪ್ರಖ್ಯಾತ ಪೈಲ್ವಾನ್ ನಂಜಪ್ಪವರ ಕಾಲದಿಂದ.

ಆಗ ನಮ್ಮ ತಂದೆ ನಾರಣಪ್ಪರು ಅಲ್ಲಿ ಉಸ್ತಾದ್ ಆಗಿದ್ದರು. ಅದೇ ಸಮಯದಲ್ಲಿ ಕಾಲುಂಗುರದ ಬುಡ್ತಣ್ಣ ಅನ್ನೋರು ಕೂಡಾ ದೊಡ್ಡಗರಡಿಯಲ್ಲಿ ಉಸ್ತಾದ್ ಆಗಿದ್ದರು. ನಮ್ಮ ತಂದೆ ನಾರಣಪ್ಪರಿಗೂ ಕಾಲುಂಗುರದ ಬುಡ್ಡಣ್ಣರವರಿಗೂ ಏನೋ ಮಾತಿಗೆ ಮಾತು ಬೆಳೆದು ಮನಸ್ತಾಪ ಆಯ್ತು. ಅದೇ ಸಮಯದಲ್ಲಿ ಸಣ್ಣಗರಡಿಗೂ ಉಸ್ತಾದ್ ಬೇಕಿತ್ತು. ಅಲ್ಲಿನ ದೊಡ್ಡ ಮನುಷ್ಯರು ನಮ್ಮ ತಂದೆಗೆ ಕೇಳಿಕೊಂಡಿದ್ದರಿಂದ, ಅವರು ಸಣ್ಣಗರಡಿಗೆ ಉಸ್ತಾದ್ ಆಗಿ ಹೋದರು. ಆದ್ರೆ ನಾನು ನಂಜಪ್ಪರ ಶಿಷ್ಯನಾಗಿ ದೊಡ್ಡ ಗರಡಿಯಲ್ಲೇ ಸಾಧನೆ ಮಾಡ್ಕೊಂಡು ಹೋದೆ. ನಾನು ದೊಡ್ಡಗರಡಿಯಲ್ಲಿ ಸಾಧನೆ ಮಾಡ್ತಾ ಇದ್ದ ಕಾಲದಲ್ಲಿ ಬೇಕು ಬೇಕಾದಂತ ಭಾರಿ ಪೈಲ್ವಾನರುಗಳಿದ್ದರು. ಅವರಲ್ಲಿ ಬಾಳಾ ಅಂದ್ರೆ ಬಾಳಾ ಹೆಸರು ಮಾಡಿದ ಪೈಲ್ವಾನರುಗಳು ಅಂದರೆ ನಂಜಪ್ಪರು ಮತ್ತು ರಾಮಪ್ಪರು. ಆಗಿನ ಕಾಲದಲ್ಲಿ ಅವರಿಬ್ಬರ ಬಹಳಷ್ಟು ಕುಸ್ತಿ ನೋಡಿದ ಕುಸ್ತಿ ಪ್ರೇಮಿಗಳು ನಂಜಪ್ಪಂದು ಯುಕ್ತಿ, ರಾಮಪ್ಪಂದು ಶಕ್ತಿ ಅಂತ ಮಾತಾಡಿಕೊಳ್ಳೋರು, ದೊಡ್ಡಗರಡಿಯಲ್ಲಿ ಪೈಲ್ವಾನ್ ನಂಜಪ್ಪ, ಪೈಲ್ವಾನ್ ರಾಮಪ್ಪ ಇವರುಗಳ ಜೊತೆ ಬಷೀರ್, ಬಸವರಾಜ್, ಕುಂಟು ರಾಮಪ್ಪ, ಮರಾಠಿ ಹನುಮಂತಿ, ವೀರಪ್ಪ, ವೀರಭದ್ರಪ್ಪ, ಆಶಿಕ್ ಹುಸೇನ್, ಮೊದಲಾದ ಒಳ್ಳೆ ಪೈಲ್ವಾನರುಗಳೇ ಇದ್ದರು.

ಈ ಎಲ್ಲಾ ಪೈಲ್ವಾನರುಗಳ ಮೇಲೆ, ಗರಡಿಯ ಮೇಲೆ ಅನೇಕ ಯಜಮಾನರುಗಳು ಸದಾ ಕಣ್ಣಿಟ್ಟು ನೋಡಿಕೊಳ್ಳೋದರ ಜೊತೆಗೆ, ಗರಡಿ ನಮ್ಮದೆ ಈ ಪೈಲ್ವಾನರುಗಳು ನಮ್ಮ ಹುಡುಗರೇ ಎಂಬ ಅಭಿಮಾನವಿಟ್ಟುಕೊಂಡು ಪ್ರೋತ್ಸಾಹ ಕೊಡೋರು. ಆಗ ನನ್ನ ಗುರುಗಳಾದ ನಂಜಪ್ಪರು ಮೇಲಕ್ಕೆ ಬರ್ತಿದ್ದ ಕಾಲ. ಬೇರೆ ಪೈಲ್ವಾನರುಗಳೂ ಮೇಲಕ್ಕೆ ಬರ್ತಿದ್ದ ಕಾಲ. ಇಂಥವರಿಗೆಲ್ಲಾ ಚೆನ್ನಾಗಿ ಕುಸ್ತಿ ಮರ್ಮ ತಿಳಿಸೋ ಅಂತ ಒಬ್ಬ ಉಸ್ತಾದ್ ಬೇಕಾಗಿದ್ದರು ಅಂತ ಗರಡಿಯ ಅಭಿಮಾನಿಗಳು, ಯಜಮಾನರುಗಳು ಅಂದ್ಕೋಳಿದ್ದರೇನೋ. ಅಂತ ಅಭಿಮಾನಿಗಳಲ್ಲಿ ಸಿ. ಬಿ. ಮಲ್ಲಪ್ಪರು ಒಬ್ಬರು.

ಸಿ. ಬಿ. ಮಲ್ಲಪ್ಪರು ಇಲ್ಲಿ ಕೌನ್ಸಿಲರ್ ಆಗಿದ್ದರು. ಅವರು ಈರುಳ್ಳಿ ವ್ಯಾಪಾರ ಮಾಡ್ತಾ ಇದ್ದರು. ಅವರು ದೊಡ್ಡಗರಡಿಯ ಹಿತೈಷಿಗಳು, ಬಾಳಾ ಕುಸ್ತಿಪ್ರೇಮಿ. ಈರುಳ್ಳಿ ವ್ಯಾಪಾರ ಮಾಡ್ತಾ ಇದ್ರಲ್ಲ ಆಗ ಒಂದ್ಸಾರಿ ಈರುಳ್ಳಿ ವ್ಯಾಪಾರಕ್ಕಾಗಿ ಮೈಸೂರಿಗೆ ಹೋಗಿದ್ದರು. ಆಗ ಮೈಸೂರಿನಲ್ಲಿ ಕೆಲವು ಕಾಡಾಕಾಡಿ ಕುಸ್ತಿಗಳು ನಡೀತಿದ್ದವು. ಆ ಕುಸ್ತಿಗಳಲ್ಲಿ ಪಾಲುಗೊಳ್ಳೋಕೆ ಅಲ್ಲಿಗೆ ಪಂಜಾಬಿನಿಂದ ಆ ಕಾಲದಲ್ಲಿ ಭಾರಿ ದೊಡ್ಡ ಹೆಸರು ಮಾಡಿದ ಪರಿಪೈಗರ್ ಅವರು ಬಂದಿದ್ದರು. ಸಿ. ಬಿ. ಮಲ್ಲಪ್ಪರಿಗೆ ಪರಿಪೈಗ ಅವರನ್ನು ನೋಡಿದೇಟಿಗೆ ನೆನಪಿಗೆ ಬಂದಿದ್ದು ದೊಡ್ಡಗರಡಿ. ಪರಿಪೈಗರ್ ಅವರನ್ನು ನಾನೇಕೆ ದುರ್ಗಕ್ಕೆ ಕರೊಂಡು ಹೋಗಬಾರದು? ಈತನ ಕೈಯಲ್ಲಿ ಪೈಲ್ವಾನ್ ನಂಜಪ್ಪ,

ರಾಮಪ್ಪ, ಬಷೀರು, ಹನುಮಂತಿ, ಕುಂಟು ರಾಮಪ್ಪ ಇವರಿಗೆಲ್ಲಾ ಟ್ರೈನಿಂಗ್ ಯಾಕೆ ಕೊಡಬಾರು? ಈತನ ಕೈಯಲ್ಲಿ ನಮ್ಮ ಪೈಲ್ವಾನರುಗಳು ನುರಿತರೆ, ಅವರಿಗೂ ಹೆಸರು, ಗರಡಿಗೂ ಹೆಸರು ಅಂತ ಯೋಚನೆ ಬಂತು ಅವರಿಗೆ. ಹಂಗೆ ಅನ್ನಿಸಿದ್ದೇ ತಡ ಪರಿಪೈಗರ್ ಅವರನ್ನು ಒಪ್ಪಿಸಿ, ಸ್ವಂತ ಖರ್ಚಿನಲ್ಲಿ ಮರ್ಗಕ್ಕೆ ಕಕ್ಕೊಂಡು ಬಂದರು. ದೊಡ್ಡ ಗರಡಿಗೆ ಪರಿಪೈಗರ್ ಪರಿಚಯ ಮಾಡಿಸಿದರು. ಹಿಂಗೆ ಸಿ. ಬಿ. ಮಲ್ಲಪ್ಪನವರಿಂದ ಪರಿಪೈಗ ದುರ್ಗದ ನೆಲಕ್ಕೆ ಕಾಲಿಟ್ಟರು.

ಪರಿಪೈಗರ್ ಅಂದ್ರೆ ಆರು-ಆರೂವರೆ ಅಡಿಯ ಎತ್ತರದ ಆಳು, ಗಿರಿಜಾಮೀಸೆ ಬಿಟ್ಟಿದ್ರು. ಗಟ್ಟುಮುಟ್ಟಾದ ಬಲಶಾಲಿಯಾದ ಆಳು. ಆಗ ಪೈಲ್ವಾನ್ ನಂಜಪ್ಪ ಮತ್ತು ಪೈಲ್ವಾನ್ ರಾಮಪ್ಪ ಅವರು ಇಪ್ಪತ್ತೈದರಿಂದ ಇಪ್ಪತ್ತೆಂಟು ವಯಸ್ಸಿನವರಿರಬಹುದು. ಪರಿಪೈಗರ್ ಅವರು ಮಟ್ಟಿಯಲ್ಲಿಳಿದು ನಂಜಪ್ಪ, ರಾಮಪ್ಪ ಅವರಿಗೆ ಕೆಲಸ ಕಲಿಸುವಾಗ ಅವರ ಮೈಯೊಳಗಿದ್ದ ಕಸುವು ನೋಡಬೇಕು! ಅವರು ಇಬ್ಬರು ಸೇರಿಕೊಂಡರೂ ಪರಿಪೈಗ ಒಬ್ಬರನ್ನು ಬಗ್ಗಿಸಲು ಆಗುತ್ತಿರಲಿಲ್ಲ! ಅಂಥಾ ಆಳು ಆತ!

ಆತ ದುರ್ಗಕ್ಕೆ ಬಂದು ದುರ್ಗದವರೇ ಆದರು. ಜನಗಳ ಪ್ರೀತೀನೂ ಗಳಿಸಿದರು. ಅವರು ಬೀದಿಯಲ್ಲಿ ಓಡಾಡುತ್ತಿದ್ದರೆ ಸಣ್ಣಪುಟ್ಟ ಹುಡುಗರೆಲ್ಲಾ ಅವರಿಗೆ ಸಲಾಂ ಉಸ್ತಾದ್ ಎನ್ನೋರು. ಅವರು ನಕ್ಕೊಳ್ತಾ 'ಸಲಾಂ ಎಂದುಕೊಂಡು ಮುಂದಕ್ಕೆ ಹೋಗೋರು. ಯಾರಾರ ಮಣ್ಣಿನ ಋಣ ಎಲ್ಲಿರುತ್ತೋ ಗೊತ್ತಾಗೊಲ್ಲ. ಪರಿಪೈಗರ್ ಉಸ್ತಾದರು ಉಳಿದ ಜೀವನವೆಲ್ಲಾ ದುರ್ಗದಲ್ಲೇ ಕಳೆದರು. ಇಲ್ಲಿಯೇ ಕೊನೆಯಲ್ಲಿ ಮಣ್ಣಾದರು, ಸಮಾಧಿಯಾದರು. ಪರಿಪೈಗರ್ ಅವರು ಬರಬೇಕಾದರೆ ಜೊತೆಗೆ ತಮ್ಮ ಮಗ ಆಶಕ್ ಹುಸೇನ್ ಅವರನ್ನು ಕರ್ಕೊಂಡು ಬಂದಿದ್ದರು. ಅವರೂ ಅಷ್ಟೇನೆ, ದೊಡ್ಡಗರಡಿ ಪೈಲ್ವಾನರಾಗಿ ಇಲ್ಲಿಯೇ ಉಳಿದರು. ಅವರು ಮೊನ್ನೆ ಮೊನ್ನೆ ಕೆಲವು ವರ್ಷಗಳ ಹಿಂದೆ ತೀರಿಹೋದರು.

ಉಸ್ತಾದುಗಳಿಗೆ, ಪೈಲ್ವಾನರುಗಳಿಗೆ, ತಮ್ಮ ಗರಡಿ ಅಂದ್ರೆ ಬಾಳಾ ಪ್ರೇಮ. ಶಿಷ್ಯ ಏನಾದರೂ ಅಖಾಡದಲ್ಲಿ ಚಿತ್ತಾಗಿ ಬಿಟ್ಟ ಅಂದ್ರೆ ಉಸ್ತಾದ್ ಅದನ್ನ ತನ್ನ ಸೋಲು ಅಂತ ತಿಳ್ಕೊಂಡುಬಿಡ್ತಾ ಇದ್ದ. ಅದಕ್ಕೆ ಒಂದು ಉದಾಹರಣೆ ಹೇಳೀನಿ, ಕೇಳಿ. ನಮ್ಮ ತಂದೆ ನಾರಣಪ್ಪರು ದೊಡ್ಡಗರಡಿಯಲ್ಲಿ ಉಸ್ತಾದ್ ಆಗಿದ್ದಾಗ ಅವರಿಗೆ ಒಳ್ಳೆ ಪೈಲ್ವಾನರುಗಳೇ ಶಿಷ್ಯರಾಗಿದ್ದರು. ಆಗ ಚೆನ್ನಬಸಪ್ಪ, ರಾಮಪ್ಪ, ಈರಣ್ಣ- ಇವರೆಲ್ಲ ನಮ್ಮ ತಂದೆಗೆ ಶಿಷ್ಯರು. ಇವರಲ್ಲಿ ಈರಣ್ಣ ಒಳ್ಳೆ ಪೈಲ್ವಾನ್.

ಆಗ ನಮ್ಮೂರಿಗೆ ಕುಸ್ತಿಗಾಗಿ ದಾವಣಗೆರೆಯಿಂದ ಭರ್ಜರಿ ಚಾಲೆಂಜಿಂಗ್ ಪೈಲ್ವಾನರುಗಳು ಬರ್ತಾ ಇದ್ದರು. ಹಂಗೆ ದಾವಣಗೆರೆಯಿಂದ ಬಾ ಇದ್ದ ಪೈಲ್ವಾನರುಗಳ ಪೈಕಿ ಕೆಂಪು ಸಿದ್ದಪ್ಪ ಅನ್ನೋನು ಒಬ್ಬ. ಆತನ ಹೆಸರು ಕೇಳಿದರೆ ಅವನ ಜೊತೆ ಹಾಕ್ಕೊಂಡು

ಕುಸ್ತಿ ಆಡೋಕೆ ಬೇರೆ ಪೈಲ್ವಾನರುಗಳು ನಡುಗುತ್ತಿದ್ದರು. ಅವನು ಅಖಾಡದಲ್ಲಿ ಎಂದೂ ಬಿದ್ದ ಪೈಲ್ವಾನನೇ ಅಲ್ಲ.

ಆ ಕೆಂಪು ಸಿದ್ದಪ್ಪನ ಮೇಲೆ ನಮ್ಮ ತಂದೆಯವರ ಶಿಷ್ಯ ಈರಣ್ಣನ ಕುಸ್ತಿ ಆಯ್ತು, ಒಂದು ಸರ್ತಿ. ಆರ್ಧ ಮುಕ್ಕಾಲು ಗಂಟೆ ಆಡಿದ ಭಾರಿ ಕುಸ್ತಿ ಅದು. ನಮ್ಮ ಗರಡಿಯ ಈರಣ್ಣ ಆ ಕುಸ್ತೀಲಿ ಗೆದ್ದು ಬಿಟ್ಟ. ಕುಸ್ತಿ ನೋಡಿದ ದುರ್ಗದ ಜನಕ್ಕೇನೋ ಖುಷಿಯಾಯ್ತು. ಆದರೆ ಕೆಂಪು ಸಿದ್ದಪ್ಪನ ಗುರು ಸಣ್ಣನೀಲಪ್ಪ ಅಂತ. ಆತ ಶಿಷ್ಯನ ಸೋಲು ನೋಡಿಕೊಂಡು ಬಾಳಾ ಬೇಜಾರು ಮಾಡಿಕೊಂಡು ಬಿಟ್ಟ. ಅವನೇನು ಮಾಡಿದ ....ಆಖಾಡಕ್ಕೆ ನುಗ್ಗಿ ಬಂದು ನಿಂತು ಕೊಂಡು ಗೆದ್ದ ಈರಣ್ಣನ ಮೇಲೆ ಸವಾಲು ಹಾಕಲಿಲ್ಲ. ನಿನ್ನ ಗುರುವಿನ ಮೇಲೆ ನನ್ನ ಸವಾಲ್! ಎಂದು ಆರ್ಭಟಿಸಿಬಿಟ್ಟ! ಆಗ ನಮ್ಮ ತಂದೆ ನಾರಣಪ್ಪನವರು ರೇಗುವುದರ ಬದಲು ನಾನ್ಯಾಕಪ್ಪ ನಿನ್ನ ಸವಾಲ್ ಸ್ವೀಕರಿಸಬೇಕು? ನಿನ್ನ ಸವಾಲಿಗೆ ನನ್ನ ಶಿಷ್ಯನೇ ಸಾಕು ಎಂದರು. ಆದರೆ ಕುಸ್ತಿ ವ್ಯವಸ್ಥಾಪಕರು ಅನ್ನಿಸಿಕೊಂಡವರು, ದೊಡ್ಡವರು ಅನ್ನಿಸಿಕೊಂಡವರು ಅಡ್ಡಬಂದು, ಆ ಕುಸ್ತಿ, ಸವಾಲು ಜಟಾಪಟಿಗೆ ಹೋಗದಂತೆ ನೋಡಿಕೊಂಡರು. ಇಬ್ಬರನ್ನೂ ಸಮಾಧಾನ ಪಡಿಸಿದರು. ಹಿಂಗೆ ಸಣ್ಣನೀಲಪ್ಪ ಸವಾಲ್ ಹಾಕಿ ನಿಂತಾಗ ಆತನಿಗೆ ಆಗಲೇ ಅರವತ್ತು ವರ್ಷ ಸಮೀಪಿಸಿತ್ತು. ನಮ್ಮ ತಂದೆಯವರಿಗೂ ಹೆಚ್ಚು ಕಡಿಮೆ ಅಷ್ಟೇ ವಯಸ್ಸು, ಸಣ್ಣ ನೀಲಪ್ಪ ಯಾಕೆ ಹಂಗೆ ಸವಾಲು ಹಾಕಿದ ಅನ್ನೋದನ್ನ ಸ್ವಲ್ಪ ಯೋಚಿಸಬೇಕು. ಆತ ಈ ವಯಸ್ನಲ್ಲಿ ಕುಸ್ತಿ ಆಡೋಕೆ, ಬಿಡೋಕೆ ಅಂತ ಯೋಚಿಸ್ತ ಕುಂತ್ಕಳ್ಳಲಿಲ್ಲ. ನನ್ನ ಶಿಷ್ಯ ಸೋತ್ನಲ್ಲ. ನಮ್ಮ ಗರಡಿಗೆ ಹಿಂಗೆ ಅವಮಾನ ಆಯ್ತಲ್ಲ ಅನ್ನೋದನ್ನ ಹೆಚ್ಚು ಯೋಚಿಸೋರು.

ತಮ್ಮ ಗರಡಿಗೆ, ತಮ್ಮ ಗರಡಿ ಪೈಲ್ವಾನರುಗಳಿಗೆ ಸೋಲು, ಅವಮಾನ ಆಗ್ತಾ ಇದೆ ಅಂದ್ರೆ ಇನ್ನೊಬ್ಬ ಪೈಲ್ವಾನ್ ತೆಪ್ಪಗೆ ಕುಳಿತುಕೊಳ್ಳೋಲ್ಲ. ಟೆನ್ಷನ್‌ಗೆ ಸಿಕ್ಕಿ ಹಾಕಿಕೊಂಡು ಬಿಡ್ತಾನೆ. ಈಗ ನಾನೆ ಇಂಥ ಟೆನ್ನನ್‌ಗೆ ಸಿಕ್ಕಿ ಹಾಕಿಕೊಂಡ ಘಟನೆ ಹೇಳ್ತಿನಿ ಕೇಳ್ರಿ.

ನಮ್ಮ ದೊಡ್ಡಗರಡಿಯಲ್ಲಿ ಒಬ್ಬ ಸಾಬರ ಹುಡುಗ ಸಾಧನೆ ಮಾಡ್ತಾ ಇದ್ದ. ಅವನು ಕುಸ್ತಿಯೊಳಗೆ ಮೇಲಕ್ಕೆ ಬರೋ ಅಂತ ಲಕ್ಷಣಗಳಿದ್ದವು. ನಮ್ಮ ಗುರುಗಳಾದ ನಂಜಪ್ಪರು ನಮಗೆಲ್ಲ ಒಂದು ಮಾತು ಹೇಳೋರು. ಒಂದು ಕುಸ್ತೀಲಿ ಒಬ್ಬ ಪೈಲ್ವಾನ್ ಗೆಲ್ಲೋ ತನಕ ನಾವು ಅವನಿಗೆ 'ಪುಶ್ ಮಾಡ್ಬೇಕು. ಒಂದ್ಸಾರಿ ಅವನು ಕುಸ್ತಿ ಗೆದ್ದ ಅಂದ್ರೆ ಅವನು ಸಾಲುಗಟ್ಟಿ ಕುಸ್ತಿ, ಗೆಲ್ತಾನೇ ಹೋಗ್ತಾನೆ. ಅಲ್ಲಿ ತನಕ ಅವನಿಗೆ ದಾರಿ ತೋರಿಸಬೇಕು, ಪ್ರೋತ್ಸಾಹ ಕೊಡಬೇಕು ಅದಕ್ಕಾಗಿ ನಾವು ನಮ್ಮ ಗರಡಿಯ ಈ ಮುಸ್ಲಿಂ ಪೈಲ್ವಾನ್ ದಸ್ತಗೀರ್ ಸಾಬ್‌ನನ್ನು ಸರಿಯಾದ ಸಮಯ ನೋಡಿ ಅಖಾಡಕ್ಕಿಳಿಸಿ, ಗೆಲ್ಲಿಸಬೇಕು ಅಂತ ಕಾಯ್ತಾ ಇದ್ದೀವಿ.

ಅದೇ ಸಮಯದಲ್ಲಿ ಭರಮಸಾಗರದಲ್ಲಿ ಜಾತ್ರೆ ನಡೀತಿತ್ತು. ಇಂಥ ಜಾತ್ರೆ ಸಮಯದಲ್ಲಿ ಕುಸ್ತಿಗಳ ವ್ಯವಸ್ಥೆ ಮಾಡ್ತಾ ಇದ್ದರು. ಭರಮಸಾಗರದ ಜಾತ್ರೆ ಕುಸ್ತಿಯಲ್ಲಿ ನಮ್ಮ ಗರಡಿಯ ಹುಡುಗ ದಸ್ತಗೀರ್ ಸಾಬ್‌ನನ್ನು ಆಡಿಸಲು ಏರ್ಪಾಡು ಮಾಡಿದ್ದೆವು. ಒಳ್ಳೆ ಕಟ್ಟುಮಸ್ತಾದ ಆಳು ದಸ್ತಗೀರ್, ನಂಜಪ್ಪನವರು ಹೇಳ್ದಂಗೆ ಒಂದ್ಸಾರಿ ಗೆಲ್ಲಿಸಿ ಕರ್‍ಕೊಂಡು ಬರೋದು ಅಂತ ನಮ್ಮ ಗರಡಿ ಹುಡುಗರೆಲ್ಲಾ ಅವನ ಜೊತೆಗೆ ಭರಮಸಾಗರಕ್ಕೆ ಹೋಗಿಬಿಟ್ಟಿದ್ದರು.

ನಾನು ಆದಿನ ಚಿಕ್ಕ ಪೇಟೆಯಿಂದ ನನ್ನ ಟೈಲರಿಂಗ್ ಶಾಪಿಗೆ ಬೀಗ ಹಾಕಿ ಊಟಕ್ಕೆ ಅಂತ ಮನೆಗೆ ಬರ್ತಾಇದ್ದೆ. ದೊಡ್ಡಪೇಟೆಯಲ್ಲಿ ಮಿಶಿನ್ ರಾಜಣ್ಣನ ಅಂಗಡಿ ಮುಂದೆ ನಮ್ಮ ಕೌನ್ಸಿಲರ್ ನಾಗರಾಜು ಇನ್ನೂ ಯಾರಾರೋ ನಿಂತಿದ್ದರು. ಭರಮ ಸಾಗರದಲ್ಲಿ ನಡೀತಿದ್ದ ಕುಸ್ತಿ, ವಿಷಯ ತಿಳಿಸಿ 'ನಡಿಯಣ್ಣ ಹೋಗಿಬರೋಣ ಎಂದರು. ನಾನು ಕುಸ್ತಿ ಮೇಲಿನ ಆಸೆಯಿಂದ ಮನೆಗೆ ಊಟಕ್ಕೇ ಹೋಗಲಿಲ್ಲ. ನಾವೊಂದು ನಾಲ್ಕೈದು ಜನ ಕುಸ್ತಿ ನೋಡಿಕೊಂಡು ಬರೋಣ ಅಂದ್ಕೊಂಡು ಭರಮಸಾಗರಕ್ಕೆ ಹಂಗೆ ಹೊರಟೇ ಬಿಟ್ಟವು.

ನಮ್ಮ ಗರಡಿ ಪೈಲ್ವಾನ್ ದಸ್ತಗೀರ್ ಜೊತೆಗೆ ಮಾಯಕೊಂಡದ ಒಬ್ಬ ಪೈಲ್ವಾನ್ ಜೊತೆ ಮಾಡಿದ್ದರು. ದಸ್ತಗೀರ್‌ನನ್ನು ಗೆಲ್ಲಿಸಿಕೊಂಡು ಕರ್‍ಕೊಂಡು ಬರಬೇಕು ಅಂತ ನಮ್ಮ ಯೋಜನೆ ಇತ್ತಲ್ಲ ಅದೇ ತಲೆಕೆಳಗಾಯ್ತು. ಆ ಮಾಯಕೊಂಡದ ಪೈಲ್ವಾನ್ ಒಂದೇ ಏಟಿಗೆ ದಸ್ತಗೀರ್ ಸಾಬ್‌ನನ್ನು ಚಿತ್ತು ಮಾಡಿಬಿಟ್ಟ. ಆಮೇಲೆ ಅದೇ ಮಾಯಕೊಂಡದ ಪೈಲ್ವಾನ್ ಜೊತೆ ನಮ್ಮ ದೊಡ್ಡ ಗರಡಿ ಹುಡುಗರು ಒಳ್ಳೆ ಬಲಶಾಲಿಗಳು - ಒಬ್ಬೊಬ್ಬರೇ ಅಂತ ಐದಾರು ಜನ ಅಖಾಡದಲ್ಲಿ ಹೋಗಿ ಸೋತು ಬಂದರು. ಅವರಲ್ಲಿ ಕಂಟ್ರಾಕ್ಟರ್ ತಿಮ್ಮಣ್ಣರ ಮಗ ತಿಪ್ಪೇಸ್ವಾಮೀನೂ ಇದ್ದ. ಅವನೂ ಸೋತು ಬಿಟ್ಟ.

“ಸಾಕು ನಡಿಯಪ್ಪ ಇನ್ನೇನು ಕುಸ್ತಿ ನೋಡೋಣ' ಅಂತ ನಾವೆಲ್ಲ ಮಾತಾಡಿಕೊಂಡು ಕೊಡುವಿಕೊಂಡು ಎದ್ದೇಳಬೇಕು .. ಅಷ್ಟರಲ್ಲಿ ಕುಸ್ತಿ ವ್ಯವಸ್ಥಾಪಕರು ನಮ್ಮನ್ನು ತಡೆದು, ಇನ್ನೂ ಬೇಕಾದಷ್ಟು ಕುಸ್ತಿಗಳು ಐದಾವೆ.. ಪೈಲ್ವಾನರೆ ನೀವ್ಯಾಕೆ ಬೇಜಾರು ಮಾಡ್ಕೊಳ್ಳಬೇಕು .. ಹೋಗ ಬ್ಯಾಡ್ರಿ ಇರ್ರಿ ಎಂದರು. ಮತ್ತೆ ಕುಂತ್ಕೊಂಡ್ವಿ.

ಆದರೆ ಹಂಗೆ-ಹಿಂಗೆ ಅನ್ನೋದರೊಳಗೆ ಒಂದಾದ ಮೇಲೊಂದು ಕುಸ್ತಿ ಬಿದ್ದು, ಕೊನೆಯಲ್ಲಿ ಕುಸ್ತಿ ವ್ಯವಸ್ಥಾಪಕರು 'ಸಾರುಬಳೆ ಹಿಡಿದು ಬಿಟ್ಟರು. 'ಸಾರುಬಳೆ ಅಂದರೆ ಇಂಥಾ ಪೈಲ್ವಾನರ ಜೊತೆಯಲ್ಲಿ ಯಾರಾದರೂ ಕುಸ್ತಿ ಆಡಲು ತಯಾರಿದ್ದಾರ? ಅಂತ

ಅಖಾಡದಲ್ಲಿ ಕೂಗ್ತಾರೆ. ಆಡೋಕೆ ಯಾವ ಪೈಲ್ವಾನನೂ ಮುಂದೆ ಬರದಿದ್ರೆ ಅಂಥಾ ಬಳೆಯನ್ನು ಆ ಪೈಲ್ವಾನನಿಗೆ ತೊಡಿಸಿಬಿಡುತ್ತಾರೆ. ಅದು ಆ ಪೈಲ್ವಾನನಿಗೆ ಆ ಕಾಲದಲ್ಲಿ ಸಿಗುತ್ತಿದ್ದ ದೊಡ್ಡ ಗೌರವ. ಯಾವಾಗ ಅಖಾಡದಲ್ಲಿ ಸಾರುಬಳೆ ಹಿಡಿದು ಕೂಗಿಬಿಟ್ಟರೋ, ನಮ್ಮ ಗರಡಿ ಹುಡುಗರೆಲ್ಲಾ ಮುಖ ಮುಖ ನೋಡಿಕೊಂಡರು. ಸೋಲೊಪ್ಪಿಕೊಂಡು ಊರಿಗೆ ಹೋಗೋಕೆ ವಾಪಸ್ಸು ಮನಸಿಲ್ಲ . ಕುಸ್ತಿಗೆ ಬಿಡೋಕೆ ಪೈಲ್ವಾನರಿಲ್ಲ! ಹಿಂಗಾಯ್ತು. ಪರಿಸ್ಥಿತಿ. ಕೊನೆಗೆ ನಮ್ಮ ಗರಡಿ ಹುಡುಗರು ನನ್ನ ಕಡೆಗೆ ತಿರುಗಿ ಅಣ್ಣ ನೀನೇ ಆ ಸಾರು ಬಳೆ ಹಿಡಿದು ಬಿಡಣ್ಣ ... ಇದು ನಮ್ಮ ಗರಡಿ ಮರ್ಯಾದೆ ಪ್ರಶ್ನೆ ಐತೆ ಎಂದರು.

ಆಗ ನಾನು ಆರು ಮಕ್ಕಳ ತಂದೆ! ಕುಸ್ತಿ, ಬಿಟ್ಟೆ ಆದೆಷ್ಟೋ ವರ್ಷಾ ಆಗಿತ್ತು. ನಮ್ಮ ಹುಡುಗರು ಬಲವಂತ ಮಾಡಿದ್ದಕ್ಕೂ ಒಂದೇ ಸಮನೆ ಕುಸ್ತಿ ನೋಡಿದ್ದಕ್ಕೂ ಅದೊಂತರ ಟೆನ್ಸನ್ ಆಗಿ - ಅಖಾಡದಲ್ಲಿ ಹೋಗಿ ಸಾರುಬಳೆ ಹಿಡಿದುಬಿಟ್ಟೆ, ಕುಸ್ತಿ ನೋಡ್ಕೊಂಡ್ ಹೋಗೋದಿಕ್ಕೆ ಬಂದಿದ್ದವನು ನಾನು! ಆದ್ದರಿಂದ ಕುಸ್ತಿ ಆಡೋಕೆ ಲಂಗೋಟೀನೇ ತಂದಿರಲಿಲ್ಲ! ನಮ್ಮ ಹುಡುಗರೇ ಒಂದು ಲಂಗೋಟಿ ಕಳ್ಕೊಂಡು ಅಖಾಡದಲ್ಲಿ ಇಳಿದೆ. ಆ ವಯಸ್ಸಿನಲ್ಲಿ ಕುಸ್ತಿ ಆಡೋಕೆ ಅಂತ ಅಖಾಡಕ್ಕಿಳಿದಿದ್ದರೂ, ನಮ್ಮ ಹುಡುಗರಿಗೆ ನಿರಾಶೆ ಮಾಡಲಿಲ್ಲ. ಮಾಯಕೊಂಡದ ಪೈಲ್ವಾನನನ್ನು ಸೋಲಿಸಿದೆ. ನಮಗೆ ಇಂಥಾ ಸಮಯದಲ್ಲಿ ಕುಸ್ತಿ ಆಡೋದು ಮುಖ್ಯ ಅಲ್ಲ, ನಮ್ಮ ಪೈಲ್ವಾನರು, ಅದಕ್ಕಿಂತಾ ಮುಖ್ಯವಾಗಿ ಗರಡಿ ಗಳಿಸಿಕೊಂಡಿರೋ ಹೆಸರನ್ನು ಹೆಂಗಾದರೂ ಉಳಿಸಬೇಕು ಎನ್ನುವುದು. ಇಂಥ ಫೀಲಿಂಗ್ ಎಲ್ಲಾ ಗರಡಿಯ ಪೈಲ್ವಾನರುಗಳಲ್ಲಿಯೂ ಇರುತ್ತೆ. ಕೆಂಪು ಸಿದ್ದಪ್ಪ ಸೋತಾಗ ಆತನ ಗುರು ಸಣ್ಣನೀಲಪ್ಪ ಮಾಡಿದ್ದು ಇಂಥ ಒಂದು ಸವಾಲು. ನಾನು ಸಾರುಬಳೆ ಹಿಡಿದಿದ್ದೂ ಇಂಥ ಒಂದು ಸಂದರ್ಭ.

ನಾಟಕ, ಸಂಗೀತದ ಖಾಯಶ್ ಯಾರಿಗಿರುತ್ತೋ ಅವರು ಅದನ್ನು ಹುಡುಕಿಕೊಂಡು ಎಲ್ಲಿಗೆ ಬೇಕಾದರೂ ಹೋಗ್ತಾರೆ. ಕುಸ್ತಿಯೂ ಕೂಡಾ ಅಂಥಾದ್ದೇ ಒಂದು ಮನುಷ್ಯನ ಖಾಯಶ್, ಖಯಾಲಿ. ಅಂಥ ಮನುಷ್ಯರಿದ್ರೇನೇ ಕುಸ್ತಿಕಲೆ ಉಳಿದು ಬೆಳೆಯೋದು. ಪೈಲ್ವಾನರಿಗೂ ಗೌರವ ಸಿಕ್ಕೋದು. ಪೈಲ್ವಾನರೂ ಕೂಡಾ ಕುಸ್ತಿ ಬಗ್ಗೆ ಆಸಕ್ತಿ ಉಳುಸಿಕೊಳ್ಳೋದು. ಈಗ ಅರವತ್ತು ವರ್ಷಗಳ ಹಿಂದೆ ಹಿಂಗೆ ಕುಸ್ತಿಗೆ ಉತ್ತೇಜನ ಕೊಡೋರು, ಕುಸ್ತಿ ನೋಡಿ ಖುಷಿ ಪಡೋರು ಬಾಳಾ ಜನ ಇದರು. ಈ ಕುಸ್ತಿ ಖಯಾಲಿ ಒಮ್ಮೆ ಒಬ್ಬರಿಗೆ ಬಂತು ಅಂದ್ರೆ, ಅದು ಅವರ ಜೀವಮಾನದಲ್ಲಿ ಆಳಿಸುವುದಕ್ಕೆ ಆಗುವುದಿಲ್ಲ.

ದಾವಣಗೆರೆಯಲ್ಲಿ ಮಾನಿ ಉಜ್ಜಪ್ಪ ಅಂತ ಆಗಿನ ದಿನಗಳಲ್ಲಿ ಒಬ್ಬರಿದ್ದರು. ಆತನಿಗೆ ಈ ಥರದ್ದು ಕುಸ್ತಿ, ಖಯಾಲಿ ಜಾಸ್ತಿ. ಅದರಲ್ಲೇ ಆತ ತನ್ನ ಆಸ್ತಿ-ಪಾಸ್ತಿ

ಎಲ್ಲ ಕರಗಿಸಿಬಿಟ್ಟ. ದೊಡ್ಡ ದೊಡ್ಡ ಪೈಲ್ವಾನರನೆಲ್ಲ ದಾವಣಗೆರೆಗೆ ಕರೆಸಬೇಕು ಅಂದ್ರೆ ಆತನಿಗೆ ಬಾಳಾ ಇಷ್ಟ, ಆಸಕ್ತಿ, ಹೇಳ್ಬೇಕು ಅಂದ್ರೆ ಆಗ ಭಾರೀ ಪ್ರಖ್ಯಾತಿಯಾಗಿದ್ದ ಪಂಜಾಬಿನ ಗಾಮಾ ಪೈಲ್ವಾನನನ್ನು ದಾವಣಗೆರೆಗೆ ಕರೆಸಿದ್ದ. ಅಂಥ ಪ್ರಪಂಚದಲ್ಲೇ ಪ್ರಖ್ಯಾತಿಯಾದ ಗಾಮ ಪೈಲ್ವಾನನ ಜೊತೆಯಲ್ಲಿ ಕುಸ್ತಿ ಆಡೋಕೆ ಯಾರಿಗೆ ಗುಂಡಿಗೆ ಇರುತ್ತದೆ! ಯಾರು ಮುಂದು ಬರ್ತಾರೆ! ಆಗ ಮಾನಿ ಉಜ್ಜಪ್ಪ ಗಾಮಾ ಪೈಲ್ವಾನ್ ಮತ್ತು ಆತನ ಜೊತೆಗೆ ಬಂದಿದ್ದ ಅವನ ಮಗನನ್ನು ಲಂಗೋಟಿ ಹಾಕಿಸಿ ಖಾಲಿ ಅಖಾಡದಲ್ಲಿ ನಾಲ್ಕು ಸುತ್ತು ಓಡಾಡಿಸಿದ! ಅವರಿಬ್ಬರ ಲಡತ್ ಮಾಡಿದ ಮೈ ನೋಡಿ ಖುಷಿ ಪಟ್ಟ, ಅವರಿಗೆ ಕರೆಸಿದ್ದಕ್ಕಾಗಿ ಕೊಡಬೇಕಾದುದನ್ನು ಕೊಟ್ಟು ಕಳುಹಿಸಿದ. ಹಿಂಗೆ ಕುಸ್ತಿ ಆಡಿಸಿ, ಮೆತ್ತಗಾದರೂ ಮಾನಿ ಉಜ್ಜಪ್ಪನ ನೇತೃತ್ವದಲ್ಲಿ, ಉಸ್ತುವಾರಿಯಲ್ಲಿ ಕುಸ್ತಿಗಳು ನಡೆಯುತ್ತಲೇ ಇದ್ದವು.

ಅವು ಕಾಂಟ್ರಾಕ್ಟ್ ಕುಸ್ತಿಗಳು, ಜೋಡಿ ಮೇಲೆ ಹಣ ನಿಗದಿಪಡಿಸಿ ಗೆದ್ದೋರಿಗೆ ಇಷ್ಟು, ಬಿದ್ದೋರಿಗೆ ಇಷ್ಟು ಅಂತ ಕೊಡೋರು. ಮಾನಿ ಉಜ್ಜಪ್ಪ ಕುಸ್ತಿಗೆ ಒಪ್ಪಿಸಿದ ಮೇಲೆ ಹೇಳಿದಷ್ಟು, ನಿಗದಿಪಡಿಸಿದಷ್ಟು ಹಣವನ್ನು ಪೈಲ್ವಾನರಿಗೆ ಕೊಡ್ತಾ ಇರಲಿಲ್ಲ. ಐನೂರು ರೂಪಾಯಿ ಮಾತಾಡಿದರೆ ಉಜ್ಜಪ್ಪ ಕೊಡ್ತಾ ಇದ್ದುದು ಮುನ್ನೂರು ರೂಪಾಯಿ. ಹಿಂಗೆ ಆತ ಚೌಕಾಸಿ ಮಾಡಿದರೂ ಪೈಲ್ವಾನರುಗಳು - ಹೋಗ್ಲಿ ಬಿಡು ಅಜ್ಜ.. ಅವನು ಯಾವಾಗಲೂ ಹಿಂಗೆ ಎಂದು ಸುಧಾರಿಸಿಕೊಂಡು ಬಿಡುವರು.

ಒಂದ್ಸಾರಿ ಏನಾಯ್ತು ಅಂದ್ರೆ, ದುರ್ಗದ ನಂಜಪ್ಪನವರು ಬೆಳಗಾಂ ಕಡೆಯ ಒಬ್ಬ ಪೈಲ್ವಾನ್ ಮೇಲೆ ಕುಸ್ತಿ ಆಡೋಕೆ ಜೊತೆ ಹಾಕ್ಕೊಂಡ್ರು. ಉಜ್ಜಪ್ಪನ ಚೌಕಾಸಿ ಎಲ್ಲರಿಗೂ ಗೊತ್ತಿದ್ದದ್ದೆ. ನಂಜಪ್ಪನವರೇನೋ ಕುಸ್ತಿಗೆ ಒಪ್ಪಿಕೊಂಡು ಬಿಟ್ಟರು. ನಂಜಪ್ಪನವರು ಕುಸ್ತಿ ಆಡ್ತಾರೆ ಅಂತ ಗೊತ್ತಾಗಿ ಜನಾ ಅಂದ್ರೆ ಜನ ಸೇರ್ಕೊಂಡು ಬಿಟ್ಟರು. ಬೆಳಗಾಂ ಪೈಲ್ವಾನ್ ಏನ್ ಮಾಡಿದ, ಬಟ್ಟೆ ಬಿಚ್ಚಲಿಲ್ಲ, ಲಂಗೋಟಿ ಕಟ್ಟಲಿಲ್ಲ, ಅಖಾಡಕ್ಕಿಳಿಯಲಿಲ್ಲ. ಉಜ್ಜಪ್ಪ ಎಷ್ಟು ಬಲವಂತ ಮಾಡಿದರೂ ಬೆಳಗಾಂ ಪೈಲ್ವಾನ್ ಪೂರ್ತಿ ಹಣ ಮುಂದಕ್ಕಿಡು ಆಡ್ತೀನಿ ಅಂತ ಮೊಂಡು ಹಿಡಕೊಂಡು ಬಿಟ್ಟ. ಕೊಡ್ತೀನಿ, ತಗೋಳಲೇ ತಮ್ಮ ಅಂತ ಉಜ್ಜಪ್ಪ ಎಷ್ಟು ಪುಸಲಾಯಿಸಿದರೂ, ಹಿಂಗೆ ನಂಬಿಸಿ ಕೊಡಲ್ಲ ಕಡಿಮೆ ಕೊಡ್ತಾನೆ ಎಂದು ತಿಳ್ಕೊಂಡಿದ್ದ ಬೆಳಗಾಂ ಪೈಲ್ವಾನ್ ಈತನ ಮಾತನ್ನು ಕಿವಿ ಮೇಲೆ ಹಾಕ್ಕೊಳ್ಳಲಿಲ್ಲ. ಪೂರ್ತಿ ಹಣ ಎದುರಿಗಿಟ್ಟ ಮೇಲೇನೇ ಆತ ಅಖಾಡಕ್ಕಿಳಿದಿದ್ದು.

ಮಾನಿ ಉಜ್ಜಪ್ಪನಿಗೆ ದಾವಣಗೆರೆ - ದುರ್ಗದವರೆಲ್ಲಾ ಒಂದೇ. ಅವನಿಗೆ ಈ ರೀತಿ ಹಠಮಾಡಿ ಹಣ ಕಕ್ಕಿಸಿದ ಬೆಳಗಾಂ ಪೈಲ್ವಾನ್ ಕಂಡು ಹೊಟ್ಟೆ ತುಂಬಾ ಸಿಟ್ಟು

ಬಂದರೂ ತೋರಿಸಿಕೊಳ್ಳದೆ, ನಗೆಯಾಡ್ತಾ ನಂಜಪ್ಪನ ಬಳಿಗೆ ಬಂದು "ನಂಜಪ್ಪ.. ನೋಡು ಅವನು ಹೇಗೆ ಹಠ ಮಾಡಿದ .. ನೀನು ಅವನನ್ನು ಒಂದೇ ಏಟಿಗೆ ಚಿತ್ತು ಮಾಡಿ ನನ್ನ ಮನಸ್ಸಿಗೆ ಖುಷಿ ಪಡಿಸಬೇಕು ಎಂದ.

ನಿಜಕ್ಕೂ ನಂಜಪ್ಪ, ಮಾನಿ ಉಜ್ಜಪ್ಪನಿಗೆ ಕೊಟ್ಟ ಮಾತ್ನ ನಡೆಸಿಕೊಡೋ ರೀತಿಯಲ್ಲೇ ಬೆಳಗಾಂ ಪೈಲ್ವಾನ್ ಜೊತೆ ಕುಸ್ತಿ ಮಾಡಿದ. ಕುಸ್ತಿಪಟುವಾಗಿ ದೊಡ್ಡ ಹೆಸರು ಮಾಡಿದ್ದ ನಂಜಪ್ಪ 'ದೋಬಿ ಚಾಟ್ ಪಟ್ನಲ್ಲಿ ಪ್ರಖ್ಯಾತಿ ಹೇಳಬೇಕು ಎಂದರೆ ನಂಜಪ್ಪ ಅಂದ್ರೆ ದೋಬಿ ಚಾಟ್, ದೋಬಿಟಾಟ್ ಅಂದ್ರೆ ನಂಜಪ್ಪ ಅನ್ನೋರೀತಿಯಲ್ಲಿ ಆ ಕಾಲದಲ್ಲಿ ಪ್ರಸಿದ್ಧಿಯಾಗಿ ಬಿಟ್ಟಿತ್ತು. ಹೆಚ್ಚಿಗೆ ಮಾತ್ಯಾಕೆ ಆಡಬೇಕು.. ದೊಡ್ಡ ಗರಡಿ ಪೈಲ್ವಾನರೆಂದರೆ 'ದೋಬಿಚಾಟ್ ಗೆ ಹೆಸರಾಗಿ ಬಿಟ್ಟಿದ್ದರು. ನಂಜಪ್ಪ ದೋಬಿಚಾಟ್ ಪಟ್ಟಿನಲ್ಲಿಯೇ ಎಂಟು ಹತ್ತು ನಿಮಿಷಗಳಲ್ಲಿ ಎದುರಾಳಿಯನ್ನು 'ಸಾಫ್‌ಚಿತ್ ಮಾಡಿದ. ಜನಾನೂ ಕೇಕೆ ಹಾಕಿ ಖುಷಿ ಪಟ್ಟರು. ಮಾನಿ ಉಜ್ಜಪ್ಪನಿಗೂ ಖುಷಿಯಾಯ್ತು.

ಈ ಮನುಷ್ಯ ಉಜ್ಜಪ್ಪ ಕುಸ್ತಿ ಆಡಿಸಿ, ಆಡಿಸಿ ಮೆತ್ತಗಾಗಿದ್ದ, ಕೊನೆ ಕೊನೆಯಲ್ಲಿ ಹರಿದು ಜುಂಗೆದ್ದು ಹೋಗಿದ್ದ ಜುಬ್ಬ ಹಾಕ್ಕೊಂಡು ಓಡಾಡ್ತಿದ್ದ. ಆತ ಅದನೇ ತೋರಿಸುತ್ತಾ “ನೋಡಲೇ ಹೆಂಗ್ ಹರಿದೈತಿ ಜುಬ್ಬಾ.. ಆದರೂ ಕುಸ್ತಿ, ಮಾತ್ರ ನಿಲ್ಲಿಸಂಗಿಲ್ಲ... ನಡೀರಲೇ ಕುಸ್ತಿ ಆಡಿಸ್ತೀನಿ ಎನ್ನುತ್ತಿದ್ದ. ಐದಾರು ದಶಕಗಳ ಹಿಂದೆ ಚಿತ್ರದುರ್ಗದಲ್ಲಿ ಈ ರೀತಿ ಕುಸ್ತಿ ಪ್ರೇಮಿಗಳಿದ್ದರು. ಪ್ರೋತ್ಸಾಹ ಕೊಡೋರಿದ್ದರು. ಅದಕ್ಕಾಗಿ ಬೇಕಾದಷ್ಟು ಪೈಲ್ವಾನರು ಕುಸ್ತಿ ಆಡುತ್ತಿದ್ದರು, ಖುಷಿ ಪಡುತ್ತಿದ್ದರು, ಖುಷಿ ಪಡಿಸುತ್ತಿದ್ದರು.

**ಕಣ್ಣು ಕುಕ್ಕಿದ ಕುಸ್ತಿಗಳು**

ಕುಸ್ತಿಪಟುವಿನ ಜೀವನದಲ್ಲಿ ಗರಡಿ ಮುಖ್ಯ ಪ್ರಭಾವ ಬೀರುತ್ತದೆ ಎನ್ನೋದರಲ್ಲಿ ಎರಡನೆಯ ಮಾತಿಲ್ಲ. ಆದರೆ ಅವನ ಕುಸ್ತಿ, ರೀತಿ - ರಿವಾಜು ಪಟ್ಟು-ವರಸೆಗಳು ಸುಧಾರಿಸಿಕೊಳ್ಳಬೇಕು ಅಂದ್ರೆ, ಅವನು ಅನೇಕ ಕಡೆಗಳಲ್ಲಿ ಅಖಾಡಗಳಲ್ಲಿ ನಡೆಯೋ ಬೇರೆ ಬೇರೆಯವರ ಕುಸ್ತಿಗಳನ್ನು ನೋಡಬೇಕು. ಅದಕ್ಕಾಗಿ ಊರೂರು ತಿರುಗಿ ಕುಸ್ತಿ ನೋಡಬೇಕಾಗುತ್ತದೆ. ನಾನು ಇಂಥ ಮಸ್ತು, ಕುಸ್ತಿಗಳನ್ನು ನೋಡಿದ್ದೇನೆ. ಅದರಲ್ಲಿ ಕೆಲವು ಮಾತ್ರ ನನ್ನ ನೆನಪಿನಲ್ಲಿ ಉಳಿದಿದೆ.

ಒಂದ್ಸಾರಿ ನಾನು ಇಂಥಾ ಒಂದು ಕುಸ್ತಿ ನೋಡೋದಿಕ್ಕಾಗಿ ಬಳ್ಳಾರಿಗೆ ಹೋಗಿದ್ದೆ. ಆ ಕುಸ್ತಿಯಲ್ಲಿ ಪಾಲುಗೊಂಡವನು ಹೊಸಪೇಟೆ ಭೀಮಪ್ಪ ಅನ್ನುವವನು. ಹೊಸಪೇಟೆ

ಭೀಮಪ್ಪ ಎನ್ನುವ ಆ ಪೈಲ್ವಾನ್ ಆ ಭಾಗದಲ್ಲಿ ಹೆಸರು ಮಾಡಿದವನು ಗೌರವ ಸಂಪಾದಿಸಿದವನು; ಗೌರವ ಸಂಪಾದಿಸಿದವನು ಅಂಥ ಯಾಕೆ ಹೇಳ್ತಿದ್ದೀನಿ ಅಂದ್ರೆ ಆತನನ್ನು ಅಲ್ಲಿಯ ಹೆಣ್ಮಕ್ಕಳೇ ಸಾಕಿದರಂತೆ. ಜೊತೆಗೆ ಭಾರೀ ಪೈಲ್ವಾನ್, ಈತನ ಮೇಲೆ ಬಳ್ಳಾರಿಯಲ್ಲಿ ಜೊತೆ ಹಾಕಿಕೊಂಡಿದ್ದ ಪೈಲ್ವಾನ್ ಅಂದ್ರೆ ದಾವಣಗೆರೆಯ ಚಾರ್ಲಿ. ಆತ ನಮ್ಮ ದುರ್ಗದ ನಂಜಪ್ಪನಷ್ಟೇ ಹೆಸರುವಾಸಿಯಾದ ಪೈಲ್ವಾನ್. ಇಂಥ ಇಬ್ಬರು ದೊಡ್ಡ ಪೈಲ್ವಾನರ ಕುಸ್ತಿ, ನೋಡೋ ಆಸೆಯಿಂದ ನಾನು ಬಳ್ಳಾರಿಗೆ ಹೋಗಿದ್ದೆ.

ಬಳ್ಳಾರಿಗೆ ಹೋಗಿ ಯಾವುದಾದಾರೂ ಹೊಟ್ಲಲ್ಲಿ ಇಳಕೊಂಡು, ಕುಸ್ತಿ ನೋಡ್ಕಂಡು ಬರೋದು ಅಂಥ ನನ್ನ ಪ್ಲಾನ್ ಇತ್ತು. ಆದರೆ ನಾನು ಬಳ್ಳಾರಿಯಲ್ಲಿ ಇಳಿದಮೇಲೆ ದಾವಣಗೆರೆ ಪೈಲ್ವಾನರು ಎದುರಿಗೆ ಸಿಕ್ಕಿದರು. ಅವರು ನಾವು ದುರ್ಗ ದಾವಣಗೆರೆಯಲ್ಲಿ ಓಡಾಡುವುದರಿಂದ ಪರಿಚಯ. ಹಂಗಾಗಿ ಅವರು ನನ್ನನ್ನು ನೋಡುತ್ತಲೆ ಏನ್ ಪೈಲ್ವಾನರೇ ಇಲ್ಲಿ ಹಿಂಗೆ?" ಎಂದರು. ಅದಕ್ಕೆ ನಾನು - "ಇಲ್ಲಾ.... ಹಿಂಗೆ ಕುಸ್ತಿ ನೋಡಿಕೊಂಡು ಹೋಗೋಣ ಅಂತ ಬಂದೆ ಎಂದೆ. ಅದಕ್ಕೆ ಅವರು ಮತ್ಯಾಕೆ ಹೊಟ್ಟಿಗೆ ಹೋಗ್ತಿರಾ.. ಏ... ಬರಿ ನಮ್ಜೊತೆಗೆ ಹೋಗೋಣ.. ಅಲ್ಲಿ ಎಲ್ಲಾ ವ್ಯವಸ್ಥೆ ಮಾಡಿದ್ದಾರೆ. ಇರಕ್ಕೆ ಊಟಕ್ಕೆ ಎಲ್ಲದಕ್ಕೂ ವ್ಯವಸ್ಥೆ ಮಾಡಿದ್ದಾರೆ. ಕುಸ್ತೀನೂ ನೋಡ್ಕೊಂಡು ಬರಬಹುದು" ಎಂದರು.

ನಾನು ಅವರ ಮಾತಿಗೆ ಕಟ್ಟುಬಿದ್ದು ಅವರ ಜೊತೆಗೆ ಹೋದೆ. ಅವರು ಇಳಕೊಳ್ಳೋಕೆ ಒಂದು ದೊಡ್ಡಮನೆ ಕೊಟ್ಟಿದ್ದರು - ಬಳ್ಳಾರಿಯ ಕುಸ್ತಿ, ವ್ಯವಸ್ಥಾಪಕರು. ಅಲ್ಲಿ ಚಾರ್ಲಿ ಪೈಲ್ವಾನರ ಜೊತೆಗೆ ಮಾತಾಡೋಕೆ ಕೆಲವು ಮುಸ್ಲಿಂ ಜನಗಳು, ಬಳ್ಳಾರಿ ಪೈಲ್ವಾನರು, ದಾವಣಗೆರೆ ಪೈಲ್ವಾನರು, ಅಭಿಮಾನಿಗಳು - ಎಲ್ಲಾ ಬಂದಿದ್ದರು. ಒಂದು ದೊಡ್ಡ ಹಾಲಿನಲ್ಲಿ ನಾವೆಲ್ಲಾ ಕುಳಿತಿದ್ದೆವು. ಆಗ ಮುಸ್ಲಿಂ ಮುಖಂಡರು ಕೆಲವರು - ನೋಡಪ್ಪಾ ಚಾರ್ಲಿ .. ಭೀಮಪ್ಪನ ಜೊತೆ ಕುಸ್ತಿ ಆಡೋದು ಹುಡುಗಾಟದ ಮಾತಲ್ಲ, ಗಂಟೆಗಟ್ಟೆ ನೀನು ಅಖಾಡದಲ್ಲಿ ಸೆಣಸಾಡಿದರೂ ಆತ ಬೀಳೋ ಪೈಕಿಯಲ್ಲ. ನಿನ್ನ ಕೈಗೆ ಸಿಕ್ಕಲ್ಲ ಅವನು. ಯಾರ ಜೊತೆಗೆ ಭೀಮಪ್ಪ ಗಂಟೆಗಟ್ಟೆ ಕುಸ್ತಿಮಾಡಿದರೂ ಆತ ಅಖಾಡದಲ್ಲಿ ದಮ್ಮು ಕಟ್ಟುವುದಿಲ್ಲ. ಆದ್ದರಿಂದ ಅಷ್ಟು ಸುಲಭವಾಗಿ ಆತನನ್ನು ಗೆಲ್ಲುವುದು ಸಾದ್ಯವಾಗುವುದಿಲ್ಲ. ನೀನು ಈ ಕೆಲಸಮಾಡು..... ಈ ಕೆಲಸಮಾಡು..... ಅಂತ ಹೇಳ್ತಾ ಇದ್ದರು. ನಾನು ಸುಮ್ಮನೆ ಇದನ್ನೆಲ್ಲಾ ಕೇಳ್ತಾ ಕುಳಿತಿದ್ದೆ.

ಆವಾಗ ಅವರಲ್ಲಿ ಒಬ್ಬ ಮುದುಕ ಎದ್ದು ನಿಂತ್ಕೊಂಡು - "ನೋಡಪ್ಪ ಚಾರ್ಲಿ, ಅವನು ಬಂದೋ ಬಸ್ತಾಗಿದ್ದರೂ ಎಷ್ಟೊತ್ತು ಕುಸ್ತಿ ಮಾಡಿದರೂ ಚಿಂತೆಯಿಲ್ಲ. ನೀನು

ಕುಸ್ತಿ ಆಡ್ತಾ ಇರಬೇಕಾದರೆ ಐದು ನಿಮಿಷ ಆದ ತಕ್ಷಣ ನನ್ನ ಕೈಲಿ ಆಗೋಲ್ಲ ಅಂತ ಬಂದು ಬಿಡು. ನೋಡ್ತಾ ಇದ್ದವರು ನೀನು ಕುಸ್ತಿ ಆಡಲೇ ಬೇಕು ಅಂತ ಬಲವಂತ ಮಾಡ್ತಾರೆ ಕೂಗಾಡ್ತಾರೆ. ಆಗ ಮುಖ ತೊಳ್ಕೊಂಡು ಮತ್ತೆ ಆಖಾಡಕ್ಕೆ ಹೋಗಿ ಕುಸ್ತಿ ಆಡು . ಗೆದೇ ಗೆಲ್ತೀಯಾ.. ಎಂದ.

ಇದರ ಅರ್ಥ ಏನು? ಭೀಮಪ್ಪ ಪೈಲ್ವಾನ್ ಅಖಾಡದಲ್ಲಿ ಅಷ್ಟು ಫರ್ಮಾ ಗಿ ಸ್ಟ್ರಾಂಗ್ ಆಗಿ ಆಡ್ತಾ ಇರ್ತಾನೆ, ಯಾವಾಗ ಚಾರ್ಲಿ ಪೈಲ್ವಾನ್ ನನ್ನ ಕೈಲಿ ಆಗಲ್ಲ ಅಂತ ಹೇಳ್ತಾರೋ ಆಗ ಭೀಮಪ್ಪನಲ್ಲಿ ಇದ್ದ `ಫರ್ಮನೆಸ್ ಸ್ಟ್ರಾಂಗ್ ನೆಸ್ಸ್ ಹೋಗಿ ಬಿಡುತ್ತೆ. ಇವನೇನು ಮಹಾ! ಅಂತ ಅವನ ಮನಸ್ಸಿನಲ್ಲಿ ಅನ್ನಿಸುತ್ತೆ. ಆಗ ಚಾರ್ಲಿ ಗೆದ್ದೇ ಗೆಲ್ತಾನೆ ಅನ್ನೋದು ಐಡಿಯಾ.

ಅದು ಆಗಿದ್ದು ಹಂಗೇನೇ, ಚಾರ್ಲಿ ಮತ್ತು ಭೀಮಪ್ಪ ಪೈಲ್ವಾನರುಗಳಿಬ್ಬರೂ ಅಖಾಡಕ್ಕಿಳಿದರು, ಮುದುಕ ಹೇಳಿಕೊಟ್ಟಂಗೆ ಚಾರ್ಲಿ ಐದು ನಿಮಿಷ ಹಂಗೋ-ಹಿಂಗೋ ಆಡಿ ನನ್ನ ಕೈಲಿ ಆಗೋಲ್ಲ ಅಂತ ಹೊರಕ್ಕೆ ಬಂದುಬಿಟ್ಟ. ನೋಡ್ತಾ ಇದ್ದ ಪ್ರೇಕ್ಷಕರು, ಜನಗಳು.. "ಅದ್ಹೆಂಗೆ? ಚಾರ್ಲಿ ಆಡಬೇಕು. ಚಾರ್ಲಿ ಆಡ್ಲೇ ಬೇಕು. ಅಂತ ಕೂಗಾಡಿದರು. ಅಜ್ಜ ಹೇಳ್ಕೊಟ್ಟಂಗೆ ಈಗ ಮತ್ತೆ ಚಾರ್ಲಿ ಅಖಾಡಕ್ಕಿಳಿದ. ಹಿಂದಿನ ದಿವಸ ಅಜ್ಜ ಹೆಂಗೆ ಹೇಳಿಕೊಟ್ಟಿದ್ದನೋ ಹಂಗೆ ಇಲ್ಲಿ ನಡೆಯೋಕೆ ಶುರುವಾಯ್ತು. ಭೀಮಪ್ಪ ಆ ಫರ್ಮ್ ನೆಸ್ಸ್ ಕಳಕೊಂಡುಬಿಟ್ಟಿದ್ದ. ನನ್ನ ಕೈಲಿ ಆಗಲ್ಲ ಅಂದೋನು ಆಡ್ತೀನಿ ಅಂತ ಎರಡನೇ ಸಾರಿ ಬಂದರೆ ಭೀಮಪ್ಪನಿಗೆ ಏನನ್ನಿಸ ಬೇಕು? ಇವನನ್ನು ಗೆಲ್ತೀನಿ.. ಗೆದ್ದೇ ಗೆಲ್ತೀನಿ ಎಂಬ ಭಾವನೆಯಲ್ಲಿ ನುಗ್ಗಿ-ನುಗ್ಗಿ-ನುಗ್ಗಿ ಕುಸ್ತಿ ಮಾಡತೊಡಗಿದ. ಯಾವಾಗ ಭೀಮಪ್ಪ ಬೇಹುಷಾರ್ ಆಗಿ ಯದ್ವಾ ತದ್ವಾ ನುಗ್ಗಿ ಗೆಲ್ತೀನಿ ಅನ್ನೋ ಹಮ್ಮಿನಲ್ಲಿ ಕುಸ್ತಿ ಆಡತೊಡಗಿದನೋ, ಚಾರ್ಲಿ ಚಾನ್ಸ್ ನೋಡಿ ಅವನನ್ನು ಕೆಡವಿ ಅವನ ಎದೆ ಮೇಲೆ ಕುತಗೊಂಡು ಬಿಟ್ಟ. ಹಿಂಗೆ ಹೊಸಪೇಟೆ ಭೀಮಪ್ಪನಂಥ ಭಾರಿ ಕುಸ್ತಿ ಪಟುವನ್ನು ಚಾರ್ಲಿ ಚಿತ್ತು ಮಾಡಿ, ಜಯಗಳಿಸಿ ಬಿಟ್ಟ. ಚಾರ್ಲಿಯ ದೊಡ್ಡ ಮೆರವಣಿಗೆಯು ಬಳ್ಳಾರಿಯಲ್ಲಿ ನಡೆದುಹೋಯ್ತು.

ಚಾರ್ಲಿಯ ಈ ಕುಸ್ತಿ ನನಗೊಂದು ಪಾಠ ಕಲಿಸಿತು. ಅದೆಂದರೆ ಪೈಲ್ವಾನ್ ಆದವನು ತನ್ನ ಫರ್ಮ್ ನೆಸ್ಸ್ ಮಾತ್ರ ಕುಸ್ತಿ ಮುಗಿಯೋ ತನಕ ಕಳಕ ಬಾರದು ಎನ್ನುವುದು. ಕಳಕೊಂಡಪಿ ಎಂದರೆ ನಾವು ಬೆಕ್ಕು ಅಂದ್ಕೊಂಡಿದ್ದು ಹುಲಿಯಾಗಿ ಬಿಡ್ತದೆ!

ಕುಸ್ತಿ ಆದಮೇಲೆ ಆವೊತ್ತು ಸಂಜೆ ಅದೇ ಮನೆಯಲ್ಲಿ ಉಳಕೊಂಡವು. ಚಾರ್ಲಿಯ ಅಭಿಮಾನಿಗಳು, ಪೈಲ್ವಾನರುಗಳು ಅಲ್ಲಿ ಬಾಳಾಜನ ಸೇರಿದ್ದರು. ಅದರಲ್ಲಿ ಕೆಲವರು ಚಾರ್ಲಿಗೆ - ನೋಡಪ್ಪ ಚಾರ್ಲಿ.. ನೀನು ದುರ್ಗದ ನಂಜಪ್ಪನ ಮೇಲೆ ಜೊತೆ

ಹಾಕ್ಕೊಂಡು ಕುಸ್ತಿ ಮಾಡಬೇಕು. ನೀನು ಕೇಳಿದಷ್ಟು ಹಣ ಕೊಡ್ತೀವಿ.. ನಂಜಪ್ಪರು ಆಡಲ್ಲ ಅಂದ್ರೂನೂ ಅವರಿಗೂ ದುಡ್ಡಿನ ಆಸೆ ತೋರಿಸಿ ಹೆಂಗಾದರೂ ಒಪ್ಪಿಸ್ತೀವಿ.. ನೀವು ಈ ಕುಸ್ತಿಗೆ ಒಪ್ಕಾ ಬೇಕು ಎಂದರು.

ದಾವಣಗೆರೆ ಚಾರ್ಲಿ ಪೈಲ್ವಾನ್ ಅಂದ್ರೆ ಆಷ್ಟೊತ್ತಿಗಾಗಲೇ ಬಾಳಾ ಹೆಸರುವಾಸಿಯಾದ ಪೈಲ್ವಾನ್ ಆಗಿದ್ದ. ಆ ಅಭಿಮಾನಿಗಳ ಬಯಕ ಏನು ಅಂದ್ರೆ ನಂಜಪ್ಪನಂಥ ಭಾರಿ ಪೈಲ್ವಾನ್ ಮೇಲೆ ಕುಸ್ತಿ, ಆಡಿ ಗೆದ್ದು ಬಿಟ್ಟರೆ, ದಾವಣಗೆರೆ ದುರ್ಗದ ಸರಹದ್ದಿಗೆಲ್ಲಾ ಚಾರ್ಲಿ ಒಬ್ಬನೇ ದೊಡ್ಡ ಪೈಲ್ವಾನ್ ಅನ್ನಿಸಿಕೊಂಡು ಮೆರೆದಾಡಬಹುದು ಅವನ ಹೆಸರೂ ಉದ್ದಗಲಕ್ಕೆ ಹರಡಿಕೊಳ್ಳುತ್ತೆ ಅನ್ನೋದು.

ಆಗ ಚಾರ್ಲಿಯ ತಂದೆ ಬಿಲ್ಲಿ ಬುಡೇನ್ ಸಾಬ್ ಅಂತ, ಅವರು ಅಲ್ಲೆ ಕುಂತ್ಕೊಂಡಿದ್ದರು. ಆತನಿಗೆ ಆಗ ಏನ್ ಕಮ್ಮಿ ಅಂದ್ರೂನೂ ಎಪ್ಪತ್ತೈದು ವರ್ಷಗಳ ಮೇಲಾಗಿತ್ತು. ಆತ ಕೂಡಾ ಪೈಲ್ವಾನ್ ಆಗಿ ಮೆರೆದವನು. ಯಾವಾಗ ಅಲ್ಲಿದ್ದ ಅಭಿಮಾನಿಗಳು ಈ ರೀತಿ ನಂಜಪ್ಪನ ಮೇಲೆ ಆಡೋಕು ಅಂತ ತಮ್ಮ ಬಯಕೆ ಮುಂದಿಟ್ಟು ಮಾತಾಡತೊಡಗಿದರೋ, ಅಲ್ಲಿ ಬುಡೇನ್ ಸಾಬ್ ಮಧ್ಯೆ ಬಾಯಿ ಹಾಕಿ-

ನೋಡ್ರಪ್ಪ ನಾನು ನನ್ನ ಮಗ ಚಾರ್ಲಿನ ನಂಜಪ್ಪನ ಮೇಲೆ ಕುಸ್ತಿ, ಆಡಿಸಲ್ಲ. ಈಗಲೇ ಅಲ್ಲ ಇನ್ನು ಮುಂದೇನೂ ಆಡಿಸಲ್ಲ. ಜೀವಮಾನದಲ್ಲೇ ಆತನ ಮೇಲೆ ಕುಸ್ತಿ ಆಡಿಸಲ್ಲ. ನೀವು ಯಾರನ್ನೇ ಬೇಕಾದರೂ ತೋರಿ ಆಡಿಸ್ತೀನಿ. ಆದರೆ ದುರ್ಗದ ನಂಜಪ್ಪನ ಮೇಲೆ ಅಲ್ಲ. ಆತ ನನ್ನ ಮಗ ಚಾರ್ಲಿಗೆ ಅಣ್ಣ ಇದ್ದಂಗೆ ಅಂದು ಬಿಟ್ಟ.

ಹಂಗೆ ಯಾಕೆ ಹೇಳಿದರು ಅಂದ್ರೆ ನಂಜಪ್ಪನವರು ಪೈಲ್ವಾನರ ಸಾಲಿನಲ್ಲಿ ದೊಡ್ಡಹೆಸರು ಮಾಡಿದ್ದರು. ಅವರು ಚಾರ್ಲಿ ಜೊತೆಗೆ ಆಡಿ ಸೋತರೆ ಅವರಿಗೆ ಇದು ಮರ್ಯಾದೆ ಪ್ರಶ್ನೆ. ಅಕಸ್ಮಾತ್ ನಂಜಪ್ಪನವರು ಚಾರ್ಲಿನ ಗೆದ್ದರೂ ಅಂಥ ಇಡ್ಕೊಂಡರೆ ಚಾರ್ಲಿ ಹೆಸರು ಕೆಡುತ್ತದೆ. ಇದೆಲ್ಲಾ ಎರಡೂ ಕಡೆ ಯೋಚನೆ ಮಾಡಿ ಬಿಲ್ಲಿ ಬುಡೇನ್ ಸಾಬ್ ಇದ್ಯಾವ ತಂಟೇನೂ ಮುಂದೆ ಬರೋದು ಬೇಡಾಂತ ಚಾರ್ಲಿ-ನಂಜಪ್ಪರ ಕುಸ್ತಿಗೆ ಒಪ್ಪಿಕೊಳ್ಳಲಿಲ್ಲ.

ಅದರ ಜೊತೆಗೆ ತಮ್ಮ ಮಗ ಚಾರ್ಲಿ ನಂಜಪ್ಪನವರ ಜೊತೆಗೆ ಕುಸ್ತಿ ಬೇಡ ಅನ್ನುವುದಕ್ಕೆ ಇನ್ನೊಂದೆ ದೊಡ್ಡ ಕಾರಣವಿತ್ತು. ಕಾರಣವಿತ್ತು. ನಂಜಪ್ಪರು ದೊಡ್ಡ ಪೈಲ್ವಾನರು ಅನ್ನುವುದನ್ನು ಖುದ್ದು ಬಿಲ್ಲಿ ಬುಡನ್ ಸಾಬ್‌ರೇ ನೋಡಿದ್ದರು. ಒಂದ್ಸಾರಿ ದಾವಣಗೆರೆಯಲ್ಲಿ

ನಂಜಪ್ಪನವರು ತುಮ್ಮಿನ ಕಟ್ಟೆ ರಾಮಪ್ಪ ಅನ್ನೋನ ಮೇಲೆ ಕುಸ್ತಿ ಆಡ್ಬೇಕಾಯಿತು. ಆತ ದಾವಣಗೆರೆಯ ಅನೇಕ ಪೈಲ್ವಾನರನ್ನು ತುಮ್ಮಿನ ಕಟ್ಟೆ ರಾಮಪ್ಪ ಸೋಲಿಸಿ ಹೆಸರು ಮಾಡಿದ್ದ. ಜೊತೆಗೆ ನಂಜಪ್ಪನವರ ಜೊತೆಯಲ್ಲಿ ಹೆಸರುಮಾಡಿದ್ದ ದೊಡ್ಡ ಗರಡಿಯ ಪೈಲ್ವಾನ್ ರಾಮಪ್ಪನನ್ನೂ ಸೋಲಿಸಿದ್ದ. ಇಂಥ ಪೈಲ್ವಾನನ ಮೇಲೆ ನಂಜಪ್ಪನವರು ಕುಸ್ತಿ ಆಡ್ತಾರೆ ಅಂದ್ರೆ ಎಲ್ಲರಿಗೂ ಏನು, ಹೆಂಗೆ ಅನ್ನೋ ಕುತೂಹಲ. ತುಮ್ಮಿನಕಟ್ಟೆ ರಾಮಪ್ಪ ಮತ್ತು ನಂಜಪ್ಪರು ಕುಸ್ತಿ ಆಡಿದಾಗ ಚಾರ್ಲಿಯ ತಂದೆ ಬಿಲ್ಲಿ ಬುಡನ್ ಸಾಹೇಬರೇ ರೆಫರಿಯಾಗಿದ್ದರು. ನಂಜಪ್ಪರು ಭಾರಿ ಎಕ್ಸ್ ಪರ್ಟ್ ಪೈಲ್ವಾನ್, ಅವರೇನು ಮಾಡಿದರು, ಅವರು ದೋಬಿ ಚಾಟ್ ಪಟ್ಟಿಗೆ ಪ್ರಖ್ಯಾತಿಯಾಗಿದ್ದರೂ ಈ ಸಾರಿ ಅದನ್ನು ಬಳಸಲಿಲ್ಲ. ಅದರ ಬದಲು ತುಮ್ಮಿನಕಟ್ಟೆ ರಾಮಪ್ಪನನ್ನು ಕತ್ತರಿ ಪಟ್ಟು ಹಾಕಿ ಸೋಲಿಸಿದರು. ರೆಫರಿಯಾಗಿದ್ದ ಬುಡೇನ್ ಸಾಬ್ ಅವರು ನಂಜಪ್ಪನವರು ಗೆದ್ದರು ಅಂತ ಡಿಕ್ಷೇ ಮಾಡಿದರು. ಆಗ ಕೆಲವರು ಸರಿಯಾಗಿ ಬೆನ್ನು ಮಣ್ಣಾಗಲಿಲ್ಲ, ಕುಸ್ತಿ ಮುಂದುವರೆಸಬೇಕು ಎಂದರು. ಬಿಲ್ಲಿ ಬುಡೇನ್ ಸಾಬರು ಇಂಥಾ ಹೈಕ್ಲಾಸ್ ಕುಸ್ತೀನ ಎಂದಾದರೂ ನೋಡಿದ್ರೇನಪ್ಪ ಎಂದು ನಂಜಪ್ಪನವರನ್ನು ಮೆಚ್ಚಿ, ಮಿಕ್ಕವರ ಬಾಯಿ ಮುಚ್ಚಿಸಿದ್ದರು. ಅಂಥಾ ಪೈಲ್ವಾನ್ ನಂಜಪ್ಪನ ಕೈಗೆ ಚಾರ್ಲಿ ಸಿಕ್ಕಿ ಹಾಕ್ಕೊಂಡು ಪಾಡು ಪಡೋದು ಬೇಡ, ಕೆಟ್ಟ ಹೆಸರೂ ಬೇಡ ಎಂದು ತಮ್ಮ ಮಗ ಚಾರ್ಲಿ ಆಡೋದನ್ನು ತಪ್ಪಿಸಿದರು.

ಎರಡನೇ ಕುಸ್ತಿ ಇದೇ ನಂಜಪ್ಪರು ಬೆಳಗಾವಿಯ ಅಪ್ಪಾಜಿ ಪೈಲ್ವಾನರ ಜೊತೆ ಆಡಿದ್ದು, ಬೆಳಗಾಮಿನ ಅಪ್ಪಾಜಿ ಕಾಲೇಜಿನಲ್ಲಿ ಡ್ರಿಲ್ ಇನ್ಸ್‌ಟ್ರಕ್ಟರ್. ಜೊತೆಗೆ ಕುಸ್ತಿಪಟು, ಬಾಡಿ ಬಿಲ್ಡರ್. ಈಗಾಗಲೇ ಅಪ್ಪಾಜಿ ಪೈಲ್ವಾನರ ಜೊತೆ ನಂಜಪ್ಪರ ಕುಸ್ತಿ ಮೂರು ಕಡೆ ನಡೆದಿತ್ತು. ಶಿವಮೊಗ್ಗದಲ್ಲಿ, ಭದ್ರಾವತಿಯಲ್ಲಿ, ಚಿತ್ರದುರ್ಗದಲ್ಲಿ - ಹಿಂಗೆ ಮೂರು ಊರುಗಳಲ್ಲಿ ಇಬ್ಬರದೂ ಕುಸ್ತಿ ನಡೆದಿತ್ತು.

ಅಪ್ಪಾಜಿಯವರು ನಂಜಪ್ಪನಂಥ ಪೈಲ್ವಾನರ ಮೇಲೆ ಕುಸ್ತಿ ಮಾಡ್ಬೇಕಾದರೆ ಆತನೇನು ಸಾಮಾನ್ಯ ಪೈಲ್ವಾನಾಗಿರಲಿಲ್ಲ. ನಂಜಪ್ಪನವರ ಹೊಡೆತಗಳಿಗೆ, ಪಟ್ಟುಗಳಿಗೆ ಅಪ್ಪಾಜಿ ಪೈಲ್ವಾನ್ ಏನು ಬಗ್ಗಿರಲಿಲ್ಲ. ಹಂಗೆ ನೋಡಿದರೆ ಆತ ನಂಜಪ್ಪನಿಗೆ ಮೆತ್ತಗೆ ಮಾಡಿದ್ದ.

ಆತ ಅಖಾಡಕ್ಕೆ ಬರ್ಬೇಕಾದರೆ ಒಳ್ಳೆ ಡೆಂಟು ಬಂದಂಗೆ ಬರೋನು. ಪ್ಯಾಂಟು, ಷರ್ಟು, ಹಾಕ್ಕೊಂಡೇ ಅಖಾಡಕ್ಕೆ ಬರ್ತಾ ಇದ್ದ. ಆದರೆ ಬಟ್ಟೆ ಬಿಚ್ಚಿ ನಿಂತ ಅಂದ್ರೆ ಅಖಾಡದಲ್ಲಿ, ಆತ ಅಪ್ಪಾಜೀನೂ ಅಲ್ಲ, ಸ್ಟೂಡೆಂಟೂ ಅಲ್ಲ; ಆಂಜನೇಯ . ಆಂಜನೇಯ ಅವನು! ಒಳ್ಳೆ ಕಟ್ ಮಸ್ಸಲ್ಸ್ (cut muscles), ಒಳ್ಳೆ ಸಖತ್ ಬಾಡಿ.

ನಂಜಪ್ಪರು ಮೂರು ಸಾರಿ ಟ್ರೈ ಮಾಡಿದರೂ ಅಪ್ಪಾಜೀನ ಸೋಲಿಸಲಾಗಲಿಲ್ಲ. ಆತ ವಿದ್ಯಾವಂತ, ಬಟ್ಟೆ ಮೇಲೆ ಏನೂ ಕಾಣಿಸುತ್ತಿರಲಿಲ್ಲ. ಕುಸ್ತಿಗೆ ನಿಂತ ಅಂದರೆ ಎದುರಾಳಿಯನ್ನು ಏದುಸಿರು ಬಿಡಿಸಿ ಬಿಡುತ್ತಿದ್ದ. ಶಿವಮೊಗ್ಗದಲ್ಲಿ ಅಪ್ಪಾಜಿಗೂ ನಂಜಪ್ಪರಿಗೂ ಕುಸ್ತಿಯಾದಾಗ, ಅಪ್ಪಾಜಿ ಗಲ್ ಕೋಡ್ ಅಂತ ಒಂದು ಪಟ್ಟು ಹಾಕಿಬಿಟ್ಟ. ಗಲ್‌ಕೋಡ್ ಅನ್ನೋದು ಕುತ್ತಿಗೆಗೆ ಹಾಕೋದು ಒಂದು ಪಟ್ಟು, ಅದನ್ನ ಹಾಕಿದರೆ ಎದುರಾಳಿ ಪೈಲ್ವಾನನಿಗೆ ಉಸಿರು ಕಟ್ಟಿ ಬಿಡುತ್ತೆ. ಅಪ್ಪಾಜಿ ಈ 'ಗಲ್ ಕೋಡ್ ಪಟ್ಟು ಹಾಕಿ ಐದು - ಹತ್ತು ನಿಮಿಷದ ತನಕ ನಂಜಪ್ಪರಿಗೆ ಸುಸ್ತು ಮಾಡಿಬಿಟ್ಟಿದ ನಂಜಪ್ಪನಂಥವರು ಗರಡಿಯಲ್ಲೇ ಆಡಿ ಬೆಳದವರು ಅಖಾಡದಲ್ಲಿ ಮೆತ್ತಗಾಗಿ ಬಿಟ್ಟಿದ್ದರು. ಈ ಕುಸ್ತಿ, ಡ್ರಾ ಆಯ್ತು.. ನಂಜಪ್ಪನಂಥವರು ಅಪ್ಪಾಜಿನ ಅಲುಗಡಿಸಲಾಗಲಿಲ್ಲ ಎಂದರೆ ಅಪ್ಪಾಜಿಗೆ ಎಂಥ ತಾಖತ್ ಇತ್ತು, ಎಂಥ ಕೆಲಸ ಅವನ ಕೈವಶವಾಗಿತ್ತು, ಅನ್ನೋದನ್ನು ಯೋಚಿಸಬೇಕು. ಆಗಿನ ಕಾಲದ ಅನೇಕ ವಿದ್ಯಾವಂತರು ಕುಸ್ತಿ ಆಡುವುದರಲ್ಲಿ ಶಕ್ತಿವಂತರಾಗಿದ್ದರು ಎಂಬುದನ್ನು ತಿಳಿಸುವುದು ನನ್ನ ಉದ್ದೇಶ.

ನನ್ನ ಮನಸ್ಸಿನಲ್ಲಿ ಉಳಿದ ಕೆಲವು ಕುಸ್ತಿಗಳಲ್ಲಿ, ನಂಜಪ್ಪರು ಬೆಂಗಳೂರಿನಲ್ಲಿ ಆಡಿದ ಒಂದು ಕುಸ್ತಿ, ನಂಜಪ್ಪರ ಜೊತೆಯಲ್ಲಿ ಈ ಸಾರಿ ಕುಸ್ತಿ ಆಡಿದವರು ಅಮ್ಮಿ ಸಿಂಗ್, ಆತ ಮಿಲಿಟರಿ ಆಫೀಸರ್ ಆಗಿದ್ದ. ಅಮ್ಮಿಸಿಂಗ್ ಆರು - ಆರೂವರೆ ಅಡಿಯ ದೊಡ್ಡ ಆಳು.

ಇಂಥ ದೊಡ್ಡ ಪೈಲ್ವಾನ್ ಜೊತೆಯಲ್ಲಿ ನಂಜಪ್ಪರನ್ನು ಹೋಲಿಸುವುದಾದರೆ ಆಳೇ ಅಲ್ಲ. ನಂಜಪ್ಪರು ಇಲ್ಲೀತನಕ ಬೆಂಗಳೂರಿನಲ್ಲಿ ಯಾವ ಕುಸ್ತಿನೂ ಮಾಡಿರಲಿಲ್ಲ. ಇದೇ ಮೊದಲನೇ ಕುಸ್ತಿ. ನಂಜಪ್ಪ ಅಂಥ ಹೈಟಿಲ್ಲ. ಕುಳ್ಳಗೆ ಇದ್ದರು. ಆತ ಎತ್ತರದ ಆಳು. ಜೊತೆಗೆ ಮಿಲಿಟರಿ ಗತ್ತು, ಕುಸ್ತಿ ಆಡೋಕೆ ಅಂತ ನಂಜಪ್ಪ ಪೈಲ್ವಾನ್ ಆಮ್ಮಿಸಿಂಗ್ ಹತ್ತಿರ ಹೋದರೆ, ಈತನನ್ನು ನೋಡ್ತಾ ಇದ್ದಂಗೆ ಕ್ಯಾ ಪೈಲ್ವಾನ್ .. ಜಾವ್ ಜಾವ್.. ತುಮ್ ಕ್ಯಾ ಕೇಲಂಗೆ? ಎಂದು ತಿರಸ್ಕಾರಮಾಡಿ ಕಳುಹಿಸಿಬಿಡುತ್ತಿದ್ದ. ಒಂದುವಾರ ಆಯು, ಎರಡುವಾರ ಆಯ್ತು. ಮೂರುವಾರ ಆದರೇನು ಜೊತೆ ಹಿಡಿಯೋಕೆ ನಂಜಪ್ಪರು ಆಮ್ಮಿಸಿಂಗ್ ಬಳಿಗೆ ಹೋದಾಗಲೆಲ್ಲಾ ಆತ ಇದೇ ತಿರಸ್ಕಾರದ ಮಾತು ಆಡೋನು, ಮುಖದಲ್ಲಿ ಒಂದು ರೀತಿ ಉದಾಸೀನ ತೋರಿಸೋನು.

ಆಗ ಬೆಂಗಳೂರಿನಲ್ಲಿ ಅಣ್ಣಯ್ಯಪ್ಪ ಅಂತ ಒಬ್ಬರಿದ್ದರು. ಅವರು ಸ್ವತಃ ಪೈಲ್ವಾನರು ಜೊತೆಗೆ ಕುಸ್ತಿ, ಕಂಟ್ರಾಕ್ಟರ್. ಅಮ್ಮಿಸಿಂಗ್ ಮೂರು ವಾರದಿಂದ ನಂಜಪ್ಪನ ಜೊತೆಯಲ್ಲಿ ಕುಸ್ತಿ ಆಡೋಕೆ ಇಷ್ಟಪಡದೆ, ಉದಾಸೀನದಿಂದ ಒಂದು ಥರಾ ತಿರಸ್ಕಾರದಿಂದ

ವರ್ತಿಸುತ್ತಿದ್ದುದನ್ನು ಅಣ್ಣಯಪ್ಪ ನೋಡ್ತಾನೆ? ಇದ್ದರು. ಅಣ್ಣಯಪ್ಪರಿಗೆ ಅಮ್ಮಿಸಿಂಗ್ ವರ್ತನೆ ಯಾಕೋ ಸರಿ ಕಾಣಲಿಲ್ಲ. ಅದಕ್ಕೆ ಅವರು ಅಮ್ಮಿಸಿಂಗ್ ಕುರಿತು ನೋಡಪ್ಪ ಅಮ್ಮಿಸಿಂಗ್ ಇವರು ನಂಜಪ್ಪರು ಅಂತ ದುರ್ಗದಿಂದ ಬಂದಿದ್ದಾರೆ. ನಿನ್ನ ಮೇಲೆ ಕುಸ್ತಿ ಆಡ್ಬೇಕು ಅಂತಾನೇ ಬಾಯಲ್ ಪಟ್ಟಿದ್ದಾರೆ, ನೀನು ಯಾಕಪ್ಪಾ ಆಡಲ್ಲ ಅಂತೀಯಾ .. ಆತನ ಜೊತೆಗೆ ಆಡಪ್ಪ .. ಆಡು .. ಆಡಿದರೆ ತಪ್ಪೇನಿಲ್ಲ .. ಎಂದು ಹೇಳಿದರು.

ಆತ ಅಣ್ಣಯ್ಯಪ್ಪನವರ ಮಾತಿಗೆ ಒಪ್ಪಿಕೊಂಡು ನಂಜಪ್ಪರ ಜೊತೆಗೆ ಕುಸ್ತಿ ಆಡಲು ಹಾತ್ ಮಿಲಾಯಿಸಿದ. ಕುಸ್ತಿ ಇನ್ನು ಹದಿನೈದು ದಿನಕ್ಕೆ ಅಂತ ನಿರ್ಧಾರ ಆಯ್ತು. ಇಷ್ಟು ಹೊತ್ತಿಗೆ ನಂಜಪ್ಪರು ಬೆಂಗಳೂರಿನಲ್ಲಿ ಕುಸ್ತಿ ಆಡ್ಬೇಕು ಅಂತಾನೇ ಅಲ್ಲಿಗೆ ಬಂದು ಆರು ತಿಂಗಳಾಗಿತ್ತು. ಅಣ್ಣಯ್ಯಪ್ಪನವರು ಕುಸ್ತಿ, ಕಂಟ್ರಾಕ್ಟರ್ ಜೊತೆಗೆ ಪೈಲ್ವಾನರು ಅಂತ ಹೇಳಿದ್ದೆನಲ್ಲಾ ಅವರು ಬೆಂಗಳೂರಿನಲ್ಲಿ ಅರಳೇ ಪೇಟೆಯಲ್ಲಿರುವ ಗರಡಿಯವರು. ಆರು ತಿಂಗಳು ಮುಂಚೆ ನಂಜಪ್ಪನವರು ಕುಸ್ತಿ ಆಡೋಕೆ ಅಂತಾನೇ ಬೆಂಗಳೂರಿಗೆ ಬಂದಿದ್ದರಲ್ಲ ಆಗ ಈ ಅರಳೇ ಪೇಟೆ ಗರಡಿಯಲ್ಲೇ ಸಾಧನೆ, ಲಡತ್ ಮಾಡ್ತಾ ಇದ್ದರು. ಈ ಮಿಲಿಟರಿ ಆಫೀಸರ್ ಅಮ್ಮಿಸಿಂಗ್ ಜೊತೆಗೆ ನಂಜಪ್ಪರ ಕುಸ್ತಿ ಫಿಕ್ಸ್ ಮಾಡಿದ ಅಣ್ಣಯ್ಯಪ್ಪರೇ ಕೆಲವು ವರ್ಷಗಳ ಹಿಂದೆ ಹೆಸರು ಮಾಡಿದ್ದ ಪೈಲ್ವಾನ್.

ಈ ಅಣ್ಣಯ್ಯಪ್ಪನವರದೇ ಒಂದು ಕಥೆ ಬೆಂಗಳೂರಿನಲ್ಲಿ ಪೈಲ್ವಾನರ ಬಾಯಿಂದ ಕೇಳಿ ಬರುತ್ತಿತ್ತು. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ನಡೀತಿದ್ದ ಭಾರೀ ಭಾರೀ ಕುಸ್ತಿಗಳನ್ನೆಲ್ಲಾ ಅಣ್ಣಯ್ಯಪ್ಪನವರು ಪಂಜಾಬಿನ ಫಜ್ಲೂ ಪೈಲ್ವಾನ್ ಜೊತೆ ಸೇರಿಕೊಂಡು ಫಿಕ್ಸ್ ಮಾಡೋರು. ಫಜ್ಲೂ ಪೈಲ್ವಾನ್ ಕುಸ್ತಿ ಆಡೋದಿಕ್ಕಾಗಿ ಬೆಂಗಳೂರಿಗೆ ಬೇಕಾದಷ್ಟು ಸಾರಿ ಬಂದಿದ್ದ. ಅಣ್ಣಯ್ಯಪ್ಪರು ಕುಸ್ತಿ ಆಡ್ತಾ ಇದ್ದ ಕಾಲದಲ್ಲಿ ಫಜ್ಲೂ ಜೊತೆಗೆ ಕುಸ್ತಿ ಆಡಿ ಕೆಲವು ಸಾರಿ ಸೋತಿರಬೇಕು. ಕೆಲವು ಸಾರಿ ಗೆದಿರಬೇಕು. ಅದನ್ನು ಮನಸ್ಸಿನಲ್ಲಿ ಇನ್ನೂ ಇಟ್ಟುಕೊಂಡಿದ್ದ ಅಣ್ಣಯ್ಯಪ್ಪರು ಫಜ್ಲೂ ಪೈಲ್ವಾನ್ ಸಿಕ್ಕಾಗಲೆಲ್ಲಾ ಮಾತಿನ ಚಕಮಕಿಗೆ ಅವಕಾಶ ಮಾಡಿ ಕೊಡ್ತಾ ಇದ್ದರು. ಅಣ್ಣಯ್ಯಪ್ಪನವರು ಫಜ್ಲೂ ಪೈಲ್ವಾನ್ ಕಂಡಾಗಲೆಲ್ಲಾ ಫಾಕತ್ ಇದ್ರೆ ಅಖಾಡದಲ್ಲಿ ಬಾ ನಿನಗೆ ಮಗ್ಗಲು ಮುರೀತೀನಿ ಅನ್ನೋ ಹಂಗೆ ಕೆಣಕಿ ಮಾತನಾಡಿ, ಫವನ್ನು ರೇಗಿಸುತ್ತಿದರು.

ಪೈಲ್ವಾನ್ ಫಜ್ಲೂ ಈ ಮಾತು ಕೇಳಿ ಮನಸ್ಸು ಕೆಡಿಸಿಕೊಳ್ತಾ ಇರಲಿಲ್ಲ. ಆದರೂ ಪದೇ ಪದೇ ಒಂದೇ ಥರದ ಮಾತು ಕೇಳಿದರೆ ಸಿಟ್ಟು ಬರುತ್ತೆ, ಇಲ್ಲ ಬೇಜಾರಾಗುತ್ತೆ, ಅಣ್ಣಯ್ಯಪ್ಪ ಒಂದು ಸಾರಿ ಹಿಂಗೆ ಕೆಣಕಿಮಾತಾಡಿದಾಗ ಫಜ್ಲೂ ಪೈಲ್ವಾನ್ ಬಾಳಾ ಸಮಾಧಾನದಿಂದ ಆತನಿಗೆ ಹೇಳಿದನಂತೆ.

ಅಣ್ಣಯ್ಯಪ್ಪ ನಾನು, ನೀನು ಕುಸ್ತಿ, ಬಿದ್ದು ನಾಕು ಜನರ ಎದುರಿಗೆ ಅಖಾಡದಲ್ಲಿ ಆಡಿದೆವು ಎಂದರೆ ನನ್ನ ಮರ್ಯಾದೇನೂ ಹೋಗುತ್ತೆ. ಇಲ್ಲಂದ್ರೆ ನಿನ್ನ ಮರ್ಯಾದೇನೂ ಹೋಗುತ್ತೆ. ಅದರ ಬದಲು ಒಂದು ಟಾಂಗ ತಗೋ (ಆಗ ರಿಕ್ಷಾಗಳು ಇನ್ನೂ ಬೆಂಗಳೂರಿಗೆ ಬಂದಿಲ್ಲದ ಕಾಲ). ಟಾಂಗಾದಲ್ಲಿ ಕೂತ್ಕೊಂಡು ಬೆಂಗಳೂರಿನಿಂದ ದೂರ ಅಂದ್ರೆ ದೂರ ಹೋಗಿ ಬಿಡೋಣ. ಯಾವುದಾದರೂ ಹೊಲ ಅಥವ ಮರಳಿನ ಜಾಗ ಸಿಗಾತನಕ ಹೋಗಿ ಬಿಡೋಣ. ಅಲ್ಲಿ ನಾವಿದ್ದರೆ... ನಾವಿಬ್ಬರೇ ಸಾಕಾಗುವಷ್ಟು ಹೊತ್ತು ಕುಸ್ತಿ ಆಡೋಣ, ಆಗ ನೀನು ಸೋಲ್ತೀಯೋ ನಾನು ಸೋಲ್ತೀಯೋ ಅನ್ನೋದು ಗೊತ್ತಾಗುತ್ತೆ.

ಹಿಂಗೆ ಫಜ್ಲೂ ಪೈಲ್ವಾನ್ ಹೇಳಿದರೂ ಇಬ್ಬರೂ ಟಾಂಗಾದಲ್ಲಿ ಕೂತ್ಕೊಂಡು ದೂರ ಹೋಗಲೂ ಇಲ್ಲ, ಕುಸ್ತಿ ಆಡಲೂ ಇಲ್ಲ. ಹಂಗಂತ ಇವರಿಬ್ಬರ ಮಧ್ಯೆ ಇಂಥ ಮಾತಿನ ಚಕಮಕಿ ನಿಲ್ಲಲೂ ಇಲ್ಲ. ಈ ಇಬ್ಬರೂ ಪೈಲ್ವಾನರುಗಳಿಬ್ಬರೂ ಹಿಂದೆ ಮಾಡಿದ್ದ ಕುಸ್ತಿಗಳ ಬಗ್ಗೆ ಉಳಿಸಿಕೊಂಡಿದ್ದ ಸಿಟ್ಟೋ, ಅಸಮಧಾನವೋ ಕಾರಣವಾಗಿ ಪರಸ್ಪರ ರೇಗಾಡಿಸಿಕೊಳ್ತಿದ್ದರೂ, ಅವರೇನೇ ಈಗ ಕುಸ್ತಿ ಪಟುಗಳನ್ನು ನಿರ್ಧರಿಸಿ ಆಯ್ಕೆ ಮಾಡಿ ಆಡಿಸುತ್ತಿದ್ದರು ಇಂಥ ಒಂದು ಸಮಯದಲ್ಲಿಯೇ ನಂಜಪ್ಪರು ಆಮ್ಮಿಸಿಂಗ್ ಜೊತೆಗೆ ಕುಸ್ತಿ ಆಡ್ಬೇಕು ಅಂತ ಗೊತ್ತಾಗಿದ್ದು.

ಆ ಕುಸ್ತಿ ಆಡೋ ದಿನಾನೂ ಬಂತು. ಅಖಾಡದಲ್ಲಿ ನಂಜಪ್ಪ-ಅಮ್ಮಿಸಿಂಗ್ ಇಳಿದರೆ ಜೋಡೀನೇ ಹೊಂದಿಕೊಳ್ಳುವಂತೆ ಕಾಣಲಿಲ್ಲ. ಆಮ್ಮಿಸಿಂಗನ ಮುಂದೆ ನಂಜಪ್ಪರೇ ಫಜ್ಲೂ ಎನ್ನಬೇಕು. ಆದರೆ ನಂಜಪ್ಪರು ಅಂಥ ದೊಡ್ಡ ಪೈಲ್ವಾನರ ಮುಂದೆ ನಿಂತಿದ್ದರೂ ಕೇರ್ ಮಾಡಲಿಲ್ಲ. ಅಂಥ ದೊಡ್ಡ ಪರ್ಸನಾಲಿಟಿ ಇರೋ ಅಮ್ಮಿಸಿಂಗ್ ಜೊತೆ ನಂಜಪ್ಪ ಬಾಳಾ ಚೆನ್ನಾಗಿ ಕುಸ್ತಿ ಮಾಡಿದರು. ನಂಜಪ್ಪರು ಮೊದಲಿನಿಂದಲೂ ದೋಬಿಚಾಟ್ ಪಟ್ಟಿನಲ್ಲಿ ಪ್ರಖ್ಯಾತಿಯಾಗಿದ್ದರು. ದೋಬಿಚಾಟ್ ಪಟ್ಟು ಹಾಕಿ ಎದುರಾಳಿ ಪೈಲ್ವಾನನನ್ನು ಅನಾಮತಾಗಿ ಎತ್ತಿ ಅಂಗಾತ ಬೀಳಿಸಿದರೂ, ಬೆನ್ನು ಮಣ್ಣಾಗೋಕೆ ಅಂದರೆ ಚಿತ್ತು, ಆಗೋಕೆ ಇನ್ನೂ ನಾಕು ಬೆರಳಷ್ಟು ಅಂತರ ಬಿಟ್ಟಿರುತ್ತೆ. ಸರಿಯಾಗಿ ಚಿತ್ತು ಮಾಡಬೇಕು ಇಲ್ಲದಿದ್ರೆ ಕುಸ್ತಿ ಗೆದ್ದಂಗಲ್ಲ, ಆಗ ನಂಜಪ್ಪರು ಆಮ್ಮಿಸಿಂಗನಂಥ 'ಪರ್ಸನಾಲಿಟಿ ಯ ಆ ಪೈಲ್ವಾನನನ್ನು ಅಖಾಡದಲ್ಲಿ ದೊಚಾಟ್ ಪಟ್ಟಿನಿಂದ ಮೂಲೆ ಮೂಲೆಗೆ ಎತ್ತಿ ಬಿಸಾಡಿದರು! ಕೊನೆಗೆ ಅದೇ ದೋಡ್ಡಚಾಟ್ ಪಟ್ಟಿನಲ್ಲಿಯೇ ಆಮ್ಮಿಸಿಂಗನನ್ನು ಸೋಲಿಸಿದರು.

ಅಷ್ಟು ದೊಡ್ಡ ಪೈಲ್ವಾನ್ ಆಮ್ಮಿಸಿಂಗ್ ಸೋತರೂ ಬೇಜಾರು ಮಾಡಿಕೊಳ್ಳಲಿಲ್ಲ. ಸಂತೋಷ ಪಟ್ಟ. ಏಕೆಂದರೆ ಎಂಥೆಂಥ ಪೈಲ್ವಾನರ ಹತ್ರ ಎಂಥೆಂಥ ಪಟ್ಟುಗಳಿರುತ್ತವೆ, ಎಂಥೆಂಥ ಒಮ್ಮೆಗಳಿರುತ್ತವೆ ಎಂಬುದು ಆತನಿಗೆ ಸಂತೋಷ ಉಂಟುಮಾಡಿತ್ತು. ಹಂಗಾಗಿ

ಆತ ನಂಜಪ್ಪನ ಕುಸ್ತಿಯನ್ನು ಬಾಯಿ ತುಂಬಾ ಹೊಗಳಿದ. ಈ ಕುಸ್ತಿಯಲ್ಲಿ ನಂಜಪ್ಪ ಎಂಥ ಚತುರರು ಅಂಥ ಗೊತ್ತಾಗಿ ಅಮ್ಮಿಸಿಂಗ್‌ಗೆ ಬಹಳ ಸಂತೋಷವಾಯ್ತು. ಎಲ್ಲರೂ ಖುಷಿ ಪಟ್ಟರು. ಇಂಥದೊಂದು ಕುಸ್ತಿ ನೋಡಿದ್ದು ಸಾರ್ಥಕವಾಯ್ತು ಅಂತ ನಾನೂ ಸಂತೋಷಪಟ್ಟೆ.

ಮತ್ತೊಂದು ಕುಸ್ತಿ, ದಾವಣಗೆರೆಯಲ್ಲಿ ನಡೆದಿದ್ದು, ಈ ಕುಸ್ತಿ ಬೆಳಗಾಮಿನ ರಾಮಸಿಂಗ್ ಜೊತೆ ನಂಜಪ್ಪರು ಮಾಡಿದ ಕುಸ್ತಿ. ಆಗ ನಂಜಪ್ಪರ ಹೆಸರು ಪ್ರಬುದ್ಧಮಾನವಾಗಿತ್ತು. ಅವರ ಕುಸ್ತಿ ಅಂದರೆ ಚಿತ್ರದುರ್ಗದಿಂದ ಐನೂರು, ಆರುನೂರು ಜನ ಕುಸ್ತಿ ಪ್ರೇಮಿಗಳು, ಪೈಲ್ವಾನರುಗಳು ದಾವಣಗೆರೆಗೆ ಹೋಗೋರು. ಅಲ್ಲಿನ ಕುಸ್ತಿ ಪ್ರೇಮಿಗಳೂ ಅಷ್ಟೆ. ಗಿಜಿಗುಟ್ಟಿಕೊಂಡು ಅಖಾಡದ ಸುತ್ತ ಸೇರಿಕೊಂಡು ನಿಂತು ಬಿಡೋರು.

ಅಖಾಡದಲ್ಲಿ ನಂಜಪ್ಪರು-ರಾಮಸಿಂಗ್ ಇಬ್ಬರೂ ಇಳಿದರು. ನಂಜಪ್ಪರು ಈಗಾಗಲೇ ತಿಳಿಸಿರುವಂತೆ ದೋಬೀಚಾಟ್ ಪಟ್ಟು ಹಾಕಿ ಬೀಳಿಸುವುದಕ್ಕೆ ನೋಡಿದರು. ಆದರೆ ಅವನು ರಾಮಸಿಂಗ್ ಎಂಥ ಪೈಲ್ವಾನಪ್ಪ ಅಂದ್ರೆ, ಅದೇ ದೋಬಿಚಾಟ್ ಪಟ್ಟುಹಾಕಿ ನಂಜಪ್ಪನ್ನ ಎತ್ತಿ ಬಿಸಾಡುತ್ತಿದ್ದ! ಆದರೆ ನಂಜಪ್ಪರು ಬೇರೆ ಬೇರೆ ಪಟ್ಟು ಹಾಕಿ ಅವನನ್ನು ಬೀಳಿಸಲು ನೋಡಿದರು. ಅವನೂ ಅಷ್ಟೆ, ಪ್ರತಿಯಾಗಿ ಆತನೂ ಬೇರೆಬೇರೆ ಪಟ್ಟು ಹಾಕಿದ. ಆದರೆ ನಂಜಪ್ಪರು ಅದೇ ದೋಬೀಚಾಟ್ ಪಟ್ಟಿನಲ್ಲಿ ರಾಮಸಿಂಗ್ ಪೈಲ್ವಾನನನ್ನು ಸಾಫ್ ಚಿತ್ತು ಮಾಡಿದರು.

ರಾಮಸಿಂಗ್ ಅಖಾಡದಲ್ಲಿ ಕುಂತ್ಕೊಂಡು ನಗುತ್ತಿದ್ದ. ಏನಪ್ಪ ಇವನು ಸೋಲಿಸಿದನಲ್ಲ ಅಂತ ಬೇಜಾರು, ಸಿಟ್ಟು ಬರುವುದರ ಬದಲು ಆತ ನಗ್ತ  ಕುಂತ್ಕೊಂಡಿದ್ದ. ಯಾಕಪಾ ಅಂದ್ರೆ ಈ ಪೈಲ್ವಾನು (ನಂಜಪ್ಪ) ಎಂಥ ಚತುರ, ಎಷ್ಟು ಚೆನ್ನಾಗಿ ಕುಸ್ತಿ ಮಾಡಿದ ಅಂತ ಆತ ಸಂತೋಷ ಪಡ್ತಾ ಇದ್ದ. ಆಗ ಪೈಲ್ವಾನರು ಸೋತರೆ ಬಾಳಾ ಸಂದರ್ಭದಲ್ಲಿ ದುಃಖ ಪಡ್ತಾ ಇರಲಿಲ್ಲ. ಗೆದವನನ್ನು ಕಂಡು ಅವನ ಕುಸ್ತಿ, ಕಲೇನಾ ಮೆಚ್ಚಿಕೊಳ್ತಾ ಇದ್ದರು. ಈಗ ನಾವು ಏನ್ 'ಸ್ಪೋರ್ಟಿವ್ ಸ್ಪಿರಿಟ್ ಅಂತ ಕರೀತೀವಿ, ಅದು ಆಗಿನ ಕಾಲದ ಪೈಲ್ವಾನರಲ್ಲಿ ಬಹಳ ಚೆನ್ನಾಗಿ ಕಾಣೋ ಒಂದು ಗುಣ ಆಗಿತ್ತು. ಪೈಲ್ವಾನರಲ್ಲಿ ದ್ವೇಷ ಇರಲಿಲ್ಲ.

ಇನ್ನೊಂದು ಕುಸ್ತಿ ನಾನು ನೋಡಿದ್ದು ಅಂದರೆ ನಮ್ಮ ಗರಡಿ ಹುಡುಗನೇ ಮೂಕಪ್ಪ ಎಂಬ ಪೈಲ್ವಾನನದು. ಈ ಕುಸ್ತಿ ನಡೆದಿದ್ದು ಬೆಂಗಳೂರಿನಲ್ಲಿಯೇ.

ಅಣ್ಣಯ್ಯಪ್ಪರು ಕುಸ್ತಿ ಕಂಟ್ರಾಕ್ಟರು ಒಬ್ಬರಿದ್ದರು ಅಂತ ಹೇಳಿದೆನಲ್ಲ. ಅವರು ಹಿಂದೆ ಪಂಜಾಬಿನ ಫಜ್ಲೂ ಪೈಲ್ವಾನ್ ಜೊತೆಗೆ ಅನೇಕ ಸಾರಿ ಕುಸ್ತಿ ಮಾಡಿದರು. ಫಜ್ಲೂ ಪೈಲ್ವಾನನಿಗೂ ಅಣ್ಣಯ್ಯಪ್ಪರಿಗೂ ಯಾವಾಗಲೂ ಒಂದು ಥರ ಕಿತ್ತಾಟ ನಡೀತಾನೇ ಇತ್ತು.. ಈ ಸಾರಿ ಏನಾಯ್ತು, ಅಂದ್ರೆ ಫಜ್ಲೂ ಪೈಲ್ವಾನ್ ಬೆಂಗಳೂರಿಗೆ ಬರಬೇಕಾದರೆ ತನ್ನ ಇಬ್ಬರು ಮಕ್ಕಳನ್ನು ಕರ್ಕೊಂಡು ಬಂದಿದ್ದ. ಅವರಲ್ಲಿ ಒಬ್ಬನು ಚುಡಿ ಅಂತ ಮೊದಲನೇ ಮಗ, ಅವನ ಮೇಲೆ ಕುಸ್ತಿಗಳಾದವು. ಚುಡಿ ಬಾಳಾ ಕುಸ್ತಿ, ಹೊಡೆದ. ಆಗ ಬೆಂಗಳೂರಿನಲ್ಲಿದ್ದ ಸ್ವಲ್ಪ ಹೆಸರುವಾಸಿಯಾದ ಎಲ್ಲಾ ಪೈಲ್ವಾನ್ ಹುಡುಗರೂ ಚುಡಿ ಮೇಲೆ ಕುಸ್ತಿಯಾಡಿ ಬಿದ್ದು ಹೋದರು.

ಆ ಸಂದರ್ಭದಲ್ಲಿ ಈ ಕುಸ್ತಿ, ಕಂಟ್ರಾಕ್ಟರ್ ಅಣ್ಣಯ್ಯಪ್ಪರು ಬೆಂಗಳೂರಿನಿಂದ ದುರ್ಗಕ್ಕೆ ಬಂದಿದ್ದರು. ಬಂದವರು ದೊಡ್ಡಗರಡಿ ನೋಡ್ಕಂಡು, ಪೈಲ್ವಾನರನ್ನು ಮಾತಾಡಿಸಿಕೊಂಡು ಹೋಗಲು ಬಂದಿದ್ದರು. ದೊಡ್ಡಗರಡಿಗೆ ಅವರು ಬಂದ ಸಮಯ ಸಂಜೆ ಐದೂವರೆ ಆರು ಗಂಟೆ ಇರಬಹುದು. ಕೆಲವರು ಸಾಧನೆ ಮಾಡ್ತಾ ಇದ್ದರು. ಕೆಲವರು ಮಟ್ಟಿಯಲ್ಲಿ ಲಡತ್ ಮಾಡ್ತಾ ಇದ್ದರು. ಮತ್ತೆ ಕೆಲವರು ಸುಧಾರಿಸಿಕೊಳ್ತಾ ಇದ್ದರು.

ಆಗ ಗರಡಿಗೆ ಬಂದ ಅಣ್ಣಯ್ಯಪ್ಪರು ನಮಗೆ ಯಾರಿಗೂ ಅಷ್ಟಾಗಿ ಪರಿಚಯವಿರಲಿಲ್ಲ. ನೀವು ಯಾರು ಯಜಮಾನರು ಅಂತ ನಾವು ಅವರನ್ನು ಕೇಳಿದೆವು. ಅವರು ನಾನು ಕುಸ್ತಿ ಕಂಟ್ರಾಕ್ಟರ್ ಅಣ್ಣಯ್ಯಪ್ಪ ಎಂದರು. ಅಣ್ಣಯ್ಯಪ್ಪರು ಒಂದು ಕಡೆ ಕುಂತ್ಕೊಂಡು ಸುತ್ತ-ಮುತ್ತ ಸಾಧನೆ ಮಾಡ್ತಾ, ಲಡತ್ ಮಾಡ್ತಾ ಇದ್ದ ಗರಡಿಯ ಪೈಲ್ವಾನರನ್ನೆಲ್ಲಾ ನೋಡ್ತಾ ಇದ್ದರು. ಆಗ ಮಟ್ಟಿಯಲ್ಲಿ ನನ್ನ ಜೊತೆಗೆ ಲಡತ್ ಮಾಡುತ್ತಿದ್ದ ಮೂಕಪ್ಪನ ಕಡೆಗೆ ಅಣ್ಣಯ್ಯಪ್ಪರ ಕಣ್ಣಿಗೆ ಬಿತ್ತು. ಅವರು ಮೂಕಪ್ಪನನ್ನು ಕುರಿತು ಇವನು ಯಾರು ಅಂದರು. ನಾನು ಈತ ನಮ್ಮವನೆ, ನಮ್ಮ ಶಿಷ್ಯ ಎಂದು ಹೇಳಿದೆ.

ಅವರು ಕುಸ್ತಿ ಕಂಟ್ರಾಕ್ಟರ್ ಅಂತ ಹೇಳಿದ್ದನ್ನು ಕೇಳಿ ನಾವು ಅವರನ್ನು ಕುರಿತು ಬೆಂಗಳೂರಿನ ಕುಸ್ತಿಯಲ್ಲಿ ನಾವೂ ಸೇರಬಹುದಾ ಎಂದು ವಿಚಾರಿಸಿದೆವು. ಅದಕ್ಕೆ ಅಣ್ಣಯ್ಯಪ್ಪರು -

ಓ .. ಸೇರಬಹುದು ಖಂಡಿತಾ ಬನ್ನಿ, ಒಂದು ವಾರ ಅನ್ನುವುದರೊಳಗೆ ನಿಮಗೆ ಬೇಕಾದ ಜೊತೆ ಹೊಂದಿಸಿಕೊಡ್ತೀನಿ, ನಿಮಗೆ ಬೇಕಾದ ಸಹಕಾರ ಕೊಡ್ತೀನಿ. ನೀವು ಗಾಬರಿ ಪಡ್ಕೊಳ್ಳಬಹುದಾದ ಅಗತ್ಯವಿಲ್ಲ" ಎಂದು ಭರವಸೆ ಕೊಟ್ಟರು.

ಇದಾದ ಮೇಲೆ ನಾವು ಅಂದ್ರೆ ನಾನು, ಮೂಕಪ್ಪ ಬೆಂಗಳೂರಿಗೆ ಹೋದೆವು. ಬೆಳಿಗ್ಗೆ ಹತ್ತು ಗಂಟೆಗೆ ಕುಸ್ತಿ, ಅಖಾಡದಲ್ಲಿ ಅದೇ ದಿನ ಫಜ್ಲೂ ಪೈಲ್ವಾನ್ ಮಗ ಚುಡಿ ಜೊತೆ ಬೇರೆ ಪೈಲ್ವಾನನದು ಕುಸ್ತಿ, ಹೆಚ್ಚಿಗೆ ಮಾತಾಡೋದೇನಿದೆ. ಹುಡುಗರಿಬ್ಬರೂ ಒಳ್ಳೆ ಚೂಟಿಯಾಗಿದ್ದರು. ಚುಡಿನೂ ಅಷ್ಟೆ. ಒಳ್ಳೆ ಚೂಟಿ ಹುಡುಗ, ಚೂಟಿ ಪೈಲ್ವಾನ್ ಆಗಿದ್ದ. ಒಳ್ಳೆ ಪಾದರಸ ಆ ಹುಡುಗ, ಮುಸ್ಲಿಂ ಜನಾಂಗದವರದೂ ಸಪೋರ್ಟ್ ಇತ್ತು. ಅಖಾಡದ ತುಂಬಾ ಆ ಹುಡುಗಂದೇ ಅಂದ್ರೆ ಚುಡಿದೇ - ಓಡಾಟ, ಅಖಾಡಕ್ಕೆ ಬಾ ಇದಂಗೆ ಜನ ಕೇಕೆ ಹಾಕಿ, ಚಪ್ಪಾಳೆ ತಟ್ಟಿ ಚುಡಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಅವನ ಮೇಲೆ ಅಷ್ಟು ಪ್ರೀತಿ. ಹಿಂದೂಗಳಿಗೆ ಒಂದು ಫರಾ ಚಿಂತೆ. ಇವನಿಗೆ ಯಾರನ್ನು ಕರೆಸಿ ಹೊಡೆಸಬೇಕು ಅಂತ. ಆಗ ನಾನು ಮೂಕಪ್ಪ ಒಂದು ಕಡೆ ಕುಂತ್ಕಂಡಿದ್ದೆವು. ಆಗ ಅಣ್ಣಯ್ಯಪ್ಪನವರು ಫಜ್ಲೂ ವನ್ನು ಕರೆದು-

ನಿನ್ನ ಮಗನನ್ನು ಕರೆಯಯ್ಯಾ ನಿನ್ನ ಮಗನಿಗೆ ಒಂದು ಒಳ್ಳೆ ಜೊತೆ ತಂದಿದೀನಿ, ಜೊತೆ ಏನು ದುರ್ಗದ ಹುಲಿ, ದುರ್ಗದ ಹುಲಿ... ತಂದಿದ್ದೀನಿ" ಎಂದರು.

ಫಜ್ಲೂ ಮಗನ್ನ ಕರ್ಕೊಂಡು ಅಖಾಡಕ್ಕೆ ಬಂದ. ಅಣ್ಣಯ್ಯಪ್ಪನವರು ಕುಣಕೊಂಡು ಮೂಕಪ್ಪನ್ನ ಕರ್ಕೊಂಡು ಅಖಾಡಕ್ಕೆ ಬಂದರು. ಮೂಕಪ್ಪ ಕುಣಕೊಂಡು ಅಖಾಡಕ್ಕೆ ಬಂದಿದ್ದನ್ನು ಕಂಡು ಜನ ಎಲ್ಲ ಇವನ್ಯಾರಪ್ಪ ಒಳ್ಳೆ ಚೆನ್ನಾಗಿರೋ ಪೈಲ್ವಾನಿದ್ದಂಗೆ ಇದಾನೆ ಎಂದು ಮಾತಾಡಿಕೊಂಡರು. ಚುಡೀನೂ ಮೂಕಪ್ಪನೂ ಅಖಾಡದಲ್ಲಿ ಜೊತೆಮಾಡ್ಕೊಳ್ಳೋಕೆ ಕೈ ಕೈ ಮಿಲಾಯಿಸಿಕೊಳ್ಳಬೇಕು. ಇನ್ನೂ ಬಟ್ಟೆ ಮೇಲೆ ಇಬ್ಬರೂ ಇದಾರೆ. ಆದರೆ ಕೈ ಕೈ ಮಿಲಾಯಿಸುತ್ತಲೇ ಇಬ್ಬರೂ ಎಳೆದಾಡತೊಡಗಿದರು. ಕುಸ್ತಿ ಶುರುವು ಆದಂಗೆ! ಫಜ್ಲೂ ಅವನ ಮಗನ ಕೈ ಹಿಡಿದು ಆಕಡೆಗೆ ಎಳಕೊಂಡ! ಅಣ್ಣಯ್ಯಪ್ಪ ಮೂಕಪ್ಪನ ಕೈ ಹಿಡಿದು ಈ ಕಡೆಗೆ ಎಳಕೊಂಡರು! ಮುಂದಿನವಾರ ಇವರಿಬ್ಬರ ಕುಸ್ತಿ, ಅಂಥ ಸಾರಿ ಬಿಟ್ಟರು.

ನಮಗೆ ಪರಸ್ಥಳ, ಹೊಟ್ಲಲ್ಲಿ ಊಟಮಾಡಬೇಕು. ಗರಡಿಯಲ್ಲಿ ಸಾಧನೆ ಮಾಡ್ಬೇಕು. ನಂಜಪ್ಪರ ಶಿಷ್ಯರು ಇವರು ಅಂತ ನಮಗೆ ಗೌರವವೇನೋ ಕೊಡೋರು. ಆದರೆ ನಾವು ಇಂಥ ಕುಸ್ತಿ ನಡೆದಾಗ ಆಡಿ ನಮ್ಮ ಕುಸ್ತಿ ಜನಮೆಚ್ಚುಗೆ ಪಡೆದರೆ ಅದೊಂದು ಫರಾ. ಹಿಂಗಾಗಿ ನಾವು ಒಂದು ವಾರ ಆ ಇಲ್ಲಿ ಹೊಟ್ಟುಗಳಲ್ಲಿ ತಿಂದ್ಕಂಡು ಕಾಲಕಳೆದವು. ಅಖಾಡದಲ್ಲಿ ಕುಸ್ತಿ ಜತೆ ಮಾಡಿದ ದಿನ ಕುಸ್ತಿ ಪ್ರೇಮಿಗಳು ಯಾರ್‍ಯಾರು ಮೂಕಪ್ಪ ಮತ್ತು ಚುಡಿನಾ ನೋಡಿದ್ರೋ, ಅವರೆಲ್ಲಾ ಈ ಇಬ್ಬರ ಕುಸ್ತಿ ಹೆಂಗೆ ನಡೆಯುತ್ತೆ ಅನ್ನೋದರ ಬಗ್ಗೆ ಆಕರ್ಷಿತರಾಗಿ ಬಿಟ್ಟಿದ್ದರು. ವಾರ ಆದಮೇಲೆ ಕುಸ್ತಿ, ದಿನ ಒಂದೇ ಬಿಡ್ಸು

ಅಖಾಡಕ್ಕೆ ಬಂದೆವು. ಹೋಟ್ನಲ್ಲಿ ತಿನ್ನಿಸಿಕೊಂಡು, ಹಾಲು – ಗೀಲು ಕುಡಿಸಿಕೊಂಡು ಮೂಕಪ್ಪನ ತಯಾರಿ ಹಂಗೂ ಹಿಂಗೂ ಆಗಿತ್ತು. ಕುಸ್ತಿ ಬಿತ್ತು ನೋಡಿ - ಚುಡಿಗೂ ಮೂಕಪ್ಪನಿಗೂ! ಅರ್ಧಗಂಟೆ ಕುಸ್ತಿ ನಡೆಯಿತು. ಮೂಕಪ್ಪ ಅಖಾಡದಲ್ಲಿ ಆಪಟ್ಟು, ಈಪಟ್ಟು, ಆ ಕೆಲಸ ಈ ಕೆಲಸ ಅಂತ ಬಹಳ ಚೆನ್ನಾಗಿ ಕುಸ್ತಿ ಮಾಡಿ, ನೋಡ್ತಾ ಇದ್ದ ಕುಸ್ತಿ ಪ್ರೇಮಿಗಳು ಬಯಸೆ ಅಂತ, ನೋಡೋ ಅಂತ ಸಂತೋಷನ್ನೆಲ್ಲಾ ಧಾರಾಳವಾಗಿ ಕೊಟ್ಟುಬಿಟ್ಟ. ಆದರೆ ಕುಸ್ತಿ ಬಾಳಾ ಹೊತ್ತು ಎಳೆದಿದ್ದರಿಂದ ಡ್ರಾ ಆಗೋಯ್ತು. ಮತ್ತೆ ಇದೇ ಜೋಡಿನ ಅಂದರೆ ಮೂಕಪ್ಪ - ಚುಡಿ ಕುಸ್ತೀನಾ ಮುಂದಿನ ತಿಂಗಳು ನಡೆಸಿಪಿ ಅಂತ ಅನೌನ್ಸ್ ಮಾಡಿದರು. ಆಗ ಬೆಂಗಳೂರಿನ ಜನಕ್ಕೆ ನಮ್ಮ ಕಂಡರೆ ಇಷ್ಟವಾಗೋಯ್ತು. ಒಂದು ತಿಂಗಳಲ್ಲಿ ನಮಗೆ ಬೇಕುಬೇಕಾದ ಊಟ-ಹಾಲು ಇವನ್ನೆಲ್ಲಾ ಬೇಕು ಬೇಕಾದಷ್ಟು ಸಪ್ಪೆ ಮಾಡಿ ನಮ್ಮನ್ನು ಚೆನ್ನಾಗಿ ನೋಡಿಕೊಂಡರು. ಊಟ ಮಾಡೋದು, ಹಾಲು ಕುಡಿಯೋದು. ಇನ್ನುಳಿದ ಸಮಯದಲ್ಲಿ ಗರಡಿಯಲ್ಲಿ ಸಾಧನೆ ಮಾಡೋದು, ಲಡತ್ ಮಾಡೋದು ಹಿಂಗೆ ಮಾಡ್ತಾ ಮೂಕಪ್ಪ ಒಂದು ತಿಂಗಳು ತಯಾರಿ ಮಾಡಿದ. ಹೋಟಲ್ಲಿ ಒಂದುವಾರ ತಿಂದುಂಡು ಮಾಡಿದ ತಯಾರಿಗಿಂತಾ ನಾಕರಷ್ಟು ತಯಾರಿ ಈಗ ಮಾಡಿದಂಗ್ಹಾಗಿ ಮೂಕಪ್ಪ ಒಳ್ಳೇ ಚೆನ್ನಾಗಿ ಕಾಣಿಸತೊಡಗಿದ. ಅಷ್ಟು ಕಷ್ಟಪಟ್ಟು ಬೆಂಗಳೂರು ಜನ ಮೂಕಪ್ಪನನ್ನು ತಯಾರು ಮಾಡಿದ್ದರು.

ಪೈಲ್ವಾನರ ಮೇಲೆ ಹಿಂದಿನಸಾರಿ ಪ್ರೇಕ್ಷಕರು, ಕುಸ್ತಿ ಪ್ರೇಮಿಗಳು ಬಾಜೀ ಕಟ್ಟೋದಿಕ್ಕೆ ಹಿಂಜರಿಯುತ್ತಿದ್ದರು. ಈಗ ಮೂಕಪ್ಪ ನಡೆಸಿದ್ದ ತಯಾರಿ ನೋಡಿ ಹಿಂದೂಗಳು ಮುಸ್ಲಿಂ ಸ್ನೇಹಿತರೆ.. ಈಗ ನೀವು ಬಾಜಿ ಕಟ್ಟಿ. ನೀವು ಐವತ್ತು ರೂಪಾಯಿ ಕಟ್ಟಿದರೆ. ನಾವು ನೂರು ರೂಪಾಯಿ ಕೊಡ್ತೀವಿ. ನಮ್ಮ ಪೈಲ್ವಾನ್ ಗೆಲ್ತಾನೆ ಅಂತ ಹುಮ್ಮಸ್ಸಿನಿಂದ ಮಾತಾಡತೊಡಗಿದರು.

ಪೈಲ್ವಾನ್ ಮರ್ಯಾದೆಗೆ ಧಕ್ಕೆ ಬರ್ತಾ ಇರಲಿಲ್ಲ. ಇದೇ ಜೋಡೀನಾ ಮತ್ತೆ ಮೈಸೂರಿನಲ್ಲಿ ಆಡಿಸಿದರು, ಅಲ್ಲೂ 'ಡ್ರಾನೇ ಆಯ್ತು.

ಆದರೂ ಮೂಕ ಪೈಲ್ವಾನ್ ಮೊದಲನೇ ಸಾರಿ ಚುಡಿ ಜೊತೆಗೆ ಮಾಡಿದ್ದ ಕುಸ್ತಿ ಕಂಡು ಬೆಂಗಳೂರು ಜನ ಖುಷಿಪಟ್ಟಿದ್ದರು. ಅದಕ್ಕಾಗಿ ಮೂಕಪ್ಪನನ್ನು ಬೆಂಗಳೂರಿನಲ್ಲಿಯೇ ಇಟ್ಟುಕೊಂಡು ಒಂದು ಫ್ಯಾಕ್ಟರಿಯಲ್ಲಿ ಕೆಲಸ ಕೊಡಿಸಿದರು. ಮದುವೆ ಮಾಡಿದರು. ಮಕ್ಕಳಾಗಿದ್ದಾವೆ, ಈಗ ಮೂಕಪ್ಪ ಪೈಲ್ವಾನ್ ಬೆಂಗಳೂರಿನಲ್ಲೇ ಇದ್ದಾನೆ. ಮಾತು ಸರಿಯಾಗಿ ಬಾರ್ತಾ ಇರಲಿಲ್ಲ. ಅದಕ್ಕಾಗಿ ಆತನಿಗೆ ಮೂಕ ಅನ್ನೋರು.

**ಪಕ್ಕದಲ್ಲಿ ಗರಡಿ-ಅಪ್ಪ ಉಸ್ತಾದ್, ನಾನು ಪೈಲ್ವಾನ್**

ನಾನು ಹೆಂಗೆ ಪೈಲ್ವಾನ್ ಆದೆ ಅಂತ ಯೋಚಿಸಿದರೆ ಅದಕ್ಕೆ ಉತ್ತರ ಏನು ಅನ್ನೋದಿಕ್ಕೆ ಕಷ್ಟ ಪಡೋದೇ ಬೇಡ. ನಮ್ಮ ಮನೆಗೆ ಅಂಟಿಕೊಂಡಂಗೆ ದೊಡ್ಡಗರಡಿ ಇತ್ತು. ಪಕ್ಕದಲ್ಲೆ ಇದ್ದ ಗರಡಿ ವಿಷಯಗಳು, ಪೈಲ್ವಾನರ ವಿಷಯಗಳು ನಮ್ಮ ಕಿವಿ ಮೇಲೆ ಬೇಳ್ತಾನೆ ಇದ್ದವು. ನಾನಾಗಲೇ ತಿಳಿಸಿದಂತೆ ನಮ್ಮ ತಂದೆ ನಾರಣಪ್ಪರು ದೊಡ್ಡಗರಡಿ ಉಸ್ತಾದರಾಗಿದ್ದವರು. ಅದೇ ಸಮಯದಲ್ಲಿ ಕಾಲುಂಗುರದ ಬುಡ್ಡಣ್ಣನವರ ಉಸ್ತಾದರಾಗಿದ್ದವರು. ಇವರಿಬ್ಬರಿಗೂ ಉಂಟಾದ ಮನಸ್ತಾಪದಿಂದ ನಮ್ಮ ತಂದೆಯವರು ಸಮೀಪದಲ್ಲೇ ಇದ್ದ ಸಣ್ಣಗರಡಿಗೆ ಉಸ್ತಾದಾಗಿ ಹೋದರು. ಇವರಿಬ್ಬರು ದೊಡ್ಡಗರಡಿಯಲ್ಲಿ ಉಸ್ತಾದರುಗಳಾಗಿದ್ದಾಗ, ಅಲ್ಲಿ ಬೇಕು ಬೇಕಾದಂತ ಪೈಲ್ವಾನರುಗಳೇನೋ ಇದ್ದರು. ಆದರೆ ಪಂಜಾಬಿನ ಪರಿಪೈಗರ್ ಸಾಹೇಬರನ್ನು ದುರ್ಗದ ಅಭಿಮಾನಿ, ಗರಡಿಯ ಹಿತೈಷಿ ಸಿ. ಬಿ. ಮಲ್ಲಪ್ಪನವರು ದೊಡ್ಡಗರಡಿಗೆ ಕರೆತಂದ ಮೇಲೆ, ದೊಡ್ಡಗರಡಿಯ ಲಕ್ಷಣಗಳೇ ಬದಲಾದವು. ಇಡೀ ಊರಲ್ಲಿ, ಪರಸ್ಥಳಗಳಲ್ಲಿ ದೊಡ್ಡಗರಡಿ, ದೊಡ್ಡಗರಡಿಯ ಪೈಲ್ವಾನರುಗಳು, ಬಹಳ ಮುಖ್ಯವಾಗಿ ನಂಜಪ್ಪರು ಒಳ್ಳೆ ಹೆಸರು ಮಾಡಿದರು.

ಪರಿಪೈಗರ್ ಅವರು ರಾಮಪ್ಪ, ನಂಜಪ್ಪ, ಮೊದಲಾದ ಪೈಲ್ವಾನರುಗಳಿಗೆ ಉಸ್ತಾದ್ ಆಗಿದ್ದುದರ ಜೊತೆಗೆ ಸ್ವತಃ ಬಲಶಾಲಿಯಾದ ಪೈಲ್ವಾನರಾಗಿದ್ದರು. ಇಲ್ಲಿ ಕೆಲವು ಕುಸ್ತಿಗಳು ನಡಿಯುತ್ತಿದ್ದವು. ಪರಿಪೈಗರ್ ಅವರೂ ಕೆಲವು ಕುಸ್ತಿಗಳನ್ನು ಮಾಡಿದ್ದರು. ಬುಡೇನ್ ಸಾಬ್ ಅನ್ನುವ ಪೈಲ್ವಾನ್ ಜೊತೆಯಲ್ಲಿ ದಾವಣಗೆರೆ ಅಜೀಜ್ ಅನ್ನೋ ಪೈಲ್ವಾನ್ ಜೊತೆಯಲ್ಲಿ ಅವರು ಕುಸ್ತಿ ಮಾಡಿದರು. ಇನ್ನೂ ಅನೇಕರ ಜೊತೆಯಲ್ಲಿ ಕುಸ್ತಿಗಳನ್ನು ಆಡಿದ್ದರೂ ಈಗ ಅವ್ರು ಯಾರಾರ ಜೊತೆಯಲ್ಲಿ ನಡೆದವು ಅನ್ನೋದು ನನಗೆ ನನಪಿಲ್ಲ. ಆದರೆ ಪರಿಪೈಗರ್ ಬಗ್ಗೆ ಮಾತ್ರ ಏನೇನೋ ವಿಷಯ ಮಾತಾಡೋರು.

ಈಗ ನಂಜಪ್ಪರು ಕುಸ್ತಿ ಮಾಡಿದ ಒಂದು ಸಂದರ್ಭದಲ್ಲಿ ಪರಿಪೈಗರ್ ಬಗ್ಗೆ ನಡೆದ ಒಂದು ಸಂಗ್ತಿ ನೋಡಿ, ಬೆಳಗಾಮಿನಲ್ಲಿ ಒಂದು ಸಮಯದಲ್ಲಿ ಮೂರುದಿನ ಕುಸ್ತಿ ನಡೆಸೋರು. ದಿನಕ್ಕೆ ನೂರು ಕುಸ್ತಿ, ಅಂದ್ರೆ, ಮೂರು ದಿನಕ್ಕೆ ಮುನ್ನೂರು ಕುಸ್ತಿಗಳು ನಡಿತ್ತಿದವು.

ಆ ಸಮಯದಲ್ಲಿ ನಂಜಪ್ತರು ಕುಸ್ತಿ ಆಡೋಕೆ ಅಂತ ಬೆಳಗಾಮಿಗೆ ಹೋಗಿದರು. ಅಲ್ಲಿಗೆ ಸಾಣೆಮಾಂ ಅಂತ ಒಬ್ಬ ದೊಡ್ಡ ಪೈಲ್ವಾನ್ ಕುಸ್ತಿಗೆ ಬಂದಿದ್ದ. ಆತನಿಗೂ ಪಂಜಾಬಿನ ಪೈಲ್ವಾನ್ ಒಬ್ಬನಿಗೂ ಕುಸ್ತಿಯಾಯ್ತು. ಸಾಣೆಮಾಂ ಪೈಲ್ವಾನನ ಗುರು ಪಂಜಾಬಿನ ಇನ್ನೊಬ್ಬ ದೊಡ್ಡ ಪೈಲ್ವಾನ್ ಅಲ್ಲಿಗೆ ಬಂದಿದ್ದ. ನಂಜಪ್ಪರು ಆ ಪಂಜಾಬಿನ ಗುರುವಿನ ಜೊತೆಯಲ್ಲಿ ಕುಸ್ತಿ ಆಡ್ತಿನಿ ಅಂತ ಹಾತ್ ಮಿಲಾಯಿಸಿದರು. ಇಷ್ಟು ದೊಡ್ಡ ಪೈಲ್ವಾನನ ಮೇಲೆ ನಂಜಪ್ಪ ಕೈಹಿಡಿದು ಬಿಟ್ಟನಲ್ಲಾ ಅಂತ ಅಲ್ಲಿ ಸೇರಿದ್ದ ಪೈಲ್ವಾನರುಗಳು ಅನುಮಾನದಿಂದ ನಂಜಪ್ಪನವರನ್ನು ನೋಡಿದರು. ನಂಜಪ್ಪರು ಆ ಕುಸ್ತಿಯನ್ನು ಗೆದ್ದು ಬಿಟ್ಟರು. ಸೋತವನು ದೊಡ್ಡ ಪೈಲ್ವಾನ್, ಜೊತೆಗೆ ಯಜಮಾನ. ಅಂಥವನನ್ನು ನಂಜಪ್ಪನಂಥಾ ಮರಿ ಪೈಲ್ವಾನ್ ಗೆದ್ದುಬಿಟ್ಟನಲ್ಲ ಅಂತ ಎಲ್ಲರಿಗೂ ಆಶ್ಚರ್ಯವಾಯ್ತು. ಬೆಳಗಾಮಿನ ದೊಡ್ಡ ಅಖಾಡದಲ್ಲಿ ನಡೆಯುತ್ತಿದ್ದ ಇಂಥ ಭಾರೀ ಭಾರೀ ಕುಸ್ತಿಗಳನ್ನು ನೋಡಲು ಪಂಜಾಬಿನ ಅನೇಕ ಪೈಲ್ವಾನರುಗಳು ಅಲ್ಲಿಗೆ ಬಂದಿದ್ದರು. ಆಗ ಇಂಡಿಯಾ ದೇಶದಲ್ಲೇ ಪ್ರಖ್ಯಾತಿಯಾಗಿದ್ದ ಪಂಜಾಬಿನ ಗಾಮಾ ಪೈಲ್ವಾನರ ಮಕ್ಕಳು ಅಲ್ಲಿಗೆ ಬಂದಿದ್ದರು. ಅವರು ಕುಸ್ತಿ ಆಡೋಕೆ, ಕುಸ್ತಿ ನೋಡೋಕೆ ಅಂತ ಎರಡು ಉದ್ದೇಶಗಳನ್ನು ಇಟ್ಟುಕೊಂಡಿದ್ದರು.

ಯಾವಾಗ ಸಾಣೆಮಾಂ ಪೈಲ್ವಾನನ ಗುರುವಿನ ಮೇಲೆ ನಂಜಪ್ಪರು ಕುಸ್ತಿ ಮಾಡಿ ವಿನ್ ಆದರೋ, ಗಾಮಾ ಪೈಲ್ವಾನನ ಮಕ್ಕಳು ನಂಜಪ್ಪರು ಕುಸ್ತಿ ಆಡಿದ ರೀತಿ, ಕೆಲವು ಪಟ್ಟುಗಳನ್ನು ನೋಡಿ ಅವರು ನಂಜಪ್ಪರನ್ನು ಪರಿಚಯ ಮಾಡಿಕೊಂಡು

ಏನ್ ಪೈಲ್ವಾನರೆ ನಿಮ್ಮ ಗುರುಗಳು ಯಾರು? ಅಂತ ಕೇಳಿದರು. ನಂಜಪ್ಪರು ಅಭಿಮಾನದಿಂದ, ನನ್ನ ಗುರುಗಳು ಪಂಜಾಬಿನ ಪರಿಪೈಗರ್ ಎಂದು ಹೇಳಿದರು.

ಆಗ ಗಾಮಾ ಪೈಲ್ವಾನರ ಮಕ್ಕಳು ಆಶ್ಚರ್ಯದಿಂದ ಪರಿಪೈಗರ್ ಪೈಲ್ವಾನರು ಇನ್ನೂ ಬದುಕಿದ್ದಾರೆಯೇ?

ಎಂದರು.

ಹೌದು ಅವರು ನನ್ನ ಗುರುಗಳು, ಬದುಕಿದ್ದಾರೆ. ಅವರು ಈಗ ಚಿತ್ರದುರ್ಗದಲ್ಲಿದ್ದಾರೆ ಎಂದು ನಂಜಪ್ಪ ಹೇಳಿದರು. ಆಗ ಗಾಮಾ ಪೈಲ್ವಾನರ ಮಕ್ಕಳು

ಪರಿಪೈಗರ್ ಬಗ್ಗೆ ಪಂಜಾಬಿನಲ್ಲಿ ಹೇಳುತ್ತಿದ್ದ ಕಥೆಯನ್ನು ಕೇಳಿದ ಗಾಮಾ ಪೈಲ್ವಾನ್ ಮಕ್ಕಳಿಗೆ ಹೇಳಿದ್ದನ್ನು ತಿಳಿಸಿದರು. ಗಾಮಾ ಪೈಲ್ವಾನ್ ಪರಿಪೈಗರ್ ಬಗ್ಗೆ ಹೇಳಿದ ಕಥೆಯ ಪ್ರಕಾರ:

ಪರಿಪೈಗರ್ ಆಗ ಪಂಜಾಬಿನಲ್ಲಿ ಹೆಸರುವಾಸಿಯಾದ ಪೈಲ್ವಾನರು. ಆಗ ಕೋಳಿಯನ್ನು ಬಾಜಿಕಟ್ಟಿ ಕುಸ್ತಿ, ಮಾಡೋ ಪದ್ಧತಿಯಿತ್ತು, ಪರಿಪೈಗರ್ ಸಾಹೇಬರು ಹಿಂಗೆ ಬಾಜಿ ಕಟ್ಟಿದ ನೂರಾರು ಕುಸ್ತಿಗಳಲ್ಲಿ ಗೆದ್ದಿದ್ದರಂತೆ. ಹಂಗೆ ಗೆದ್ದು ಅವರ ಹೆಸರು ಮನೆಮಾತಾಗಿತ್ತು. ಅವರು ಇಲ್ಲ ಆಂದ್ಕೊಂಡಿದ್ದರು. ಈಗ ಅವರು ಇಲ್ಲಿ ಆಂದ್ಕೊಂಡಿದ್ದಾಗ ಅವರು ಇದ್ದಾರೆ ಎಂಬುವುದನ್ನು ಕೇಳಿ ಬಾಳಾ ಸಂತೋಷ ಪಟ್ಟರಂತೆ. ಆ ಸಂತೋಷಕ್ಕೆ ಇನ್ನೊಂದು ಕಾರಣ ಅಂದ್ರೆ ಪರಿಪೈಗರ್  ಪಟ್ಟುಗಳು ಜನಜನಿತವಾಗಿದುವಂತೆ, ಅವೇ ಪಟ್ಟುಗಳನ್ನು ನಂಜಪ್ಪ ಉಪಯೋಗಿಸಿದ್ದನ್ನು ಕಂಡು, ತಮ್ಮ ಕಡೆಯ ಪೈಲ್ವಾನ್ ನಂಜಪ್ಪರಿಗೆ ಉಸ್ತಾದ್ ಆಗಿದ್ದನ್ನು ಕಂಡು ಸಂತೋಷವಾಗಿ ಅವರು ನಂಜಪ್ಪರನ್ನು ತಬ್ಬಿಕೊಂಡು ಮೆಚ್ಚಿಗೆ ಸೂಚಿಸಿದರಂತೆ. ಈ ಘಟನೆ ಸುಮಾರು ೧೯೫೦ನೇ ಇಸವಿಯಲ್ಲಿ ನಡೆದಿರಬಹುದು ಅಂತ ನನ್ನ ಅಂದಾಜು.

ಪರಿಪೈಗರ್ ಸಾಹೇಬರು ಕೊನೆತನಕ ಚಿತ್ರದುರ್ಗದಲ್ಲಿಯೇ ಉಳಿದು  ದೊಡ್ಡಗರಡಿಯಲಿ ಸಾಧನೆಮಾಡಿ, ಪೈಲ್ವಾನರುಗಳಿಗೆ ಲಡತ್ ಕೊಡೋರು. ಆ ಟೈಮಿನಲ್ಲಿ ನಂಜಪ್ಪರು ಸ್ವಲ್ಪ ಕುಡಿತಕ್ಕೆ ಬಲಿಯಾದರು. ಹಿಂದೆ ನಾನು ತಿಳಿಸಿದಂತೆ ಉಸ್ತಾದ್‌ಗಳ ಮನಸ್ಸು ಸದಾ ಶಿಷ್ಯನ ಆರೋಗ್ಯ, ಏಳಿಗೆ, ಕೀರ್ತಿ, ಹೆಸರನ್ನು ಬಯಸುತ್ತಿರುತ್ತದೆ. ನಂಜಪ್ಪರ ಬಗ್ಗೆ ಅಪಾರ ಪ್ರೇಮ ಇಟ್ಟುಕೊಂಡಿದ್ದ ಪರಿಪೈಗರ್ ಸ್ವಲ್ಪ ನೊಂದುಕೊಂಡರು - ತಮ್ಮ ಶಿಷ್ಯ ಇಂಥ ಚಟಕ್ಕೆ ಬಲಿಯಾದನಲ್ಲ ಎಂದು. ತಮ್ಮ ಶಿಷ್ಯ ಅನ್ಯಾಯವಾಗಿ ಹಾಳಾಗ್ತಾನಲ್ಲ ಅಂಡ್ಕೊಂಡು - ನೀನು ಕುಡಿಯೋದನ್ನ ಬಿಟ್ಟುಬಿಡು ಪೈಲ್ವಾನ್ - ನಿನಗೆ ಇಂಡಿಯಾದಲ್ಲೇ `ಕುಸ್ತಿ, ಚಾಂಪಿಯನ್ ಮಾಡ್ತೀನಿ ಎಂದು ಅನೇಕಸಾರಿ ಪರಿಪೈಗರ್ ಸಾಹೇಬರು ನಮ್ಮೆದುರಿಗೆ ಹೇಳುವುದನ್ನು ಕೇಳಿದ್ದೇವೆ.

ಕುಡಿತಕ್ಕೆ ಬಲಿಯಾಗಿದ್ದು ನಂಜಪ್ಪರಂಥ ಪೈಲ್ವಾನರ ಜೀವನದ ಕೀರ್ತಿಗೆ ಸ್ವಲ್ಪ ಧಕ್ಕೆಯಾಯಿತು ಎಂಬುದು ನಿಜ. ಆದರೆ ನಂಜಪ್ಪರು ಮರ್ಯಾದಸ್ತರು. ಎಂದೂ ಕುಡಿದು ಗಲಾಟೆ ಮಾಡಿದಾಗಲಿ, ಗಲಭೆಮಾಡಿದ್ದಾಗಲೀ ನಾವು ನೋಡಿಲ್ಲ. ಅವರು ಶ್ರೀಮಂತ ಮನೆತನದಿಂದ ಬಂದಿದ್ದವರು. ಈವಾಗಿನ ಹುಚ್ಚಂಗಮ್ಮನ ಗುಡಿಯ ಬಳಿ ಲಾಡರ ಈಶ್ವರಪ್ಪರದು ದೊಡ್ಡ ಅಂಗಡಿಯಾಗಿತ್ತು. ನಂಜಪ್ಪರಿಗೆ ಈ ಅವಿಭಕ್ತ ಕುಟುಂಬ ಪಾಲಾದಾಗ ಕೆಲವು ಮನೆಗಳು ಬಂದಿದ್ದವು. ಅವರು ಅದರ ಬಾಡಿಗೆ ತಿಂದ್ಕಂಡಿದ್ದರು.

ಸಾಮಾನ್ಯವಾಗಿ ಹಂಗೆ ಬಾಡಿಗೆ ಬಂದದ್ದನ್ನು ನನ್ನ ಕೈಲಿ ತಪ್ಪಿದರೆ ಕೌನ್ಸಿಲರ್ ಆಗಿದ್ದ ತಿಪ್ಪೇಸ್ವಾಮಿ ಕೈಯಲ್ಲಿ ಕೊಟ್ಟಿರುತ್ತಿದ್ದರು. ಅವರ ಹಣ ನಮ್ಮ ಕೈಲಿ ಇರ್ತ ಇದ್ದುದರಿಂದ ನಮಗೆ ಭಯ. ಯಾವಾಗ ಬೇಕೋ ಆವಾಗ ಬಂದು ಅವರ ಬಾಡಿಗೆ ದುಡ್ಡಲ್ಲಿ ಐವತ್ತು. ಕೊಡು, ನೂರು ಕೊಡು ಅಂತ ಕೇಳೋರು. ನಾನು ತಪ್ಪಿದರೆ ತಿಪ್ಪೇಸ್ವಾಮಿ ಅವರ ಕೊಟ್ಟಿದ್ದ ಬಾಡಿಗೆ ದುಡ್ಡಲ್ಲಿ ಕೇಳಿದಷ್ಟು ಕೊಟ್ಟು ಬಿಡ್ತಿದ್ವಿ. ಅವರು ನಶೆಯಲ್ಲಿ ಅಥವಾ ಮರೆವಿನಲ್ಲಿ ಇಸ್ಕೊಂಡು ಹೋಗಿದ್ದ ದುಡ್ಡು ಮರೆತುಬಿಟ್ಟರೆ ನಾವು ಹಣ ಎಲ್ಲಿಂದ ತರದು ಎಂಬ ಚಿಂತೆ ನಮಗೆ, ಯಾಕಂದ್ರೆ ಈಗ ಐವತ್ತು ವರ್ಷದ ಕೆಳಗೆ ಐವತ್ತು ರೂಪಾಯಿ, ನೂರು ರೂಪಾಯಿ ಭಾರೀ ಮೊತ್ತ, ಅದನ್ನ ಎಲ್ಲಿಂದ ತಂದ್ಯೋಡೋದು ಎಂಬ ದಡಗು ನಮಗೆ. ಆದರೆ ನಂಜಪ್ಪರು ಒಂದು ದಿನಾನೂ ಇಸ್ಕಂಡಿದ್ದ ದುಡ್ಡು ಎಂಥ ಸಂದರ್ಭದಲ್ಲಿ ಇಸ್ಕಂಡಿದ್ದರೂ ಮರೀತಿರಲಿಲ್ಲ. ಆವೊತ್ತು ಇಷ್ಟು ಇಸ್ಕಂಡಿದ್ದೆ, ಆವೊತ್ತು ಇಷ್ಟು ಇಸ್ಕಂಡಿದ್ದೆ - ಈಗ ನಿನ್ನ ಹತ್ತಿರ ಇಷ್ಟು ಐತೆ, ಅದರಗಿಷ್ಟು ಈಗ ಕೊಡು ಎಂದು ಕೇಳೋರು. ಅದು ಅವರ ಅಷ್ಟು ಕಟ್ಟುನಿಟ್ಟಾದ ಲೆಕ್ಕಾಚಾರ. ಒಂದು ರೂಪಾಯಿ ಜಾಸ್ತಿಹೇಳಿ ನಮ್ಮನ್ನ ಬೈದಿದ್ದನ್ನು ನಾವು ಕೇಳಿಯೇ ಇಲ್ಲ . ಅಷ್ಟು ಸಾಫ್ ಸೀದಾ ವ್ಯಕ್ತಿ ಅವರು.

ಕುಡಿತಕ್ಕೆ ಬಲಿಯಾದರು ಅಂತ ನಾವು ಅಂದ್ಕಂಡಿದ್ದರೂ ನಂಜಪ್ಪರು ಎಂದೂ ತಮ್ಮ ತಿಳುವಳಿಕೆ ಕಳ್ಕಂಡರು ಅಂತ ನನಗೆ ಅನ್ನಿಸಲಿಲ್ಲ. ನಾನು ಕುಸ್ತಿಗಳನ್ನು ಆಡಿದ್ದನ್ನು ಮುಂದೆ ಹೇಳುತ್ತೇನೆ. ಅದಕ್ಕೆ ಮುಂಚೆ ನಂಜಪ್ಪರು ಕುಡಿತಕ್ಕೆ ವಶವಾಗಿದ್ದರೂ ಅವರೊಳಗಿದ್ದ ವಿದ್ಯೆಗಳು ಹೆಂಗೆ ಹೊರಗೆ ಬರ್ತಾ ಇದ್ದವು ಅನ್ನೋದಕ್ಕೆ ಒಂದು ಉದಾಹರಣೆ ಹೇಳೀನಿ. ನಾನು ನನ್ನ ಚಿಕ್ಕಪೇಟೆಯಲ್ಲಿದ್ದ ಟೈಲರಿಂಗ್ ಷಾಪ್ ಬಿಟ್ಟು, ದೊಡ್ಡ ಪೇಟೆಯಲ್ಲಿ ಟೈಲರಿಂಗ್ ಷಾಪ್‌ನ್ನು ತೆಗೆದಿದ್ದೆ. ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ಕುಸ್ತಿ ಆಡಿದ್ದೆ. ಒಂದು ಕುಸ್ತಿ ನಾನು ಮಾಲ್ ಎನ್ನುವ ಪೈಲ್ವಾನ್ ಜೊತೆಯಲ್ಲಿ ಆಡೋಕು ಅಂತ ನಿರ್ಧಾರವಾಗಿತ್ತು.

ಮಾಲ್ ಎನ್ನುವ ಪೈಲ್ವಾನ್ ಕುಸ್ತಿಯಲ್ಲಿ ಚತುರ, ಅನೇಕ ಪಟ್ಟುಗಳು ಆತನಿಗೆ ವಶವಾಗಿದ್ದವು. ಅವನಿಗೆ ಇಂಥಿಂಥ ಪಟ್ಟುಗಳು ಚೆನ್ನಾಗಿ ಬರ್ತಾವೆ ಅಂತ ಅವರಿವರು ಹೇಳೋದು ಜನಜನಿತವಾಗಿತ್ತು. ನಾನು ಮಾಲ್ ಪೈಲ್ವಾನ್ ಇಂಥ ಪಟ್ಟು ಹಾಕಿದರೆ, ಅದನ್ನು ಬಿಡಿಸಿಕೊಳ್ಳೋದು ಹೇಗೆ, ಅವನನ್ನು ಗೆಲ್ಲೋದು ಹೇಗೆ ಎಂಬ ಚಿಂತೆಯಲ್ಲಿದ್ದೆ. ನನಗೆ ನನ್ನ ಟೈಲರಿಂಗ್ ಷಾಪಿನಲ್ಲಿ ಕುಂತಿದ್ದರೂ ಅದೇ ಚಿಂತೆ. ಹಂಗೆ ನಾನು ಚಿಂತೆ ಮಾಡ್ತಾ ಇದ್ದಾಗ ಸಾಯಂಕಾಲದ ಒಂದು ಹೊತ್ತು ನಂಜಪ್ಪರು ಬಂದರು. ಸಂಜೆ ಹೊತ್ತು ನಮ್ಮ ಅಂಗಡಿ ಮುಂದಿನ ಕಟ್ಟೆ ಮೇಲೆ ಪೈಲ್ವಾನರುಗಳು, ಗರಡಿಯ ಜನ, ಬಂದು ಕುಂತ್ಕಳ್ತಾ ಇದ್ದದ್ದು ಅಭ್ಯಾಸ. ನಂಜಪ್ಪರು ಆ ಟೈಮಿನಲ್ಲಿ ಸ್ವಲ್ಪ ಕುಡಿದು ಬಂದಿದ್ದರು. ಬೆಂಗಳೂರಿನಲ್ಲಿ ಕುಸ್ತಿ, ಮಾಲ್ ಜೊತೆಯಲ್ಲಿ ಫಿಕ್ಸ್ ಆದ ವಿಷಯ ಕೇಳಿದರು. ಆತನ

ಪಟ್ಟುಗಳ ವಿಷಯ ಕೇಳಿದರು. ಬಾ ಇಲ್ಲಿ ಒಳಗೆ ಅಂತ ಹೇಳಿ ಷಾಪಿನ ಒಳಗೆ ಬಂದು ಮುಂದಿನ ಬಾಗಿಲು ಹಾಕಿಸಿ ಒಂದೊಂದೇ ಪಟ್ಟುಗಳನ್ನು ಹಂಗೆ ಬಟ್ಟೆಯ ಮೇಲಿದ್ದುಕೊಂಡೇ ಹೇಳಿಕೊಡೋಕೆ ಶುರು ಮಾಡಿದರು. ನಂಜಪ್ಪ ಮಹಾಜಾಣ, ಪರಿಪೈಗರ್‌ಗಿಂತಾ ಜಾಣ. ಪರಿಪೈಗರ್ ಉಸ್ತಾದರು ಎರಡು ಪಟ್ಟುಗಳನ್ನು ಹೇಳಿಕೊಟ್ಟರೆ, ಈತ ಜಾಣ್ಮೆಯಿಂದ ಇನ್ನೂ ಹನ್ನೆರಡು ಪಟ್ಟು ಹೆಚ್ಚಿಗೆ ಕಲ್ತುಕೊಂಡಿರೋನು. ನಂಜಪ್ಪ ಹಿಂಗೆ ನಮ್ಮ ಅಂಗಡಿಯೊಳಗೆ ಕಡೇ ಪಕ್ಷ ಐವತ್ತು ವಿಧವಿಧವಾದ ಪಟ್ಟುಗಳನ್ನು ಆತ ನನಗೆ ಹೇಳಿಕೊಟ್ಟ. ಆದರೆ ಆತ ಅಷ್ಟು ಫಾಸ್ಟಾಗಿ ಹೇಳಿಕೊಡ್ತಾ ಇದ್ದಾಗ ನಮಗೆ ಕಲಿಯುವುದಕ್ಕೆ ಆಗ್ತಾ ಇದದ್ದು ಎರಡು-ಮೂರು ಪಟ್ಟು ಮಾತ್ರ. ಆತ ಹಂಗೆ ಹೇಳಿಕೊಡ್ತಾ ಇರಬೇಕಾದರೆ ನಮ್ಮ ಕೈಲಿ ತಕ್ಷಣ ಕಲಿಯಕ್ಕಾಗದೆ, ಹೇಳಿಕೊಡೋದು ಸಾಕು ಅನ್ನಿಸಿಬಿಡ್ತಾ ಇತ್ತು. ಕೊನೆಗೆ ಆತ ಒಂದು ಪಟ್ಟು ಹೇಳಿ ಕೊಡ್ತಾ, ನನ್ನನ್ನು ಅಷ್ಟು ದೂರಕ್ಕೆ ತಳ್ಳಿದ. ನಾನು ಹೋಗಿ ಬಾಗಿಲಿಗೆ ತಾಗಿ ಬಿದ್ದೆ. ಆಗ ಬಾಗಿಲಿನ ಚಿಲಕ ಮೈಗೆ ಅಟೆದು ಸ್ವಲ್ಪ ನೋವಾಯಿತು. ನಂಜಪ್ಪನ ಮನಸ್ಸು ಮೃದು. ಆತ ಕರುಣಾಮಯಿ. ಏನೋ ನೋವಾಯ್ತುನೋ"? ಎನ್ನುತ್ತ ಷಾಪನ್ನೇ ಮಟ್ಟಿ ಅಂತ ತಿಳ್ಕೊಂಡು ಮಾಡಿಸುತ್ತಿದ್ದ ಲಡನ್ನು ನಿಲ್ಲಿಸಿದ. ಸ್ವಲ್ಪ ಮಟ್ಟಿಗೆ ನನಗೆ ಬೇಕಾದದ್ದು ಅದೆ!

ಏನಾದರೂ ಪರಿಪೈಗರ್ ಅಂದ್ಕೊಂಡಂತೆ, ನಾವೂ ಕೂಡಾ ನಂಜಪ್ಪರ ಶಿಷ್ಯರಾಗಿ ನಮ್ಮ ಗುರು ಯಾಕೆ ಹಿಂಗಾದರು ಅಂತ ಬಹಳಸಾರಿ ಅಂದ್ಕೊಳ್ಳುತ್ತಿದ್ದೆವು. ಈಗಲೂ ಹಂಗೆ ಅನ್ನಿಸುತ್ತೆ.

ಇದೆಲ್ಲಾ ಯಾಕೆ ನನಗೆ ನೆನಪಾಗುತ್ತಿದೆ ಎಂದರೆ ನಾನು ಕುಸ್ತಿ ಪಟುವಾಗಿ ಹೆಂಗೆ ಆಗ್ತಾ ಇದ್ದೆ ಅಂತ ಯೋಚಿಸಿದಾಗ - ಪರಿಪೈಗರ್ ಅಂತ ಗುರುಗಳು, ನಂಜಪ್ಪರಂಥ ಗುರುಗಳು, ಅವರ ಬಗ್ಗೆ ಹೇಳುತ್ತಿದ್ದ ಕಥೆಗಳು, ನೋಡುತ್ತಿದ್ದ ಸಂಗತಿಗಳು ಒಂದಾದಮೇಲೆ ಒಂದು ಬರುತ್ತದೆ. ಜೊತೆಗೆ ಸಾಧನೆ ಮಾಡಿದ ಪೈಲ್ವಾನ್‌ಗೆ ಕುಸ್ತಿಮಾಡುವ ಅವಕಾಶಗಳು ಒದಗಿಬರಬೇಕು. ಆಗ ನಾವು ಗರಡಿಗೆ ಹೋಗುತ್ತಿದ್ದ ಕಾಲದಲ್ಲಿ ಕುಸ್ತಿ ಆಡೋಕ್ಕೆ ನಾನಾ ರೀತಿ ಅವಕಾಶಗಳು ಒದಗಿಬರುತ್ತಿದ್ದವು.

ಹಳ್ಳಿಗಳ ಕಡೆ ಜಾತ್ರೆಗಳು ಆಗುತ್ತಿದ್ದವು. ಆಗ ಸಾಮಾನ್ಯವಾಗಿ ಜಾತ್ರೆ ಕುಸ್ತಿಗಳೂ ಅಂತಾನೇ ಏರ್ಪಾಟಾಗವು, ಸುತ್ತು ಮುತ್ತಲ ಊರುಗಳ, ನಲವತ್ತು-ಐವತ್ತು ಮೈಲಿಗಳ ದೂರದೊಳಗಡೆ ಇರುವ ಊರುಗಳ - ಪೈಲ್ವಾನರುಗಳೆಲ್ಲಾ ಅಂತ ಜಾತ್ರೆ ಕುಸ್ತಿಯಲ್ಲಿ ಪಾಲ್ಗೊಳ್ಳುತ್ತಿದ್ದರು. ಅಂಥ ಸಮಯದಲ್ಲಿ ಅವರಿಗೆ ಪ್ರೋತ್ಸಾಹ ಕೊಡೋ ದೃಷ್ಟಿಯಿಂದ ಸಾರು ಬಳೆ, ಬೆಳ್ಳಿ ಬಳೆ, ಬಂಗಾರದ ಬಳೆ ಅಂತ ಕೊಡೋರು. ಹಂಗೆ ಕೊಡೋದೇ ಆ ಕಾಲದಲ್ಲಿ ದೊಡ್ಡದು. ಹಣ ಕೊಡೋದೇನು ಅಂಥ ಪ್ರಾಮುಖ್ಯತೆ ಇರಲಿಲ್ಲ.

ಸಾಮಾನ್ಯವಾಗಿ ಗೆದ್ದೋರಿಗೆ ಬೆಳ್ಳಿ ಬಳೆ ತೊಡಿಸೋರು. ಅಖಾಡದಲ್ಲಿ ಎಲ್ಲಾ ಕುಸ್ತಿಗಳು ಮುಕ್ತಾಯಕ್ಕೆ ಬಂದಿದೆ ಎನ್ನುವಾಗ, ಈ ಸಾರುಬಳೆ ಅಥವಾ ಬಂಗಾರದ ಬಳೆ ಹಿಡಿದು, ಗೆದ್ದಿರೋ ಪೈಲ್ವಾನ್ ಜೊತೆಯಲ್ಲಿ ಅಲ್ಲಿಗೆ ಬಂದಿರೋ ಯಾವ ಪೈಲ್ವಾನ್ ಬೇಕಾದರೂ ಕುಸ್ತಿ ಆಡಿ ಗೆದ್ದು ಆ ಸಾರು ಬಳೆ ಪಡೆಯಬಹುದಾಗಿತ್ತು. ಹಂಗೆ ಯಾರೂ ಜೊತೆ ಹಾಕ್ಕೊಳ್ಳಲಿಲ್ಲ ಎಂದರೆ, ಮೊದಲು ಇಲ್ಲಿ ತನಕ ಗೆದ್ದ ಪೈಲ್ವಾನನಿಗೆ ಆ ಸಾರುಬಳೆ ದಕ್ಕುತ್ತಿತ್ತು. ಗೆದ್ದಿರೋ ಪೈಲ್ವಾನನ್ನೇ ಅಖಾಡದಲ್ಲಿ ಮೂರುಸುತ್ತು ತಿರುಗಿಸಿ, ಸಾರುಬಳೆ ಆತನಿಗೆ ತೊಡಿಸಿಬಿಟ್ಟರೆ, ಅದಕ್ಕಿಂತಾ ದೊಡ್ಡ ಗೌರವ ಆ ಕಾಲದಲ್ಲಿ ಇರಲಿಲ್ಲ.

ಜಾತ್ರೆಗಳನ್ನು ಬಿಟ್ಟರೆ ಇನ್ನು ಚಿತ್ರದುರ್ಗದಂಥ ದೊಡ್ಡ ಊರುಗಳಲ್ಲಿ ಟಿಕೆಟ್ ಕುಸ್ತಿ ಅಂತ ನಡೆಸೋರು, ಸರ್ಕಾರದಿಂದ ಲೈಸೆನ್ಸ್ ಪಡೆದು ಕೆಲವು ದೊಡ್ಡ ಮನುಷ್ಯರು ಈ ತರದ ಕುಸ್ತಿಗಳನ್ನು ಮೂರು ತಿಂಗಳು - ಆರು ತಿಂಗಳ ತನಕ ವ್ಯವಸ್ಥೆ ಮಾಡೋರು. ಇಂಥಿಂಥ ಪೈಲ್ವಾನರು ಇಂಥಿಂಥ ಪೈಲ್ವಾನರ ಮೇಲೆ ಕುಸ್ತಿ ಮಾಡುತ್ತಾರೆ ಎಂಬುದನ್ನು ಮೊದಲೇ ಫಿಕ್ಸ್ ಮಾಡಿ, ಹದಿನೈದು ದಿವಸ ತಿಂಗಳಿಗೆ ಮುಂಚೆಯೇ ಪ್ರಚಾರ ಮಾಡಿಬಿಡುತ್ತಿದ್ದರು. ಕುಸ್ತಿ ಆರಂಭವಾದಾಗ ಮುಂದಿನ ವಾರ ಯಾರಾರ ಕುಸ್ತಿ ಅನ್ನೋದನ್ನು ಅಖಾಡದಲ್ಲೇ ಅನೌನ್ಸ್ ಮಾಡಿ ಬಿಡುತ್ತಿದ್ದರು.

ಯಾವಾಗ ಹಿಂಗೆ ಕುಸ್ತಿ ಪ್ರಚಾರ ಮೊದಲೇ ಆಗಿ ಬಿಡುತ್ತಿತ್ತೋ ಸುತ್ತು ಮುತ್ತಲ ಪೈಲ್ವಾನರುಗಳು, ದೂರದ ಪೈಲ್ವಾನರುಗಳೆಲ್ಲಾ ಊರಲ್ಲಿ ಬಂದು ಜಮಾಯಿಸಿ ಬಿಡೋರು. ಬಂದ ಪೈಲ್ವಾನರುಗಳೆಲ್ಲಾ ಸಾಧನೆ ಮಾಡೋಕೆ, ಲಡತ್ ಮಾಡೋಕೆ ಅಂತ ತಮಗೆ ಬೇಕು ಬೇಕಾದ ಗರಡಿಗಳನ್ನು ಆರಿಸಿಕೊಂಡು ಹೋಗಿ ಬಿಡೋರು. ಆಗ ಚಿತ್ರದುರ್ಗದಲ್ಲಿ ಎಲ್ಲಾ ಗರಡಿಗಳು ಪೈಲ್ವಾನರುಗಳಿಂದ ಭರ್ತಿಯಾಗಿ ಬಿಡೋದು. ಪೈಲ್ವಾನರು ಗಟ್ಟಿಮುಟ್ಟಾಗಿರೋ ದೇಹ ಇಟ್ಟುಕೊಂಡು ಊರಲ್ಲಿ ಓಡಾಡುತ್ತಿದ್ದರೆ ಜನಕ್ಕೆ ಒಂದು ರೀತಿ ಅಭಿಮಾನ, ಪ್ರಾಯದ ಹುಡುಗರಿಗೆ ನಾವು ಹಂಗೆ ದೇಹ ಇಟ್ಟುಕೊಳ್ಳಬೇಕು ಅನ್ನೋ ಆಸೆ. ಈಗಿನ ಕುಸ್ತಿಗಳು ಕಾಸ್ಟ್ಲಿ (costly), ಜನಕ್ಕೆ ಸ್ಫೂರ್ತಿ ತುಂಬುವಂಥ ಪೈಲ್ವಾನರುಗಳು ಕಮ್ಮಿಯಾಗಿದ್ದಾರೆ. ಈಗ ನಮ್ಮೂರಲ್ಲಿ ಏಳೆಂಟು ಗರಡಿಗಳು ಇದ್ದರೂ, ಒಂದೊಂದು ಗರಡಿಯಲ್ಲಿ ಒಬ್ಬಿಬ್ಬರಾದರೂ ಸರಿಯಾಗಿ ಸಾಧನೆ ಮಾಡ್ತಾ ಇದ್ದಾರೆ ಎಂಬುದು ನನಗೆ ಅನುಮಾನ.

ಇನ್ನು ನಮ್ಮ ಚಿತ್ರದುರ್ಗದಲ್ಲಿ ಹಿಂಗೆ ಲೈಸೆನ್ಸ್ ತಗಂಡು ಕುಸ್ತಿ ಆಡಿಸುತ್ತಿದ್ದವರು ಸಂಗಪ್ಪ ಅನ್ನುವವರು. ಅವರು ಜಯದೇವ ಹಾಸ್ಟೆಲ್ ಹಿಂಭಾಗದಲ್ಲಿ (ಈಗ ಎಸ್. ಜೆ.



ಎಂ ಡೆಂಟಲ್ ಕಾಲೇಜಾಗಿದೆ) ಇಂಥ ಕುಸ್ತಿ ವ್ಯವಸ್ಥೆ ಮಾಡ್ತಾ ಇದ್ದರು. ಆಗ ಚಿತ್ರದುರ್ಗಕ್ಕೆ ಕುಸ್ತಿ ಆಡೋಕೆ ಅಂತ ದಾವಣಗೆರೆ, ಮಾಯಕೊಂಡ, ಮೈಸೂರು, ಬೆಂಗಳೂರು, ಬೆಳಗಾಂ, ಶಿವಮೊಗ್ಗ, ಮೀರಜ್, ಕೊಲ್ಲಾಪುರ, ಹೊಳೆ ಹೊನ್ನೂರು, ಮುಂತಾದ ಕಡೆಗಳಿಂದ ಪೈಲ್ವಾನರು ಇಲ್ಲಿಗೆ ಸೇರಾ ಇದ್ದರು. ಈ ರೀತಿ ಜಯದೇವ ಹಾಸ್ಟೆಲಿನ ಹಿಂಭಾಗದಲ್ಲಿ ನಡೆಯೋ ಕುಸ್ತಿಗಳು ಬಿಟ್ಟರೆ ನಾರ್ಮಲ್ ಸ್ಕೂಲ್ ಕಾಂಪೌಂಡಿನಲ್ಲಿ (ಈಗ ಅಲ್ಲಿ ವಾಸವಿ ಶಾಲೆಗಳು ಇವೆ) ಕುಸ್ತಿಗಳು ನಡೆಯುತ್ತಿದ್ದವು. ಇಲ್ಲಿ ಕಲ್ಲಪ್ಪ, ಅಂಗಡಿ ಬಸಣ್ಣ, ತಿಮ್ಮಣ್ಣ, ಬೊಮ್ಮಣ್ಣ, ದಸ್ತಗೀರ್‌ಸಾಬ್ ಮೊದಲಾದವರು ಸೇರಿಕೊಂಡು ಕುಸ್ತಿ ವ್ಯವಸ್ಥೆ ನಡೆಸುತ್ತಿದ್ದರು. ಇವರೆಲ್ಲಾ ಷೇರ್ ಹಾಕ್ಕೊಂಡು ಲೈಸೆನ್ಸ್ ತಗೊಂಡು ಟಿಕೆಟ್ ಕುಸ್ತಿ, ಮಾಡಿಸೋರು. ಈ ಮೇಲೆ ತಿಳಿಸಿದವರು ದೊಡ್ಡ ಗರಡಿಯನ್ನು ಪೋಷಿಸಿ ಬೆಳೆಸಿದ ದೊಡ್ಡ ಮನುಷ್ಯರೂ ಕೂಡಾ. ಹೇಳೋಕು ಅಂದ್ರೆ ಇಂಥ ಎಲ್ಲಾ ಯಜಮಾನರುಗಳು ಹಿಂಗೆ ಕುಸ್ತಿ, ವ್ಯವಸ್ಥೆ ಮಾಡಿದ್ದರಿಂದ ಕುಸ್ತಿಗೆ ಉತ್ತೇಜನ ಕೊಟ್ಟಿದ್ದರಿಂದ ನಂಜಪ್ಪನಂಥ ಪೈಲ್ವಾನರು ಮೇಲೆ ಬರಕ್ಕೆ ಕಾರಣ ಆಯ್ತು ಅನ್ನಬೇಕು. ಯಾವೋ ಊರಲ್ಲಿ ಕುಸ್ತಿ ಹುಡುಕಿಕೊಂಡು ಹೋಗಿ ಕುಸ್ತಿ ಆಡಬಹುದು. ಆದರೆ ಇದ್ದ ಊರಲ್ಲಿ ಇಂಥ ಕುಸ್ತಿ ಅವಕಾಶ ಕಲ್ಪಿಸಿ ಕೊಟ್ಟಿದ್ದರಿಂದ ನಂಜಪ್ಪರು ಮೇಲಕ್ಕೆ ಬರೋದಿಕ್ಕೆ ಅವಕಾಶವಾಯ್ತು. ಇವೊತ್ತು ಇಂಥ ದೊಡ್ಡಮನಸ್ಸಿನ ಕಂಟ್ರಾಕ್ಟರುಗಳು ಇಲ್ಲವೇ ಇಲ್ಲ ಅನ್ನಬೇಕು. ಹಿಂಗಾಗಿ ನಾವು ಈಗ ದುರ್ಗದಲ್ಲಿ ಕುಸ್ತಿ ಆಡೋದು ಅಪರೂಪವಾಗಿದೆ. ಕುಸ್ತಿ ನೋಡೋದು ಅಪರೂಪವಾಗಿದೆ, ಮೆಚ್ಚಿಮಾತಾಡೋದು ಕಡಿಮೆಯಾಗಿದೆ.

ನಾನು ಪೈಲ್ವಾನಾಗಿ ಹೆಸರು ಮಾಡೋಕೆ ಮುಂಚೆ ಈ ವಾತಾವರಣ ಊರಲ್ಲಿ ಪರಸ್ಥಳದಲ್ಲಿದ್ದರೆ, ಇನ್ನು ಮನೆಯಲ್ಲಿ ಕೂಡಾ ಗರಡಿಗೆ ಉತ್ತೇಜನ ಕೊಡೋ ವಾತಾವರಣ ಇತ್ತು ಅಂತ ಈಗಾಗಲೇ ಸೂಕ್ಷ್ಮವಾಗಿ ಹೇಳಿದ್ದೇನೆ. ನಮ್ಮ ತಂದೆ ಒಳ್ಳೇ ಪೈಲ್ವಾನರು ಮತ್ತು ಎರಡು ಗರಡಿಗಳಿಗೆ ಉಸ್ತಾದ್ ಆಗಿದ್ದರು ಅಂತ ಈಗಾಗಲೇ ಹೇಳಿದ್ದೇನೆ. ಅವರಿಗೆ ಒಳ್ಳೇ 'ಬಾಡಿ ಇತ್ತು, ಲಕ್ಷಣವಂತ.

ಅವರು ಲಕ್ಷಣವಂತರಾಗಿ, ಒಳ್ಳೆ ಮೈಕಟ್ಟು ಪಡೆಯಲು ಸಾಧನೆ ಹೆಂಗೆ ಮುಖ್ಯವೋ ಹಂಗೆ ನಮ್ಮ ಮನೆಯಲ್ಲಿ ನಮ್ಮ ತಾಯಿಯವರು ನಮ್ಮ ತಂದೆಯ ಊಟ ತಿಂಡಿ ನೋಡಿಕೊಳ್ಳೋರು, ಚಪಾತಿ, ಹಾಲು, ಬೆಣ್ಣೆ, ತುಪ್ಪ, ಬಾದಾಮಿ, ಮಟನ್ ಎಲ್ಲಾ ಚೆನ್ನಾಗಿ ಕೊಡ್ತಾ ಇದ್ದರು. ನಾರಣಪ್ಪನವರು ಮಲಗಿಕೊಳ್ಳುವಾಗ ಅಮ್ಮ ಅರ್ಧ ಸೇರು ಕಾಯಿಸಿದ ಹಾಲಿಗೆ ಬೇಕಾದಷ್ಟು ತುಪ್ಪ ಬೆರಸಿ ಅವರ ಪಕ್ಕದಲ್ಲಿ ಇಟ್ಟಿರೋರು. ನಮ್ಮ ತಂದೆ ಸರ್ವೋತ್ತಿನಲ್ಲಿ ಯಾವಾಗ ಎದ್ದೇಳ್ತಾರೋ ಆಗ ಈ ಹಾಲು ತುಪ್ಪ ಕುಡಿದು ಮಲಗೋರು. ಅಷ್ಟು ಹೊತ್ತಿನಲ್ಲಿ ಹಾಲು-ತುಪ್ಪ ಕುಡಿದರೆ ಅದು ಬಲ, ಪುಷ್ಟಿ, ಕಾಂತಿಯನ್ನು

ಮೈಗೆ ಕೊಡುತ್ತದೆ ಎಂದು ಹಂಗೆ ಅವರು ಸೇವಿಸೋರು. ಹಿಂಗೆ ತಯಾರಿ ನಡೆಸಿಕೊಂಡಿದ್ದ ನಾರಣಪ್ಪರು ಬೆಳಗಿನಜಾವ ಐದು ಗಂಟೆಗೆ ಎದ್ದು ಗರಡಿಗೆ ಸಾಧನ ಮಾಡೋಕೆ ಹೋಗೋರು, ನಮಗೂ ಅದೇ ಅಭ್ಯಾಸವಾಯ್ತು.

ನಮ್ಮ ಗರಡಿ, ಉಸ್ತಾದರು, ಪೈಲ್ವಾನರುಗಳು, ಇವನ್ನೆಲ್ಲಾ ನೋಡ್ತಾ ಇದ್ದ ನಾನು ಪೈಲ್ವಾನ್ ಆಗ್ಬೇಕು ಅಂತ ಮನಸಲ್ಲಿ ಅಂದ್ಕೊಂಡಿರಬೇಕು. ಆದರೆ ನಾನು ಎಸ್ಸೆಸ್ಸೆಲ್ಸಿ ಓದೋ ತನಕ ಗರಡಿಗೆ ಹೋಗಿರಲಿಲ್ಲ. ಆಗ ಎಸ್ಸೆಸ್ಸೆಲ್ಸಿ ಪಾಸು ಮಾಡಿದ ತಕ್ಷಣ ಕೆಲಸ ಸಿಕ್ಕು ಬಿಡ್ತಿದ್ದವು. ಆಗ ನನಗೆ ವಾಣಿಜ್ಯ ಇಲಾಖೆಯಲ್ಲಿ ಗುಮಾಸ್ತನಾಗಿ ಕೆಲಸಕ್ಕೆ ಸೇರಿಕೊಂಡಿದ್ದೆ. ೧೯೪೮ ರಲ್ಲಿ ಚಿತ್ರದುರ್ಗಕ್ಕೆ ಇಂಟರ್ ಮೀಡಿಯೇಟ್ ಕಾಲೇಜು ಬಂತು. ನಮ್ಮೂರಿಗೆ ಕಾಲೇಜು ಬಂತಲ್ಲಾ ಅಂದೊಂಡು ಸೇರಿದ್ದ ಕೆಲಸ ಬಿಟ್ಟು, ೧೯೫೦ ರಲ್ಲಿ ಇಂಟರ್ ಮೀಡಿಯೇಟ್ ಕಾಲೇಜಿಗೆ ಸೇರಿದೆ. ಸೀನಿಯರ್ ಇಂಟರ್ ನಲ್ಲಿ ಒಂದೋ ಎರಡೋ ಸಬ್ಜೆಕ್ಟ್ ಹೋದವು. ಆಮೇಲೆ ನಾನು ಮುಂದೆ ಓದಲೂ ಇಲ್ಲ, ಸರ್ಕಾರಿ ಕೆಲಸಕ್ಕೂ ಹೋಗಲಿಲ್ಲ. ನಮ್ಮ ತಾತ, ನಮ್ಮ ತಂದೆಯವರಿಂದ ಕಲಿತ ಟೈಲರಿಂಗ್ ವೃತ್ತಿಯನ್ನು ಮುಂದುವರಿಸಿದೆ.

ನಾನು ಕುಸ್ತಿ ಆಡಿದ ಸಂದರ್ಭ ಒದಗಿ ಬಂದಿದ್ದು ನಾನು ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಓದುತ್ತಿರಬೇಕಾದರೆ ಶುರುವು ಆದದ್ದು. ಆಗ 'ಇಂಟರ್ ವಾರ್ಸಿಟಿ ರೆಸ್ಲಿಂಗ್ ಅಂತ ದಾವಣಗೆರೆಯಲ್ಲಿ ನಡೆಯುತ್ತಿದ್ದವು. ಇಂಟರ್ ಮೀಡಿಯೇಟ್ ಕಾಲೇಜಿನಲ್ಲಿ ಆಗ ಹಸನ್ ಅಂತ ಒಬ್ಬರು ಡ್ರಿಲ್ ಮೇಷ್ಟ್ರು ಇದ್ದರು. ಅವರು ಆ ಕುಸ್ತಿ ಪಂದ್ಯಗಳಿಗೆ ನನ್ನನ್ನು ಆರಿಸಿ ಕಳುಹಿಸಿದರು. ಆ ಸಮಯದಲ್ಲಿ ನಾನು ಗರಡಿಗೆ ಹೋಗುತ್ತಿದ್ದರೂ ಅದು ಸಾಧನೆ ಮಾಡಲು ಮಾತ್ರ, ಕುಸ್ತಿ ಆಡುವ ಉದ್ದೇಶದಿಂದಲ್ಲ. ಆದ್ದರಿಂದ ನಾನು ವಾರ್ಸಿಟಿ ರೆಸ್ಲಿಂಗ್‌ನಲ್ಲಿ ಪಾಲುಗೊಳ್ಳಲು ಸ್ವಲ್ಪ ಹಿಂಜರಿದೆ. ಅದಕ್ಕೆ ಹಸನ್ ಮೇಷ್ಟು - ನೀನು ಗರಡಿಗೆ ಹೋಗಿ ಸಾಧನೆ ಮಾಡ್ತಿದ್ದೀಯ. ನಿಮ್ಮ ತಂದೆಯವರು ಉಸ್ತಾದ್, ನೀನು ಈ ಕಾಲೇಜು ಕುಸ್ತಿಗಳಲ್ಲಿ ಪಾಲುಗೊಳ್ಳಲೇ ಬೇಕು ಎಂದು ಒತ್ತಾಯ ಮಾಡಿದರು.

ನಾನು ಅವರ ಮಾತಿನ ಮೇರೆಗೆ ಕಾಲೇಜಿನ ಕುಸ್ತಿ ಪಂದ್ಯಗಳಿಗಾಗಿ ದಾವಣಗೆರೆಗೆ ಹೋಗಿದ್ದೆ. ಅಲ್ಲಿ ವೆಯಿಟ್ ಮೇಲೆ ಲೆಕ್ಕಹಾಕಿ ಕುಸ್ತಿ ಆಡಿಸುತ್ತಾರೆ. ನಾನು ದಾವಣಗೆರೆಯಲ್ಲಿ ಆಡಿದ ಕುಸ್ತಿಗಳಲ್ಲಿ ಇಬ್ಬರು ಮೂವರು ಪೈಲ್ವಾನರುಗಳ ಮೇಲೆ ಗೆದ್ದೆ. ಆದ್ರೆ ಈಗ ನಾನು ಯಾರ ಮೇಲೆ ಗೆದ್ದೆ ಎಂದು ಜ್ಞಾಪಿಸಿಕೊಂಡರೆ ಹೆಸರು ಜ್ಞಾಪಕಕ್ಕೆ ಬರುವುದಿಲ್ಲ.

ಆಮೇಲೆ ನಾನು ಗರಡಿಯಲ್ಲಿ ಸಾಧನೆ ಮಾಡೋದನ್ನ ಮುಂದುವರೆಸಿದೆ. ಆಗಿನ ಕಾಲದಲ್ಲಿ ಉಸ್ತಾದಗಳು ತಮ್ಮ ಶಿಷ್ಯರಾದ ಪೈಲ್ವಾನರುಗಳನ್ನು ಅಖಾಡದಲ್ಲಿ ಕುಸ್ತಿಗೆ ಬಿಡಬೇಕಾದರೆ ಕನಿಷ್ಠ ಎರಡು ವರ್ಷಗಳ ತನಕ ಸಾಧನೆ ಮಾಡಿಸೋರು. ಸಾಧನೆ ಮಾಡ್ಬೇಕಾದರೆ ಶಿಷ್ಯನ ಮೈಕಟ್ಟು ಬಿಗಿಯಾಗಬೇಕು; ಕೆಲಸ ಕಲಿತ್ಕೋಬೇಕು; ಪಟ್ಟುಗಳನ್ನು ಕಲಿತ್ಕೋಂಡು ಉಸಿರಾಡೋದನ್ನ ಸುಧಾರಿಸಿಕೊಳ್ಳಬೇಕು. ಇಷ್ಟೆಲ್ಲಾ ಆದ್ಮೇಲೆ ಕುಸ್ತಿಗೆ ಬಿಡೋರು.

ಆದರೆ ನಾನು ಸಾಧನೆ ಮಾಡಿದ ಆರು ತಿಂಗಳಿಗೆ ನನ್ನ ಗುರುಗಳಾದ ನಂಜಪ್ಪರು ಕುಸ್ತಿ ಆಡೋಕೆ ಅವಕಾಶ ಕೊಟ್ಟರು. ಸಾಮಾನ್ಯವಾಗಿ ನಾನು ಆಗ ಕುಸ್ತಿ ಆಡಬೇಕಾದರೆ ನಾರಾಣಪ್ಪರ ಮಗ ನಂಜಪ್ಪರ ಶಿಷ್ಯ ಅಂತಾನೇ ಹೇಳಿಕೊಳ್ತಾ ಇದ್ದೆ. ನಮ್ಮ ತಂದೆಯವರು ಕುಸ್ತಿ ಬಗ್ಗೆ ಕೆಲವು ವಿಷಯ ಕಲಿಸಿದ್ದರೂ, ನನಗೆ ನನ್ನ ಗರಡಿಯ ಗುರುಗಳು ಅಂದರೆ ನಂಜಪ್ಪರು ಮಾತ್ರ. ನನ್ನ ಜೊತೆಗೆ ಶಂಕರ್, ಬಸವರಾಜ್, ನಾಗರಾಜ ಅಂತ ಬೇರೆ ಬೇರೆ ಪೈಲ್ವಾನರುಗಳು ಇದ್ದರು.

ನಾನು ಆರೇ ತಿಂಗಳು ಸಾಧನೆ ಮಾಡಿದ್ದರೂ ನಂಜಪ್ಪರು ಕೊಟ್ಟ ಪ್ರೋತ್ಸಾಹದಿಂದ ಕುಸ್ತಿ ಮಾಡೋ ಅವಕಾಶ ಸಿಕ್ತು ಅಂತ ಹೇಳಿದೆನಲ್ಲ. ನಾನು ಹಂಗೆ ಮಾಡಿದ ಮೊದಲನೇ ಕುಸ್ತಿ ದಾವಣಗೆರೆಯ ಪರಶುರಾಮ್ ಜೊತೆ. ದಾವಣಗೆರೆಯಲ್ಲಿ ಸಣ್ಣ ನೀಲಪ್ಪ ಅಂತ ಬಹಳ ಪ್ರಖ್ಯಾತ ಉಸ್ತಾದರು. ಇವರು ನಮ್ಮ ತಂದೆ ಕಾಲದಿಂದಲೂ ಪ್ರಖ್ಯಾತಿಯಾಗಿದ್ದವರು. ಸಣ್ಣನೀಲಪ್ಪ ತನ್ನ ಶಿಷ್ಯ ಸೋತ ಸಂದರ್ಭದಲ್ಲಿ ನಮ್ಮ ತಂದೆ ಮೇಲೆ ಸವಾಲ್ ಹಾಕಿದ್ದನ್ನು ಈಗಾಗಲೇ ತಿಳಿಸಿದ್ದೀನಿ. ಆ ಸಣ್ಣನೀಲಪ್ಪನೇ ಪೈಲ್ವಾನ್ ಪರಶುರಾಮ್‌ಗೆ ಗುರು, ಈ ಕುಸ್ತಿ ಜೊತೆ ಮಾಡಿದವರು ನನ್ನ ಗುರುಗಳಾದ ನಂಜಪ್ಪರು. ಕುಸ್ತಿ ಫಿಕ್ಸ್ ಆದಮೇಲೆ ಹದಿನೈದು ದಿನ ವಾಯಿದಾ ಕೊಡ್ತಾರೆ.

ಆ ಹದಿನೈದು ದಿವಸದ ವಾಯಿದೆಯೊಳಗೆ ಪೈಲ್ವಾನನಿಗೆ ಗರಡಿಯ ಉಸ್ತಾದ್‌ಗಳು ಲಡತ್ ಕೊಡ್ತಾರೆ. ಲಡತ್ ಅಂದ್ರೇನು ಗರಡಿಯ ಮಟ್ಟಿಯೊಳಗೆ ಸಮವಯಸ್ಕರಾದ ಪೈಲ್ವಾನರ ಜೊತೆಯಲ್ಲಿ ಕುಸ್ತಿ ಆಡಿಸಿ ಟ್ರೈನಿಂಗ್ ಕೊಡ್ತಾರೆ. ದೊಡ್ಡ ದೊಡ್ಡ ಪೈಲ್ವಾನರ ಜೊತೆಯಲ್ಲಿಯೂ ಕುಸ್ತಿ ಆಡಿಸಿ ಟ್ರೈನಿಂಗ್ ಕೊಡ್ತಾರೆ. ನನಗೂ ಇಂಥ ಟ್ರೈನಿಂಗ್ ಕೊಟ್ಟರು ನಮ್ಮ ಗರಡಿಯಲ್ಲಿ, ನಮ್ಮ ದೊಡ್ಡಗರಡಿಯಲ್ಲಿ ಆಗ ದೊಡ್ಡ ಪೈಲ್ವಾನರಾದ ನಂಜಪ್ಪರು, ರಾಮಪ್ಪನಂಥವರ ಜೊತೆಯಲ್ಲಿ ಲಡತ್ ಮಾಡಿಸಿದರು. ನನಗೆ ಮಟ್ಟಿಯಲ್ಲಿ ಒಂದು - ಒಂದುವರೆಗಂಟೆ ಕುಸ್ತಿ ಮಾಡಿಸೋರು. ಹಂಗೆ ಬಾಳಾ ಹೊತ್ತು ಕುಸ್ತಿ ಮಾಡಿದರೆ ಮಟ್ಟಿಯಲ್ಲಿ, ಪೈಲ್ವಾನನಿಗೆ ದಮ್ಮು ಕಟ್ಬೋ ತೊಂದರೆ ಇರಲ್ಲ.

ದಮ್ಮು ಕಟ್ಟದೆ ಚೆನ್ನಾಗಿ ಉಸಿರಾಡ್ತಾ ಕುಸ್ತಿ ಮಾಡೋದು ಕಲಿತರೆ, ಪೈಲ್ವಾನ್ ಜೀವನದಲ್ಲಿ ಅರ್ಧ ಕುಸ್ತಿ ವಿದ್ಯೆ ಕಲಿತಂತೆ. ಅದಕ್ಕಾಗಿ ದಮ್ಮು ಕಳೆಯುವುದನ್ನು ಪೈಲ್ವಾನ್ ಮೊದಲು ಕಲಿಯಬೇಕು.

ಇದಕ್ಕೆ ಸಾಧನೆ ಕೂಡಾ ಬಹಳ ಮುಖ್ಯ. ನಾನು ಬೆಳಿಗ್ಗೆ ಐದು ಗಂಟೆಗೆ ಗರಡಿಗೆ ಹೋದರೆ ಈ ದಮ್ಮು ಕಳೆಯುವುದನ್ನು ಅಭ್ಯಾಸ ಮಾಡುವುದಕ್ಕಾಗಿ ಐನೂರು ದಂಡ, ಐನೂರು ಸಪಾಟು - ಅಂತ ಸಾವಿರ ಸಾರಿ ಮಾಡ್ತಾ ಇದ್ದೆ. ಸಪಾಟು ಅಂದ್ರೆ ಕುಂತು ವಿದ್ದಾಳದು. ಐನೂರು ದಂಡ ಹೊಡೀಬೇಕಾದರೆ ಪೈಲ್ವಾನ್ ಮಾಡ್ತಿರೋ ನೆಲದಮೇಲೆ ಒಂದು ಚೆಂಬು ನೀರು ಚೆಲ್ಲಿದ್ದಾರೋ ಎನ್ನಿಸಬೇಕು, ಹಂಗೆ ಮೈಯಿಂದ ತೊಟ್ಟು ತೊಟ್ಟು ನೀರು ಬಿದ್ದು ಸಾಧನೆ ಮಾಡ್ತಾ ಇದ್ದ ನೆಲವೆಲ್ಲ ಒದ್ದೆಯಾಗೋದು. ಹಿಂಗೆ ನನ್ನ ಸಾಧನೆ ಮಾಡಿಸೋರು. ಅಷ್ಟು ಕಷ್ಟ ಪಡಿಸೋರು.

ಸಾಧನೆ ಮಾಡಿದ ಮೇಲೆ ಚಕ್ರದ ತರ ಇರ್ತಾವೆ. ಅವನ್ನು ತೂಕ ಹೊಂದಿಸಿಕೊಂಡು ಕತ್ತಿಗೆ ನೇತು ಹಾಕ್ಕೊಂಡು ಗರಡಿ ಸುತ್ತು ಹಾಕ್ಬೇಕು. ಎರಡು ಮೂರು ಅಡಿ ಉದ್ದ ಇರುವ ತೂಕದಿಂದ ಕೂಡಿದ ಮರದ ದಿಂಡುಗಳು ಇರ್ತಾವೆ. ಇವನ್ನು ಎತ್ತೋದು. ಸ್ವಲ್ಪ ಜಾಗದಲ್ಲೇ ದೇಹ ಹೆಂಗೆ ಬಗ್ಗಿಸೋದು, ಅನ್ನುವುದನ್ನು ಅಭ್ಯಾಸ ಮಾಡೋದಿಕ್ಕಾಗಿ ಮಲ್ಲಕಂಭ ಬಳಸೋದು. ಇವೆಲ್ಲಾ ಬೆಳಗಿನ ಹೊತ್ತು ಮಾಡ್ತಾ ಇದ್ದೆವು. ಸಂಜೆ ಏನಿದ್ದರೂ ಮಟ್ಟಿಯಲ್ಲಿ ಲಡತ್ ಮಾಡೋಕಾಗುತ್ತಿತ್ತು. ಲಡತ್ ಅಂದ್ರೆ ನಾನು ಆಗಲೇ ತಿಳಿಸಿದಂತೆ ಸಮವಯಸ್ಕ ಪೈಲ್ವಾನರಿಂದ ಹಿಡಿದು ಹಿರಿಯ ಪೈಲ್ವಾನರ ತನಕ ಎಲ್ಲರ ಜೊತೆಯಲ್ಲಿ ಕುಸ್ತಿ ಅಭ್ಯಾಸ ಮಾಡೋಕಾಗುತ್ತಿತ್ತು. ಹಂಗೆ ಅಷ್ಟು ಹೊತ್ತು ಮಟ್ಟಿಯಲ್ಲಿ ಕುಸ್ತಿ ಆಡುತ್ತಾ ಇರುವಾಗ ನೀವು ಯಾರಾದರೂ ಬಂದು ನನ್ನನ್ನು ನೋಡಿದರೆ ಇವನು ವಸಂತರಾವ್ ಅಲ್ಲ ಅಂದಿಡಬೇಕು! ಹಂಗೆ ಇರ್ತ ಇದ್ದೆ ಆ ಸಮಯದಲ್ಲಿ. ಯಾಕಂದ್ರೆ ಲಂಗೋಟಿ ಕಟ್ಕೊಂಡು ಬೆವರು ಸುರೀತಿರೋ ಮೈನ ಮಟ್ಟಿಲೆಲ್ಲಾ ಉರಳಾಡಿಸುತ್ತಿರುವಾಗ ಆ ಕೆಂಪು ಮಣ್ಣೆಲ್ಲಾ ಮೈಗೆ ಮೆತ್ತಿ ಕೊಂಡಿರ್ತ ಇತ್ತು. ಆಮೇಲೆ ಉಷ್ಣವಾಗಿದ್ದ ಆ ಮೈ ತಣ್ಣಗೆ ಆಗ ಬೇಕಾದರೆ ಅದೇ ಮಟ್ಟಿಯಲ್ಲಿ ಒಂದರ್ಧಗಂಟೆ ಮಲಗಿ ಬಿಡ್ತೀವಿ. ಆಗ ಮೈಯ್ಯನ 'ಹೀಟ್ ಎಲ್ಲಾ ಆ ಮಣ್ಣು ಹೀರಿಕೊಂಡು ಬೆವರಿನ ಜೊತೆಗೆ ಅಂಟಿಕೊಂಡಿದ್ದ ಮಣ್ಣೆಲ್ಲಾ ಉದುರಿಬಿಡುತ್ತೆ. ಆಗ ಒಂದರ್ಧಗಂಟೆ ಬಿಟ್ಟು ತಣ್ಣೀರಿನಲ್ಲಿ ಸ್ನಾನ ಮಾಡಬೇಕು.

ಬೆಳಿಗ್ಗೆ ಸಾಧನೆ ಮಾಡಿಬಂದ ಮೇಲೆ ಹಾಲು-ಬಾದಾಮಿ ಸೇವಿಸ್ತಾ ಇದ್ದೆವು. ಪರಿಪೈಗರ್ ಸಾಹೇಬರು ನಮ್ಮ ಗರಡಿಗೆ ಬಂದಮೇಲೆ ಹಾಲು-ಬಾದಾಮಿ ಜೊತೆಗೆ

ಲಸ್ಸಿ ಕುಡಿಯೋದಕ್ಕೆ ನಮ್ಮ ಪೈಲ್ವಾನರು ಶುರು ಮಾಡಿದರು. ಲಸ್ಸಿ ಅಂದರೆ ಮೊಸರನ್ನು ಕಡೆದು ಗಟ್ಟಿ ಮಜ್ಜಿಗೆ ಮಾಡಿ ಸಕ್ಕರೆ ಬೆರೆಸಿದ ಪಾನೀಯ. ಅದನ್ನು ಕುಡಿದರೆ ಸಾಧನೆ, ಲಡತ್ ಮಾಡಿದ ಪೈಲ್ವಾನರ ದೇಹದಲ್ಲಿ ಉಂಟಾದ ಉಷ್ಣೆ ಎಲ್ಲಾ ಇಳಿದು ದೇಹ ಸಮಸ್ಥಿತಿಯಲ್ಲಿರುತ್ತೆ. ಪರಿಪೈಗರ್ ಬಂದ ಮೇಲೆ ಪೈಲ್ವಾನರ ಆಹಾರ ಪದ್ಧತಿಯಲ್ಲಿ ಲಸ್ಸಿ ಕೂಡಾ ಸೇರಿ ಕೊಳ್ತು.

ಸಾಮಾನ್ಯವಾಗಿ ಮನೆಯಲ್ಲಿ ನನ್ನ ತಯಾರಿಗಾಗಿ ಚಪಾತಿ, ಹಾಲು, ತುಪ್ಪ, ಮಟನ್-ಎಲ್ಲಾ ಚೆನ್ನಾಗಿ ಕೊಡೋರು. ನಮ್ಮ ತಂದೆಯವರಿಗೆ ಕೊಡುತ್ತಿದ್ದಂತೆಯೇ ನನಗೂ ಕೂಡಾ ನಮ್ಮ ತಾಯಿಯವರು ಮಲಗುವ ಹಾಸಿಗೆಯ ಪಕ್ಕದಲ್ಲಿ ಕಾಯಿಸಿದ ಹಾಲಿಗೆ ತುಪ್ಪ ಬೆರಸಿ ಇಡುತ್ತಿದ್ದರು. ಅದನ್ನು ಒಂದು ಹೊತ್ತಿನಲ್ಲಿ ಎದ್ದಾಗ ಕುಡಿಯುತ್ತಿದ್ದೆ. ಅದು ದೇಹಕ್ಕೆ ಪುಷ್ಟಿ ಕೊಡುತ್ತದೆ. ಹದಿನೈದು, ಇಪ್ಪತ್ತು ದಿವಸಗಳಲ್ಲಿ ಶಕ್ತಿವಂತನಾಗಬೇಕಾದರೆ ಇಂಥ ಚಪಾತಿ, ಹಾಲು, ತುಪ್ಪ, ಮಟನ್ - ಎಲ್ಲಾನೂ ಹೊತ್ತು ಹೊತ್ತಿಗೆ ಬೇಕಾಗುತ್ತದೆ.

ಹಿಂಗೆ ಗರಡಿಯಲ್ಲಿ ಒಂದು ರೀತಿ ತಯಾರಿ, ಮನೆಯಲ್ಲಿ ಒಂದು ರೀತಿ ತಯಾರಿ ಒಟ್ಟೊಟ್ಟಿಗೆ ನಡೀತಿತ್ತು. ನಾನು ನನ್ನ ಗುರುಗಳಾದ ನಂಜಪ್ಪರ ಜೊತೆಯಲ್ಲಿ ಲಡತ್ ಮಾಡ್ಬೇಕಾದರೆ ನಿಧಾನವಾಗಿ ಮಾಡ್ತಾ ಇದ್ದೆ. ಈಗ ನಾನು ಪರಶುರಾಂ ಜೊತೆಯಲ್ಲಿ ಮಾಡ್ಬೇಕಾಗಿದ್ದ ಕುಸ್ತಿ ನಾರ್ಮಲ್ ಸ್ಕೂಲಿನ ಕಾಂಪೌಂಡಿನಲ್ಲಿ - ಈಗಿನ ವಾಸವಿ ಸ್ಕೂಲು- ವ್ಯವಸ್ಥೆಯಾಗಿತ್ತು. ಆಗ ನಮ್ಮ ಗರಡಿಯ ಪೈಲ್ವಾನರುಗಳೆಲ್ಲಾ ನಂದು ಮೊದಲನೇ ಕುಸ್ತಿ- ಹೆಂಗೆ ಮಾಡ್ತಾನೆ ಅಂತ ಯೋಚಿಸುತ್ತಿದ್ದರು. ಹಿರಿಯ ಪೈಲ್ವಾನರುಗಳು ಕೂಡಾ ಮಟ್ಟಿಯಲ್ಲಿ ನಿಧಾನವಾಗಿ ಕುಸ್ತಿ ಚೆನ್ನಾಗಿಯೇ ಮಾಡ್ತಾನೆ. ಆದರೆ ಅಖಾಡದಲ್ಲಿ ಹೆಂಗೋ ... ಏನೋ ಎನ್ನುವ ಭಾವನೆ ವ್ಯಕ್ತಪಡಿಸುತ್ತಿದ್ದರು. ಇದೆಲ್ಲಾ ನನ್ನ ಕಿವಿಗೆ ಬೀಳ್ತಾ ಇತ್ತು. ನನ್ನ ಆಗಿನ ಸ್ನೇಹಿತರೂ ಕೂಡಾ ಇವನು ಕುಸ್ತಿ ಹೆಂಗೆ ಮಾಡ್ತಾನೆ ಅಂತ ಕುತೂಹಲ ಇಟ್ಕಂಡಿದ್ದರು.

ಕುಸ್ತಿ ದಿವಸ ರೆಫರಿ ನನಗೂ - ಪರಶುರಾಂಗೂ ಕುಸ್ತಿ ಆಡಲಿಕ್ಕೆ ಬಿಟ್ಟರು. ಬಿಟ್ಟ ತಕ್ಷಣ ನನಗೆ ಏನು ಮಾಡ್ಬೇಕು ಅಂತ ಗೊತ್ತಾಗಲಿಲ್ಲ. ಗರಡಿಯಲ್ಲಿ, ಮಟ್ಟಿಯಲ್ಲಿ ಸಮಾಧಾನವಾಗಿ ಕುಸ್ತಿ ಮಾಡ್ತಾನೆ; ಚೆನ್ನಾಗಿ ಕುಸ್ತಿ ಮಾಡ್ತಾನೆ ಅಂತ ಎಲ್ಲರೂ ಭಾವಿಸಿದ್ದರು. ಅದಕ್ಕೆ ತದ್ವಿರುದ್ದವಾಗಿ ಅಖಾಡದಲ್ಲಿ ಹೋದ ತಕ್ಷಣ ಆಗೋಕೆ ಶುರುವಾಯ್ತು! ನನ್ನ ಗುರುಗಳು, ಹಿರಿಯ ಪೈಲ್ವಾನರುಗಳು ನನಗೆ ಏನೇನು ಕಲಿಸಿದ್ದರೋ ಅದೆಲ್ಲಾ ಮರೆತು ಹೋಯ್ತು. ನಿಧಾನವಾಗಿ ಎದುರಾಳಿಯ ರೀತಿ ನೀತಿಗಳನ್ನು ಅರ್ಥಮಾಡಿಕೊಂಡು ಕುಸ್ತಿ ಮಾಡಬೇಕು ಎನ್ನುವ ಸಮಾಧಾನದ ಮನಸ್ಸೇ ನನ್ನಿಂದ ಓಡಿಹೋಗಿತ್ತು. ಎದುರಾಳಿ

ಪೈಲ್ವಾನನನ್ನು ಹೆಂಗಾದರೂ ಬೀಳಿಸಬೇಕು ಅನ್ನೋ ಮನಸ್ಸೇ ನನ್ನನ್ನು ತುಂಬಿಕೊಂಡಿತ್ತು. ಗೆಲ್ಲೋದಷ್ಟೇ ಮನಸ್ಸು ಇದ್ದುದರಿಂದ ಒಳ್ಳೆ ದೆವ್ವ ಹೊಕ್ಕವನಂತೆ ನಾನು ಎದುರಾಳಿ ಪೈಲ್ವಾನ್ ಪರಶುರಾಮ್ ಮೇಲೆ ಆತುರದಿಂದ ಮುನ್ನುಗ್ಗಿ ಹಿಡಿಯೋದು, ಎಳೆದಾಡೋದು, ಸುಮ್ ಸುಮ್ಮನೆ ನುಗ್ಗಿ ನುಗ್ಗಿ ಮೇಲೆ ಬೀಳೋಕೆ ಹೋಗೋದು- ಹಿಂಗೆಲ್ಲಾ ಮಾಡೋಕೆ ಶುರುವು ಮಾಡಿದೆ. ಹಿಂಗೆ ಆತುರ ಮಾಡ್ತಿದ್ದೀನಿ ಅಂತ ನನ್ನ ಮನಸ್ಸಿನಲ್ಲಿ ಗೊತ್ತಾಗುತ್ತಿದ್ದರೂ, ಹಿಂಗೆ ಉಂಟಾಗುತ್ತಿದ್ದ ಆತುರವನ್ನು ಅಖಾಡದಲ್ಲಿ ಏನ್ ಮಾಡಿದರೂ ಕಡಿಮೆ ಮಾಡ್ಕೊಳ್ಳೋಕೆ ನನ್ನ ಕೈಲಿ ಸಾಧ್ಯವಾಗಲಿಲ್ಲ. ಅದಷ್ಟೇ ಅಲ್ಲ, ನಾನು ಯಾವ ಪಟ್ಟು ಹಾಕ್ಬೇಕು, ಹೆಂಗೆ ಸೋಲಿಸ ಬೇಕು ಎನ್ನೋದು ಕೂಡಾ ನನಗೆ ಪೂರ್ತಿ ಮರೆತು ಹೋಗಿತ್ತು! ಒಟ್ಟಿಗೆ ಇವನ್ನ ಹೆಂಗಾದರೂ ಅರ್ಜೆಂಟ್ ಚಿತ್ತು. ಮಾಡೋಕು ಅಂದ್ಕೊಂಡು ಕುಸ್ತಿ ಮಾಡಿದೆ. ನಿಜವಾಗಲೂ ಹೇಳ್ಬೇಕು ಅಂದ್ರೆ ನಾನು ಕಲಿತ ಯಾವ ಪಟ್ಟು ಆವೊತ್ತು ಇಂತೂ ಹತ್ತು ನಿಮಿಷದಲ್ಲಿ ಅಖಾಡದಲ್ಲಿ ಹಾಕಿದೆ ಅಂತ ಗೊತ್ತಿಲ್ಲ. ಆದರೆ ಅಂತೂ - ಪರಶುರಾಮ್ ಪೈಲ್ವಾನನ್ನು ಚಿತ್ತು ಮಾಡಿ ಜಯಗಳಿಸಿದ್ದೆ.

ಮೊದಲನೇ ಕುಸ್ತಿ ಹೊಡೆದ ಅಂತ ಜನ ಜಯಕಾರ ಹಾಕಿದರು. ಚಪ್ಪಾಳೆ ತಟ್ಟಿ ಸಂತೋಷ ವ್ಯಕ್ತಪಡಿಸಿದರು. ನಾನು ಅಖಾಡದಲ್ಲಿ ನಿಂತಿದ್ದೆನೋ, ನಮ್ಮೂರ ಝಂಡಾ ಬತೇರಿ ಮೇಲೆ ಕುಂತಿದ್ದೆನೋ ಅನ್ನೋವಷ್ಟು ಸಂತೋಷ ನನಗೂ ಆಗಿತ್ತು. ಇದು ಎಲ್ಲಾ ಪೈಲ್ವಾನರು ನೆನೆಸಿಕೊಳ್ಳೋವಂಥ ದಿನ ನೆನೆಸಿಕೊಳ್ಳುವಂಥ ಸಂದರ್ಭ.

ಕುಸ್ತಿ ನೋಡಿದ ನನ್ನ ಸ್ನೇಹಿತರು, ಹಿರಿಯರು, ಎಲ್ಲರು ಮೆಚ್ಚಿಗೆ ಸೂಚಿಸಿದರು. ನನ್ನ ಗುರುಗಳಾದ ನಂಜಪ್ಪರು ಮೆಚ್ಚಿಗೆ ಸೂಚಿಸಿದರು. ಮೆಚ್ಚಿಗೆ ಸೂಚಿಸುತ್ತಲೇ 'ನಿಧಾನವಾಗಿ ಆಡಪ್ಪ.. ಹಂಗೆ ಅವಸರ ಮಾಡ್ಕೊಬಾರದು ಎಂದು ಬುದ್ಧಿ ಹೇಳಿದರು. ನನ್ನ ಕುಸ್ತಿ ನೋಡಿದ ಹಿರಿಯ ಪೈಲ್ವಾನರುಗಳೂ ಕೂಡಾ ನಿಧಾನವಾಗಿ ಆಡೋಕಪ್ಪ ಅಂತ ಒಳ್ಳೆ ಮಾತಾಡಿದರು. ಮೊದಲನೆ ಕುಸ್ತಿ ಹೆಂಗಾಡ್ತಾನೆ ಅಂತ ಎಲ್ಲಾ ಏನೇನೋ ಯೋಚಿಸಿದ್ದರೂ, ನಾನು ಹೆಂಗೆ ಕುಸ್ತಿ ಮಾಡಿದ್ದರೂನೂ ಗೆದ್ದು ಸಂತೋಷ ಪಡಿಸಿದ್ದೆ ಎಂಬುದಂತೂ ನಿಜ. ನಮ್ಮ ತಂದೆ ನಾರಣಪ್ಪರಿಗೆ ನಮ್ಮ ತಾಯಿಗೆ, ನನ್ನ ಸಹೋದರ-ಸಹೋದರಿಯರಿಗೆಲ್ಲಾ ಸಂತೋಷವಾಗಿತ್ತು. ಇವನು ನಮ್ಮ ಗರಡಿ ಹುಡುಗ ಅಂತ ಸುತ್ತ ಮುತ್ತ ಇದ್ದವರೆಲ್ಲಾ ನಮ್ಮಂಥ ಕಿರಿಯ ಪೈಲ್ವಾನರ ಬಗ್ಗೆ ಅಂದುಕೊಳ್ಳುತ್ತಿದ್ದುದರಿಂದ, ಈಗ ನಾನು ಗೆದ್ದುದ್ದು ಅವರಿಗೂ ಸಂತೋಷವಾಗಿತ್ತು.

ಈಗ ನಾನು ಮೊದಲನೆಯ ಕುಸ್ತಿಯನ್ನು ಅಖಾಡದಲ್ಲಿ ಆಡಿದ್ದರಿಂದ, ಪೈಲ್ವಾನರು, ಕುಸ್ತಿ ಪ್ರೇಮಿಗಳ ಮುಂದೆ ಆಡಿದ್ದರಿಂದ ಒಂದು ಹೆದರಿಕೆ, ಮೈಚಳಿಯೆಲ್ಲಾ ಬಿಟ್ಟಂಗಾಯ್ತು, ನನಗೆ ನಿಧಾನವಾಗಿ ಅವಸರ ಮಾಡದೆ ಆಡ್ಬೇಕು ಅಂತ ಆಮೇಲೆ ನಿರ್ಧಾರ ತಗೊಂಡೆ. ಅನಂತರ ನಾನು ಹಿರಿಯೂರು, ಚಳ್ಳಕೆರೆ, ಶಿರಾ, ದಾವಣಗೆರೆ,

ಹೊಳಲ್ಕೆರೆ, ಮಲ್ಲಾಡಿಹಳ್ಳಿ, ಬೆಂಗಳೂರು ಮುಂತಾದ ನಾನಾ ಊರುಗಳಲ್ಲಿ ಕುಸ್ತಿ ಆಡಿದೆ.

ನಾನು ಒಂದ್ಸಾರಿ ಹರಿಹರಕ್ಕೆ ಒಂದು ಕುಸ್ತಿ ನೋಡೋಕ್ಕೆ ಅಂತ ಹೋಗಿದ್ದೆ. ಹರಿಹರದಲ್ಲಿ ತುಂಗಭದ್ರೆಯ ನದಿಯ ಪ್ರವಾಹ ಏರುವ ಒಂದು ದಿನ 'ಭಾಗೀರಥಿ ಅಂತ ಹಬ್ಬ ಮಾಡ್ತಾರೆ. ಆ ಭಾಗೀರಥಿ ಹಬ್ಬದ ಪ್ರಯುಕ್ತ ಕುಸ್ತಿ ಏರ್ಪಾಟು ಮಾಡಿರುತ್ತಾರೆ. ಹರಿಹರ ನಮ್ಮ ಅಜ್ಜನ ಊರು. ಭಾಗೀರಥಿ ಹಬ್ಬ, ಕುಸ್ತಿ ಏರ್ಪಾಡು. ಎಲ್ಲವೂ ಮನಸ್ಸಿಗೆ ಬಂದು ಹರಿಹರಕ್ಕೆ ಹೋಗಿದ್ದೆ.

ಅಲ್ಲಿ ದಂಡಪ್ಪ ಅನ್ನೋ ಪೈಲ್ವಾನ್ ಇದ್ದ. ಅವನು ದಾವಣಗೆರೆ ತಾಲ್ಲೂಕು ಮಾಕನೂರಿನವನು. ಆ ಪೈಲ್ವಾನ್ ದಂಡಪ್ಪನ ಮೇಲೆ ದಾವಣಗೆರೆಯ ಹೆಸರಾಂತ ಪೈಲ್ವಾನ್ ಚಾರ್ಲಿಯ ಕುಸ್ತಿ ಇತ್ತು. ನಾನು ಫಸ್ಟ್ ಟೈಮ್ ಚಾರ್ಲಿ ಪೈಲ್ವಾನ್ ಅನ್ನು ನೋಡಿದ್ದು ಅಲ್ಲೆ ಆಗಲೆ ಆ ಕುಸ್ತಿಯಲ್ಲಿ ಚಾರ್ಲಿ ಪೈಲ್ವಾನ್ ದಂಡಪ್ಪನ ಮೇಲೆ ಗೆದ್ದರು.

ಹಂಗೆ ಚಾರ್ಲಿ ಮೇಲೆ ಕುಸ್ತಿ ಮಾಡಿದ್ದ ದಂಡಪ್ಪ ಹೊಳಲ್ಕೆರೆಯಲ್ಲಿ ನಡೆಯುತ್ತಿದ್ದ ಕುಸ್ತಿಗೆ ಬಂದಿದ್ದ. ಅಲ್ಲಿನ ಕುಸ್ತಿ ಕಂಟ್ರಾಕ್ಟರ್ ದಂಡಪ್ಪನ ಮೇಲೆ ನನ್ನ ಕುಸ್ತಿ ಜೊತೆ ಮಾಡಿದರು. ಚಾರ್ಲಿ ಜೊತೆ ಕುಸ್ತಿ ಮಾಡಿದ ದೊಡ್ಡ ಪೈಲ್ವಾನನಿಗೆ ನನ್ನಂಥವನ ಮೇಲೆ ಕುಸ್ತಿ ಮಾಡೋಕೆ ಮನಸ್ಸಿರಲಿಲ್ಲ. ಆದರೆ ಕಂಟ್ರಾಕ್ಟರ್ ಒಪ್ಪಿಸಿದ್ದರಿಂದ ಒಪ್ಪಿಕೊಂಡ.

ದಂಡಪ್ಪ ಒಳ್ಳೇ ಪೈಲ್ವಾನ್, ಒಳ್ಳೆ ಕೆಲಸ, ಪಟ್ಟುಗಳನ್ನು ಕಲಿತಿದ್ದ. ಆತ `ಕಾಲರ್‌ಜಂಗ್ ಎನ್ನೋ ಪಟ್ಟಿನಲ್ಲಿ ನಿಷ್ಣಾತನಾಗಿದ್ದ. ಆತ ಕಾಲರ್ ಜಂಗ್ ಪಟ್ಟು ನನಗೆ ಹಾಕಿದಾಗ, ನಾನು "ಟಾಂಗ್ ಅಂತ ಒಂದು ಪಟ್ಟು ಇರ್ತದೆ. ಅದನ್ನು ಮಾಡಿ ಆತನ ಕಾಲರ್ ಜಂಗ್ ಪಟ್ಟಿನಿಂದ ತಪ್ಪಿಸಿಕೊಂಡೆ. 'ಸಖಿ ಅಂತ ಒಂದು ಪಟ್ಟು ಇರದೆ. ಅದು ಎದುರಾಳಿ ಪೈಲ್ವಾನನ್ನು ಬೀಳಿಸಿ ಎದೆ ಮೇಲೆ ಕುಳಿತುಕೊಂಡು ಬಿಡೋದು. ಆತ ಇಂಥ ಸಖಿ ಪಟ್ಟನ್ನು ನನ್ನ ಮೇಲೆ ಹಾಕಿ ಕೆಡವಿ ನನ್ನ ಮೇಲೆ ಕುಂತ್ಕೊಳ್ಳೋಕೆ ಪ್ಲಾನ್ ಮಾಡಿದ. ಅವನು ಹಂಗೆ ಎದೆ ಮೇಲೆ ಕುಂತ್ಕೊಂಡ ಅಂದ್ರೆ ನಾನು ಚಿತ್ತು ಆದಂಗೆ ಆಗಿಬಿಡ್ತದೆ. ಅದಕ್ಕೆ ನಾನು ಸ್ವಲ್ಪ ಬೆನ್ನನ್ನು ಹೋಳುಮಾಡಿ ಅಖಾಡದಲ್ಲಿ ಬಿದ್ದೆ. ಆತನ ಕೈ ಹೆಂಗೂ ನನ್ನ ಕೈಯಲ್ಲಿ ಇತ್ತು. ನಾನು ಅದನ್ನು ಉಪಯೋಗಿಸಿಕೊಂಡು "ದೋಬೀಚಾಟ್ ಪಟ್ಟಲ್ಲಿ ಒಂದೇ ಏಟಿಗೆ ಎತ್ತಿ ಹಾಕಿದೆ. ಅವನು ಒಂದೇ ಏಟಿಗೆ ಪಲ್ಟಿ ಹೊಡೆದು ಚಿತ್ತಾದ. ಹಂಗಾಗಿ ಹೊಳಲ್ಕೆರೆಯ ಜನರಿಗೆ ಆ ಕುಸ್ತಿ ಬಾಳಾ ಇಷ್ಟವಾಗೋಯ್ತು. ನಂಜಪ್ಪರು ಆ ಪಟ್ಟಿಗೆ ಪ್ರಖ್ಯಾತಿಯಾಗಿದ್ದರಿಂದ, ಆ ಪಟ್ಟು ಉಪಯೋಗಿಸಿ ಯಾರಾದರೂ "ಏನ್ ಆದರೆ ಅದು ದೊಡ್ಡಗರಡಿ ಪೈಲ್ವಾನರದೇ ಪಟ್ಟು ಅಂತ ಗುರುತಿಸಿ ಬಿಡೋರು. ಆ ಕಾರಣಕ್ಕಾಗಿ ಹೊಳಲ್ಕೆರೆ ಜನಕ್ಕೆ ನನ್ನ ಕುಸ್ತಿ ಖುಷಿ ಕೊಡ್ತು.

ಈ ಕುಸ್ತಿ ಆಡಿದ ಮೇಲೆ ನಾನು ಇಪ್ಪತ್ತೈದು ವರ್ಷಗಳ ತನಕ ಬೆಂಗಳೂರಿನ ಮಿರ್ಚಿವಾಲಾ ಸುಭಾನ್, ಮಾಲ್, ಅಮೀರ್, ದಂಡ್ಯಪ್ಪ, ಪರಶುರಾಮಪ್ಪ, ಗಣೇಶ್ - ಹಿಂಗೆ ಹಲವಾರು ಪೈಲ್ವಾನರುಗಳ ಜೊತೆಯಲ್ಲಿ ಕುಸ್ತಿ ಆಡಿದ್ದೇನೆ. ಇಷ್ಟು ವರ್ಷಗಳಲ್ಲಿ ನಾನು ಸೋತಿದ್ದು ದಾವಣಗೆರೆಯ ಪೈಲ್ವಾನ್ ಗಣೇಶ್ ಮೇಲೆ ಮಾತ್ರ. ಈತ ಈಚೀಚೆಗೆ ದಾವಣಗೆರೆ ಮುನಿಸಿಪಾಲಿಟಿಯ ಅಧ್ಯಕ್ಷರೂ ಕೂಡಾ ಆಗಿದ್ದರು. ಅವರು ಮುನಿಸಿಪಾಲಿಟಿಯ ಅಧ್ಯಕ್ಷರಾಗಿ ರಾಜಕೀಯದಲ್ಲಿ ಹೆಸರು ಮಾಡಿದರೂ, ಮೊದಲು ಅವರು ಒಳ್ಳೆಯ ಕುಸ್ತಿ ಪಟು, ಆ ಕುಸ್ತಿಯಲ್ಲಿ ಸೋಲಬೇಕಾದ ಪ್ರಸಂಗ ನನಗೆ ಏಕೆ ಒದಗಿ ಬಂತೆಂದರೆ, ಅದು ನಾನು ಹಾಕಿದ ಪಟ್ಟು ನನಗೆ ಕೈಕೊಟ್ಟಿದ್ದರಿಂದ, ಗಣೇಶ್ ಪೈಲ್ವಾನ್ ನನ್ನ ಬೆನ್ನಿನ ಮೇಲೆ ಕೈ ಹಾಕಿ ಸೊಂಟ ಹಿಡಕೊಂಡು ನಿಂತಿದ್ದ. ಆತನನ್ನು ಹೆಂಗೆ ಸೋಲಿಸಬೇಕು ಅಂತ ನಾನು ಯೋಚಿಸ್ತಾ ಇದ್ದೆ. ಆ ಯೋಚನೆ ಏನು ಅಂದ್ರೆ ಆತ ನನ್ನ ಸೊಂಟ ಹಿಡಕೊಂಡು ನಿಂತಿದ್ದನಲ್ಲ. ಆತನ ಒಂದು ಕೈಯನ್ನು ಎತ್ತಿ ಹಿಂದಕ್ಕೆ ಒಗಾಸಿ ಬಿಟ್ಟರೆ, ಆತ ಅಂಗಾತ ಬೀಳ್ತಾನೆ, ನಾನು ಆತನ ಮೇಲೆ ಬಿದ್ದಿರ್ತೀನಿ. ಆದರೆ ಒಂದು ಸ್ವಲ್ಪದರಲ್ಲಿ ಈ ಪಟ್ಟು ಮಿಸ್ಸಾಗಿ ಬಿಟ್ಟಿತು. ಅಂದರೆ ಆತ ನಾನು ಹಾಕಿದ ಪಟ್ಟಿನಿಂದ ಸ್ವಲ್ಪದರಲ್ಲಿ ತಪ್ಪಿಸಿಕೊಂಡು ಬಿಟ್ಟ. ನಾನು ಹಾಕಿದ ಪಟ್ಟು ನನಗೇ ಕೈ ಕೊಡು, ನಾನೇ ಅಂಗಾತ ಬಿದ್ದಿದ್ದೆ ಅಖಾಡದಲ್ಲಿ! ಹಿಂಗಾಗಿ ನನ್ನ ಇಪ್ಪತ್ತೈದು ವರ್ಷಗಳ ಪೈಲ್ವಾನ್ ಜೀವನದಲ್ಲಿ ಆಡಿದ ಕುಸ್ತಿಗಳಲ್ಲಿ ಇದೊಂದೇ ಕುಸ್ತಿಯಲ್ಲಿ ನಾನಾಗಿ ನಾನು ಬಿದ್ದು ಸೋತಿದ್ದು!

ಬೆಂಗಳೂರಿನಲ್ಲಿ ಮಿರ್ಚಿವಾಲಾ ಸುಭಾನ್ ಅನ್ನೋ ಪೈಲ್ವಾನ್ ಜೊತೆಯಲ್ಲಿ ಆಡಿದ ಕುಸ್ತಿ ಬಾಳಾ ಚೆನ್ನಗಿತ್ತು. ಅವನು ಕಂಟೋನ್ಮೆಂಟಿನ ಗರಡಿಯಿಂದ ಬರ್ತಾ ಇದ್ದ. ನಾನು ಬೆಂಗಳೂರಿಗೆ ಹೋದಾಗ ಅರಳೇಪೇಟೆಯಲ್ಲಿ ಚಿಕ್ಕಗರಡಿ ಅಂತ ಇದೆ. ಅಲ್ಲೇನೇ ಉಳಕೊಂಡು ಸಾಧನೆ ಮಾಡ್ತಾ ಇದ್ದದ್ದು. ನಾವು ನಂಜಪ್ಪರ ಶಿಷ್ಯಂದಿರು ಎಂದರೆ ಆ ಗರಡಿ ಜನಗಳಿಗೆ ಪ್ರೇಮ ನಾನು ಮತ್ತು ಮೂಕಪ್ಪ ಅಲ್ಲಿ ಕುಸ್ತಿ ಮಾಡಿ ಇಷ್ಟೊತ್ತಿಗೆ ಸ್ವಲ್ಪ ಹೆಸರು ಮಾಡಿದ್ವಿ. ಹಿಂಗಾಗಿ ಬೆಂಗಳೂರಿಗೆ ಹೋದಾಗ ಅರಳೇಪೇಟೆಯಲ್ಲಿದ್ದ ಚಿಕ್ಕಗರಡಿಗೆ ನಮ್ಮ ಮನೆಗೆ ಹೋದಂಗೆ ನೇರ ಹೋಗಿ ಅಲ್ಲಿ ಇದ್ದು ಬಿಡ್ತಿದ್ದಿವಿ.

ಮಿರ್ಚಿವಾಲಾ ಸುಭಾನ್ ಒಳ್ಳೆಯ ಪೈಲ್ವಾನ್, ಆತ ಅಖಾಡದಲ್ಲಿ ನಾನು ಹಾಕಿದ ಎಲ್ಲ ಪಟ್ಟುಗಳಿಗೂ, ಅದೇ ಪಟ್ಟು ಹಾಕಿ ನನ್ನ ಜೊತೆಗೆ ಸೆಣಸಾಡಿದ. ಆತ ಮಣಿಯಲಿಲ್ಲ. ನನಗೂ ಆತ ಕೆಲವು ಪಟ್ಟು ಹಾಕಿ ಸೋಲಿಸಲು ನೋಡಿದ. ನಾನೂ ಮಣಿಯಲಿಲ್ಲ. 'ಡಾಕ್ ಅಂತ ಒಂದು ಪಟ್ಟು ಇರ್ತದೆ. ಎದುರಾಳಿ ಪೈಲ್ವಾನ್ ಮೇಲೆ ಬಂದಾಗ ಹಾಕೋ ಪಟ್ಟುಗಳಲ್ಲಿ ಅದೂ ಒಂದು. ಎದುರಾಳಿ ಪೈಲ್ವಾನ್ ಮೇಲೆ ಬಂದಾಗ ಬರೀ 'ಬ್ಯಾಲೆನ್ಸ್ ಮೇಲೆ ಮಾಡೋ ಕೆಲಸ ಇದು. ನೀರಿನಲ್ಲಿ ಮುಳುಗಿದ್ದ ಎಷ್ಟು

ಭಾರವಾಗಿದ್ದ ಕೊಡನಾದ್ರೂ ಹೆಂಗೆ ಎತ್ತಬಹುದೋ ಹಂಗೆ, ಆ ಪೈಲ್ವಾನ್ ಬಂದಾಗ ಕುತ್ತಿಗೆಗೆ ಕೈ ಹಾಕಿ ಬ್ಯಾಲೆನ್ಸ್ ಹಿಡಿದು ಎತ್ತಿ ಒಗಾಯಿಸಿ ಪಲ್ಟಿ ಹೊಡಿಸಿ ಚಿತ್ತು ಮಾಡಿಬಿಡಬಹುದು. ಹಂಗೆ ನಾನು ಆ ಡಾಕ್ ಪಟ್ಟಿನ ಮೂಲಕ ಮಿರ್ಚಿವಾಲಾ ಸುಭಾನ್ ಪೈಲ್ವಾನ್ ಅನ್ನು 'ಸಾಫ್ ಚಿತ್ತು  ಮಾಡಿದೆ. ಕುಸ್ತಿ, ಪ್ರೇಮಿಗಳೆಲ್ಲ ಬಹಳ ಖುಷಿ ಪಟ್ಟರು, ಕೊಂಡಾಡಿದರು.

ಈ ತರ ಕುಸ್ತಿ ಆಡಿದ್ದಕ್ಕೆ ಅನೇಕರು ಮೆಚ್ಚಿಕೆ ಸೂಚಿಸಿದರು. ಅದಕ್ಕೆ ಅಂದ್ರೆ ಮೆಚ್ಚಿಕೆ ಸೂಚಿಸುವುದಕ್ಕೆ ಕಾರಣಗಳು ಇದ್ದವು. ನನ್ನ ಗುರುಗಳಾದ ನಂಜಪ್ಪರು ಕೆಲವು ಕುಸ್ತಿಗಳನ್ನು ಇಷ್ಟ ಪಡ್ತಾ ಇರಲಿಲ್ಲ. ಅಖಾಡದಲ್ಲಿ ಮಲಕ್ಕೊಂಡು ಆತ್ತಾ ಇತ್ತಾ ಹೊರಳಾಡಿಸೋದು, ನಿಂತ್ಕಂಡು ಜಗ್ಗಾಡೋದು- ಹಿಂಗೆ ಮಾಡ್ಕೊಳೋ ಟೈಂ ತಗಳ್ಳದು ನಂಜಪ್ಪರಿಗೆ ಸುತ್ರಾಂ ಇಷ್ಟವಾಗುತ್ತಿರಲಿಲ್ಲ. ಅವರ ಪ್ರಕಾರ ಕುಸ್ತಿಗಳು `ಚಕಾ ಚಕ್ ಅಂತ ಆಗ್ನಿಡಬೇಕು. ಇಂಥ 'ಚಕಾಚಕ್ ಕುಸ್ತಿ ಮಿರ್ಚಿವಾಲ ಸುಭಾನ್ ಜೊತೆಯಲ್ಲಿ ನಾನು ಮಾಡಿದ್ದರಿಂದ ಜನ 'ಭೇಷ್ ಎಂದು ಬೆನ್ನು ತಟ್ಟಿದರು.

ಸಾಮಾನ್ಯವಾಗಿ ಕುಸ್ತಿ ಪಟುಗಳು ಒಳ್ಳೆ ಮೈಕಟ್ಟು ಇಟ್ಟುಕೊಳ್ಳುವುದು ಬಾಳಾ ಮುಖ್ಯವಾದುದು. ಅದಕ್ಕಿಂತ ಮುಖ್ಯ ಅಂದ್ರೆ ಕುಸ್ತಿ ಮಾಡೋವಾಗ ಇಡೀ ಕುಸ್ತಿ ನಿಂತಿರೋದು ಬ್ಯಾಲೆನ್ಸ್ ಮೇಲೆ, ಎದುರಾಳಿ ಪೈಲ್ವಾನನ ದೇಹ ಹೆಂಗಿದೆ, ಅವನು ಯಾವ ಕೆಲಸ ಮಾಡೋಕೆ ದೇಹದ ಯಾವ ಭಾಗ ಬಳಸುತ್ತಾನೆ- ಅವನು ಅಖಾಡದಲ್ಲಿ ಕುಸ್ತಿ ಮಾಡುವಾಗ ಯಾವ ಭಾವದಲ್ಲಿ ಕುಸ್ತಿ ಮಾಡುತ್ತಾನೆ ಎಂದು ಯಾವ ಪೈಲ್ವಾನ್ ಸರಿಯಾಗಿ ಅರ್ಥಮಾಡಿಕೊಳ್ಳುತ್ತಾನೋ ಅವನು ಎದುರಾಳಿ ಪೈಲ್ವಾನ್‌ಗಿಂತಾ ಮೈಕಟ್ಟಿನಲ್ಲಿ ಬಲವಾಗಿಲ್ಲದಿದ್ದರೂ ಚಿಂತೆಯಿಲ್ಲ; ತಾನು ಕಲಿತಿರೋ ಪಟ್ಟುಗಳಲ್ಲಿ ಒಂದನ್ನು ಬಳಸಿ ಬ್ಯಾಲೆನ್ಸ್ ಮೇಲೆ ಎಂಥ ಪೈಲ್ವಾನನನ್ನು ಎತ್ತಿಹಾಕಿ ಚಿತ್ತು ಮಾಡಿಬಿಡಬಹುದು. ಇಂಥ ಕುಸ್ತಿಗಳನ್ನೇ ಕುಸ್ತಿ ಪ್ರೇಮಿಗಳು ಬಾಳಾ ಇಷ್ಟ ಪಡೋದು. ಅದು ಬಿಟ್ಟು ನೆಲಕ್ಕೆ ಹಾಕಿ ಉಜ್ಜಾಡುತ್ತಾ, ಕಾಲ ಕಳೆಯೋಕೆ ಪೈಲ್ವಾನರು ಅಖಾಡದಲ್ಲಿ ಶುರುವು ಮಾಡಿದರೂ ಅಂದ್ರೆ ಪ್ರೇಕ್ಷಕರು ಬೇಸತ್ತು ಬಿಡುತ್ತಾರೆ. ಈಗ ನಾನು 'ಡಾಕ್ ಪಟ್ಟಲ್ಲಿ ಮಿರ್ಚಿವಾಲಾ ಸುಭಾನ್ ಗೆದ್ದೆ ಅಂತ ಹೇಳೋದಿಕ್ಕೆ ನಮ್ಮ ಗುರುಗಳಾದ ನಂಜಪ್ಪರೇ ಕಾರಣ.

ನಮ್ಮ ದೊಡ್ಡಗರಡಿಯಲ್ಲಿ ನಾವು ಸಾಧನೆ ಮಾಡ್ತಾ ಇದ್ದಾಗ ಭಾರೀ ಕುಸ್ತಿ - ಪಟುಗಳು ಎಂದರೆ ನಂಜಪ್ಪ - ರಾಮಪ್ಪ ಇಬ್ಬರೇನೇ. ರಾಮಪ್ಪ ಬಲದಲ್ಲಿ ನಂಜಪ್ಪರಿಗಿಂತಾ ಒಂದು ಕೈ ಮೇಲು. ರಾಮಪ್ಪನ ಜೊತೆಯಲ್ಲಿ ಲಡತ್ ಮಾಡಿದರೆ ಮೈಯೆಲ್ಲಾ ಹಣ್ಣಾಗಿ ಬಿಡೋದು. ಆತನ ದೇಹ ಬಹಳ ವಜೇ. ಆದರೆ ಅದೇ ನಂಜಪ್ಪರು ನಮಗೆ ಲಡತ್ ಕೊಡಬೇಕಾದರೆ, ಯಾರು ಯಾರು ಎಷ್ಟೆಷ್ಟು ತೂಕ ಇದಾರೆ ಅನ್ನೋ ಬ್ಯಾಲೆನ್ಸ್ ಮಾಡಿ,

ನಮಗೆ ಕುಸ್ತಿಗೆ ತಯಾರಿ ಮಾಡೋರು. ಹಿಂಗೆ ತಯಾರಿ ಮಾಡಿದ್ದರಿಂದಲೇ ನಾನು ಬೆಂಗಳೂರಿನಲ್ಲಿ ಮಿರ್ಚಿವಾಲಾ ಸುಭಾನ್ ಜೊತೆಯಲ್ಲಿ 'ಡಾಕ್ ಪಟ್ಟಿನಲ್ಲಿ ಗೆಲ್ಲಲು ಸಾಧ್ಯವಾಗಿತ್ತು. ಬೆಂಗಳೂರಿನ ಮಾಲ್ ಪೈಲ್ವಾನನ್ನು ಗೆಲ್ಲಲು ಸಾಧ್ಯವಾಗಿದ್ದು. ಸುಭಾನ್ ಏನು ಭಾರೀ ಆಳಲ್ಲ, ಇಬ್ಬರೂ ಸಮಸಮವಿದ್ದೆವು. ನಾನು ಹೇಳ್ತಾ ಇರೋದು ಏನು ಅಂದ್ರೆ ಒಬ್ಬ ಪೈಲ್ವಾನ್ ಎದುರಾಳಿ ಪೈಲ್ವಾನ್ ಬಗ್ಗೆ ಏನು ತಿಳಕೊಂಡಿದ್ದರೆ ಒಳ್ಳೆಯದು ಎಂಬುದು ಮಾತ್ರ.

ನಾನು ಬೆಂಗಳೂರಿಗೆ ಹೋಗಿ ಕುಸ್ತಿಗಳನ್ನು ಮಾಡುವುದಕ್ಕೆ ಮುಂಚೆ ದಾವಣಗೆರೆಯಲ್ಲಿ ಅಮೀರ್ ಸಾಬ್ ಅನ್ನುವವನ ಜೊತೆಯಲ್ಲಿ ಒಂದು ಕುಸ್ತಿ ಮಾಡಿದ್ದೆ. ಆತ ಮಾತ್ರ ನನಗಿಂತಾ ಎರಡು ಎರಡೂವರೆ ಪಟ್ಟು ತೂಕ ಇದ್ದ ಭಾರಿ ಆಳು. ನನಗೂ ಅವನಿಗೂ ಸಂಬಂಧವಿಲ್ಲ ಎನ್ನುವಷ್ಟು ವ್ಯತ್ಯಾಸವಿತ್ತು. ಈ ಕುಸ್ತಿಗೆ ಜೊತೆ ಮಾಡಿದವರು ನಮ್ಮ ಗುರುಗಳಾದ ನಂಜಪ್ಪನವರು. ಅವರು ಯಾಕೆ ಹಿಂಗೆ ಜೊತೆಮಾಡಿದರೋ ಗೊತ್ತಿಲ್ಲ. ದಾವಣಗೆರೆಯಲ್ಲಿ ರಾಜಾಸಾಬ್ ಅಂತ ಒಬ್ಬರು ಬೀಡಿ ಕಾರ್ಖಾನೆ ಇಟ್ಟುಕೊಂಡಿದ್ದ ದೊಡ್ಡ ಶ್ರೀಮಂತರಿದ್ದರು. ಅಮೀರ್ ಸಾಬ್ ಅವರ ಮಗ, ಶ್ರೀಮಂತರ ಮಗನಾಗಿ ಚೆನ್ನಾಗಿ ಉಂಡು ತಿಂದು ಒಳ್ಳೆ ಬಲವಾದ ಮೈಕಟ್ಟು ಇಟ್ಟುಕೊಂಡಿದ್ದ ಅಮೀರ್ ಸಾಬ್. ಅಲ್ಲಿನ ಮುಸ್ಲಿಂ ಸ್ನೇಹಿತರು, ಕುಸ್ತಿ ಪ್ರೇಮಿಗಳು ಅವನಿಗೆ ಪ್ರೋತ್ಸಾಹ ಕೊಟ್ಟು ಅಖಾಡಕ್ಕೆ ಕಳಿಸಿದರು.

ನಾನು ಅಖಾಡದಲ್ಲಿ ಅವನನ್ನು ನಖಶಿಖಾಂತ ಅಂತಾರಲ್ಲ, ಹಂಗೆ ಮೇಗಳಿಂದ ಕೆಳಗಿನ ತನಕ, ಕೆಳಗಿನಿಂದ ಮೇಗಳ ತನಕ ನೋಡಿದೆ. ನೋಡ್ತಾ ಇದ್ದಂತೆಯೇ ಅವನು ಶಕ್ತಿಶಾಲಿ ಅಂತ ಗೊತ್ತಾಯ್ತು. ನಾನು ಅಷ್ಟೊಂದು ಶಕ್ತಿಶಾಲಿಯಲ್ಲ ಅನ್ನೋದು ನನಗೆ ತಿಳಿದು ಬಿಡ್ತು. ಆದರೆ ಅವನು ಎಷ್ಟು ಶಕ್ತಿಶಾಲಿಯಾಗಿದ್ದರೇನು? ಅವನು ದಡ್ಡ! ನಾನು ಬುದ್ಧಿವಂತ!. ನಂಜಪ್ಪರ ಶಿಷ್ಯ ಅಂಥ ಏನೋ ಒಳಗೊಳಗೆ ಜಂಭ ಹೆಮ್ಮೆಯೆಲ್ಲಾ ತುಂಬಿಕೊಂಡಿದೆ ನನ್ನಲ್ಲಿ!

ಸರಿ ಅಖಾಡದಲ್ಲಿ ಇಬ್ಬರೂ ನಿಂತ್ಕಂಡ ತಕ್ಷಣ - ಅಲ್ಲಿನ ಫೋಟೋಗ್ರಾಫರ್ ಫೋಟೋ ತೆಗೆಯೋಕೆ ಹೋದತಕ್ಷಣ ಪ್ರೇಕ್ಷಕರೆಲ್ಲ ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ನಿಶ್ಯಬ್ದರಾಗಿ ಬಿಟ್ಟರು! ನಮ್ಮೂರಿನ ಅನೇಕ ಕುಸ್ತಿ ಪ್ರೇಮಿಗಳು ಅಲ್ಲಿಗೆ ಬಂದಿದ್ದರು. ಅವರೆಲ್ಲ 'ವಸಂತರಾವ್ ಎಂತ ಜೊತೆ ಕುಸ್ತಿ ಹಾಕ್ಕೊಂಬಿಟ್ನಲ್ಲ...ಹಾಕ್ಕೊಂಬಿಟ್ಟೆಲ್ಲ...ಅಂತ ಯೋಚಿಸಿದರು.

ಅಮೀರ್ ಸಾಬ್ ಎಷ್ಟು ಜೋರಾಗಿದ್ದನಪ್ಪ ಅಂದ್ರೆ ನನ್ನ ಎರಡು ಕೈ ಸೇರಿದರೆ ಅವನದು ಒಂದು ಕೈ! ಇಷ್ಟಿಷ್ಟು ದಪ್ಪ ಬೆರಳುಗಳು! ಅಖಾಡದಲ್ಲಿ ಕುಸ್ತಿ ಶುರುವಾಯ್ತು. ನಾನು ಏನೇನು ಪಟ್ಟು ಹಾಕಿದರೂ ಆತನಿಗೆ ಬಗ್ಗಿಸುವುದಕ್ಕಾಗಲಿಲ್ಲ. ಒಳ್ಳೆ ದೊಡ್ಡ ಬಂಡೆ ಮೇಲೆ ಅಟ್ಯಾಕ್ ಮಾಡ್ದಂಗೆ ಆಗ್ತಾ ಇದೆ! ಅವನ್ನ ಅಲುಗಾಡಿಸಕ್ಕಾಗಲಿಲ್ಲ! ಅವನ ಶಕ್ತಿ ಮುಂದೆ ನಂದೇನೂ ನಡೆಯೋಲ್ಲ ಅನ್ನಿಸಿಬಿಡ್ತು. ಅದಕ್ಕೆ ಸರಿಯಾಗಿ ಅವನು ಅಖಾಡದಲ್ಲಿ ಕೆಡವಿ ಬಿಟ್ಟ, ನಾನು ನೆಲಕ್ಕೆ ಬಿದ್ದರೂ ಈ ಕುಸ್ತಿ ಬಿಡಬಾರದು; ಏನಿದ್ದರೂ ಗೆದ್ದುಕೊಂಡೇ ಹೋಗಬೇಕು ಅಂತ ಮನಸ್ಸಿನಲ್ಲಿ ದೃಢವಾಗಿ ಯೋಚಿಸಿಬಿಟ್ಟೆ.

ಆಮೇಲೆ ನಾನು ನೆಲಕ್ಕೆ ಬಿದ್ದಿದ್ರೂನೂ ಹೆಂಗಾದರೂ ಈಗ ಬಚಾವ್ ಆಗಬೇಕು ಅಂತ ಯೋಚಿಸಿ, ಅವನೇನೇನು ಪಟ್ಟು ಹಾಕಿದರೂ ಹುಷಾರಾಗಿ ತಪ್ಪಿಸಿಕೊಂಡೆ. ಅಂತ ಸಮಯದಲ್ಲಿ ಮುಖಪಟ್ಟು ಅಂತ ಒಂದು ಪಟ್ಟು ಹಾಕ್ತಾರೆ. ಆ ತರದ ಪಟ್ಟು ಹಾಕಿ ಅಮೀರ್ ಸಾಬ್ ನನ್ನ ಮುಖದಮೇಲೆ ಒಂದು ಕೈ ಹಾಕಿ ಒತ್ತಿ ಅದುಮಿ ಚಿತ್ತು ಮಾಡಬೇಕು ಅಂತ ಪ್ರಯತ್ನಪಟ್ಟ. ಆತ ಅದೆಷ್ಟು ಬಲವಾಗಿ ಅಂಥ ಪಟ್ಟು ಹಾಕಿದ್ದ ಅಂದ್ರೆ ನನ್ನ ಹಲ್ಲುಗಳು ದವಡೆಯೊಳಗೆ, ಮುಂದುಗಡೆಯ ತುಟಿಯ ಒಳಗೆ ನೆಟ್ಟುಕೊಂಡು ಬಿಟ್ಟಿದ್ದವು. ಅವನು ಗೆಲ್ಲಬೇಕು ಅಂತ, ನಾನು ಸೋಲಕೂಡದು ಅಂತ. ಕೊನೆಗೆ ಆ ಕುಸ್ತಿ ಡ್ರಾ ಆಯ್ತು. ಅಂಥ ಪೈಲ್ವಾನ್ ಜೊತೆಯಲ್ಲಿ ಡ್ರಾ ಮಾಡಿಕೊಂಡಿದ್ದು ಗೆದ್ದಿದ್ದಕಿಂತಾ ಹೆಚ್ಚು ಅಂದರು ಪ್ರೇಕ್ಷಕರು, ಕುಸ್ತಿ ಪಟುಗಳು, ನನ್ನ ಸ್ನೇಹಿತರೆಲ್ಲಾ ಒಳ್ಳೇ ಮಾತಾಡಿದರು. ಕೆಲವರು ಅಂಥ ಪೈಲ್ವಾನ್ ಕೈಯಲ್ಲಿ ಕುಸ್ತಿ ಆಡಿ ನೀನು ಉಳಿದೆಯಲ್ಲಪ್ಪ.. ಅದೇ ದೊಡ್ಡ ವಿಷಯ ಅಂತ ಡ್ರಾ ಆಗಿದ್ದನ್ನು ಗೆದ್ದಷ್ಟು ಸಂತೋಷದಿಂದ ಮಾತಾಡಿ ನನಗೆ ಧೈರ್ಯ, ಹುಮ್ಮಸ್ಸು ತುಂಬಿದರು. ಬಹಳ ಮೆಹನತ್‌ನಿಂದ ಕುಸ್ತಿ ಮಾಡಿದೆ ಎಂದು ಕೆಲವರು ಹೇಳಿದರು.

ಅಖಾಡದಿಂದ ಹೊರಗೆ ಬಂದು ಬಟ್ಟೆ ಹಾಕ್ಕೊಂಡ ಮೇಲೆ ನೋಡಿದಾಗ ಆತ ಮುಖಪಟ್ಟೆ ಹಾಕಿದ್ದರಿಂದ ದವಡೆ, ತುಟಿಗಳನ್ನೆಲ್ಲಾ ಹಲ್ಲುಗಳು ಒತ್ತಿಕೊಂಡಿದ್ದಂತಾಗಿತ್ತು ಎಂದು ಹೇಳಿದೆನಲ್ಲ. ಈಗ ಬಾಯೆಲ್ಲಾ ರಕ್ತವಾಗಿ ದವಡೆ ಚರ್ಮ ಒಳಗೆಲ್ಲ ಕಿತ್ತುಕೊಂಡು ಬಿಟ್ಟಿತ್ತು! ಆದರಿಂದ ಈ ಕುಸ್ತಿ ನೋಡಿದವರು, ಈಗ ನನ್ನನ್ನು ನೋಡಿದವರು ಕುಸ್ತಿ ಸಮ ಆಗಿದ್ದರ ಬಗ್ಗೆ ಗೆದ್ದಷ್ಟು ಸಂಭ್ರಮಿಸಿ ಮಾತಾಡಿದರು.

ನಿಜವಾಗಿಯೂ ಪೈಲ್ವಾನ್ ಜೀವನದಲ್ಲಿ ಒಂದು ಮಾತ್ರ ನಿಜ. ಅವನು ಗೆಲ್ಲಬೇಕು, ಇಲ್ಲ ಸಮಮಾಡಬೇಕು. ಸೋತ ಅಂದ್ರೆ ಅವನ ಮನಸ್ಸು ಕುಸಿದು ಹೋಗಿ ಬಿಡುತ್ತದೆ. ಆದರಿಂದ ಸಮ ಆದರೂ ಪೈಲ್ವಾನ್ ಗೌರವಕ್ಕೆ ಕುಂದು ಬರೋಲ್ಲ. ಊರಿಗೆ

ಬಂದ ಮೇಲೆ ವಸಡಿನ ಚರ್ಮ ಕಿತ್ತುಕೊಂಡು ಬಂದಿದ್ದು ಒಂದು ಕಡೆ, ಆತ ಮೈ ನೋವು ಮಾಡಿದ್ದು ಒಂದು ಕಡೆಯಾಗಿ, ಎಂಟುದಿನ ಸುಧಾರಿಸಿಕೊಳ್ಳಬೇಕಾಯಿತು. ಆ ಸಮಯದಲ್ಲಿ ಎಂಟು ದಿನಾನು ಗರಡಿಗೆ ಸಾಧನೆ ಮಾಡಲು ಹೋಗಲಿಲ್ಲ, ಅಂದ್ಮೇಲೆ ನಾನು ಎಂಥ ಪೈಲ್ವಾನ್ ಜೊತೆಗೆ ಕುಸ್ತಿ ಮಾಡಿ ಸಮ ಮಾಡಿಕೊಂಡೆ ಎನ್ನುವುದನ್ನು ನೀವೇ ಯೋಚನೆ ಮಾಡಿ.

ದೊಡ್ಡಗರಡಿಯಲ್ಲಿ ನಂಜಪ್ಪ, ರಾಮಪ್ಪ, ಬಷೀರ್, ಕುಂಟುರಾಮಪ್ಪ, ಹಿಂಗೆ ಅನೇಕ ದೊಡ್ಡ ಪೈಲ್ವಾನರುಗಳ ಒಂದು ಗುಂಪೇ ಇತ್ತು. ಇವರಲ್ಲಿ ನಂಜಪ್ಪರ ತರದಲ್ಲಿ ಹೆಸರು ಮಾಡಿದ್ದವರು ರಾಮಪ್ಪ. ಅವರು ಸೊಪ್ಪು ಮಾರುತ್ತಾ ಇದ್ದರು. ಆದ್ದರಿಂದ ಅವರಿಗೆ ಸೊಪ್ಪಿನ ರಾಮು ಅಂತಾನೇ ಕರೆಯೋರು. ಆತ ಆರೂವರೆ ಅಡಿ ಎತ್ತರದ ಆಳು. ಅಗಲವಾದ ಎದೆ. ಗಟ್ಟುಮಸ್ತಾದ ಕೈಕಾಲುಗಳು, ಕಚ್ಚೆಪಂಚೆ – ಜುಬ್ಬಾ ಹಾಕ್ಕೊಂಡು ಆತ ಹೊರಟ ಎಂದರೆ ನಿಂತು ನೋಡೋವಂತಹ ಲಕ್ಷಣವಂತ, ಒಳ್ಳೆ ಕುಸ್ತಿ ಪಟು. ಹಲವಾರು ಹೆಸರಾಂತ ಕುಸ್ತಿಗಳಲ್ಲಿ ಆತ ಗೆದ್ದಿದ್ದ. ಆದ್ದರಿಂದ ಆತನನ್ನು 'ಹೀರೋ ರಾಮಪ್ಪ ಅಂತಾನೂ ಪ್ರೀತಿಯಿಂದ, ಗೌರವದಿಂದ ಕರೆಯೋರು. ದೊಡ್ಡಗರಡಿಯಲ್ಲಿ ನಂಜಪ್ಪರಿಗೆ ಏನು ಪ್ರೋತ್ಸಾಹ ಸಿಕ್ಕುತ್ತಿತ್ತೋ, ಅದೇ ಪ್ರೋತ್ಸಾಹ ರಾಮಪ್ಪನವರಿಗೂ ಕೊಡ್ತಾ ಇದ್ದರು.

ಆಗಿನ ಕಾಲದಲ್ಲಿ ನಮ್ಮೂರು ಸ್ವಲ್ಪ ಹಳ್ಳಿ ಇದ್ದಂಗೇ ಇತ್ತು ಈಗಿನಷ್ಟು ಮುಂದುವರೆದಿರಲಿಲ್ಲ. ದೆವ್ವ, ಭೂತ, ಮಾಟ, ಮಂತ್ರ - ಇವುಗಳ ಕಾಟ ಜಾಸ್ತಿಯಾಗಿದ್ದ ಕಾಲ. ಸೊಪ್ಪಿನ ರಾಮಪ್ಪ, ಕುಸ್ತಿ ಮಾಡಿ ಒಳ್ಳೆ ಹೆಸರು ಮಾಡಿದ್ದಾನೆ ಅಂತ ಹೊಟ್ಟೆಕಿಚ್ಚು ಪಟ್ಟು, ಅವನನ್ನು ಕೆಡಿಸಬೇಕೆಂದು ಅವರ ಸಂಬಂಧಿಗಳು ಅಥವಾ ಆಗದವರು ಆತನಿಗೆ `ಮಾಟ ಮಾಡಿಸಿದರು. ಅವರಿಗೆ ತೊಡೆಯಲ್ಲಿದ್ದ ಶಕ್ತಿ ಕುಸಿದು ಹೋಯಿತು. ಅವರು ಅದರ ನಿವಾರಣೆಗೆ ಯಾವ ಯಾವುದೋ ದೇವರುಗಳ ಬಳಿಗೆ ಶಾಸ್ತ್ರ ಕೇಳೋಕೆ ಹೋದರು. ಅವರು ನಮ್ಮೂರಿನ ಗ್ರಾಮ ದೇವತೆ ಬರಗೇರಮ್ಮನನ್ನೂ ಕೇಳಿದರು. ಆಕೆ ತನ್ನ ಗುಡಿಯಲ್ಲಿ ಎರಡು ತಿಂಗಳಕಾಲ ಇರಬೇಕೆಂದು ಅಪ್ಪಣೆ ಕೊಟ್ಟಳು. ಎರಡು ತಿಂಗಳಲ್ಲಿ ಸ್ವಲ್ಪ ಹುಶಾರಾದ ಹಂಗೆ ಆಯ್ತು, ತೊಡೆಯಲ್ಲಿ ಶಕ್ತಿನೂ ಕೂಡಿಕೊಂಡ ಹಂಗೆ ಆಯ್ತು, ಆ ಸಮಯದಲ್ಲಿ ದುರ್ಗದಲ್ಲಿ ಒಂದು ಕುಸ್ತೀನೂ ಆಯ್ತು. ಅದರಲ್ಲಿ ರಾಮಪ್ಪ ಸಮಮಾಡಿಕೊಂಡರು. ಆದರೆ ಮತ್ತೆ ಅವರಿಗೆ ಮಾಟದಿಂದ ಆಗಿರುವ ತೊಡೆ ಸೋಲು ಹೋಗಲೇ ಇಲ್ಲ ಅಂತ ಭಾವಿಸಿದರು. ಯಾರೋ ಒಬ್ಬ ಮಾಟ ತೆಗೆಯುವ ಅಥವಾ ದೂರ ಮಾಡುವ ಮಾಂತ್ರಿಕನೊಬ್ಬನನ್ನು ಭೇಟಿಮಾಡಿದರು. ಈ ಮಾಟವನ್ನು 'ಕಟ್

ಮಾಡ್ತೀನಿ ಅಂತ ಹೇಳಿ ಅರವತ್ತು - ಎಪ್ಪತ್ತು ರೂಪಾಯಿ ಇಸ್ಕೊಂಡು ಒಂದು ತಾಮ್ರದ ಬಳೆಮಾಡಿ ಕೊಟ್ಟರು. ಅದನ್ನು ರಾಮಪ್ಪರು ಬಲಗಾಲಿನ ಹೆಬ್ಬೆರಳಿಗೆ ಹಾಕ್ಕೊಂಡಿದ್ದರು. ಅದನ್ನು ಹಾಕ್ಕೊಂಡಾಗ ಸರಿ ಹೋಗಿದ್ದೀನಿ ಅಂತ ಹೇಳ್ತಾ ಇದ್ದರು. ಕೆಲವು ದಿವಸ ಹಂಗೆ ಅವರಿಗೆ ಸರಿ ಹೋಗಿದ್ದೀನಿ ಅಂತ ಅವರಿಗೆ ಅನ್ನಿಸಿರಬೇಕು. ಈ ಮಾಟದ ಪಿಡುಗಿನಲ್ಲಿಯೇ ಅವರು ಸಾಧನೆ, ಲಡಕ್, ಕುಸ್ತಿ ಎಲ್ಲಾ ಬಿಟ್ಟರು. ಆಮೇಲೆ ತೀರಿಕೊಂಡೂ ಹೋದರು. ಕೀರ್ತಿ ಬರೋ ಸಮಯಕ್ಕೆ ರಾಮಪ್ಪ ಪೈಲ್ವಾನರಿಗೆ ಇಂಥ ರೋಗಾನೊ, ಮನಸ್ಸಿನ ರೋಗಾನೋ ಶುರುವಾಗಿ ಅದರಲ್ಲಿ ಅವರು ಕೊನೆಯುಸಿರು ಬಿಟ್ಟರು.

ನಮ್ಮ ಗುರುಗಳಾದ ನಂಜಪ್ಪರು ದೊಡ್ಡಗರಡಿಯಲ್ಲಿ ದೊಡ್ಡಹೆಸರು ಅಂತ ಈಗಾಗಲೇ ಎಲ್ಲರಿಗೂ ತಿಳಿದಿದೆ. ಅವರು ದೊಡ್ಡ ಹೆಸರು ಮಾಡಿದ್ದು ಪೈಲ್ವಾನ್ ಆಗಿದ್ದರಿಂದ, ಕುಸ್ತಿ ಮಾಡಿದ್ದರಿಂದ ಅಂತಾನೇ ಹೇಳಬೇಕು. ಅವರು ಒಂದೈವತ್ತು ಕುಸ್ತಿಗಳು ಮಾಡಿದ್ದರೆ ಬಿದ್ದಿದ್ದು ಒಂದು ಐದಾರು ಕುಸ್ತಿಗಳು ಮಾತ್ರ. ಆತ ಜಾಣ. ನಮ್ಮ ದೊಡ್ಡಗರಡಿಗೆ ಬಂದ ಪಂಜಾಬಿನ ಪರಿಪೈಗರ್ ಸಾಹೇಬರು ಉಸ್ತಾದಾದ ಮೇಲೆ ನಂಜಪ್ಪ ಪೈಲ್ವಾನ್‌ಗಿರಿಗೆ ಒಂದು ಹೊಸ ರೂಪ ಬಂತು. ಕುಸ್ತಿ ಪ್ರೇಮಿಗಳ ಮನಸ್ಸನ್ನು ತಣಿಸುವಂತೆ ಅಖಾಡದಲ್ಲಿ ಪಟ್ಟು, ಕೆಲಸಗಳನ್ನೂ ಮಾಡುತ್ತಿದ್ದರು. ಖುಷಿಪಡಿಸುತ್ತಿದ್ದರು. ಆತ ಎಂತ ಜಾಣ ಅಪ್ಪ ಅಂದ್ರೆ ಆತನಿಗೆ ಗೊತ್ತಿಲ್ಲದ ಕುಸ್ತಿ ಪಟ್ಟುಗಳೆ ಇನ್ನಿಲ್ಲ ಅನ್ನಿಸಿಬಿಡ್ತಾ ಇತ್ತು. ನಾನು ಬೆಂಗಳೂರಿನಲ್ಲಿ ಮಾಲ್ ಪೈಲ್ವಾನ್ ಜೊತೆಯಲ್ಲಿ ಕುಸ್ತಿ ಮಾಡಬೇಕಾದ ಸಂದರ್ಭದಲ್ಲಿ, ನಂಜಪ್ಪರು ಕೊಂಚ ನಶೆಯಲ್ಲಿದ್ದರೂ ಬಟ್ಟೆಯ ಮೇಲೆಯೇ ನಮ್ಮ ಅಂಗಡಿಯಲ್ಲಿ ಸಾಧಾರಣ ಒಂದು ಐವತ್ತು ಪಟ್ಟುಗಳನ್ನು ಒಂದಾದ ಮೇಲೊಂದರಂತೆ ಹೇಳಿಕೊಟ್ಟಿದ್ದನ್ನು ಈಗಾಗಲೇ ತಿಳಿಸಿದ್ದೇನೆ. ಇಂಥ ಕುಸ್ತಿ ಪಟು, ಕುಸ್ತಿ ವಿದ್ಯೆಯಲ್ಲಿ ಪರಿಣಿತರಾದ ನಂಜಪ್ಪ ನಂಥವರೂ ಒಂದು ಐದಾರು ಕುಸ್ತಿಗಳಲ್ಲಿ ಸೋತರು ಅಂತ ಹೇಳಿದನಲ್ಲ. ಅಂಥ ಒಂದು ಕುಸ್ತಿ ಬಗ್ಗೆ ಅವರಿಗೆ ಒಂದ್ಸಾರಿ ಕಾರಣ ಕೇಳಿದೆ.

ಬಳ್ಳಾರಿಯಲ್ಲಿ ಚಾರ್ಲಿ ಜೊತೆ ಹೊಸಪೇಟೆ ಭೀಮಪ್ಪ ಅನ್ನೋರು ಕುಸ್ತಿ ಆಡಿದ್ದರು, ಅದನ್ನು ನೋಡೋಕೆ ನಾನು ಬಳ್ಳಾರಿಗೆ ಹೋಗಿದ್ದೆ ಅಂತ ಹೇಳಿದ್ದು ನೆನಪಿರಬಹುದು. ಆ ಹೊಸಪೇಟೆ ಭೀಮಪ್ಪರ ಜೊತೆಯಲ್ಲಿ ನಂಜಪ್ಪರೂ ಒಂದು ಕುಸ್ತಿಯಲ್ಲಿ ಸೋತುಬಿಟ್ಟರು. ಇಬ್ಬರೂ ಹೈಕ್ಲಾಸ್ ಪೈಲ್ವಾನರೇ. ಆದರೆ ನಂಜಪ್ಪರು ಕುಸ್ತಿಯಲ್ಲಿ ಬಿದ್ದು ಬಿಟ್ಟರಲ್ಲ ಎಂದು ಅನೇಕ ನಮ್ಮ ಗರಡಿ ಪೈಲ್ವಾನರಿಗೆ ಆಶ್ಚರ್ಯವಾಗಿತ್ತು. ನನಗೂ ಆಶ್ಚರ್ಯವಾಗಿತ್ತು. ಆದರಿಂದ ಒಂದು ದಿನ ಗರಡಿಯಲ್ಲಿ ಸಾಧನೆಮಾಡುತಿರುವಾಗ ನಂಜಪ್ಪರಿಗೆ ನಾನು ಕೇಳಿದೆ.. ಏನ್ ನಂಜಪ್ಪರೇ .. ನಿಮ್ಮಂತ ಪೈಲ್ವಾನರು ಹಿಂಗೆ ಸೋತು ಬಿಟ್ಟರಲ್ಲಾ .. ಇದು ಹೆಂಗಾಯ್ತು.? ಎಂದೆ. ಅದಕ್ಕೆ ನಂಜಪ್ಪರು -

ಹೊಸಪೇಟೆಯಲ್ಲಿ ನಿರ್ಮಿಸಿದ್ದ ಅಖಾಡದಲ್ಲಿ ನಂಗೂ ಹೊಸಪೇಟೆ ಭೀಮಪ್ಪನಿಗೂ ಕುಸ್ತಿಯಾಯ್ತು. ನಾನು ಮನಸಿನಲ್ಲಿ ಒಂದು ಪಟ್ಟು ಹಾಕಿ ಅವನನ್ನು ಸೋಲಿಸಲು ಯೋಚಿಸಿ ಅವನ ಚಡ್ಡಿಗೆ ಒಂದು ಸೈಡಿನಲ್ಲಿ ಕೈ ಹಾಕಿ ಹಿಡಕೊಂಡು ನಿಂತಿದ್ದೆ. ಆದರೆ ರೆಫರಿ ಬಂದು ಹಂಗೆ ಚಡ್ಡಿ ಹಿಡಕೊಂಡು ಆಡೋಂಗಿಲ್ಲ ಎಂದರು. ಆತನ ಮಾತನ್ನು ಮನಸ್ಸಿಗೆ ತಗೊಂಡು ಚಡ್ಡಿ ಬಿಟ್ಟುಬಿಟ್ಟೆ. ಇನ್ನೂ ನಾನು ಕೈ ತೆಗೆದಿರಲಿಲ್ಲ. ಅಷ್ಟರಲ್ಲಿ ಪೈಲ್ವಾನ್ ಭೀಮಪ್ಪ ಕುಂತ್ಕೊಂಡು ನನ್ನ ಎರಡೂ ಕಾಲುಗಳನ್ನು ಎಳೆದು ಬಿಟ್ಟ. ಅದು ಮೋಸಾನೋ ಅಲ್ಲವೋ ಗೊತ್ತಿಲ್ಲ. ಆದರೆ ಚಿತ್ ಆಯಿತು ಎಂದು ರೆಫರಿ ಹೇಳಿಬಿಟ್ಟ. ಹಿಂಗೆ ಸೋಲಬೇಕಾಯಿತು ಎಂದು ವಿವರಿಸಿದರು.

ಎಂಥಾ ಪೈಲ್ವಾನಾದರೂ ಒಮ್ಮೊಮ್ಮೆ ಎಚ್ಚರ ತಪ್ಪಿದರೂ ಮೋಸ ಹೋಗ್ತಾನೆ; ಹಂಗೇನಾರೂ ಮೋಸಹೋಗ್ತಾನೆ. ನಾನು ನೋಡಿದ ನಂಜಪ್ಪರ ಒಂದೆರಡು ಕುಸ್ತಿಗಳನ್ನು ಈಗಾಗಲೇ ತಿಳಿಸಿದ್ದೇನೆ. ಒಂದು ಕುಸ್ತಿ ಸೋತಿದ್ದು ನೆನಪಾದರೆ, ಗೆದ್ದ ಕುಸ್ತಿಗಳು ಹತ್ತು ನೆನಪಾಗ್ತದೆ. ನಂಜಪ್ಪರು ಎಷ್ಟು ಕುಸ್ತಿ ಮಾಡಿದರು, ಯಾವ್ಯಾವ ಕುಸ್ತಿ ಎಲ್ಲೆಲ್ಲಿ ಮಾಡಿದರು, ಹೆಂಗೆ ಗೆದ್ದರು ಎಂಬುದನ್ನು ಹೇಳಲಾಗುವುದಿಲ್ಲ ಅನ್ನುವುದಕ್ಕಿಂತಾ ಲೆಕ್ಕ ಇಟ್ಟುಕೊಳ್ಳಲು ಆಗುವುದಿಲ್ಲ. ನಮ್ಮ ಗರಡಿ ಪೈಲ್ವಾನರ, ಕುಸ್ತಿ ಪ್ರೇಮಿಗಳ ನೆನಪು ಹರಿದ ಕಡೆಗೆಲ್ಲಾ ನಂಜಪ್ಪರು ಗೆದ್ದ ಕುಸ್ತಿಗಳೇ ಕಣ್ಣಿಗೆ ಕಟ್ಟುತ್ತದೆ.

ಅವರು ಒಂದ್ಸಾರಿ ದಾವಣಗೆರೆಗೆ ಹೋಗಿದ್ದರು. ಅಲ್ಲಿ ಒಂದು ಸೈಕಲ್ ಶಾಪಿನವರು ನಂಜಪ್ಪನವರು ಸ್ನೇಹಿತರು. ಅವರ ಅಂಗಡಿಯಲ್ಲಿ ನಂಜಪ್ಪರು ಕುಳಿತಿದ್ದರು. ದಾವಣಗೆರೆಯಲ್ಲಿ ಆಗ ಕುಸ್ತಿಗಳು ನಡೆಯುತ್ತಿದ್ದವು. ಈ ಕುಸ್ತಿಗಳನ್ನು ವ್ಯವಸ್ಥೆ ಮಾಡಿದವರು ಕುಸ್ತಿ ವ್ಯವಸ್ಥಾಪಕರಾಗಿ ಜೀವನವೆಲ್ಲಾ ಕಳೆದ ಮಾನಿ ಉಜ್ಜಪ್ಪನವರು. ಆಗ ಅಲ್ಲಿಗೆ ಕುಸ್ತಿ ಮಾಡೋಕೆ ಅಂತ ಬೆಳಗಾಂನಿಂದ ವಿಷ್ಣು, ವಸಂತ್ ಅನ್ನೋ ಪೈಲ್ವಾನರು ಬಂದಿದ್ದರು. ದುರ್ಗದಲ್ಲಿ ನಂಜಪ್ಪ ಪೈಲ್ವಾನ್ ಹೆಸರು ಮಾಡಿದ ಹಾಗೆ, ಬೆಳಗಾಮಿನಲ್ಲಿ ವಿಷ್ಣು ಪೈಲ್ವಾನ್ ಹೆಸರು ಮಾಡಿದ್ದರು. ಪೈಲ್ವಾನ್ ನಂಜಪ್ಪರು ವಿಷ್ಣು ಪೈಲ್ವಾನ್ ಜೊತೆಗೆ ಕುಸ್ತಿಯಾಡುವಂತೆ ಜೊತೆ ಮಾಡಿದವನು ಮಾನಿ ಉಜ್ಜಪ್ಪನೇ. ಆ ಕುಸ್ತಿ, ಏನಾಯಿತು ಅಂತ ಹೇಳೋದೆ ಬೇಡ. ನಂಜಪ್ಪ ವಿನ್ ಆದರು. ನಂಜಪ್ಪರು ಚಿತ್ರದುರ್ಗದಲ್ಲಿ ಸಂಪಾದಿಸಿದ್ದ ಕೀರ್ತಿಗಿಂತಾ ದಾವಣಗೆರೆಯಲ್ಲಿ ಹೆಚ್ಚು ಕೀರ್ತಿ ಸಂಪಾದಿಸಿದರು ಎನ್ನಬೇಕು. ಏಕೆಂದರೆ ಅವರ ಹೆಚ್ಚಿನ ಕುಸ್ತಿಗಳೆಲ್ಲಾ ದಾವಣಗೆರೆಯಲ್ಲಿಯೇ ನಡೆದಿದ್ದು.

ಚಿತ್ರದುರ್ಗದ 'ದೊಡ್ಡ ಗರಡಿ ಅಂದ್ರೆ ಬರೀ ಪೈಲ್ವಾನರುಗಳಿಂದ ಹೆಸರು ಮಾಡಿತ್ತು ಎನ್ನುವುದಕ್ಕಿಂತಾ, ಹಂಗೆ ಹೆಸರು ಮಾಡುವುದಕ್ಕೆ ಈ ಊರಿನ ಮತ್ತು ಈ

ಏರಿಯಾದ ದೊಡ್ಡಮನುಷ್ಯರೇ ಕಾರಣ ಎನ್ನಬೇಕು. ತಿಮ್ಮಣ್ಣನವರು, ಸಿ. ಬಿ. ಮಲ್ಲಪ್ಪನವರು, ಬೊಮ್ಮಣ್ಣನವರು, ದಸ್ತಗೀರ್ ಸಾಬರು. ಇವರೆಲ್ಲಾ ದೊಡ್ಡಗರಡಿ ಮೇಲೆ ಬರಲಿ ಅಂತ ಬೆಂಬಲ ಕೊಡುತ್ತಿದ್ದುದರ ಜೊತೆಗೆ, ಪೈಲ್ವಾನರಿಗೆ ವಿಶೇಷ ಪ್ರೋತ್ಸಾಹ ಕೊಡುತ್ತಿದ್ದರು. ಇವರೆಲ್ಲರ ಪ್ರೋತ್ಸಾಹದಿಂದ ನಂಜಪ್ಪನಂಥಾ ಒಬ್ಬ ಪೈಲ್ವಾನ್ ಮೇಲಕ್ಕೆ ಬರೋದಿಕೆ ಅವಕಾಶವಾಯಿತು. ನಂಜಪ್ಪರ ಮನೆಯಲ್ಲೂ ಪ್ರೋತ್ಸಾಹವಿತ್ತು. ಈವಾಗಿನ ಉಚ್ಚಂಗಮ್ಮನ ಗುಡಿ ಸಮೀಪದಲ್ಲಿ ನಂಜಪ್ಪರ ತಂದೆ ಲಾಡರ ಈಶ್ವರಪ್ಪನವರದು ಒಂದು ದೊಡ್ಡ ದಿನಸಿ ಅಂಗಡಿ, ಅದು ಸುಮಾರು ೧೯೪೦ ರಿಂದ ೪೭ನೆ ಇಸವಿ ಅಂದಾಜು ಇರಬೇಕು. ಲಾಡರ ಈಶ್ವರಪ್ಪರ ದಿನಸಿ ಅಂಗಡಿ ಎಂದರೆ ಈಗಿನ 'ಹೋಲ್‌ಸೇಲ್ ಅಂಗಡಿ ತರ ದೊಡ್ಡ ಅಂಗಡಿ, ನಂಜಪ್ಪರಿಗೆ ತಯಾರಿಗೆ ಏನೇನೂ ಕಡಿಮೆ ಇರಲಿಲ್ಲ. ಅವರ ಅಂಗಡಿಯಲ್ಲೇ ಬಾದಾಮಿ, ಗೋಡಂಬಿ, ಉತ್ತುತ್ತಿ, ಕಲ್ಲುಸಕ್ಕರೆ ಅಂದ್ಕೊಂಡು ಇವರು ಎಷ್ಟು ತಿಂದರೂ ಕೈ ಹಿಡಿಯೋರು ಇರಲಿಲ್ಲ. ಜೊತೆಗೆ ಮನೆಯಲ್ಲಿ ಬೇರೆಯವರೂ "ಕೋಆಪರೇಟ್ ಕೊಡೋರು. ನಂಜಪ್ಪರು ಮದುವೆಯಾಗಲಿಲ್ಲ. ಅದು ಅವರಿಗೆ ಒಂದು ರೀತಿ ಯಾವುದನ್ನೂ ಹಚ್ಚಿಕೊಳ್ಳದೆ ಸಾಧನೆ ಮಾಡಿ, ಮೇಲಕ್ಕೆ ಬರೋದಿಕ್ಕೆ ಸಹಕಾರಿಯಾಯ್ತು ಅನ್ನಬೇಕು. ಹಿಂಗೆ ದೊಡ್ಡಗರಡಿ ಕಥೆ ಬೆಳಕೊಂಡು ಬಂತು.

**ಗರಡಿ ಸಂಪ್ರದಾಯಗಳು**

ನಾನು ಗರಡಿಗೆ ಹೋಗೋ ದಿನಗಳಿಂದ ಕೆಲವು ನಂಬಿಕೆಗಳನ್ನು ಗರಡಿಯಲ್ಲಿ ಉಳಿಸಿಕೊಂಡಿದ್ದಾರೆ. ಕೆಲವು ಸಂಪ್ರದಾಯಗಳನ್ನು ಗರಡಿಗಳು ಅನುಸರಿಸಿಕೊಂಡು ಬಂದಿವೆ. ನಮ್ಮೂರಿನಲ್ಲಿ ನಾನು ಸಾಧನೆ ಮಾಡಬೇಕಾದರೆ ಎಂಟು ಗರಡಿಗಳು ಇದ್ದವು. ಈಗ ಒಂದೆರಡು ಗರಡಿಗಳು ಕಣ್ಮರೆಯಾಗಿರುವಂತೆ ಕಾಣುತ್ತದೆ, ಆದರೆ ಈ ಊರಲ್ಲಿರೋ ಎಲ್ಲಾ ಗರಡಿಗಳಲ್ಲೂ ಹೆಚ್ಚಕಡಿಮೆ ಒಂದೇ ತರಹ ನಂಬಿಕೆಗಳು, ಸಂಪ್ರದಾಯಗಳು ಇದ್ದಂತೆ ಕಾಣುತ್ತದೆ.

ಈಗ ನಾನು ಹೇಳೋ ನಮ್ಮ ದೊಡ್ಡಗರಡಿಯ ನಂಬಿಕೆ, ಸಂಪ್ರದಾಯಗಳಾದರೂ, ಅವು ಸಣ್ಣಗರಡಿ, ಹಗಲು ದೀವಟಿಗೆ ಗರಡಿ, ಬುರಜನಹಟ್ಟಿ ಗರಡಿಯವು ಬೇಕಾದರೂ ಆಗಿರಬಹುದು.

ಈಗ ನಮ್ಮ ದೊಡ್ಡಗರಡಿ ಮನೆ ಬದಲಾಗಿದೆ. ಮೊದಲು ಇದು ಕಪ್ಪು ಕಂಬಾರ ಹೆಂಚಿನ ಮನೆಯಾಗಿತ್ತು. ಈಗ ಅದು ಆರ್. ಸಿ. ಸಿ ಕಟ್ಟಡವಾಗಿದೆ. ಆದರೆ ಒಳಗಿನ ಈ ನಂಬಿಕೆ, ಗರಡಿ ಸಂಪ್ರದಾಯಗಳು ಇದ್ದಂಗೆ ಇವೆ. ಕರುವಿನಕಟ್ಟೆ ಸರ್ಕಲ್‌ನಲ್ಲಿ ನಿಂತರೆ

ನಮ್ಮ ದೊಡ್ಡ ಗರಡಿಯ ಎತ್ತರದ ಅರಳೀಮರ ಯಾರ ಕಣ್ಣಿಗಾದರೂ ಬೀಳುತ್ತದೆ. ಗರಡಿಯೊಳಗೆ ಕಾಲಿಟ್ಟರೂ ಕಣ್ಣಿಗೆ ಮೊದಲು ಬೀಳೋದು ಈ ಅರಳೀಮರಾನೇ. ಈ ಅರಳೀಮರದ ಬುಡದಲ್ಲಿ ಬೇತಾಳಸ್ವಾಮಿ ಇದೆ. ಬೇತಾಳಸ್ವಾಮಿ ಯಾವದೇವರು, ಗರಡಿಯಲ್ಲಿ ಯಾಕೆ ಪೂಜೆ ಮಾಡ್ತಾರೆ ಅಂತ ಗೊತ್ತಿಲ್ಲ. ಅನೇಕ ಗರಡಿಗಳಲ್ಲಿ ಬೇತಾಳಸ್ವಾಮಿ ಪೂಜೆ ನಡೆಯುತ್ತೆ. ನಾನು ಹುಡುಗನಾಗಿ ಗರಡಿ ನೋಡಿದಾಗಿನಿಂದಾ ದೊಡ್ಡಗರಡಿಯಲ್ಲಿ ಬೇತಾಳಸ್ವಾಮಿ ಪೂಜೆ ನಡೆಯುತ್ತಾ ಬಂದಿರುತ್ತದೆ. ಆ ಟೈಮಲ್ಲಿ ಗರಡಿಯ ಜನಗಳು ಕೆಲವು ವಿಷಯ ತಿಳಿಸೋರು. ಯಾರಾದರೂ ಕೆಟ್ಟ ಕೆಲಸ, ಕೆಟ್ಟ (ಸ್ತ್ರೀಯರ!) ಸಹವಾಸ ಮಾಡಿಬಂದು ಗರಡಿಯಲ್ಲಿ ಮಲಗಿದರೂ ಎಂದಿಟ್ಟುಕೊಳ್ಳಿ. ಹಂಗೆ ಕೆಟ್ಟ ಕೆಲಸ ಮಾಡಿ ಬಂದು ಮಲಗಿದವರನ್ನು ಬೇತಾಳಸ್ವಾಮಿಯು ನಿದ್ದೆಯಲ್ಲೇ ಎತ್ತಿಕೊಂಡು ಹೋಗಿ ಇನ್ನೊಬ್ಬರ ಮನೆಯ ಕಟ್ಟೆಯ ಮೇಲೋ, ಅಥವಾ ಊರಿನ ಯಾವುದಾದರೂ ಬೀದಿಯ ಮಧ್ಯದಲ್ಲೋ ಮಲಗಿಸಿಬಿಡುತ್ತಂತೆ! ಅದನ್ನು ಜನ ನಾವು ನೋಡಿದ್ದೀವಿ ಎಂದು ಹೇಳ್ತಾ ಇದ್ದರು. ಅದೆಷ್ಟು ನಿಜ ಅದೆಷ್ಟು ಸುಳ್ಳು ಎಂಬುದು ನನಗೆ ಗೊತ್ತಿಲ್ಲ. ಗರಡಿಗೆ ಮೈಲಿಗೆ ಮುಟ್ಟು ತಗಲಬಾರದು ಎಂಬುದು ಹಿರಿಯ ಪೈಲ್ವಾನರ ಆಶಯವಾಗಿದ್ದಂತೆ ಕಾಣುತ್ತದೆ. ನಮ್ಮ ತಂದೆಯವರ ಕಾಲದಲ್ಲಿ ಉಸ್ತಾದರಾಗಿದ್ದ ಕಾಲುಂಗುರದ ಬುಡ್ಡಣ್ಣ ಮುಟ್ಟು-ಚಟ್ಟು ಮುಟ್ಟಿ ಬಂದ ಪೈಲ್ವಾನರು ಗರಡಿಯೊಳಗೆ ಬಂದ್ರೆ 'ಹಂಗೆ ಬರಬಾರದಪ್ಪ ಗರಡಿಯೊಳಗೆ ಅಂತ ಹೇಳೋದನ್ನ ನಾನು ಕೇಳಿದ್ದೀನಿ. ಹಂಗಾಗಿ ಗರಡಿಗೂ, ಮೈಲಿಗೆಗೂ ದೂರ ಅಂತಾನೇ ತಿಳ್ಕಾಬೇಕು. ಹಂಗೇನೆ ಕೆಟ್ಟ ಕೆಲಸಕ್ಕೂ ಗರಡಿಗೂ ದೂರ ಅಂತಾನೇ ತಿಳ್ಕಬೇಕು. ಬೇತಾಳಸ್ವಾಮಿ ಅದಕ್ಕೆ ಗರಡಿಯೊಳಗೆ ಕಾಲಿಡುತ್ತಿದ್ದಂತೆಯೇ ಕಣ್ಣಿಗೆ ಬೀಳುತ್ತದ್ದೆ.

ಇನ್ನು ಗರಡಿಯ ಒಳಗೆ ಹೋಗುವ ಮುನ್ನ ಎಡಗಡೆಗೆ ಆಂಜನೇಯ ಸ್ವಾಮಿ ಇದೆ. ಆಂಜನೇಯಸ್ವಾಮಿ, ಬ್ರಹ್ಮಚಾರಿ, ಶಕ್ತಿವಂತ, ಅದಕ್ಕಾಗಿ ಗರಡಿಗಳಲ್ಲಿ ಆಂಜನೇಯ ಸ್ವಾಮಿ ಪೂಜೆ ಇದ್ದೇ ಇರುತ್ತೆ. ಆದರೆ ಇಂಥದ್ದೇ ದೇವರು ಇರಬೇಕು ಎಂಬ ನಿಯಮವಿರುವಂತೆ ಕಾಣುತ್ತಿಲ್ಲ. ಏಕೆಂದರೆ ದೊಡ್ಡ ಗರಡಿಗೆ ಸಮೀಪದಲ್ಲಿಯೇ ಇರುವ ಸಣ್ಣಗರಡಿಯಲ್ಲಿ ಶ್ರೀಕೃಷ್ಣನ ಪೂಜೆ ನಡೆಯುತ್ತದೆ. ಕೆಲವು ಗರಡಿಗಳಲ್ಲಿ ಲಕ್ಷ್ಮೀಪೂಜೆಯನ್ನು ಕೂಡಾ ಮಾಡುತ್ತಾರೆ.

ದೊಡ್ಡ ಗರಡಿಯ ಒಳಗೆ ಬಂದರೆ ಬಲಭಾಗದಲ್ಲಿ ಪೈಲ್ವಾನರುಗಳು ಲಡತ್ ಮಾಡುವ ಮಟ್ಟಿಯಿದೆ. ಆ ಮಟ್ಟಿಗೆ ಹೊಂದಿಕೊಂಡಿರುವ ಗೋಡೆಯ ಮಧ್ಯದಲ್ಲಿ ಮೌಲಾಲಿಯ ಮೂರ್ತಿಯಿದೆ. ಇದೂ ಅಷ್ಟೆ, ಮುಸ್ಲಿಮರ ಗುರುವಾದ ಮಹಮದ್ ಪೈಗಂಬರರ ತಮ್ಮ ಈ ಮೌಲಾಲಿಯವರು. ಈತ ದೊಡ್ಡ ಜಟ್ಟಿಯಂತೆ. ಈತ ದೊಡ್ಡಗರಡಿಯಲ್ಲಿ ಮಾತ್ರವಲ್ಲ, ಇಲ್ಲಿನ ಅನೇಕ ಗರಡಿಗಳಲ್ಲಿ ಗೌರವಿಸುವ

ವ್ಯಕ್ತಿಯಾಗಿದ್ದಾನೆ. ಗರಡಿಯಲ್ಲಿ ಜಾತಿ-ಮತಗಳ ಭೇದವಿಲ್ಲ. ಹಿಂದೂಗಳೂ ಮುಸ್ಲಿಮರು ಎಲ್ಲಾ ಗರಡಿಗೆ ಬರುತ್ತಾರೆ. ಮುಸ್ಲಿಮರು ಗರಡಿಗೆ ಬರುವುದರಿಂದ ಮೌಲಾಲಿಯನ್ನು ಗರಡಿಯಲ್ಲಿ ಇಟ್ಟಿರುತ್ತಾರೋ ಏನೋ, ನನಗೆ ಅಷ್ಟಾಗಿ ಸರಿಯಾಗಿ ಗೊತ್ತಿಲ್ಲ. ಸಾಮಾನ್ಯವಾಗಿ ಗರಡಿಗೆ ಬರುವ ಎಲ್ಲಾ ಪೈಲ್ವಾನರಿಗೂ ಆಂಜನೇಯಸ್ವಾಮಿ, ಮೌಲಾಲಿ ಮತ್ತು ಬೇತಾಳಸ್ವಾಮಿ ಗೊತ್ತಿರುವಂಥ ಕುಸ್ತಿಯ ಆರಾಧ್ಯ ಶಕ್ತಿಗಳು.

ಬೇರೆ ಊರುಗಳಲ್ಲಿ ಗರಡಿಯು ಸಂಪ್ರದಾಯಗಳು ಯಾವುವು ಎಂಬುದು ನನಗೆ ಅಷ್ಟು ಸರಿಯಾಗಿ ಗೊತ್ತಿಲ್ಲ. ನಮ್ಮ ಗರಡಿಯಲ್ಲಿ ನಾನು ನೋಡಿದಂತೆ ಆಚರಿಸಿಕೊಂಡು ಬಂದಿರುವ ಒಂದು ಸಂಪ್ರದಾಯವೆಂದರೆ ಶ್ರಾವಣದಲ್ಲಿ ನೂಲು ಹುಣ್ಣಿಮೆಯಲ್ಲಿ ಮಾಡುವ ಮಟ್ಟಿಪೂಜೆ. ಇದು ಗರಡಿಯಲ್ಲಿ ಅನುಸರಿಸುವ ಸಂಪ್ರದಾಯ ಮತ್ತು ಗರಡಿಯ ಹಬ್ಬ ಅಂತಾನೇ ಕರೀಬೇಕು. ನನಗೆ ಗೊತ್ತಿರೋ ಹಂಗೆ ದೊಡ್ಡಗರಡಿ, ಸಣ್ಣ ಗರಡಿ, ಬುರುಜನಹಟ್ಟಿ ಗರಡಿ, ಹಗಲು ದೀವಟಿಗೆ ಗರಡಿ - ಮತ್ತೆ ಉಳಿದ ಎಲ್ಲಾ ಗರಡಿಗಳಲ್ಲಿ ಈ ಮಟ್ಟಿ ಪೂಜೆಯು ವಿಶೇಷವಾಗಿ ಆಚರಿಸಲ್ಪಡುತ್ತದೆ.

ಮಟ್ಟಿಪೂಜೆಗೆ ಮೊದಲು ಗರಡಿಯಲ್ಲಿ ಪೂಜಿಸುವ ದೇವರುಗಳನ್ನು ಕೊಂಡೊಯ್ದು 'ಗಂಗೆ ಪೂಜೆ ಸಲ್ಲಿಸಿದ ಬಳಿಕ, ದೇವರುಗಳನ್ನು ಮಡಿಮಾಡಿಕೊಂಡು ಮೆರವಣಿಗೆಯಲ್ಲಿ ಗರಡಿಗೆ ತರುತ್ತಾರೆ. ಹಿಂಗೆ ಗಂಗೆಪೂಜೆ ಮತ್ತು ದೇವರುಗಳನ್ನು ಮಡಿಮಾಡಿಕೊಂಡು ಬರಲು ಒಂದೊಂದು ಗರಡಿಯವರು ಒಂದೊಂದು ಬಾವಿ ಅಥವಾ ಹೊಂಡಕ್ಕೆ ಹೋಗುವುದನ್ನು ದುರ್ಗದಲ್ಲಿ ನಡೆಸಿಕೊಂಡು ಬರುತ್ತಾ ಇದ್ದಾರೆ. ನಮ್ಮ ದೊಡ್ಡ ಗರಡಿಯವರು ಗಂಗಾಪೂಜೆ ಮತ್ತು ದೇವರುಗಳನ್ನು ಮಡಿ ಮಾಡಿಕೊಂಡು ಬರುವುದಕ್ಕೆ ಆರಿಸಿಕೊಂಡಿರುವುದು ಸಂತೆಹೊಂಡ. ಬುರುಜನಹಟ್ಟಿ ಗರಡಿಯವರು ಶೃಂಗೇರಿ ಮಠದ ಬಳಿ ಇರುವ ಚಂದ್ರಮೌಳೇಶ್ವರ ಹೊಂಡಕ್ಕೆ ಬರುತ್ತಾರೆ. ಸಣ್ಣ ಗರಡಿಯವರು ಈ ಸಂಬಂಧವಾಗಿ ಸಿಹಿನೀರು ಹೊಂಡಕ್ಕೆ ಹೋಗುತ್ತಾರೆ.

ನೂಲು ಹುಣ್ಣಿಮೆಯಲ್ಲಿ ಈ ರೀತಿ ಗಂಗೆ ಪೂಜೆಗೆ ಮೆರವಣಿಗೆಯಲ್ಲಿ ಹೋಗಿ ಬರುವುದನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಾರೆ. ಈ ಮೆರವಣಿಗೆಯಲ್ಲಿ ಗರಡಿಯ ಪೈಲ್ವಾನರುಗಳು, ಗರಡಿಯ ಸುತ್ತ ಮುತ್ತ ಇರೋ ಜನ, ಅಭಿಮಾನಿಗಳು, ಪೋಷಕರೂ ಎಲ್ಲರೂ ಪಾಲುಗೊಳ್ಳುತ್ತಾರೆ. ಈ ಮೆರವಣಿಗೆಯಲ್ಲಿ ಗರಡಿಯ ಶಕ್ತಿ ಪ್ರದರ್ಶನ ಒಂದು ಮುಖ್ಯ ಉದ್ದೇಶ. ಗರಡಿಯ ಶಕ್ತಿ ಪ್ರದರ್ಶನ ವೆಂದರೆ ಗರಡಿಯ ಪೈಲ್ವಾನರ ಶಕ್ತಿ ಪ್ರದರ್ಶನ! ಹಂಗಾಗಿ ಆ ದಿವಸ ಗರಡಿಯ ಸಣ್ಣ ಪುಟ್ಟ ಪೈಲ್ವಾನರಿಂದ ಹಿಡಿದು, ಅನೇಕ ದೊಡ್ಡ ಪೈಲ್ವಾನರ ತನಕ ಎಲ್ಲರೂ ಅಖಾಡದಲ್ಲಿ ಅಥವಾ ಮಟ್ಟಿಯಲ್ಲಿ ಕುಸ್ತಿಮಾಡುವಾಗ ಇರುವಂತೆಯೇ ಚಡ್ಡಿಗಳನ್ನು ಹಾಕಿಕೊಂಡು ಮೆರವಣಿಗೆಯಲ್ಲಿ

ಪಾಲ್ಗೊಳ್ಳುತ್ತಾರೆ. ಆಗ ಇವರು ಗರಡಿಯಲ್ಲಿ ಬಳಸುವ ಗುಂಡು, ಲೋಡು, ಮರದ ದಿಮ್ಮಿ - ಇಂಥವುಗಳನ್ನೆಲ್ಲಾ ಹೊತ್ತುಕೊಂಡು ಗತ್ತುಗಾರಿಕೆಯಿಂದ ನಡೆಯುತ್ತಾ ಬರುವುದನ್ನು ನೋಡುವುದೇ ಒಂದು ಸೊಗಸು. ಈ ಪೈಲ್ವಾನರ ಜೊತೆಗೆ ಮೆರವಣಿಗೆಯಲ್ಲಿ ವಿಶೇಷ ಆಕರ್ಷಣೆ ಎಂದರೆ ಮರಗಾಲು ಕುಣಿತ.

ಈ ಮರಗಾಲು ಕುಣಿತಕ್ಕೂ ಮಟ್ಟಿ ಪೂಜೆಗೂ ಏನು ಸಂಬಂಧ ಎನ್ನುವುದು ನನಗೆ ಅಷ್ಟಾಗಿ ಗೊತ್ತಿಲ್ಲ. ಬಹುಶಃ ಮರಗಾಲು ಕುಣಿತದವರಿಗೂ ಗೊತ್ತಿಲ್ಲ. ಅವರು ಒಳ್ಳೆ ಖುಷಿಯಿಂದ ಮರಗಾಲು ಹಾಕುತ್ತಾರೆ. ಎರಡು ಮೂರು ಅಡಿ ಮರಗಾಲುಗಳಿಂದ ಹಿಡಿದು ಐದಾರು ಅಡಿ ಎತ್ತರವಿರುವ ಮರಗಾಲುಗಳನ್ನು ಕಟ್ಟಿಕೊಂಡು, ಮೆರವಣಿಗೆಗೆ ಮುಂಚೆ ಅಭ್ಯಾಸ ಮಾಡುತ್ತಾರೆ. ಚಿಕ್ಕವರಿಂದ ಹಿಡಿದು ದೊಡ್ಡವರ ತನಕ ಇಂಥ ಮರಗಾಲು ಕುಣಿತದಲ್ಲಿ ಪಾಲುಗೊಳ್ಳುತ್ತಾರೆ. ನೂಲು ಹುಣ್ಣಿಮೆಯಲ್ಲಿ ಗಂಗೆಪೂಜೆಗೆಂದು ಮೆರವಣಿಗೆ ಹೊರಟು ಹಿಂದಿರುಗುವ ತನಕ, ಮೆರವಣಿಗೆಯಲ್ಲಿ ಎದ್ದು ಕಾಣುವ ಮುಖ್ಯ ಆಕರ್ಷಣೆ ಎಂದರೆ ಮರಗಾಲು ಕುಣಿತವೆ. ರೇಷ್ಮೆಯ ಬಣ್ಣಬಣ್ಣದ ರುಮಾಲುಗಳನ್ನು ತಲೆಗೆ ಸುತ್ತಿಕೊಂಡು, ಸಿಲ್ಕಿನ ಜುಬ್ಬ ಪಂಚೆಗಳಲ್ಲಿ ಮರಗಾಲಿನ ಮೇಲೆ ನಿಂತು, ರಸ್ತೆಗಳಲ್ಲಿ ಓಡಾಡುವ ಇವರನ್ನು ನೋಡುವ ದೃಶ್ಯವೇ ಬಹಳ ಚೆನ್ನಾಗಿರುತ್ತದೆ. ಆರಡಿ ಮರದಕಾಲಿನ ಮೇಲಿರೋ ಮನುಷ್ಯ ಹೆಂಗೆ ಕಾಣಬಹುದು ಎಂಬುದನ್ನು ನೀವೇ ಊಹಿಸಿಕೊಳ್ಳಬಹುದು! ನಮ್ಮ ಗರಡಿಯ ಜನ ಎಷ್ಟು ಧೈರ್ಯಶಾಲಿಗಳು ಅಂದರೆ ಅಷ್ಟು ಎತ್ತರದ ಮರಗಾಲು ಹಾಕಿಕೊಂಡು ಮೆರವಣಿಗೆಯಲ್ಲಿ ನಡೀತಿದ್ದರೂ ಹೆದರುವುದೇ ಇಲ್ಲ! ಮುಗ್ಗರಿಸಿ ಬಿದ್ದದ್ದೂ ಇಲ್ಲ! ಇನ್ನು ಕೆಲವರು ಇದನ್ನು ಕ್ರೀಡೆ ಎಂದು ಭಾವಿಸಿ ಮರಗಾಲಿನ ಒಂದು ಕಾಲನ್ನು ಎತ್ತಿ, ಮತ್ತೊಂದು ಕಾಲನ್ನು ನೆಲಕ್ಕೆ ಊರಿನಿಲ್ಲುವ ರೀತಿ, ನೋಡುವ ಜನಗಳಿಗೆ ಅದ್ಭುತ ಮನರಂಜನೆ ನೀಡುತ್ತದೆ! ವಾದ್ಯಗಳು, ಡೊಳ್ಳು, ಉರುಮೆಗಳ ಸದ್ದುಗದ್ದಲ ಸಂಭ್ರಮಗಳಲ್ಲಿ ಈ ಮೆರವಣಿಗೆ ಸಂಜೆಯ ಹೊತ್ತಿಗೆ ಗರಡಿ ಸೇರಿಕೊಳ್ಳುತ್ತದೆ.

ಹಿಂಗೆ ಮೆರವಣಿಗೆಯಿಂದ ಹಿಂದಿರುಗಿದ ಬಳಿಕ ಗರಡಿಯಲ್ಲಿ ಉಳಿದ ಒಂದು ಮುಖ್ಯ ಕಾರ್ಯಕ್ರಮ ಎಂದರೆ ಮಟ್ಟಿಪೂಜೆ. ಗಂಗೆಪೂಜೆ ಮುಗಿಸಿದ ಅದೇ ವಾರದಲ್ಲಿಯೇ ಶನಿವಾರದ ದಿನ ಮಟ್ಟಿಪೂಜೆ ಮಾಡುತ್ತಾರೆ ಈ ಮಟ್ಟಿಪೂಜೆಗಾಗಿ ಊರಿನ ಎಲ್ಲಾ ಗರಡಿಗಳಿಗೂ ಆಹ್ವಾನ ಹೋಗುತ್ತದೆ. ಇದೆ ರೀತಿ ಊರಿನ ದೊಡ್ಡ ಮನುಷ್ಯರಿಗೂ, ಅಭಿಮಾನಿಗಳಿಗೂ, ಪೋಷಕರಿಗೂ ಆಹ್ವಾನ ನೀಡಲಾಗುತ್ತದೆ. ಇಂಥ ಸಂದರ್ಭಗಳಲ್ಲಿ ಗರಡಿಯ ಸಾಧನೆ, ಗಳಿಸಿದ ಕೀರ್ತಿ, ಹೆಸರು ಇತ್ಯಾದಿಗಳನ್ನು ಬಂದ ಹಿರಿಯರಿಗೆ ಪರಿಚಯಿಸಲಾಗುತ್ತದೆ. ಈ ಸಂದರ್ಭದಲ್ಲಿ ಲಡತ್ ಮಾಡುವ ಪೈಲ್ವಾನರುಗಳಿಗೆಲ್ಲ ಮಟ್ಟಿ ಪೂಜೆ ಮುಖ್ಯವಾಗಿರುತ್ತದೆ. ಮಟ್ಟಿ ಎಂದರೆ ಭೂಮ್ತಾಯಿ, ಆ ಭೂಮ್ತಾಯಿಗೆ

ಪೂಜೆ ಮಾಡುವುದರ ಮೂಲಕ ಪೈಲ್ವಾನರುಗಳಿಗೆ ಯಾವ ಕಷ್ಟಗಳು ಬಾರದಿರಲಿ ಎಂಬ ಉದ್ದೇಶವಿರುವುದರಿಂದ, ಪೈಲ್ವಾನರುಗಳು ಬಾಳಾ ಶ್ರದ್ಧೆ ಭಯ-ಭಕ್ತಿಗಳಿಂದ ಮಟ್ಟಿಪೂಜೆಯಲ್ಲಿ ಪಾಲುಗೊಳ್ಳುತ್ತಾರೆ.

ಈ ಮಟ್ಟಿಯಲ್ಲಿ ದೊಡ್ಡಗರಡಿಯ ಉಸ್ತಾದರು ಉಂಡೆಗಾಯನ್ನು ಬಚ್ಚಿಡುತ್ತಾರೆ. ಇದನ್ನು ಜಟ್ಟಿಗಳು ಮೊಣಕೈಯಲ್ಲಿ ತಿವಿದು ತಿವಿದು ಹುಡುಕುತ್ತಾರೆ. ಯಾರಿಗೆ ಆ ಉಂಡೆಕಾಯಿ ಸಿಗುತ್ತದೋ ಅವರಿಗೆ ಶುಭ ಎಂದು ಭಾವಿಸುತ್ತಾರೆ. ಶುಭ ಎಂದರೆ ಏನು - ಮುಂದೆ ಆ ಜಟ್ಟಿ ಆಡೋ ಕುಸ್ತಿಯಲ್ಲಿ ಜಯ ಸಿಗುತ್ತದೆ ಅನ್ನೋ ನಂಬಿಕೆ. ಮಟ್ಟಿಯನ್ನು ಮಟ್ಟಮಾಡಿ ಇಡೀ ಮಟ್ಟಿಯನ್ನು ಹೂವಿನಿಂದ ಅಲಂಕರಿಸುತ್ತಾರೆ. ಹಿಂಗೆ ಹೂವಿಂದ ಅಲಂಕಾರ ಮಾಡಿದ ಮಟ್ಟಿ ನೋಡಲು ಚೆನ್ನಾಗಿರುತ್ತದೆ. ಬೇರೆ ಗರಡಿಯವರು ಈ ರೀತಿ ಮಟ್ಟಿ ಪೂಜೆಗೆ ಆಹ್ವಾನ ಸ್ವೀಕರಿಸಿ ಬರುವುದು ತಮಗೆ ದೊರೆತ ಗೌರವ ಎಂದು ಭಾವಿಸುತ್ತಾರೆ. ಆದ್ದರಿಂದ ಅವರು ಮಟ್ಟಿ ಪೂಜೆಗೆ ಹಣ್ಣುಕಾಯಿಗಳ ಜೊತೆಗೇ ಬರುತ್ತಾರೆ.

ಸಾಮಾನ್ಯವಾಗಿ ಹೆಣ್ಣುಮಕ್ಕು ಗರಡಿಯೊಳಕ್ಕೆ ಪ್ರವೇಶಿಸುವುದಿಲ್ಲ. ಮುಟ್ಟು- ಚಟ್ಟು, ಮಡಿ-ಮೈಲಿಗೆ ಅಂತ ಗರಡಿಯೊಳಕ್ಕೆ ಬಿಡುವುದಿಲ್ಲ. ಮಟ್ಟಿ ಭೂಮ್ತಾಯಿಯಾಗಿರುವುದರಿಂದ, ಭೂಮ್ತಾಯಿ ಹೆಣ್ಣಾಗಿರುವುದರಿಂದ, ಗರಡಿಯ ಸುತ್ತ- ಮುತ್ತ ಇರುವ ಹೆಣ್ಣು ಮಕ್ಕಳೆಲ್ಲಾ ಒಂದು ದಿನದ ಮಟ್ಟಿಗೆ ಗರಡಿಗೆ ಬಂದು ಮಟ್ಟಿಪೂಜೆ ಸಲ್ಲಿಸಿ ಹೋಗುತ್ತಾರೆ.

ಮಟ್ಟಿಗೆ ಏನಾದರೂ ದೋಷ ತಗುಲಿದೆ ಅಂತಾಲೋ, ಮುಂದೆ ಕುಸ್ತಿಯಾಡುವ ಪೈಲ್ವಾನರಿಗೆ ಯಾವುದೇ ಅಪಾಯ ಸಂಭವಿಸಬಾರದೂ ಅಂತಾಲೋ, ಪೂಜೆಯ ಮಾರನೆಯ ದಿನ ಕುರಿಯೊಂದನ್ನು ಬಲಿಕೊಟ್ಟು, ರಕ್ತವನ್ನು ಮಟ್ಟಿಯ ಮಣ್ಣಿಗೆಲ್ಲಾ ಸಿಂಪಡಿಸುತ್ತಾರೆ. ಹೀಗೆ ಗರಡಿಯಲ್ಲಿ ನಡೆಯುವ ನೂಲು ಹುಣ್ಣಿಮೆ ನನ್ನ ನೆನಪಿನಲ್ಲಿ ಉಳಿದಿದೆ. ಈಗ ನೂಲು ಹುಣ್ಣಿಮೆ, ಮಟ್ಟಿಪೂಜೆಯಲ್ಲಿ ಮೊದಲಿನಂಥಾ ವಿಜೃಂಭಣೆ, ವೈಭವ ಕಾಣಿಸ್ತಾ ಇಲ್ಲ. ಇದಕ್ಕೆ ಕಾರಣ ಗರಡಿಗೆ ಬರುವ ಪೈಲ್ವಾನರ ಸಂಖ್ಯೆ ಬಾಳಾ ಇಳಿದು ಹೋಗಿರೋದು, ಸುತ್ತುಮುತ್ತಲ ಜನಕ್ಕೂ ಗರಡಿ ಬಗ್ಗೆ ಮೊದಲಿದ್ದ ಅಭಿಮಾನ, ಪ್ರೀತಿ ಕಡಿಮೆಯಾಗಿರೋದು.

ಇನ್ನು ದೊಡ್ಡಗರಡಿ-ಸಣ್ಣಗರಡಿಗೆ ಸಂಬಂಧಪಟ್ಟಂತೆ ನಾನು ಸಣ್ಣವನಾಗಿದ್ದಾಗಿನಿಂದಾ ಕೇಳುತ್ತಾ ಬಂದಿದ್ದೀನಿ, ದೊಡ್ಡಗರಡಿ ಅಂದ್ರೆ ಗಂಡು, ಅದಕ್ಕೆ ಮಾವಿನಕಾಯಿ ರೂಪದಲ್ಲಿರುವ ಸಂಕೇತವನ್ನು ಗರಡಿಯವರು ಸ್ವಂತಕ್ಕೆ ಬಳಸುತ್ತಿದ್ದ

ನಿಶಾನೆಯಲ್ಲಿ ಬಳಸುತ್ತಿದ್ದರು. ಸಣ್ಣ ಗರಡಿಯವರು ತುರಾಯಿ) ಚಿನ್ಹೆಯನ್ನು ತಮ್ಮ ನಿಶಾನೆಯಲ್ಲಿ ಬಳಸುತ್ತಿದ್ದರು. ತುರಾ ಸ್ತ್ರೀಯನ್ನು ಪ್ರತಿನಿಧಿಸುವ ಹೂವಿನ ಸಂಕೇತ. ಹಗಲು ದೀವಟಿಗೆ ಗರಡಿಯವರು ತಮ್ಮ ನಿಶಾನೆಯಲ್ಲಿ ದೀವಟಿಗೆಯನ್ನು ಸಂಕೇತವಾಗಿ ಬಳಸುತ್ತಿದ್ದರು. ಹಿಂದೆ ಈ ಮೂರೂ ಗರಡಿಗಳಿಗೆ ಮದಕರಿನಾಯಕ ಯಜಮಾನನಂತೆ. ಆದ್ದರಿಂದ ಈ ಮೂರು ಗರಡಿಗಳ ಸಂಕೇತವಾದ ಕಲ್ಕಿ, ತುರಾ(ಯಿ), ದೀವಟಿಗೆಗಳ ಸಂಕೇತವನ್ನು ಬಳಸಿ ಮದಕರಿನಾಯಕರು ಬಳಸುತ್ತಿದ್ದ ಪೇಟ(ಕಿರೀಟ) ವನ್ನು ವಿನ್ಯಾಸಗೊಳಿಸುತ್ತಿದ್ದರಂತೆ. ಅದು ಏನೇ ಆಗಲಿ, ನಾನು ಚಿಕ್ಕವನಿದ್ದಾಗ ಕಲ್ಕಿ ಮತ್ತು ತುರಾ(ಯಿ) ಗೆ ಸಂಬಂದಿಸಿದಂತೆ ಒಂದು ಸಂಪ್ರದಾಯವಿತ್ತು. ಅದೆಂದರೆ ಗಂಡನ್ನು ಕುರಿತ ದೊಡ್ಡಗರಡಿಯವರು ಲಾವಣಿ ಹಾಡಿದರೆ, ಹೆಣ್ಣಿನ ಶ್ರೇಷ್ಠತೆಯನ್ನು ಕುರಿತು ಸಣ್ಣ ಗರಡಿಯವರು ಲಾವಣಿ ಹಾಡುತ್ತಿದ್ದರು. ಇಂಥ ಕಲ್ಕಿ-ತುರಾ ಹಾಡುಗಳು ದೊಡ್ಡಪೇಟೆಯ ಬಸವಣ್ಣ ದೇವರ ಗುಡಿಯಲ್ಲಿ ಹುಚ್ಚಂಗಮ್ಮನ ಗುಡಿಯಲ್ಲಿ, ಎರಡೂ ಗರಡಿಯವರೂ ಸವಾಲು-ಜವಾಬು ತರಹ ಹಾಡುತ್ತಿದ್ದರು. ಅಂಥ ಒಂದು ಸಂಪ್ರದಾಯ ಕೂಡಾ ಗರಡಿಗಳಿಂದ ಕಣ್ಮರೆಯಾಗಿ ನಲವತ್ತು, ಐವತ್ತು ವರ್ಷಗಳ ಮೇಲಾಗಿದೆ. ಈಗಂತೂ ಲಾವಣಿ ಹಾಡುವವರು ಸಿಕ್ಕುವುದೇ ಕಷ್ಟವಾಗಿದೆ.

**ಸ್ವಾತಂತ್ರ್ಯ ಚಳುವಳಿಗೆ ಅಳಿಲು ಸೇವೆ!**

ನಮ್ಮ ದೊಡ್ಡಗರಡಿ ಬಗ್ಗೆ ಯಾರು ಹೇಳುವುದಕ್ಕೆ ಹೊರಟರೂ ಏನ್‌ತಾನೆ ಹೇಳೋಕೆ ಆಗುತ್ತೆ? ಒಳ್ಳೊಳ್ಳೆ ಕುಸ್ತಿಪಟುಗಳ ಬಗ್ಗೆ ಹೇಳಬಹುದು. ನಮ್ಮ ನಂಜಪ್ಪ, ರಾಮಪ್ಪನಂಥವರ ಹೈಕ್ಲಾಸ್ ಕುಸ್ತಿಗಳ ಬಗ್ಗೆ ಬರೆದಷ್ಟೂ ಇದೆ. ಪ್ರತಿಯೊಂದು ಗರಡಿಯಲ್ಲಿಯೂ ಇಂಥ ದೊಡ್ಡ ದೊಡ್ಡ ಪೈಲ್ವಾನರ ಕಥೆಗಳು ಇದ್ದೇ ಇರುತ್ತದೆ. ನನ್ನ ಗುರುಗಳಾದ ನಂಜಪ್ಪನವರನ್ನು ಈಗ ನೆನೆದರೂ ಅವರು ಎಂಥಾ ಪೈಲ್ವಾನರು, ಕುಸ್ತಿ ಕಲೆಯ ಎಂಥೆಂಥಾ ವಿದ್ಯೆ ಅವರ ವಶವಾಗಿತ್ತು ಎಂಬುದು ಒಂದಾದ ಮೇಲೊಂದು ಸಂಗತಿಗಳು ನೆನಪಿಗೆ ಬರುತ್ತದೆ. ನಮ್ಮ ದೊಡ್ಡಗರಡಿ ಮತ್ತು ನಂಜಪ್ಪನವರಿಗೆ ಸಂಬಂಧಿಸಿದಂತೆ ಒಂದು ಅತಿಮುಖ್ಯ ಸಂಗತಿಯನ್ನು ನಾನೀಗ ಹೇಳಬೇಕಾಗಿದೆ. ಅದು ನಮ್ಮದೇಶದ ಸ್ವಾತಂತ್ರ್ಯ ಚಳುವಳಿಗೆ ಸಂಬಂದಿಸಿದಂತೆ ನಮ್ಮ ಗರಡಿ ಮತ್ತು ನಂಜಪ್ಪರು ಪಾಲುಗೊಂಡ ಒಂದು ಧೈರ್ಯ, ಸಾಹಸದ ಕಥೆ.

೧೯೪೭ಕ್ಕೆ ಮುಂಚೆ ನಮ್ಮ ಭಾರತ ದೇಶದ ಎಲ್ಲಾ ಕಡೆಯಲ್ಲಿಯೂ ಸ್ವಾತಂತ್ರ್ಯ ಚಳುವಳಿ ಒಂದೇ ಸಮನೆ ಬೇರೆ ಬೇರೆ ರೀತಿಯಲ್ಲಿ ನಡೀತಿತ್ತು. ಈ ಚಳುವಳಿ ನಡೆಯುತ್ತಿರೋ ಕಾಲಕ್ಕೆ ನನಗೆ ಆಗ ಹದಿನೈದು ಹದಿನಾರು ವರ್ಷಗಳಿರಬಹುದು. ಬ್ರಿಟಿಷ್

ಸರ್ಕಾರದ ವಿರುದ್ಧ ಬಿರುಸಿನಿಂದ ಹೋರಾಟ ಇಡೀ ದೇಶದಲ್ಲಿ ನಡೆಯುತ್ತಿರಬೇಕಾದರೆ, ಚಿತ್ರದುರ್ಗದಲ್ಲಿಯೂ ಇಂಥ ಚಳುವಳಿಯನ್ನು ಊರು ಊರುಗಳ ಸ್ವಾತಂತ್ರ ಪ್ರೇಮಿಗಳು, ನಡೆಸಿಕೊಂಡು ಬರುತ್ತಿದ್ದರು. ಸುತ್ತಮುತ್ತಲ ಹಳ್ಳಿಗಳವರೂ ಸರ್ಕಾರವನ್ನು ವಿರೋಧಿಸಿ ಪ್ರತಿಭಟನೆಯ ಮೆರಗಣಿಗೆಯನ್ನು ನಡೆಸುತ್ತಿದ್ದರು. ಹಿಂಗೆ ದುರ್ಗದಲ್ಲಿ ನಡೆಸುತ್ತಿದ್ದ ಪ್ರತಿಭಟನೆಯ ಮೆರವಣಿಗೆಯಲ್ಲಿ ಚಳುವಳಿಗಾರರು

ದಂಡು ಬಂತು ದಂಡು

ಯಾವೂರು ದಂಡು

ಸಿದ್ಧವನಳ್ಳಿ ದಂಡು

ಎಂದು ಹಾಡು ಹೇಳಿಕೊಳ್ತಾ ಸಾಗುತ್ತಿದ್ದರು. ಇಂಥ ಚಳುವಳಿಗಳು ಆಗ ನಡೆಯದೇ ಇದ್ದ ದಿನವೇ ಇಲ್ಲವೆನ್ನಬಹುದು. ಅಷ್ಟು ತೀವ್ರವಾಗಿತ್ತು ಬ್ರಿಟಿಷ್ ಸರ್ಕಾರದ ವಿರೋಧ. ಅಷ್ಟು ತೀವ್ರವಾಗಿತ್ತು, ಜನಗಳಲ್ಲಿ ದೇಶದ ಸ್ವಾತಂತ್ರ್ಯ ಪ್ರೇಮ.

ನಮ್ಮೂರಲ್ಲಿ ಸಿದ್ಧವನಹಳ್ಳಿ ನಿಜಲಿಂಗಪ್ಪನವರಂತೆಯೇ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡ ಇನ್ನೂ ಅನೇಕ ದೊಡ್ಡ ಮನುಷ್ಯರುಗಳು ಇದ್ದರು. ನಮ್ಮೂರಿನವರು ಈಗಲೂ ನೆನೆಸಿಕೊಳ್ಳುವಂಥವರಲ್ಲಿ ಭೀಮಪ್ಪ ನಾಯಕರು ಒಬ್ಬರು. ನವ ಮೈಸೂರು ಅಂದರೆ ಕರ್ನಾಟಕ ರಾಜ್ಯ ೧೯೫೬ ನವೆಂಬರ್ ೧ ರಂದು ನಿರ್ಮಾಣವಾದಾಗ ಸಿದ್ದವನಹಳ್ಳಿ ನಿಜಲಿಂಗಪ್ಪನವರ ಸರ್ಕಾರದಲ್ಲಿ ಭೀಮಪ್ಪನಾಯಕರು ಸ್ವಲ್ಪಕಾಲ ಮಂತ್ರಿಗಳಾಗಿದ್ದರು. ಚಿತ್ರದುರ್ಗದ ಪೌರಸಭೆಗೆ ಅವರು ಅಧ್ಯಕ್ಷರಾಗಿದ್ದಾಗ ಊರಿನ ಸರ್ವತೋಮುಖ ಪ್ರಗತಿಗೆ ಬಹಳ ದಿಟ್ಟವಾಗಿ ಧೈರ್ಯವಾಗಿ ಪ್ರಯತ್ನಿಸಿದರು ಅಂತ ಈಗಲೂ ಜನ ಅವರನ್ನು ಮೆಚ್ಚಿಕೊಂಡಾಡ್ತಿರುತ್ತಾರೆ. ಆ ಭೀಮಪ್ಪನಾಯಕರು, ವಕೀಲ್ ಕೆಂಚಪ್ಪನವರು, ಕೊಂಡಪ್ಪನವರು - ಇವರೆಲ್ಲಾ ದುರ್ಗದಲ್ಲಿ ಸ್ವಾತಂತ್ರ್ಯ ಚಳುವಳಿಗೆ ಉತ್ತೇಜನ ಕೊಡುತ್ತಿದ್ದ ನಾಯಕರಲ್ಲಿ ಕೆಲವರು. ಇವರಿಗೆಲ್ಲಾ ನಮ್ಮ ದೊಡ್ಡಗರಡಿ ಸಂಪರ್ಕವಿತ್ತು. ಗರಡಿಯವರಾದ ನಾವೂ ಕೂಡಾ ಬ್ರಿಟಿಷ್ ಸರ್ಕಾರ ವಿರೋಧಿಸಿ, ಸ್ವಾತಂತ್ರ್ಯ ಪಡೆಯುವುದರ ಬಗ್ಗೆ ಹೋರಾಟ ಮಾಡೋಕು ಅಂತ ಮಾತಾಡಿಕೊಂಡೆವು. ದೇಶದ ಸ್ವಾತಂತ್ರ್ಯ ಹೋರಾಟದ ಎಲ್ಲ ಸುದ್ದಿಗಳು ಎಲ್ಲರಿಗೂ ಮುಟ್ಟುತ್ತಿದ್ದಂತೆಯೇ ನಮ್ಮ ಗರಡಿಗೂ ಬಂದು ಮುಟ್ಟುತ್ತಿದ್ದವು. ಆದರಿಂದ ನಾವು ಹೆಂಗಾದರೂ ಪಾಲುಗೊಂಡು ಸರ್ಕಾರನ ವಿರೋಧಿಸಬೇಕು, ಪ್ರತಿಭಟಿಸಬೇಕು ಅಂತ ಮಾತಾಡಿಕೊಂಡೆವು, ನಾನು ಮೊದಲೇ ತಿಳಿಸಿದಂತೆ ಭೀಮಪ್ಪನಾಯಕರು, ವಕೀಲ್ ಕೆಂಚಪ್ಪನವರು ಕೊಂಡಪ್ಪರು ಇಂಥವರೆಲ್ಲ ನಮಗೆ ಸರ್ಕಾರವನ್ನು ಪ್ರತಿಭಟಿಸುವುದಕ್ಕೆ ಉತ್ತೇಜನ ಕೊಟ್ಟರು; ಕುಮ್ಮಕ್ಕು ಕೊಟ್ಟರು. ಹಿಂಗಾಗಿ ಗರಡಿಯಿಂದ ಒಂದು ದೊಡ್ಡ ದಂಡು ಮೆರವಣಿಗೆಯಲ್ಲಿ ಹೊರಟು, ತಾಲ್ಲೂಕ್ ಆಫೀಸಿನ ಮೇಲೆ ರಾಷ್ಟ್ರಧ್ವಜ ಹಾರಿಸಬೇಕು ಎಂದು ನಿರ್ಧರಿಸಲಾಯಿತು.

ಆಗ ಪೈಲ್ವಾನ್ ವೀರಬಸಪ್ಪ ಅಂತ ಒಬ್ಬರು ಇದ್ದರು. ಆತ ಭಾರೀ ತಾಕು ಠೀಕಿನ ಮನುಷ್ಯ, ವಿಶೇಷವಾಗಿರುವ ಉಡುಪುಗಳನ್ನು ಧರಿಸಿ, ತಲೆಗೆ ಪೇಟ ಸುತ್ತಿ, ಪಂಚಕಲ್ಯಾಣಿ ಕುದುರೆ ಮೇಲೆ (ಐದು ಬಣ್ಣವಿರುವ ಕುದುರೆ) ಸವಾರಿ ಮಾಡಿಕೊಂಡು ಆತ ದುರ್ಗದ ರಸ್ತೆಗಳಲ್ಲಿ ಜರ್ಬಾಗಿ ಓಡಾಡುತ್ತಿದ್ದ. ಆತನ ಮಗ ಬಸಪ್ಪ ಅಂತ ಇದ್ದ. ಅವನೂ ನಮ್ಮ ಪೈಲ್ವಾನ್ ನಂಜಪ್ಪರೂ ದೋಸ್ತಿಗಳು. ಬಸಪ್ಪ, ನಂಜಪ್ಪ, ಗರಡಿಯ ಇತರೆ ಪೈಲ್ವಾನರುಗಳು, ಹಟ್ಟಿ ಜನಗಳು ಎಲ್ಲಾ ಒಟ್ಟಾಗಿ ಸುಮಾರು ನಾನ್ನೂರು ಐನೂರಷ್ಟು ಜನಗಳು ದೊಡ್ಡಗರಡಿಯ ದಂಡು ಮಾಡಿಕೊಂಡು ಮೆರವಣಿಗೆ ಹೊರೆಟೆವು. ಈ ದಂಡಿನಲ್ಲಿ ನಾನೂ ಇದ್ದುದರಿಂದ ಅಲ್ಲಿ ಪ್ರತ್ಯಕ್ಷವಾಗಿ ಏನು ನಡೆಯಿತು ಎಂಬುದನ್ನು ನೆನಪಿಸಿಕೊಂಡು ಹೇಳಬಲ್ಲೆ.

ಉತ್ಸಾಹ, ಕೇಕೆ, ಸಂಭ್ರಮದಿಂದ ಹೊರಟ ದೊಡ್ಡಗರಡಿಯ ದಂಡು ರಸ್ತೆಯುದ್ದಕ್ಕೂ ,

ದಂಡು ಬಂತು ದಂಡು

ದೊಡ್ಡಗರಡಿ ದಂಡು

ಎಂದು ಹಾಡುತ್ತಾ ಮುನ್ನುಗ್ಗುತ್ತಿತ್ತು, ಮಧ್ಯೆ ಮಧ್ಯೆ

"ವಂದೇ ಮಾತರಂ,

ಬೋಲೋ ಭಾರತ ಮಾತಾಕಿ ಜೈ

ಎಂಬ ಘೋಷಣೆಗಳನ್ನು ಗಟ್ಟಿಯಾಗಿ ಕೂಗುತ್ತಾ ದೊಡ್ಡಗರಡಿ ದಂಡು ಸಾಗುತ್ತಿತ್ತು. ಹೀಗೆ ಕೂಗುತ್ತಾ, ಆರ್ಭಟಿಸುತ್ತಾ ನಾವೆಲ್ಲಾ ತಾಲ್ಲೂಕ್ ಆಫೀಸಿನ ಬಳಿ ಬಂದೆವು.

ನಾವು ನಾನ್ನೂರು ಜನಕ್ಕಿಂತಲೂ ಮಿಕ್ಕಿದ್ದರಿಂದ ಅಲ್ಲಿದ್ದ ಪೋಲಿಸರಿಗೆ ನಮ್ಮನ್ನು ಕಂಟ್ರೋಲ್ ಮಾಡಲು ಆಗಲಿಲ್ಲ. ಅಷ್ಟರಲ್ಲಿ ಆಗಿನ ಜಿಲ್ಲಾಧಿಕಾರಿಗಳಾದ ಹೆಚ್. ಎನ್. ಪಾಳೇಗಾರರು ಅಲ್ಲಿಗೆ ಬಂದರು. ನಿಯಂತ್ರಣಕ್ಕೆ ಬಾರದಷ್ಟು ಗಲಭೆ, ಗದ್ದಲಗಳು ಚಳುವಳಿಕಾರರಿಂದ ನಡೆಯುತ್ತಿರುವಂತೆ ಕಂಡು ಬಂತು. ಜಿಲ್ಲಾಧಿಕಾರಿಗಳಾದ ಹೆಚ್. ಎನ್. ಪಾಳೇಗಾರರು ಇದಕ್ಕೆ ಏನು ಮಾಡಬೇಕು ಎಂದು ಇನ್ನೂ ಚಿಂತಿಸುತ್ತಿದ್ದರು. ಅಷ್ಟರಲ್ಲಿ ನಮ್ಮ ದೊಡ್ಡ ಗರಡಿಯ ದಂಡಿನಲ್ಲಿ ಬಂದಿದ್ದ ಸಾಹಸಿಗಳು ಅದ್ಯಾವ ಮಾಯದಲ್ಲೋ ತಾಲ್ಲೂಕ್ ಆಫೀಸಿನ ಮೇಲೆ ಹತ್ತಿ ನಮ್ಮ ರಾಷ್ಟ್ರಧ್ವಜವನ್ನು ಅಲ್ಲಿ ಹಾರಿಸಿಬಿಟ್ಟರು.

ಜಿಲ್ಲಾಧಿಕಾರಿಗಳು ನಿಯಂತ್ರಣಕ್ಕೆ ಬಾರದ ಈ ಗಲಭೆ ಗೊಂದಲಗಳ ಮಧ್ಯೆದಲ್ಲಿ ತಾಲ್ಲೂಕ್ ಆಫೀಸಿನ ಮೇಲೆ ಹಾರಿಸಿದ ಬಾವುಟ ನೋಡುತ್ತಿದ್ದಂತೆಯೇ ಸಂಯಮ



ಕಳೆದುಕೊಂಡು ಕೋಪದಿಂದ ಫೈರಿಂಗ್ ಆರ್ಡರ್ ಮಾಡಿದರು. ದೊಡ್ಡಗರಡಿಯ ದಂಡು ಮಾಡಿಕೊಂಡು ಬಂದಿದ್ದ ಜನರ ಜೊತೆಗೆ, ಆಫೀಸಿಗೆ ಬಂದಿದ್ದ ಜನ, ಬೇರೆ ಜನಗಳು ಅಲ್ಲಿ ನೆರೆದಿದ್ದವರು ಕಂಡ ಕಂಡ ಕಡೆಗೆ ದಿಕ್ಕಾಪಾಲಾಗಿ ಓಡತೊಡಗಿದರು.

ಕೆಲವರು ಓಡಿಬಂದವರು ಮೆಜಸ್ಟಿಕ್ ಹೋಟೆಲ್ಲಿನಲ್ಲಿ ಒಳಹೊಕ್ಕು (ಈಗ ಮದಕರಿನಾಯಕ ಪ್ರತಿಮೆ ಸ್ಥಾಪಿಸಿರುವ ಪಕ್ಕ - ಚಿತ್ರದುರ್ಗ ಮುನಿಸಿಪಾಲಿಟಿ ಇರುವುದರ ಎದುರು) ಆಶ್ರಯ ಪಡೆದರು. ಪೊಲೀಸರು ಜನ ಕಂಡಕಂಡಲ್ಲಿ ಅಟ್ಟಿಸಿಕೊಂಡು ಹೋಗಿ ಗುಂಡು ಹಾರಿಸಿದರು.

ನಾನು ಮತ್ತೆ ಕೆಲವರು ಓಲ್ಡ್ ಮಿಡ್ಲ್ ಸ್ಕೂಲ್ ಫೀಲ್ಡಿನಲ್ಲಿ ತಪ್ಪಿಸಿಕೊಂಡು ಓಡಿ ಬಂದೆವು. ಓಲ್ಡ್ ಮಿಡ್ಲ್ ಸ್ಕೂಲ್ ಎದುರುಗಡೆ ಒಂದು ಬುಕ್ ಡಿಪೋ ಇತ್ತು. ಅಲ್ಲಿ ಹೆಂಗೆಂಗೂ ತಪ್ಪಿಸಿಕೊಂಡು ಓಡಿಬಂದು ಆ ಬುಕ್ ಡಿಪೋದಲ್ಲಿ ಅಡಗಿ ಕುಳಿತೆವು. ಪೋಲೀಸರು ಹಾರಿಸುತ್ತಿದ್ದ ಗುಂಡಿನ ಶಬ್ದ ಇಡೀ ದುರ್ಗಕ್ಕೆ ಕೇಳಿಸುತ್ತಿತ್ತು.

ನಮಗೆ ಆಗ ತಿಳಿದ ಪ್ರಕಾರ ಇದೇ ಫಸ್ಟ್ ಫೈರಿಂಗ್ ಆರ್ಡರ್ ಚಿತ್ರದುರ್ಗದಲ್ಲಿ ನಡೆದದ್ದು. ದುರ್ಗದ ತುಂಬಾ ಫೈರಿಂಗ್‌ನ ಶಬ್ದ ತಪ್ಪಿದರೆ ಹೊಗೆ ತುಂಬಿಕೊಂಡಂಗೆ ಕಾಣಿಸುತ್ತಿತ್ತು. ಇಷ್ಟಾದರೂ ಫೈರಿಂಗ್ ಆಗಿದ್ದರಿಂದ ಯಾವ ಸಾವು-ನೋವಿನ ಸುದ್ದಿ ಕೇಳಿಬರಲಿಲ್ಲ. ಆದರೆ ಕಾರ್ಪೆಂಟರ್ ಕೆಲಸ ಮಡುತ್ತಿದ್ದ ನಮ್ಮ ದೊಡ್ಡಗರಡಿಯ ಪೈಲ್ವಾನ್ ಪಾಪಣ್ಣರಿಗೆ ತೊಡೆಯಲ್ಲಿ ಗುಂಡು ತೂರಿಕೊಂಡು ಹೋಯಿತು. ಆದರೆ ಆತ ಸಾಯಲಿಲ್ಲ. ಹೆಂಗೋ ಉಳಿದ. ಆತನಿಗೆ ಈಗಲೂ ಸ್ವಾತಂತ್ರ್ಯ ಹೋರಾಟಗಾರರ ಪೆನ್ಷನ್ ಬರುತ್ತಿದೆ. ಈಗ ನೋಡಿದರೆ ಹಂಗೆ ಹೋರಾಟದಲ್ಲಿ ಪಾಲುಗೊಂಡ ಎಷ್ಟೋ ಜನಕ್ಕೆ ಸ್ವಾತಂತ್ರ್ಯ ಹೋರಾಟಗಾರರ ಪೆನ್ಷನ್ ಸಿಗುತ್ತಿಲ್ಲ. ಅದರ ಬದಲು ಡೂಪ್ಲಿಕೇಟ್ ಹೋರಾಟಗಾರರು ಹಣ ತಿನ್ನುತ್ತಿದ್ದಾರೆ. ಇದನ್ನು ಸರ್ಕಾರ ಪರೀಕ್ಷಿಸುತ್ತಿಲ್ಲ. ಇಂಥ ಡೂಪ್ಲಿಕೇಟ್ ಹೋರಾಟಗಾರರಿಗೆ ನಾಚಿಕೆಯಿಲ್ಲ.

ಅದಿರಲಿ, ಈ ಬಾವುಟ ತಾಲ್ಲೂಕ್ ಆಫೀಸಿನ ಮೇಲೆ ಹಾರಿಸಿದ ಬಳಿಕ ಜಿಲ್ಲಾಧಿಕಾರಿ ಪಾಳೇಗಾರರು ಫೈರಿಂಗ್ ಮಾಡಿಸಿದ್ದಕ್ಕೆ ಊರಿಗೆ ಊರೇ ಕುದ್ದು ಹೋಗಿತ್ತು. ಗರಡಿ ಜನಗಳಿಗೂ ಭಾರೀ ಸಿಟ್ಟು ಸೇಡಿನ ಭಾವನೆ ಉಂಟಾಗಿತ್ತು. ಆಗ ಪಂಚಕಲ್ಯಾಣಿ ಕುದುರೆ ಮೇಲೆ ಒಳ್ಳೆ ಜರ್ಬಿನಿಂದ ಸವಾರಿ ಮಾಡುತ್ತಿದ್ದ ಪೈಲ್ವಾನ್ ವೀರಬಸಪ್ಪ ಇದ್ದನಲ್ಲ. ಆತನ ಮಗ ಬಸಪ್ಪ ಮತ್ತು ನಂಜಪ್ಪ ಸೇರ್ಕೊಂಡು ಒಂದು ಕೆಲಸ ಮಾಡಿದರು. ಬಹುಶಃ

ಬಸಪ್ಪ ನಂಜಪ್ಪನಿಗೆ ಸಖತ್ತಾಗಿ ಕುಡಿಸಿ, ಉದ್ರೇಕಿಸಿ ಡಿ.ಸಿ. ಕಾಂಪೌಂಡಿನೊಳಕ್ಕೆ ರಾತ್ರಿ ನುಗ್ಗಿಸಿದ. ಡಿ. ಸಿ. ಆಗಿದ್ದ ಹೆಚ್. ಎನ್. ಪಾಳೇಗಾರರ ಮೇಲಿದ್ದ ಸಿಟ್ಟೇನು ಎಂದರೆ ಈತ ನಮ್ಮವನಾಗಿ ನಮ್ಮವರ ಮೇಲೆ ಗುಂಡು ಹಾರಿಸಿದನಲ್ಲಾ ಎಂಬುದು. ಈ ಸಿಟ್ಟಿನ ಭರದಲ್ಲಿ ಒಳಗಿ ನುಗ್ಗಿದ ನಂಜಪ್ಪ ಅವರ ಬಂಗ್ಲೆ ಮುಂದೆ ಯದ್ವಾತದ್ವಾ ಗಲಾಟೆ ಮಾಡಿದ. ಡಿ. ಸಿ. ಸಾಹೇಬರೇ ನಡುಗಿ ಹೋದರಂತೆ! ಇನ್ನೇನಾದರೂ ಅಪಾಯ ಒದಗಿಬಿಡಬಹುದೆಂದು ತಮ್ಮ ಹೆಂಡತಿ-ಮಕ್ಕಳನ್ನು ಹಿಂದಿನ ಬಾಗಿಲಿನಿಂದ ಹುಷಾರಾಗಿ ಕಾರುಹತ್ತಿಸಿ ತಮ್ಮ ಪರಿಚಿತರ ಅಥವಾ ಸಂಬಂದಿಕರ ಮನೆಗೆ ಕಳುಹಿಸಿದರೆಂದು ಆಗ ಒಂದು ಸುದ್ದಿ ಹರಡಿತು. ಪೊಲೀಸರು ನಂಜಪ್ಪನನ್ನು ಹಿಡಿಯಬೇಕು ಅನ್ನುವಷ್ಟರಲ್ಲಿ ಆತ ಧೈರ್ಯದಿಂದ, ಚಾಣಾಕ್ಷತನದಿಂದ ಡಿ. ಸಿ. ಕಾಂಪೌಂಡ್ ಹಾರಿ ಕತ್ತಲೆಯಲ್ಲಿ ತಪ್ಪಿಸಿಕೊಂಡ.

ಬೆಳಿಗ್ಗೆ ಊರೊಳಗೆ ಇದ್ದರೆ ನಂಜಪ್ಪನನ್ನು ಬಿಡುತ್ತಾರೆಯೇ? ಬಂಧಿಸುವರೆಂಬ ಭಯದಿಂದ ನಂಜಪ್ಪ ನಮ್ಮ ದುರ್ಗದ ಗುಡ್ಡಗಳಲ್ಲಿ ತಲೆಮರೆಸಿಕೊಂಡಿದ್ದ. ಆಗ ನಂಜಪ್ಪನಂಥಾ ಸ್ನೇಹಿತರಿಗೆ ಗುಡ್ಡಗಳಲ್ಲಿ ಒಂಟಿಯಾಗಿ ಬಿಡಬಾರದೆಂದು ಮೀಸೆ ನಿಂಗಣ್ಣ ಮತ್ತು ಪೈಲ್ವಾನ್ ಬಷೀರ್ ಕೂಡಾ ಆತನ ಜೊತೆಯಲ್ಲಿ ಗುಡ್ಡದಲ್ಲಿ ತಲೆಮರೆಸಿಕೊಂಡಿದ್ದರು.

ಬಳಿಕ ಈ ಗುಡ್ಡ ಬೆಟ್ಟದಲ್ಲಿದ್ದರೂ ಸರ್ಕಾರದಿಂದ ಅಪಾಯ ತಪ್ಪಿದ್ದಲ್ಲ ಎಂದು ನಂಜಪ್ಪನಿಗೆ ಅನ್ನಿಸಿದ್ದರಿಂದ, ಅಲ್ಲಿಂದ ತಪ್ಪಿಸಿಕೊಂಡು ರಾಣೆಬೆನ್ನೂರಿಗೆ ಹೋದ. ದಾವಣಗೆರೆ, ರಾಣೆಬೆನ್ನೂರು ಹಿಂಗೆ ಬೆಳಗಾಂ ತನಕ ಹೋದ. ಆಗ ಅಲ್ಲೆಲ್ಲಾ ಈತನಿಗೆ ಪರಿಚಯವಿದ್ದ ಅನೇಕ ಪೈಲ್ವಾನರು ಈತನಿಗೆ ರಕ್ಷಣೆ ಕೊಟ್ಟು ಕಾಪಾಡಿದರು. ಆಮೇಲೆ ಈತ ಇನ್ನೇನೂ ಆಗಲಾರದು ದುರ್ಗಕ್ಕೆ ಬರಬಹುದು ಎಂದುಕೊಂಡು ಅಲ್ಲಿಂದ ದುರ್ಗಕ್ಕೆ ಬರಬೇಕಾದರೆ ದಾವಣಗೆರೆಯಲ್ಲಿ ಬುರ್ಲಿ ಎನ್ನೋ ಪೋಲೀಸ್ ಸಬ್ ಇನ್ಸ್ ಪೆಕ್ಟರ್ ಈತನನ್ನು ಕಂಡು ಹಿಡಿದ, ಬುರ್ಲಿ ಎನ್ನುವವನೂ ನಮ್ಮೂರಿನವನೇ. ಮೊದಲಿಂದಲೂ ಸರ್ಕಾರ ನಂಜಪ್ಪರ ಮೇಲೆ ಕಣ್ಣಿಟ್ಟದಕ್ಕೆ ಸರಿಯಾಗಿ ಬುರ್ಲಿ ನಂಜಪ್ಪರನ್ನು ದಾವಣಗೆರೆಯಲ್ಲಿ ಬಂಧಿಸಿದ. ಈ ಗಲಾಟೆಯಲ್ಲಿ ವಿಚಾರಣೆಯಾಗಿ ನಂಜಪ್ಪರಿಗೆ ಆರು ತಿಂಗಳು ಸಜೆ ಆಯ್ತು. ಅದನ್ನು ಅವರು ದುರ್ಗದಲ್ಲೇ ಅನುಭವಿಸಿದರು. ಅದೇನೇ ಆದರೂ ಇದರಿಂದ ದೊಡ್ಡ ಗರಡಿ ಕೀರ್ತಿ ಎಲ್ಲಾ ಕಡೆಗೂ ಹರಡಿತು. ಇಲ್ಲಿನ ಪೈಲ್ವಾನರು ಎದುಯುಬ್ಬಿಸಿ ನಡೆಯುವಂತಾಯಿತು.

**ನಾಟಕಕ್ಕೆ ದಾಳಿ ಮಾಡಿದ ಗರಡಿ ಜನ :**

ಈಗ ಐವತ್ತು ಅರವತ್ತು ವರ್ಷಗಳ ಹಿಂದೆ ಗರಡಿ ಪೈಲ್ವಾನರುಗಳು ಹೆಂಗಿತ್ತು, ಹೆಂಗಿದ್ದರು ಎಂಬುದನ್ನು ನಿಮಗೆ ಸ್ವಲ್ಪವಾದರೂ ನನ್ನ ಕಥೆ ಹೇಳ್ತಾನೆ ತಿಳಿಸಿದ್ದೀನಿ. ಅದು ಕುಸ್ತಿಗೆ, ಪೈಲ್ವಾನರಿಗೆ ಹೆಸರುಮಾಡಿತ್ತು ಎಂದು ನಾನು ಒತ್ತಿ ಒತ್ತಿ ಹೇಳಬೇಕಾಗಿಲ್ಲ. ತಮ್ಮ ಮೈಕಟ್ಟು ಕುಸ್ತಿಪಟ್ಟುಗಳಿಂದ ನಾಡಿನಾದ್ಯಾಂತ ಹೆಸರು ಮಾಡಿದರು. ಸಂದರ್ಭದಲ್ಲಿ ಗರಡಿ ಅಂದ್ರೆ ಅದು ಬರೀ ಪೈಲ್ವಾನರ ಪ್ರಪಂಚ ಎಂದು ತಿಳಕೊಂಡರೆ ತಪ್ಪಾಗುತ್ತದೆ. ಈಗಾಗಲೇ ನಾನು ತಿಳಿಸಿದ್ದೀನಿ. ಮೊದಲಿಂದಲೂ ಪೋಷಕರೂ, ಅಭಿಮಾನಿಗಳೂ ದೊಡ್ಡಮನುಷ್ಯರೂ ಯಾವಾಗಲೂ ಗರಡಿಯ ಮೇಲೆ ಒಂದು ಕಾವಲು ಕಣ್ಣು ಇಟ್ಟಿರುತ್ತಿದ್ದರು. ಅದು ಹೆಂಗೆ ಮುಂದುವರೆಯಬೇಕು, ಯಾವ ದಿಕ್ಕಿನಲ್ಲಿ ಹೋಗಬೇಕು, ಹೆಂಗೆ ಹೆಸರು, ಕೀರ್ತಿ, ಪಡೆದು ಜನರ ಮಧ್ಯೆ ಇರಬೇಕು ಎನ್ನುವುದನ್ನು ಕುರಿತು ಯೋಚಿಸೋರು. ಅವರು ಆ ಕಾಲದಲ್ಲಿ ನಿಜವಾಗಿಯೂ ಯಜಮಾನರು ಅಂದ್ರೆ ಯಜಮಾನರು, ನಿಜವಾದ ಅರ್ಥದಲ್ಲಿ ದೊಡ್ಡ ಮನುಷ್ಯರು. ನಮ್ಮ ಗರಡಿಯ ಪ್ರೇಕ್ಷಕರು, ಯಜಮಾನರುಗಳಿಗೆ ಯಾವ ಯಾವ ದಿಕ್ಕಿನಲ್ಲಿ ಆಸಕ್ತಿ ಇತ್ತು ಅಂತ ಹೇಳೋಕೆ ಬರುವುದಿಲ್ಲ. ಭೀಮಪ್ಪನಾಯಕ, ಕೊಂಡಪ್ಪ, ವಕೀಲ್ ಕೆಂಚಪ್ಪನಂಥವರು ಗರಡಿ ಜನಕ್ಕೆ ಉತ್ತೇಜನ, ಕುಮ್ಮಕ್ಕು ಕೊಟ್ಟಿದ್ದರಿಂದ ಗರಡಿ ಸ್ವಾತಂತ್ರ ಚಳುವಳಿಯಲ್ಲಿ ಹೆಂಗೆ ಪಾಲುಗೊಂಡಿತು, ನಂಜಪ್ಪ ಆಗ ಎಂಥಾ ದೈರ್ಯ ಸಾಹಸ ಮಾಡಿದರು ಅಂತ ಈಗಾಗಲೇ ತಿಳಿಸಿದ್ದೀನಿ. ನಮ್ಮ ಇಂಥ ಅನೇಕ ಪೋಷಕರು ಯಜಮಾನರುಗಳಿಗೆ ಕುಸ್ತಿ ಬಗ್ಗೆ ಆಸಕ್ತಿ ಇದ್ದಂತೆಯೇ, ನಾಟಕ ಕಲೆಯ ಬಗ್ಗೆಯೂ ಆಸಕ್ತಿ ಇತ್ತು. ಈ ನಾಟಕದ ಹುಚ್ಚನ್ನು ಗರಡಿಗೂ ನುಗ್ಗಿಸಿ, ನಟರನ್ನು ಸೃಷ್ಟಿಸಿ, ರಂಗಮಂದಿರ ಕಟ್ಟಿ, ನಾಟಕಗಳನ್ನು ಆಡಿದ್ದೇ ಒಂದು ದೊಡ್ಡ ಕಥೆ ನಮ್ಮ ದೊಡ್ಡಗರಡಿ ಇತಿಹಾಸದಲ್ಲಿ. ಈಗ ಆ ದೊಡ್ಡ ಕಥೇನ ನಿಮ್ಮ ಮುಂದಿಡುತ್ತಿದ್ದೀನಿ.

ಕುಸ್ತಿ ಪಟುಗಳು ಓಡಾಡಿ ಕೊಂಡಿದ್ದ ಗರಡಿಯಲ್ಲಿ ನಾಟಕ ಆಡ್ಬೇಕು ಎನ್ನುವ ಹುಚ್ಚನ್ನು ಯಾರು ಮೊದಲು ಹುಟ್ಟಿಸಿದರು ಎಂಬುದು ನನಗೆ ಈಗ ಸರಿಯಾಗಿ ನೆನಪಾಗ್ತಿಲ್ಲ. ಆದರೆ ಇಂಥ ಹುಚ್ಚು ನಮ್ಮಲ್ಲಿ ಹುಟ್ಟಿಸಿದವರು ನನಗೆ ನೆನಪಿರುವಂತೆ ನಮ್ಮೂರಿನ ಮುನಿಸಿಪಾಲಿಟಿಗೆ ಸ್ಯಾನಿಟರಿ ಇನ್ಸ್ಪೆಕ್ಟರ್ (sanitary inspecter) ಆಗಿ ಬಂದ ಬಸವರಾಜು ಅವರಿಂದ ಇದು ಶುರುವಾಗಿದ್ದು, ಅವರು ನಮ್ಮ ದುರ್ಗದವರೇನೂ ಅಲ್ಲ. ಶಿವಮೊಗ್ಗ ಜಿಲ್ಲೆಯ ಚನ್ನಗಿರಿಯವರು (ಈಗ ಅದು ದಾವಣಗೆರೆ ಜಿಲ್ಲೆಗೆ ಸೇರಿದೆ) ದುರ್ಗಕ್ಕೆ ಬಂದ ಸ್ಯಾನಿಟರಿ ಇನ್ಸ್‌ಪೆಕ್ಟರ್ ಬಸವರಾಜು ಅವರು ದೊಡ್ಡಗರಡಿಯ ಬಳಿ ಕಂಟ್ರಾಕ್ಟರ್ ತಿಮ್ಮಣ್ಣನವರ (ಇವರು ದೊಡ್ಡಗರಡಿಯ ಪೋಷಕರಲ್ಲಿ ಒಬ್ಬರು) ಮನೆಯಲ್ಲಿ ಬಾಡಿಗೆಗೆ ಇದ್ದರು. ಅವರಿಗೆ ಗರಡಿ, ಗರಡಿಜನ ಹತ್ತಿರವಿದ್ದುದರಿಂದ ಇವರ ಪ್ರೋತ್ಸಾಹ,

ಒಗ್ಗಟ್ಟು ಇವನ್ನೆಲ್ಲಾ ಕಂಡು ಮೆಚ್ಚಿಕೆಯಾಯ್ತು, ಇವರ ಈ ಉತ್ಸಾಹ, ಒಗ್ಗಟ್ಟು ಎಲ್ಲವನ್ನೂ ಬಳಸಿಕೊಂಡು ಇವರಿಂದ ಒಂದು ನಾಟಕ ಯಾಕೆ ಮಾಡಿಸಬಾರದು ಅಂತ ಅವರಿಗೆ ಆಸೆಯುಂಟಾಯಿತು. ಅದನ್ನು ಗರಡಿಯ ಜೊತೆಯಲ್ಲಿ, ಯಜಮಾನರುಗಳ ಜೊತೆಯಲ್ಲಿ ಹೇಳಿಕೊಂಡರು. ಅವರೆಲ್ಲಾ ನಾಟಕ ಆಡೋದಿಕ್ಕೆ ಸಂತೋಷದಿಂದಾನೇ ಒಪ್ಪಿಗೆ ಸೂಚಿಸಿದರು. ಒಪ್ಪಿಗೆ ಸಿಕ್ಕ ತಕ್ಷಣ `ಚಿತ್ರಾಂಗದೆ ನಾಟಕ ಕಲಿಸಬೇಕು ಅಂತ ಆಯ್ತು.

ದೊಡ್ಡಗರಡಿ ಜನಗಳೇ ಸೇರಿಕೊಂಡು ನವಭಾರತ ತರುಣ ಕಲಾವಿದರ ಸಂಘ, ದೊಡ್ಡಗರಡಿ, ಚಿತ್ರದುರ್ಗ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಈ ರೀತಿ ನವಭಾರತ ತರುಣ ಕಲಾವಿದರ ಸಂಘ ಎಂಬ ನಾಮಕರಣ ಯಾರು ಮಾಡಿದರೋ ಗೊತ್ತಿಲ್ಲ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದಕ್ಕೆ ಹಂಗೆ ಹೆಸರಿಟ್ಟರೋ, ನಮ್ಮ ಪ್ರಸಿದ್ಧ ಪೈಲ್ವಾನ್ ನಂಜಪ್ಪನವರು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲುಗೊಂಡಿದ್ದರಿಂದ ಅದರ ಅಭಿಮಾನದಿಂದ ಪ್ರಚೋದಿತರಾಗಿ ಗರಡಿ ಜನಗಳು ಹಂಗೆ ಖುಷಿಯಿಂದ ಆ ಹೆಸರಿಟ್ಟಿರಬೇಕು. ಈ ಸಂಸ್ಥೆ ಸ್ಥಾಪಿತವಾದ ವರ್ಷ ೧೯೪೯. ಈ ಸಂಘವು ಸರಿಯಾಗಿ ಉದ್ಘಾಟನೆಯಾಗಿದ್ದು ೧೯೫೦. ಚಿತ್ರದುರ್ಗದ ಕೋಟೆ ಕೊತ್ತಳಗಳ ಬಗ್ಗೆ ಸಂಶೋಧನೆ ಮಾಡಿ ಹೆಸರಾಗಿದ್ದ ಪ್ರಖ್ಯಾತ ವಿದ್ವಾಂಸರಾದ ಶ್ರೀಯುತ ಹುಲ್ಲೂರು ಶ್ರೀನಿವಾಸ ಜೋಯಿಸರಿಂದ ಈ ನವಭಾರತ ತರುಣ ಕಲಾವಿದರ ಸಂಘ, ದೊಡ್ಡಗರಡಿ, ಚಿತ್ರದುರ್ಗ ಎಂಬ ಈ ಸಂಸ್ಥೆಯು ೧೯೫೦ರಲ್ಲಿ ವಿಜಯದಶಮಿಯಂದು ಉದ್ಘಾಟನೆಯಾಯಿತು. ಗರಡಿಯ ಎಲ್ಲಾ ಅಭಿಮಾನಿಗಳು, ಪೋಷಕರು ಸಂಘವನ್ನು ಬೆಳೆಸುವುದಕ್ಕೆ ಬಹಳ ಪ್ರಯತ್ನ ಪಟ್ಟರೂ, ಪೈಲ್ವಾನ್ ನಂಜಪ್ಪನವರು, ಡ್ರೈವರ್ ಬಸಪ್ಪ ಮೀಸೆ ನಿಂಗಪ್ಪನವರು ಮೊದಲಾದವರು ಇನ್ನೂ ಹೆಚ್ಚು ದುಡಿದರು ಎನ್ನಬೇಕು. ನಮ್ಮ ಪೈಲ್ವಾನ್ ನಂಜಪ್ಪನವರು ತಬಲಾ ಚೆನ್ನಾಗಿ ಕಲಿತಿದ್ದರು. ಹಿಂದೆ ನಾಟಕದ ಕಂಪನಿಗಳು ದುರ್ಗಕ್ಕೆ ಬಾಳಾ ಬರ್ತಿದ್ದವು. ಅದರೊಳಗೆ ಗೋಕಾಕ್ ನಾಟಕ ಕಂಪನಿಯೂ ಒಂದು. ಆ ಕಂಪನಿಯಲ್ಲಿದ್ದ ತಬಲಾವಾದಕನ ಸ್ನೇಹ ಬೆಳಸಿ ನಂಜಪ್ಪರು ಹೈಕ್ಲಾಸಾಗಿ ತಬಲಾ ಕಲಿತಿದ್ದರು. ಮುಂದೆ ನವಭಾರತ ತರುಣ ಕಲಾವಿದರ ಸಂಘ ಅಭಿನಯಿಸಿದ ಅನೇಕ ನಾಟಕಗಳಿಗೆ ನಂಜಪ್ಪರು ತಬಲಾ ನುಡಿಸೋರು. ಅವರು ಕುಸ್ತಿ ಕಲಾವಿದರಾಗಿದ್ದಂತೆ ತಬಲಾ ಕಲಾವಿದರು, ನಾಟಕ ಪ್ರೇಮಿಗಳೂ ಆಗಿದ್ದರು. ಇವರೆಲ್ಲರ ಸಹಕಾರದಿಂದ ದೊಡ್ಡಗರಡಿಯಲ್ಲಿ ಸ್ಥಾಪಿತವಾದ ತರುಣ ಕಲಾವಿದರ ಸಂಘ ನಾಟಕ ಆಡುವುದಕ್ಕೆ ಸಿದ್ಧವಾಗಿ, ಚಿತ್ರಾಂಗದೆ ನಾಟಕವನ್ನು ಆಡಲು ಆಯ್ಕೆ ಮಾಡಿಕೊಂಡಿತು.

ಆರಿಸಿಕೊಂಡ ಚಿತ್ರಾಂಗದೆ ನಾಟಕವನ್ನು ಕಂದಗಲ್ ಹನುಮಂತರಾಯರು ಬರೆದಿದ್ದು. ಅದು ಬಹಳ ಕಠಿಣ ಕನ್ನಡ, ಬಿಕ್ಕಟ್ಟಿನ ಭಾಷೆ, ಅದನ್ನು ಆಡ್ಬೇಕು ಅಂದ್ರೆ

ದೊಡ್ಡಗರಡಿಗೆ ಬರುತ್ತಿದ್ದ ಪೈಲ್ವಾನರು, ಜನಗಳು ಅವಿದ್ಯಾವಂತರು, ಓದಿದವರು ಕಮ್ಮಿ. ಇಂಥ ಜನಗಳನ್ನು ಕಟ್ಟಿಕೊಂಡು, ಸಹಕಾರ ಪಡೆಕೊಂಡು ಸ್ಯಾನಿಟರಿ ಇನ್ಸ್‌ಪೆಕ್ಟರ್ ನಾಟಕ ಮಾಡಿಸೋಕೆ ಶುರುವು ಮಾಡಿದರು. ಅವರೇ ನಾಟಕದ ನಿರ್ದೇಶನವನ್ನು ಮಾಡಿದರು. ಪ್ರಾಕ್ಟಿಸ್ ಮಾಡಿಸಿದರು.

ನಾಟಕದ ಪ್ರಾಕ್ಟಿಸ್ ಹೆಂಗೆ ನಡೀತಿತ್ತು. ಅಂದ್ರೆ - ದೊಡ್ಡಗರಡಿಯಲ್ಲಿ ರಾತ್ರಿ ಹೊತ್ತು ಎಲ್ಲಾ ನಾಟಕದ ಪಾರ್ಟುಗಳವರೂ ಬರೋರು. ದೊಡ್ಡಗರಡಿಯಲ್ಲಿ ಒಂದು ದೊಡ್ಡ ಗಂಟೆಯಿದೆ. ಅದನ್ನು ರಾತ್ರಿ ಒಂಬತ್ತು ಒಂಬತ್ತೂವರೆಯಷ್ಟೊತ್ತಿಗೆ ಹೊಡೀತ್ತಿದ್ದರು. ಅಲ್ಲೇ ಗರಡಿ ಸುತ್ತುಮುತ್ತಲಿದ್ದವರು ನಾಟಕದಲ್ಲಿ ಪಾಲುಗೊಳ್ಳುತ್ತಿದ್ದುದರಿಂದ ಗಂಟೆ ಹೊಡೆದ ತಕ್ಷಣ ಟೈಮಿಗೆ ಸರಿಯಾಗಿ ಎಲ್ಲರೂ ಬರ್ತಾ ಇದ್ದರು. ಹಿಂಗೆ ಚಿತ್ರಾಂಗದೆ ನಾಟಕದ ಪ್ರಾಕ್ಟಿಸ್ ಹಲವಾರು ತಿಂಗಳುಗಳು ನಡೆಯಿತು. ಈ ನಾಟಕದಲ್ಲಿ ತಿಪ್ಪಾನಾಯಕ್, ಸಿ. ಟಿ. ಸಿದ್ದಣ್ಣ, ಕೊಂಡಪ್ಪ, ದೇವೇಂದ್ರಪ್ಪ, ವಿಶ್ವೇಶ್ವರಯ್ಯ, ಜಯದೇವ, ಗೋಪಾಲಪ್ಪ ಮೊದಲಾದವರು ಪಾಲುಗೊಂಡಿದ್ದರು.

ನವಭಾರತ ತರುಣ ಕಲಾವಿದರ ಸಂಘ, ದೊಡ್ಡಗರಡಿ ಮೂಲಕ ನಾಟಕ ಚೆನ್ನಾಗಿ ಪ್ರಾಕ್ಟಿಸ್ ಆಯಿತು. ಈ ನಾಟಕಕ್ಕೆ ಪ್ರೋತ್ಸಾಹ ಕೊಟ್ಟ ಯಜಮಾನರುಗಳು ಅಂದ್ರೆ - ಕಂಟ್ರಾಕ್ಟರ್ ತಿಮ್ಮಣ್ಣನವರು, ದಸ್ತಗೀರ್ ಸಾಬರು, ಚನ್ನಗಿರಿ ಬೋರಪ್ಪನವರು, ಯಜಮಾನ್ ಬೊಮ್ಮಣ್ಣನವರು, ಕಲ್ಲಪ್ಪನವರು ಮೊದಲಾದವರು. ಈ ನಾಟಕಕ್ಕೆ ಇವರೆಲ್ಲ ಬಹಳ ಶ್ರಮ ತಗೊಂಡರು.

ಈಗಿನ ನೀಲಕಂಠೇಶ್ವರನ ದೇವಾಲಯದ ಹಿಂಭಾಗದಲ್ಲಿ ಈಗ ಬಂಬೂ ಬಜಾರ್ ಇರುವ ಕಡೆ ನಾಟಕದ ಥಿಯೇಟರ್ ಕಟ್ಟಬೇಕಾಯಿತು. ಅಂಥ ಶ್ರೀಮಂತಿಕೆ ಇಲ್ಲಿನ ಜನಗಳಲ್ಲಿ ಇರಲಿಲ್ಲ. ಇದ್ದಿದ್ದು ಬರೀ ಉತ್ಸಾಹ, ಅಭಿಮಾನ, ಒಗ್ಗಟ್ಟು, ಹಿಂಗಾಗಿ ಯಾರಾರದೋ ತಗಡುಗಳನ್ನು ತಂದು, ಅವುಗಳ ಮೇಲೆ ಕೊಟ್ಟವರ ಹೆಸರುಗಳನ್ನು ಬರೆದು ಥಿಯೇಟರ್ ಕಟ್ಟಲು, ಮುಚ್ಚಲು ಬಳಸಿದೆವು. ಬೆಂಚು, ಕುರ್ಚಿಗಳದೂ ಇದೇ ಪಾಡು. ಯಾರದೋ ಮನೆಯಲ್ಲಿ ತಂದು, ಅವುಗಳ ಮೇಲೆ ಅವರುಗಳ ಹೆಸರು ಬರೆದು ತಂದಿರುತ್ತಿದ್ದೆವು. ಆಡುತ್ತಿದ್ದ ಚಿತ್ರಾಂಗದೆ ನಾಟಕ - ಟಿಕೆಟ್ ನಾಟಕ, ನಾಟಕ ಮಾಡೋ ಜನರು ಸ್ಟೇಜ್ ಹಿಂದೆ ಒಳಗೆ ಹೋಗಿ ಸೇರಿಕೊಂಡರೆ, ಗೇಟ್ ಕೀಪರ್ ಆಗಿ ನಿಂತ್ಕಳ್ಳಕ್ಕೆ ಜನ ಇರ್ತಾ ಇರಲಿಲ್ಲ. ಯಜಮಾನರು ಅನ್ನಿಸಿಕೊಂಡ ಬಸಣ್ಣ, ಕಲ್ಲಪ್ಪ, ಇಂಥವರೇ ಗೇಟ್ ಕೀಪರ್ ಆಗಿ ಕೆಲಸ ಮಾಡ್ತಾ ಇದ್ದರು. ರಾತ್ರಿಯೆಲ್ಲಾ ನಾಟಕ ಮಾಡೋದು. ಬೆಳಿಗ್ಗೆ ಎದ್ದಮೇಲೆ ಯಾರಾರ ಮನೆಯಿಂದ ಕುರ್ಚಿ, ಬೆಂಚುಗಳನ್ನು ತಂದಿರುತ್ತಿದ್ದೆವೋ

ಅವರಿಗೆ ವಾಪಸ್ ಕೊಡುವುದು. ಮತ್ತೆ ವಿಶ್ವಾಸ ಉಳಿಸಿಕೊಂಡು ಸಂಜೆಗೆ ಅವೇ ಕುರ್ಚಿ, ಬೆಂಚುಗಳನ್ನು, ಥಿಯೇಟರಿಗೆ ಸಾಗಿಸುವುದು. ಇಷ್ಟು ಕಷ್ಟ ತಗೊಂಡು ಚಿತ್ರಾಂಗದೆ ನಾಟಕ ಆಡಿದೆವು.

ಈಗ ಐವತ್ತು ವರ್ಷಗಳ ಹಿಂದೆ ಕಾಲ ಅಷ್ಟು ಮುಂದುವರಿದಿರಲಿಲ್ಲ. ಹಂಗಂತ ಹಿಂದೂ ಬಿದ್ದಿರಲಿಲ್ಲ, ನಾಟಕದಲ್ಲಿ ಎಲ್ಲಾ ಪಾತ್ರಗಳನ್ನು ಅಂದರೆ ಸ್ತ್ರೀಪಾತ್ರಗಳನ್ನು ಗಂಡಸರೇ ಮಾಡುತ್ತಿದ್ದರು. ಟಿಕೇಟ್ ನಾಟಕವಾಡಿದರೂ, ಚಿತ್ರಾಂಗದೆ ನಾಟಕದಲ್ಲಿಯೂ ಸ್ತ್ರೀಪಾತ್ರಗಳನ್ನು ಗಂಡಸರೇ ಮಾಡಬೇಕಾಗಿದ್ದರಿಂದ, ಜಯದೇವ ಚಿತ್ರಾಂಗದೆಯ ಪಾತ್ರವನ್ನು, ಗೋಪಾಲಪ್ಪ ಉಲೂಪಿಯ ಪಾತ್ರವನ್ನು ಮಾಡುತ್ತಿದ್ದರು.

ಈ ನಾಟಕದಲ್ಲಿ ತಿಪ್ಪಾನಾಯಕ್ ಅವರು ಮಾಡುತ್ತಿದ್ದ ಬಬ್ರೂವಾಹನ ಬಹಳ ಜನಕ್ಕೆ ಮೆಚ್ಚಿಕೆಯಾಯ್ತು, ಆತ ಮಾಡ್ತಾ ಇದ್ದ ಅಭಿನಯ ಮತ್ತು ಹೇಳ್ತಾ ಇದ್ದ ಡೈಲಾಗ್‌ಗಳು ಪ್ರೇಕ್ಷಕರಿಗೆ ಮೈ ಬೆಚ್ಚಗೆ ಮಾಡ್ತಾ ಇದ್ದವು. ಆತನದು ಒಳ್ಳೆ ಅಭಿನಯ, ಒಳ್ಳೆಯ ಹೆಸರು ಮಾಡಿದರು.

ಚಿತ್ರಾಂಗದೆ ನಾಟಕ ಒಳ್ಳೆ ಹೆಸರು ಮಾಡ್ತು ಮಾಡಿದವರಿಗೂ ಖುಷಿ ಕೊಡ್ತು ಮತ್ತೆ ಮುಂದಿನ ಸಾರಿ ಅದೇ ನಾಟಕ ಮಾಡೋಕು ಅಂತ ಸಂಘ ತೀರ್ಮಾನಿಸಿತು.

ಚಿತ್ರಾಂಗದೆ, ಉಲೂಪಿ ಪಾತ್ರಗಳನ್ನು ಗಂಡಸರೇ ಮಾಡ್ತಾ ಇದ್ದರಲ್ಲ ಈ ಸಾರಿ ಅವರನ್ನು ಬಿಟ್ಟು ಹೆಂಗಸರಿಂದಲೇ ಮಾಡಿಸೋಣ. ನಾಟಕ ಸುಧಾರಿಸುತ್ತೆ, ಕಲೆಕ್ಷನ್ ಆಗುತ್ತೆ ಅಂತ ಮಾತಾಡಿಕೊಂಡರು. ಈ ಸಂದರ್ಭದಲ್ಲಿಯೇ ಕನ್ನಡ, ತಮಿಳು, ಹಿಂದಿ, ತೆಲುಗು ಭಾಷೆಗಳಲ್ಲಿ ತಮ್ಮ ಅಸಾಧಾರಣ ನಟನಾ ಸಾಮರ್ಥ್ಯದಿಂದ ಚತುರ್ಭಾಷಾ ತಾರೆ ಎಂದು ಹೆಸಾರಾದ ಶ್ರೀಮತಿ ಬಿ. ಸರೋಜಾದೇವಿಯವರನ್ನು ಈ ನಾಟಕದಲ್ಲಿ ಪಾತ್ರವಹಿಸಲು ಕರೆತಂದ ವಿಶೇಷ ಅವಕಾಶವೊಂದು ನವಭಾರತ ತರುಣ ಕಲಾವಿದರ ಸಂಘಕ್ಕೆ ಒದಗಿ ಬಂತು. ಒಮ್ಮೆ ಸ್ಯಾನಿಟರಿ ಇನ್ಸ್‌ಪೆಕ್ಟರ್ ಬೆಂಗಳೂರಿಗೆ ಹೋಗಿದ್ದಾಗ ಶ್ರೀಮತಿ ಬಿ. ಸರೋಜಾದೇವಿಯವರನ್ನು ಅವರ ಅಕ್ಕನವರನ್ನು (ಅವರ ಅಕ್ಕವರ ಹೆಸರು ಈಗ ಮರೆತು ಹೋಗಿದೆ) ಚಿತ್ರಾಂಗದೆ ನಾಟಕದಲ್ಲಿ ಅಭಿನಯಿಸಲು ಕರೆತಂದರು. ಅವರು ಮತ್ತು ಅವರ ಅಕ್ಕ ಚಿತ್ರದುರ್ಗದಲ್ಲಿ ಸುಮಾರು ಆರು ತಿಂಗಳು ಇದ್ದರು. ಅವರಿಗೆ ದೊಡ್ಡಗರಡಿಯ ಬಳಿಯಲ್ಲೇ ಒಂದು ಮನೆ ಮಾಡಿಕೊಟ್ಟಿದ್ದರು. ಸರೋಜಾದೇವಿಯವರು ಮುಂದೆ ಹೊನ್ನಪ್ಪ ಭಾಗವತರ ಕವಿರತ್ನ ಕಾಳಿದಾಸ ಸಿನಿಮಾದಲ್ಲಿ ಮಾಡಿದರು. ಅನಂತರ ದಕ್ಷಿಣಭಾರತದ ಪ್ರಖ್ಯಾತ ಸಿನಿಮಾ ತಾರೆಯಾದರು. ಪ್ರಶಸ್ತಿ, ಬಹುಮಾನ, ಕೀರ್ತಿ,

ಹಣ ಎಲ್ಲಾ ಸಂಪಾದಿಸಿದರು. ಆದರೆ ಸರೋಜಾದೇವಿಯವರು ನವಭಾರತ ತರುಣ ಕಲಾವಿದರ ಸಂಘದ ಜೊತೆ ಒಳ್ಳೆಯ ಗೌರವ ಭಾವನೆಯನ್ನು ಇಟ್ಟುಕೊಂಡಿದ್ದರು. ಈಗಲೂ ಇಟ್ಟುಕೊಂಡಿದ್ದಾರೆ.

ಈ ನಾಟಕದ ಜೊತೆಗೆ ದೊಡ್ಡಗರಡಿಯ ನವಭಾರತ ತರುಣ ಕಲಾವಿದರು ರಕ್ತರಾತ್ರಿ, ಬಡತನದ ಭೂತ, ಮೊದಲಾದ ನಾಟಕಗಳನ್ನೂ ಅಭಿನಯಿಸಿದರು. ಸಾಮಾಜಿಕ ಆಯ್ತು, ಪೌರಾಣಿಕ ಆಯ್ತು. ಒಂದು ಐತಿಹಾಸಿಕ ನಾಟಕ ಆಡಬೇಕಲ್ಲ ಅಂಥ ಸಂಘದವರು ಯೋಚಿಸಿದರು. ಬಬ್ರುವಾಹನ ಪಾತ್ರವನ್ನು ತಿಪ್ಪಾನಾಯಕ್ ಬಾಳಾ ಚೆನ್ನಾಗಿ ತೂಗಿಸಿದರು. ಒಳ್ಳೇ ವೀರಾವೇಶದ ಡೈಲಾಗ್‌ಗಳನ್ನು ಚೆನ್ನಾಗಿ ಮಾತಾಡಿ ಎಲ್ಲರ ಗಮನ ಸೆಳೆದಿದ್ದರು ಅಂತ ಹೇಳಿದ್ದೆನಲ್ಲಾ, ಅಂಥ ಒಳ್ಳೆಯ ನಟನಿಗೆ ಒಪ್ಪುವಂಥ ಒಂದು ಐತಿಹಾಸಿಕ ನಾಟಕ ಯಾಕೆ ಮಾಡಬಾರದು ಎಂದು ಎಲ್ಲರೂ ಆಲೋಚನೆ ಮಾಡಿದರು.

ದುರ್ಗವನ್ನು ಆಳಿದ ಮದಕರಿನಾಯಕನನ್ನೇ ಕುರಿತು ಒಂದು ನಾಟಕವನ್ನು ಬರೆಸಿ ಆಡಬಹುದಲ್ಲ ಅಂತ ಎಲ್ಲರೂ ಮಾತಾಡಿಕೊಂಡರು. ಆದರೆ ದುರ್ಗದ ಇತಿಹಾಸಪುರುಷನಾದ ಮದಕರಿನಾಯಕನ ನಾಟಕವನ್ನು ಯಾರು ಬರೆದು ಕೊಡುತ್ತಾರೆ? ಆಗ ನಮಗೆ ಮರಡಿಹಳ್ಳಿ ಸೀತಾರಾಮರೆಡ್ಡಿಯವರು ಜ್ಞಾಪಕಕ್ಕೆ ಬಂದರು. ಆಗ ನಾವು ಮರಡಿಹಳ್ಳಿಗೆ ಹೋಗಿ ಅವರನ್ನು ಬೇಟಿ ಮಾಡಿ ನಾಟಕದ ವಿಷಯ ಮಾತಾಡಿದೆವು ಮತ್ತು ಮದಕರಿನಾಯಕ ನಾಟಕ ಬರೆದುಕೊಡಲು ಕೇಳಿಕೊಂಡೆವು. ಅವರು ಅದಕ್ಕೆ ನಾನು ಮದಕರಿನಾಯಕ ನಾಟಕ ಬರೆಯೋದಾದ್ರೆ ಸಾಹಿತ್ಯ ಬೇಕು, ವಿಷಯ ತಿಳ್ಯಾಬೇಕು ಅಂದರು. ಅಂಥಾ ಐತಿಹಾಸಿಕ ನಾಟಕವನ್ನು ಕಲೆಯಾಗಿ ಬರೆಯುವಂಥವರು ಬೇಕಾಗಿತ್ತು, ಅದಕ್ಕೆ ಸೀತಾರಾಮರೆಡ್ಡಿಯವರು ತಕ್ಕ ವ್ಯಕ್ತಿಯಾಗಿದ್ದರು. ಇಷ್ಟು ಹೊತ್ತಿಗೆ ಆಗಲೇ ಅವರು ತೆಲುಗು, ಕನ್ನಡ ಎರಡರಲ್ಲೂ ನಾಟಕ ಬರೆದು ಹೆಸರು ಮಾಡಿದ್ದರು. ನಾನು ಸಾಹಿತ್ಯ ನೋಡಬೇಕು, ವಿಷಯ ತಿಳ್ಕಾ ಬೇಕು ಅಂಥ ರೆಡ್ಡಿಯವರು ಹೇಳಿದ್ದಕ್ಕೆ ನಾವು- ನಿಮಗೆ ಸಾಹಿತ್ಯವನ್ನು ಒದಗಿಸುತ್ತೇವೆ. ಮತ್ತೆ ಪಾಳೇಗಾರ ವಂಶದವರನ್ನು ಪರಿಚಯಿಸಿ ವಿಷಯ ತಿಳ್ಕೊಳ್ಳೋದಿಕ್ಕೆ ನಿಮಗೆ ಸಹಾಯ ಮಾಡ್ತೀವಿ ಎಂದೆವು.

ಅದರಂತೆ ಸೀತಾರಾಮರೆಡ್ಡಿಯವರು ಮೂರು ತಿಂಗಳು ವಿಷಯ ತಿಳಕೊಂಡರು. ಆದರೆ ಆಮೇಲೆ ಅವರು ಕಾರಣಾಂತರದಿಂದ ರೆಸ್ಟ್ ಮಾಡತೊಡಗಿದರು. ಅದನ್ನು ಬರೆದು ಮುಗಿಸಲು ನಾಟಕ ಆರಂಭಿಸಲು ಆರು ತಿಂಗಳು ವಾಯಿದಾ ಇತ್ತು. ಆಗ ಅವರನ್ನು ದುರ್ಗಕ್ಕೆ ಕರ್ಕೊಂಡು ಬಂದು ಇಲ್ಲಿಯೇ ಬರೆಯಲು ಅವರಿಗೆ ಅವಕಾಶ ಕಲ್ಪಿಸಿಕೊಟ್ಟೆವು. ಇಪ್ಪತ್ತು ಜನ ಪಾತ್ರಧಾರಿಗಳು, ಸೈನಿಕರು, ಅವರು-ಇವರು ಅಂತ ಅದು ದೊಡ್ಡ ನಾಟಕ.

ಕೊನೆಗೆ ಸೀತಾರಾಮರೆಡ್ಡಿಯವರಿಂದ ಬರೆಯಲ್ಪಟ್ಟ ನಾಟಕ ರಾಜಾವೀರ ಮದಕರಿನಾಯಕ ಸಿದ್ಧವಾಯಿತು.

ಈ ನಾಟಕವನ್ನು ಸೀತಾರಾಮರೆಡ್ಡಿಯವರು ಪ್ರಾಕ್ಟಿಸ್ ಮಾಡುವಾಗ ಖುದ್ದಾಗಿ ಬಂದು ನೋಡಿ ಇದು ಹಿಂಗಿರಬೇಕು, ಇದು ಹಿಂಗಿರಬೇಕು, ಇವರು ಹಿಂಗೆ ಮಾತಾಡಬೇಕು ಎಂದು ನಿರ್ದೇಶನ ಕೊಡುತ್ತಿದ್ದರು. ಸುಮಾರು ೧೯೫೬-೫೮ರ ಅವಧಿಯಲ್ಲಿ ಮೊಟ್ಟಮೊದಲಬಾರಿ 'ರಾಜಾವೀರಮದಕರಿನಾಯಕ ಪ್ರದರ್ಶನವಾಯಿತು. ನಾಟಕವನ್ನು ಸೀತಾರಾಮರೆಡ್ಡಿಯವರು ಅನೇಕಸಾರಿ ನೋಡಿ ತಿದ್ದಿದರು. ಕೆಲವು ಸಂಭಾಷಣೆಗಳು ಹಿಂಗಿದ್ರೆ ನಾಟಕದಲ್ಲಿ ಕಳೆಗಟ್ಟುತ್ತವೆ ಎಂದು ಹೊಸದಾಗಿ - ಅಲ್ಲಿಯೇ ಬಾಯಲ್ಲಿ ಹೇಳಿ ತಿದ್ದಿದರು ಮತ್ತು ಬರೆಸಿದರು.

'ರಾಜಾವೀರ ಮದಕರಿನಾಯಕ ನಾಟಕ ಅಪಾರ ಜನಪ್ರಿಯತೆ ಯಶಸ್ಸು ಗಳಿಸಿತು. ಇದಕ್ಕೆ ಕಾರಣ ಆ ನಾಟಕಕ್ಕೆ ಬೇಕಾದ ಸೀನ್ಸ್, ಪಾತ್ರಗಳಿಗೆ ಬೇಕಾದ ಡ್ರೆಸ್, ಯುದ್ಧಕ್ಕೆ ಬೇಕಾದ ಫಿರಂಗಿ, ಆಟಂ ಬಾಂಬ್ ಇಂಥವುಗಳನೆಲ್ಲಾ ಸಮಯಕ್ಕೆ ಸರಿಯಾಗಿ ಹೊಂದಿಸಿಕೊಂಡು ಆಡುತ್ತಿದ್ದುದರಿಂದ ಜನಕ್ಕೆ ಬಹಳ ಖುಷಿಯಾಯ್ತು. ಕೋಟೆ, ಕೊತ್ತಳಗಳು, ದೇವಸ್ಥಾನ, ಕಹಳೆಯ ಮೊಳಗು, ಮೊದಲಾದವುಗಳಿಂದ ಜನ ಸ್ಟೇಜ್ ನೋಡ್ತಾ ಇದೀವೋ ಅಥವಾ ಮದಕರಿನಾಯಕನ ಕಾಲದ ದರ್ಬಾರು ನೋಡ್ತಾ ಇದೀವೋ ಎನ್ನುವಷ್ಟು ತನ್ಮಯತೆಯಿಂದ ಜನ ನಾಟಕಾನ ಪ್ರೀತಿಯಿಂದ ನೋಡೋರು, ರಾಜಾ ವೀರ ಮದಕರಿನಾಯಕನಿಗೆ ಮುರಘರಾಜೇಂದ್ರ ಸ್ವಾಮಿಗಳು ಆಶೀರ್ವಚನ ನೀಡುವ ಸೀನ್‌ನಲ್ಲಿ ಎಷ್ಟೋ ಪ್ರೇಕ್ಷಕರು ಇವರು ನಾಟಕದಲ್ಲಿ ಮಾಡಿರೋರು ಎನ್ನುವುದನ್ನು ಮರೆತು, ಮುರಘಸ್ವಾಮಿಗಳಿಗೆ ನಮಸ್ಕಾರ ಮಾಡಿಬಿಡುತ್ತಿದ್ದರು! ಅಂಥ ಪರಿಣಾಮ ಈ ನಾಟಕ ಜನಗಳ ಮೇಲೆ ಬೀರಿತ್ತು. ಮದಕರಿನಾಯಕನ ಬಗ್ಗೆ ದುರ್ಗದ ಜನಕ್ಕೆ ಯಾವತ್ತೂ ಗೌರವ, ಪ್ರೀತಿ, ಆತನ ಧೈರ್ಯ, ಸಾಹಸಗಳು ಮನೆ ಮಾತಾಗಿವೆ. ಆತನ್ನೇ ನಾಟಕ ಅಂದಮೇಲೆ ಕೇಳೋದೇನಿದೆ? ನಾಟಕಕ್ಕೆ ನೂಕು ನುಗ್ಗಲು ಆಯಿತು.

ಪಾತ್ರಗಳನ್ನು ಹಂಚಬೇಕಾದರೂ ಅಷ್ಟೆ. ದೊಡ್ಡ ಮದಕರಿನಾಯಕ ಸ್ವಲ್ಪ ವಯಸ್ಸಾಗಿರ ಬೇಕು. ರಾಜಾವೀರ ಮದಕರಿನಾಯಕ ವಯಸ್ಸಿನಲ್ಲಿ ಚಿಕ್ಕವನಾಗಿರಬೇಕು - ಹಿಂಗೆಲ್ಲಾ ಯೋಚನೆ ಮಾಡಿ ಅವರವರಿಗೆ ತಕ್ಕ ಪಾತ್ರಗಳನ್ನು ಹಂಚಿದ್ದರು. ಇದನ್ನೆಲ್ಲಾ ಹೆಚ್ಚಾಗಿ ಉಸ್ತುವಾರಿ ತಗೊಂಡು ಪಾತ್ರಗಳನ್ನೆಲ್ಲಾ ಹಂಚಿದವರು ಸ್ಯಾನಿಟರಿ ಇನ್ಸ್‌ಪೆಕ್ಟರ್ ಬಸವರಾಜು ಅವರು. ಬಬ್ರೂವಾಹನ ಪಾತ್ರ ಬಾಳಾ ಚೆನ್ನಾಗಿ ಮಾಡ್ತಾ ಇದ್ದರು. ಒಳ್ಳೆ ಡೈಲಾಗ್ ಹೇಳ್ತಾ ಇದ್ದರು. ಅಂತ ಹೇಳಿದ್ದನಲ್ಲ ತಿಪ್ಪಾನಾಯಕ್ ಅವರಿಗೆ ರಾಜಾವೀರ

ಮದಕರಿನಾಯಕ ಪಾತ್ರ ಕೊಟ್ಟಿದ್ದರು. ಎಲ್ಲಾ ಪಾತ್ರಧಾರಿಗಳು,ಲಾಯಖಾಗಿ ಮಾಡ್ತಾ ಇದ್ದರು.

ಇದರಲ್ಲಿ ಪಾತ್ರವಹಿಸುತ್ತಿದ್ದ ನಾರಾಯಣಸ್ವಾಮಿ ಲಾವಣಿ ಲಿಂಗಪ್ಪನಾಗಿ, ಈಶ್ವರಯ್ಯ ಶಂಕರಪ್ಪನಾಗಿ ಈ ನಾಟಕದಲ್ಲಿ ಪಾತ್ರ ಮಾಡ್ತಾ ಇದ್ದರು. ನಾಟಕ ಮಾಡ್ತಾ ಮಾಡ್ತಾ ಅವರಿಗೆ ಈ ಪಾತ್ರಗಳು ಎಷ್ಟುಸಲೀಸಾಗಿ ಬಿಟ್ಟವು ಅಂದ್ರೆ, ಅವರಿಬ್ಬರಿಗೂ ರಂಗಭೂಮಿಯಲ್ಲಿ ಮಾಡ್ತಾ ಇದ್ದೀವಿ ಎನ್ನೋದೇ ಮರೆತು ಹೋಗಿ ಬಿಡುತ್ತಿತ್ತು. ಸ್ವಂತ ಜೀವನದಲ್ಲಿ ಇದು ನಡೀತಿದೆಯೇನೋ ಎಂಬಷ್ಟು ತನ್ಮಯರಾಗಿ ಮಾಡ್ತಾ ಇದ್ದುದರಿಂದ ಜನಕ್ಕೆ ಒಳ್ಳೆ ರಂಜನೆಯುಂಟು ಮಾಡೋರು.

ಇನ್ನು ಸೀತಾರಾಮರೆಡ್ಡಿಯವರ ರಾಜಾವೀರಮದಕರಿನಾಯಕ ನಾಟಕದ ಭಾಷೆ ಕಠಿಣ ಕನ್ನಡ, ಬಿಕ್ಕಟ್ಟು ಭಾಷೆ (ಅಂದ್ರೆ ಮನಸ್ಸಿಗೆ ಹಿಡಿಸೋ ಅಂತ ಭಾಷೆ) ಆದರಿಂದ ಅರ್ಧ ಈ ನಾಟಕದ ಪಾತ್ರ ಮಾಡೋರು ಆ ಡೈಲಾಗ್ ಅನ್ನು ಚೆನ್ನಾಗಿ ಕಲಿತು, ನಾಟಕದಲ್ಲಿ ಚೆನ್ನಾಗಿ ಆಡೋರು. ಕೇಳ್ತಾ ಕೇಳ್ತಾ ನಾಟಕದ ಬೇರೆಯವರ ಮಾತುಗಳು ನಮಗೇ ಬೈಹಾರ್ಟ್ ಆಗುತ್ತಿದ್ದವು.

ರಾಜಾವೀರ ಮದಕರಿನಾಯಕನು ಚಿತ್ರದುರ್ಗ ಆಳುತ್ತಿದ್ದಾಗ ಹರಪನಹಳ್ಳಿ ಸೋಮಶೇಖರನಾಯಕ, ರಾಯದುರ್ಗದ ಕೃಷ್ಣಪ್ಪನಾಯಕ, ಮದಕರಿನಾಯಕನ ಶಕ್ತಿ ಮುರಿಯಬೇಕೆಂದು ಹವಣಿಸುತ್ತಿದ್ದರು. ಆ ಸಂದರ್ಭದಲ್ಲಿ ಪ್ರಧಾನಿ ಪರಶುರಾಮಪ್ಪನಾಯಕ, ದಳವಾಯಿ ಭರಮಣ್ಣ ಮತ್ತು ಹವಲ್ದಾರ್ ಧನಸಿಂಗ್ ಮಾತಾಡುವ ಅವಕಾಶ ಉಂಟಾಗುತ್ತದೆ. ನಾನು ಹವಲ್ದಾರ್ ಧನಸಿಂಗ್ ಪಾತ್ರವನ್ನು ಮಾಡುತ್ತಿದ್ದೆ. ನಾಟಕ ಆಡಿ ನಲವತ್ತು ವರ್ಷಗಳೇ ನಡೆದಿರಬಹುದು. ಇವತ್ತಿಗೂ ನಾನು ಆಡಿದ ಡೈಲಾಗ್ ನನ್ನ ನಾಲಿಗೆಯ ಮೇಲೆ ಇದೆ.

ಧನಸಿಂಗ್: ಅಸಮಾನ್ಯ ಕೇಸರಿಯು ತಿಂದುಗುಳುವ ಎಂಜಲು ಮಾಂಸಕ್ಕೆ ತಿರಗಾಡುವ ಸಾಮಾನ್ಯ ನರಿಯ ಕೂಗಿನ ಕುತಂತ್ರವು ಕೇಸರಿಗೆ ಭಯಾನಕವೆನಿಸುವುದೇ ದಳವಾಯಿಗಳೇ?

ಆಗ ದಳವಾಯಿ ಭರಮಣ್ಣನವರು ಹಾಗಲ್ಲ! ನರಿಯ ಕೂಗನ್ನೇ ಕಾದು ಕುಳಿತಿರುವ ಕಳ್ಳಬೇಟೆಗಾರರು ಕಲ್ಲು ಎಸೆಯಬಹುವಲ್ಲವೇ ಧನಸಿಂಗ್? ಎನ್ನುತ್ತಾರೆ. ಆಗ ನಾನು ಅಂದರೆ ಹವಲ್ದಾರ್ ಧನಸಿಂಗ್ ಪಾತ್ರದಾರಿಯಾಗಿ ಮಾತು ಮುಂದುವರೆಸುತ್ತಾ, ಎಸೆದ ಕಲ್ಲಿಗೆ ಹೆದರುವ ಹೇಡಿತನವು ಚಿತ್ರದುರ್ಗದ

ನೃಪಕೇಸರಿಗಳ ಕನಸಿನಲ್ಲಿಯೂ ಕಾಣುವುದಿಲ್ಲ ಹೋಗಲಿ...! ವಿಜಯಕ್ಕಾಗಿ ಹೊರಡುವ ಶುಭಕಾಲದಲ್ಲಿ ಪರಮನೀಚರ ಸ್ಮರಣೆಯೇಕೆ? ನಡೆಯಿರಿ ಸೈನ್ಯವನ್ನು ಸಿದ್ಧಪಡಿಸೋಣ. ಗಡಿದುರ್ಗಗಳ ನಾಯಕರಿಗೆ ಈ ಮೊದಲೇ ಆಜ್ಞಾಪತ್ರಗಳನ್ನು ಕಳುಹಿಸಿರುವಿರಷ್ಟೇ? ಎಂದು ಹೇಳುತ್ತೇನೆ. ಇಂಥ ಮಾತಾಡುವಾಗ ಅದೆಂಥದೋ ಹುಮ್ಮಸ್ಸು, ಕೆಚ್ಚು ನಮ್ಮ ಮಾತುಗಳಲ್ಲಿ ತುಂಬಿರುತ್ತಿತ್ತು. ಬಾರ್‍ತಾ ಬಾರ್‍ತಾ ನಮಗೆ ಇದು ನಾಟಕ ಅನ್ನೋದೇ ಮರೆತು ಹೋಗ್ತಾ ಇತ್ತು. ಬೇರೆಯಪಾತ್ರಗಳು ಆಡುವ ಮಾತುಗಳಿಗೆಲ್ಲಾ ನಮಗೆ ಬೈಹಾರ್ಟ್ ಆಗ್ತಾ ಇತ್ತು ಎಂದು ಆಗಲೇ ತಿಳಿಸಿದೆನಲ್ಲ. ಅದಕ್ಕೆ ಒಂದು ಉದಾಹರಣೆ ಕೊಡ್ತೀನಿ.

ಚಿತ್ರದುರ್ಗದ ಪಾಳೆಯಗಾರರು ಹೈದರಾಲಿಗೋಸ್ಕರ ನಿಡುಗಲ್ ಕಾಮರಾಜನನ್ನು ಸೋಲಿಸುತ್ತಾ. ನಿಡುಗಲ್ ಕಾಮರಾಜನನ್ನು ಹವಲ್ದಾರ್ ಧನಸಿಂಗ್ (ನನ್ನ ಪಾತ್ರ) ಮತ್ತು ಭರಮಣ್ಣನಾಯಕರು ಸೆರೆಹಿಡಿದುಕೊಂಡು ಬಂದು ನಿಲ್ಲಿಸುವ ಇನ್ನೊಂದು ದೃಶ್ಯ ಬರುತ್ತೆ. ಆಗ ಕಾಮರಾಜ್ ಆಡೋ ಮಾತುಗಳನ್ನು ಕೇಳಬೇಕು. ನಾನು ಆ ಪಾರ್ಟ್ ಮಾಡದಿದ್ರೂ ಆ ಡೈಲಾಗ್ ಇನ್ನೂ ನನ್ನ ನಾಲಗೆ ಮೇಲೆ ಹಂಗೇ ಇದೆ.

ಕಾಮರಾಜ್: ಮಾತನಾಡುವೆನು.. ದುರ್ಗದ ಮಂತ್ರಿಗಳೇ.. ಹೃದಯದಲ್ಲಿ ಕೋಪಾಗ್ನಿಯು ಕುಟಿಲತಂತ್ರದಿಂದ ಕಾರ್ಯವಿಮುಖವಾಗಿರುವಾಗ ಕೈಗೆ ಸಂಕೋಲೆಗಳನ್ನು ತೊಡಿಸಿಕೊಂಡು ಮಾತನಾಡುವುದರಿಂದ ನಿಮಗಾವ ಪ್ರಯೋಜನವೇನು? ಮೋಸಮಯವಾದ ಯುದ್ಧವು ವೀರಪಾಳೆಗಾರರ ಪಾಳೆಯಕ್ಕೆ ಅಪಮಾನ ತರತಕ್ಕದ್ದಾಗಿದೆ. ಜಗತ್ತು ನಿದ್ರಿಸುತ್ತಿರುವಾಗ ಜಂಜಡವಾದ ಕತ್ತಲೆಯು ಜನತೆಯ ಕಣ್ಣುಗಳನ್ನು ಕವಿದಿರುವಾಗ ಕಳ್ಳರಂತೆ ಕನ್ನಕೊರೆದು ಒಳಗಿಳಿದು ನಿಶ್ಯಸ್ತ್ರರಾದ ನಿಡುಗಲ್ಲು ನಿವಾಸಿಗಳನ್ನು ಕತ್ತರಿಸಿ ಪಡೆದ ವಿಜಯದಿಂದ ಉಬ್ಬಿ ಈ ಚೋರ ಸಾಹಸವನ್ನು ನವಾಬನ ಮುಂದೆ ಪ್ರದರ್ಶಿಸಬೇಕೆಂದಿರುವ ಮಾರಿಯ ಜಾತ್ರೆಯಲ್ಲಿ ನಾನು ಮಾತನಾಡಿದರೆ ಪ್ರಯೋಜನವೇನು? ಚಿತ್ರದುರ್ಗದ ದೊರೆಗಳು ನಿರಪರಾಧಿಯ ನಿಟ್ಟೆಲುಬನ್ನು ಮುರಿಯುವ ನಿರ್ದಯಿ ಮದಕರಿಗಳೆಂಬುದು ನಿಜಗಲ್ಲು ಮುತ್ತಿಗೆಯಲ್ಲಿ ಜಗತ್ತಿಗೆ ತಿಳಿದಂತಾಯ್ತು. ಮೋಸದ ಪಂಜರದಲ್ಲಿ ಬಂಧಿಸಲ್ಪಟ್ಟಿರುವ ಕೇಸರಿಯು ಕಲಿತನದ ಗುಡುಗನ್ನು ಗುಡುಗಿದರೇನು ಪ್ರಯೋಜನ?

ಹಿಂಗೆ ಸೀತಾರಾಮರೆಡ್ಡಿಯವರು ಬರೆದ ಡೈಲಾಗುಗಳು ಕಲಿತು ಬಿಡೋವಷ್ಟು ಚೆನ್ನಾಗಿರುತ್ತಿದ್ದವು. ರೋಷದಿಂದ ಕೂಡಿದ್ದವು. ಕೇಳಿದವರಿಗೆ ಮೈ ಬೆಚ್ಚಗೆ ಮಾಡುತ್ತಿದ್ದವು. ಕಳೆದ ಹೋದ ಪಾಳೆಯಗಾರರ ಕಾಲ ಚಿತ್ರದುರ್ಗಕ್ಕೆ ಮರಳಿಬಂದು ಬಿಟ್ಟಿದೆ ಎಂಬಷ್ಟು

ಭ್ರಮೆಯಿಂದ ದುರ್ಗದ ಜನ ಹಿಂಡು ಹಿಂಡಾಗಿ ನಾಟಕಕ್ಕೆ ಬಂದು ನೋಡಿ ಖುಷಿ ಪಟ್ರು, ದುರ್ಗದ ಮದಕರಿನಾಯಕನನ್ನು ಹೈದರಾಲಿಯು ಸೆರೆಹಿಡಕೊಂಡು ಹೋಗೋದನ್ನು ಕಂಡು ದುಃಖಿಸಿದರು. ಈ ನಾಟಕವನ್ನು ನಮ್ಮ ಗರಡಿಯ ಕಲಾವಿದರು ಬೇರೆ ಬೇರೆ ಊರುಗಳಲ್ಲಿ ಅಭಿನಯಿಸಿದರು. ನಮ್ಮೂರಿನಲ್ಲಿ ಈ ನಾಟಕ ಯಾವ ಮೆಚ್ಚುಗೆ ಪಡೆಯಿತೋ, ಅದೇ ಮೆಚ್ಚುಗೆಯನ್ನು ಹೊಸದುರ್ಗ, ಹೊಳಲ್ಕೆರೆ, ದಾವಣಗೆರೆ, ಜಗಳೂರುಗಳಲ್ಲಿ ಮಾಡಿದಾಗಲೂ ಪಡೆಯಿತು. ಹೊಸದುರ್ಗದಲ್ಲಿ ಜನ ಗಾಡಿ ಕಟ್ಕೊಂಡು ಬಂದು ನೋಡ್ತಾ ಇದ್ದರು. ಟಿಕೆಟ್ ತಗಂಡು ಥಿಯೇಟರಿನಲ್ಲಿ ಕುಂತ್ಕೊಳ್ಳೋಕೆ ಜಾಗ ಇಲ್ಲದೆ ಎಲ್ಲಂದ್ರಲ್ಲಿ ಕುಂತ್ಕೊಂಡು ನೋಡಿ ಆನಂದಿಸಿದರು. ಅಷ್ಟು ಹುಚ್ಚು ಹಿಡಿಸಿಬಿಟ್ಟಿತ್ತು. ಈ ರಾಜಾವೀರ ಮದಕರಿನಾಯಕ.

೧೯೫೬ ನವೆಂಬರ್ ೧ ರಂದು ಕರ್ನಾಟಕ ರಾಜ್ಯೋತ್ಸವದ ದಿವಸ ನಾವು ಈ ನಾಟಕಾನ ಗುಬ್ಬಿ ಥಿಯೇಟರಿನಲ್ಲಿ ಬೆಂಗಳೂರಿನಲ್ಲಿ ಆಡಿದೆವು. ಆವೊತ್ತು ನಮ್ಮ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಭೀಮಪ್ಪನಾಯಕರು, ಗುಬ್ಬಿ ವೀರಣ್ಣನವರು, ಸುಬ್ಬಯ್ಯನಾಯ್ಡುರವರು ಇಂಥ ದೊಡ್ಡ ಮನುಷ್ಯರೆಲ್ಲಾ ನೋಡಿ ಸಂತೋಷಪಟ್ಟರು. ಒಳ್ಳೆಯ ಮಾತಾಡಿದರು. ೧೯೫೭ನೇ ಇಸವಿಯಲ್ಲಿ ಮೈಸೂರಿನ ದಸರಾ ವಸ್ತುಪ್ರದರ್ಶನದ ಅಂಗವಾಗಿ ಈ ನಾಟಕ ಆಡಿದೆವು. ಇದು ಮೈಸೂರಿನ ಮಹಾರಾಜರಿಗೆ ತಿಳಿದು ನಾವು ಇಲ್ಲಿಗೆ ವಾಪಸ್ ಬಂದಮೇಲೆ ಅರಮನೆಯವರ ಮೂಲಕ ಆಹ್ವಾನ ಕಳಿಸಿ ಮತ್ತೆ ನಮ್ಮನ್ನು ಮೈಸೂರಿಗೆ ಕರೆಸಿಕೊಂಡರು. ಆಗ ಜಯಚಾಮರಾಜೇಂದ್ರ ಒಡೆಯರ ಮುಂದೆ ಜಗಮೋಹನ ಪ್ಯಾಲೇಸಿನಲ್ಲಿ ಈ ನಾಟಕ ಆಡಿದೆವು. ಮಹಾರಾಜರು ಪೂರ್ತಿ ಹೊತ್ತು ಕುಳಿತುಕೊಂಡು ಈ ನಾಟಕ ನೋಡಿದರು. ಈ ನಾಟಕ ಅವರಿಗೆ ಬಾಳಾ ಹಿಡಿಸಂಗೆ ಕಾಣಿಸ್ತು. ದೊಡ್ಡಮದಕರಿನಾಯಕ ಮತ್ತು ರಾಜಾವೀರಮದಕರಿನಾಯಕರನ್ನು ಹೈದರಾಲಿ ಶ್ರೀರಂಗಪಟ್ಟಣಕ್ಕೆ ನಡೆಸಿಕೊಂಡು ಹೋಗುವ ದೃಶ್ಯವನ್ನು ಮಹಾರಾಜರು ಒಂದೇ ಸಮನೆ ನೋಡ್ತಾ ಇದ್ದು ಕಣ್ಣೀರು ಒರೆಸಿಕೊಂಡಂತೆ. ಹಂಗಂತ ನಮ್ಮ ನಾಟಕದಲ್ಲಿ ಮಾಡ್ದವರು, ಅದನ್ನು ನೋಡಿದವರು ಹೇಳುತ್ತಾರೆ.

ಒಟ್ಟಿನಲ್ಲಿ ಹೇಳ್ಬೇಕು ಅಂದ್ರೆ ಈ ನಾಟಕ ಗರಡಿಗೆ ಒಳ್ಳೆ ಹೆಸರು ತಂದಿತು. ಆಡಿದ ನಮಗೂ ಸಂತೋಷವಾಯ್ತು, ಆದ್ರೆ ಅದನ್ನ ಮುಂದುವರೆಸಿಕೊಂಡು ಹೋಗೋ ಹುಡುಗ್ರು ಈಗ ಗರಡಿಯಲ್ಲಿಲ್ಲ.

ಮರಡಿಹಳ್ಳಿ ಸೀತಾರಾಮರೆಡ್ಡಿಯವರು ಬರೆದಿದ್ದ ಪುಸ್ತಕ ರಾಜಾವೀರಮದಕರಿನಾಯಕ ಕೈ ಬರಹದಲ್ಲಿತ್ತು. ಪ್ರಿಂಟ್ ಆಗಿರಲಿಲ್ಲ. ಇಷ್ಟು ಒಳ್ಳೆ ನಾಟಕ ಪ್ರಿಂಟ್ ಮಾಡಿಸಿದ್ರೆ ನಾಟಕ ಪ್ರೇಮಿಗಳಿಗೆ ಒಂದು ಒಳ್ಳೆ ಪುಸ್ತಕಾನೂ ಸಿಕ್ಕಂಗೆ ಆಗುತ್ತೆ, ಈಗಾಗಲೇ

ದಿವಂಗತರಾದ ಸೀತಾರಾಮರೆಡ್ಡಿಯವರ ಹೆಸರನ್ನು ಉಳಿಸಿದಂಗೂ ಆಗುತ್ತೆ ಅಂತೆ ನಮ್ಮ ಸಂಘದವರು ಅದನ್ನು ೧೯೯೧ರಲ್ಲಿ ಪ್ರಿಂಟ್ ಮಾಡಿಸಿದರು ಅದಷ್ಟೇ ಅಲ್ಲ, ಈ ನಾಟಕದಲ್ಲಿ ಅದೆಷ್ಟೋ ಕಲಾವಿದರು ಒಂದೇ ಸಮನೆ ಅಭಿಮಾನದಿಂದ ಅಭಿನಯಿಸಿ ಸೇವೆ ಸಲ್ಲಿಸಿದ್ದರು. ಆದ್ದರಿಂದ ಅಚ್ಚಾದ ಸೀತಾರಾಮರೆಡ್ಡಿಯವ ರಾಜಾವೀರಮದಕರಿನಾಯಕ ನಾಟಕದ ಪುಸ್ತಕ ಬಿಡುಗಡೆ ಸಮಾರಂಭವನ್ನು ಎಸ್. ಜೆ. ಎಂ. ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದಿತು. ಅದೇ ದಿವಸ ನಾಟಕದ ಎಲ್ಲಾ ಕಲಾವಿದರನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ಚಿತ್ರಾಂಗದೆ ನಾಟಕದಿಂದ ದೊಡ್ಡ ಗರಡಿಯ ನವಭಾರತ ತರುಣ ಕಲಾವಿದರ ಸಂಘ ಇನ್ನೂ ಅನೇಕ ನಾಟಕಗಳನ್ನು ಅಭಿನಯಿಸಿದರೂ, ರಾಜಾವೀರಮದಕರಿನಾಯಕ ತಂದಷ್ಟು ಕೀರ್ತಿ, ಹೆಸರನ್ನು ಮತ್ತೆ ಯಾವುವೂ ತರಲಿಲ್ಲವೆನ್ನಬೇಕು. ಈ ನಾಟಕ ಆಡುವುದರ ಮೂಲಕ ಗರಡಿಯ ಕಲಾವಿದರು ಬೆಳಕಿಗೆ ಬಂದರು. ಮತ್ತೆ ಇದೇ ನಾಟಕದ ಮೂಲಕ ಗರಡಿಯು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬೆನಿಫಿಟ್‌ಗಳ ಮೂಲಕ ಒಂದು ರೀತಿ ಸಾಮಾಜಿಕ ಸೇವೆಯನ್ನು ಮಾಡಿತು ಎನ್ನಬೇಕು.

**ಮದಕರಿನಾಯಕ ಚಾಚಿದ ಸಹಾಯ ಹಸ್ತ**

ಚಿತ್ರದುರ್ಗವನ್ನು ಆಳಿದ್ದ ಮದಕರಿನಾಯಕ ಇನ್ನೊಮ್ಮೆ ದುರ್ಗದಲ್ಲಿ ಅವತರಿಸಿದ್ದಾನೆ ಎಂಬಷ್ಟು ಸಂತೋಷದಿಂದ ಜನ ದೊಡ್ಡಗರಡಿಯ ನವಭಾರತ ತರುಣ ಕಲಾವಿದರ ಸಂಘದಿಂದ ಅಭಿನಯಿಸಿದ ನಾಟಕವನ್ನು ಸ್ವಾಗತಿಸಿದರು. ಸೀತಾರಾಮ ರೆಡ್ಡಿಯವರು ಬರೆದ ಈ ನಾಟಕದಲ್ಲಿ, ಪಾಲುಗೊಂಡಿದ್ದವರು ಬಹಳಷ್ಟು ಮಂದಿ ವಿದ್ಯಾವಂತರಲ್ಲ. ಆದರೆ ಗರಡಿಯ ಜನಗಳಲ್ಲಿ ಅಡಗಿದ್ದ ಕಲಾ ಪ್ರೇಮ ನಾಕು ಜನರ ಕಣ್ಣು ಸೆಳೆಯುವಂತಾಯಿತು. ಈ ನಾಟಕವನ್ನು ಪ್ರಖ್ಯಾತ ಕಲಾವಿದರೆಲ್ಲಾ ನೋಡಿ ಕೊಂಡಾಡಿದರು. ೧೯೭೧-೭೨ರ ಸಂದರ್ಭದಲ್ಲಿ ನಮ್ಮ ಜಿಲ್ಲೆಯ ಪ್ರಖ್ಯಾತ ಕಾದಂಬರಿಕಾರರಾದ ತರಾಸು ಅವರ ನಾಗರಹಾವು ಕಾದಂಬರಿಯನ್ನು ಪುಟ್ಟಣ್ಣ ಕಣಗಾಲರು ಚಿತ್ರದುರ್ಗದಲ್ಲಿಯೇ ವಿಶೇಷವಾಗಿ ಚಿತ್ರಿಸಿಕೊಂಡರು. ಅವರ 'ನಾಗರಹಾವು ಸಿನಿಮಾದಲ್ಲಿ ಚಿತ್ರದುರ್ಗ ನೆಲದ ಐತಿಹಾಸಿಕ ವಸ್ತುವಿನ ಒಂದು ತುಣುಕನ್ನು ಚಿತ್ರಿಸಿಕೊಂಡರು. ಅದು ಓಬವ್ವಗೆ ಸಂಬಂಧಿಸಿದ ಸಾಹಸಕಥೆ. ಆ ಸಂದರ್ಭದಲ್ಲಿ ಪುಟ್ಟಣ್ಣ ಕಣಗಾಲರಿಗೆ ಗರಡಿಯ ನವಭಾರತ ತರುಣ ಕಲಾವಿದರು ಅಭಿನಯಿಸುತ್ತಿದ್ದ ಮದಕರಿನಾಯಕ ನೋಡಬೇಕೆಂಬ ಆಸೆ ವ್ಯಕ್ತಪಡಿಸಿದರು. ಅವರಿಗಾಗಿ ದೊಡ್ಡಗರಡಿಯ ನವ ಭಾರತ ತರುಣ ಕಲಾವಿದರು ವಿಶೇಷವಾಗಿ ವ್ಯವಸ್ಥೆಗೊಳಿಸಿ ರಾಜಾವೀರಮದಕರಿನಾಯಕವನ್ನು ಅಭಿನಯಿಸಿದರು. ಆಗಿನ ತರುಣನಟ ವಿಷ್ಣುವರ್ಧನ್, ಆರತಿ, ಅಶ್ವಥ್, ಶಿವರಾಂ ಮೊದಲಾದ ಎಲ್ಲಾ ಚಲನಚಿತ್ರ ಕಲಾವಿದರು ಪುಟ್ಟಣ್ಣಕಣಗಾಲರ

ಜೊತೆ ಕುಳಿತು ಈ ನಾಟಕವನ್ನು ವೀಕ್ಷಿಸಿದರು. ಪುಟ್ಟಣ್ಣಕಣಗಾಲರು ನಾಟಕವನ್ನು ಮನಸಾರೆ ಮೆಚ್ಚಿ ಗ್ರೀಸ್ ದೇಶದಲ್ಲಿ ಪುರಾತನ ಸ್ಮಾರಕಗಳನ್ನು ರಕ್ಷಿಸಿದಂತೆ, ಐತಿಹಾಸಿಕ ಮಹತ್ವವುಳ್ಳ ಚಿತ್ರದುರ್ಗದ ಕೋಟೆ ಕೊತ್ತಳಗಳನ್ನು ಸರಿಯಾಗಿ ರಕ್ಷಿಸಿ ಮುಂದಿನ ಜನಾಂಗಕ್ಕೆ ಉಳಿಸಿಕೊಡಬೇಕು ಎಂದು ಭಿನ್ನವಿಸಿದರು. ಜೊತೆಗೆ 'ನಾಗರಹಾವು ಸಿನಿಮಾದಲ್ಲಿ ಅನೇಕ ಸ್ಥಳೀಯ ಕಲಾವಿದರನ್ನು ತೆಗೆದುಕೊಂಡು ಪ್ರೋತ್ಸಾಹಿಸಿದರು. ಒಟ್ಟಿನಲ್ಲಿ ಹೇಳುವುದಾದರೆ ಮದಕರಿನಾಯಕ ನಾಟಕ ಮಾಡಿದವರಿಗೂ, ನೋಡಿದವರಿಗೂ ಸಂತೋಷ ತಂದಿತು.

ಈ ರಾಜಾವೀರ ಮದಕರಿನಾಯಕ ಚರಿತ್ರೆಯ ಕಾಲದಲ್ಲಿ ದಾನ ಧರ್ಮ ಬಾಳಾ ಮಾಡಿರಬಹುದು. ಈ ನಾಟಕದ ಮೂಲಕ ಗರಡಿಯ ಜನ ಅನೇಕ ಒಳ್ಳೆಯ ಕೆಲಸಗಳನ್ನು ಮಾಡುವ, ಸಮಾಜಕ್ಕೆ ನೆರವಾಗುವ ಅವಕಾಶ ಪಡೆದರು. ಮೊದಲಿನಿಂದಲೂ ಈ ನಾಟಕಮಾಡಿ ದುಡ್ಡು ಮಾಡಬೇಕು ಅಂತ ಗರಡಿಯ ಕಲಾವಿದರ ಉದ್ದೇಶ ಇರಲಿಲ್ಲ. ಆದ್ದರಿಂದ ಈ ನಾಟಕದ ಅನೇಕ ಸಹಾಯಾರ್ಥ ಪ್ರದರ್ಶನಗಳನ್ನು ನಡೆಸಿ, ಅನೇಕರಿಗೆ ಸ್ವಲ್ಪಮಟ್ಟಿನ ಧನಸಹಾಯ ಮಾಡಿತು. ಈ ರೀತಿ ಸಹಾಯ ನಮ್ಮ ಸಂಘ ಯಾವಾಗ ಮಾಡಿತು, ಯಾರಿಗೆಮಾಡಿತು, ಯಾಕೆ ಮಾಡಿತು ಎಂಬುದನ್ನು ನೆನಪಿಸಿಕೊಂಡರೆ ಕೆಲವಾದರೂ ಸಂಗತಿಗಳು ನನ್ನ ಜ್ಞಾಪಕಕ್ಕೆ ಬರುತ್ತವೆ.

ಈ ನಾಟಕ ಆಡುತ್ತಿದ್ದಾಗ ನಾರಾಯಣಸ್ವಾಮಿ ಲಾವಣಿ ಲಿಂಗಯ್ಯನಾಗಿ, ಈಶ್ವರಯ್ಯ ಶಂಕ್ರಯ್ಯನಾಗಿ ಬಹಳ ಜನಪ್ರಿಯತೆ ಗಳಿಸಿದ್ದರು ಅಂತ ಹೇಳಿದ್ದೀನಿ. ಅವರು ನಾಟಕಾ ಅಂತ ತಿಳ್ಕಳ್ಳದೆ ನಿಜ ಜೀವನದಲ್ಲಿ ಇರೋವ್ಯಕ್ತಿಗಳಂತೆ ಅಭಿನಯಿಸಿ, ಮಾತನಾಡಿ ನಾಟಕ ಒಳ್ಳೇ ಕಳೆಕಟ್ಟುವಂತೆ ಮಡ್ತಾ ಇದ್ದರು. ಇವರಲ್ಲಿ ಶಂಕ್ರಯ್ಯನಾಗಿ ಅಭಿನಯಿಸುತ್ತಿದ್ದ ಈಶ್ವರಪ್ಪ ಒಳ್ಳೇ ಸಾಭ್ಯಸ್ತ, ಸ್ವಾತಂತ್ರ್ಯದ ಹೋರಾಟದ ಕಾಲದಲ್ಲಿ ಈತ ಕೂಡಾ ಪಾಲುಗೊಂಡಿದ್ದ. ಸ್ವಾತಂತ್ರ್ಯ ಸಿಕ್ಕಮೇಲೆ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲುಗೊಂಡವರಿಗೆಲ್ಲಾ ಸನ್ಮಾನ ಇಟ್ಟುಕೊಂಡಿದ್ದರಂತೆ. ಆಗ ನಮ್ಮ ಈಶ್ವರಪ್ಪನಿಗೂ ಸನ್ಮಾನ ಮಾಡಲು ಕರೆದರಂತೆ. ಈತ ಬಡವ. ಆಗ ಸಿದ್ಧವನಹಳ್ಳಿ ನಿಜಲಿಂಗಪ್ಪನವರಿಗೆ ಕೈಮುಗಿದು, ನೀವು ಸನ್ಮಾನ ಮಾಡೋದು; ನಾಲ್ಕು ಕಾಸು ಕೊಡೋದು, ಎಷ್ಟು ದಿವಸ ಇರುತ್ತೆ, ನನಗೆಂಥವಾದರೂ ಕೆಲಸ ಕೊಡಿಸಿ ಜೀವನಕ್ಕೆ ಒಂದು ದಾರಿ ತೋರಿಸಿ ಎಂದು ಕೇಳಿದನಂತೆ. ನಿಜಲಿಂಗಪ್ಪನವರ ಮಾತಿನ ಮೇರೆಗೆ ಈತನಿಗೆ ಫಿಲ್ಟರ್ ಹೌಸಿನಲ್ಲಿ ಒಂದು ಸಣ್ಣಕೆಲಸ ಕೊಡಿಸಿದ್ದರು. ಆತ ಒಂದು ಸಣ್ಣಕೆಲ್ಲಸದಲ್ಲಿದ್ದರೂ ನಮ್ಮ ನಾಟಕದಲ್ಲಿ ಶಂಕ್ರಯ್ಯನ ಪಾತ್ರ ಮಾಡೋ ಮೂಲಕ ದೊಡ್ಡ ಹೆಸರು ಮಾಡಿದ ಕಲಾವಿದ. ಆತ ಬಡತನ, ಕಷ್ಟ,

ಅನುಭವಿಸುತ್ತಿದ್ದಾನೆ ಎಂಬುದು ಗೊತ್ತಾಗಿ ರಾಜಾವೀರಮದಕರಿನಾಯಕ ನಾಟಕದ ಒಂದು ಸಹಾಯಾರ್ಥ ಪ್ರದರ್ಶನವನ್ನು ಮಾಡಿದ್ದೆವು.

ಶಿವಣ್ಣಾಚಾರ್ ಎಂಬ ಇನ್ನೊಬ್ಬ ಕಲಾವಿದ ಪರಶುರಾಮನಾಯಕನ ಪಾತ್ರವಹಿಸುತ್ತಿದ್ದನು.ಆತನ ಮದುವೆಯ ಸಂದರ್ಭದಲ್ಲಿ ಹಣದ ತೊಂದರೆಯಾಯಿತು. ಇದಕ್ಕಾಗಿ ಈ ನಾಟಕದ ಸಹಾಯಾರ್ಥ ಪ್ರದರ್ಶನ ಮಾಡಿದೆವು. ಶಂಕ್ರಪ್ಪ ಇನ್ನೊಬ್ಬ ಕಲಾವಿದ ಪೂಜಾರಿಯ ಪಾತ್ರವನ್ನು ಮತ್ತು ಹೈದರಾಲಿಯ ಅನುಯಾಯಿಯಾದ ಮೊಹಿದ್ದೀನ್ ಪಾತ್ರವನ್ನು ಮಾಡುತ್ತಿದ್ದ ಈತನ ಆರ್ಥಿಕ ಸ್ಥಿತಿ ಚೆನ್ನಾಗಿರಲಿಲ್ಲ. ಸಿ. ಎಂ. ಮಹಾಲಿಂಗಪ್ಪನವರು ಹೈದರಾಲಿಯ ಪಾತ್ರ ಮಾಡುತ್ತಿದ್ದರು. ಅವರಿಗೆ ಆರ್ಥಿಕ ಸ್ಥಿತಿಯೂ ಚೆನ್ನಾಗಿರಲಿಲ್ಲ. ಜೊತೆಗೆ ಮಗಳ ಲಗ್ನಮಾಡಬೇಕಾಗಿತ್ತು. ಬಿ. ಟಿ. ರೆಡ್ಡಿಯವರು ನಮ್ಮಂತೆ ಹವ್ಯಾಸಿ ಕಲಾವಿದರಾಗಿರಲಿಲ್ಲ ತಮ್ಮ ಜೀವಮಾನ ಪರ್ಯಂತ ಅನೇಕ ಪ್ರಸಿದ್ಧ ನಾಟಕ ಕಂಪನಿಗಳು ನಾನಾ ಪಾತ್ರಗಳನ್ನು ಮಾಡಿದ್ದರು. ಬಳಿಕ ನಮ್ಮ ಗರಡಿಯ ಕಲಾವಿದರ ಬಳಗಕ್ಕೆ ಸೇರಿದ ಮೇಲೆ ದೊಡ್ಡಮದಕರಿನಾಯಕನ ಪಾತ್ರವನ್ನು ಅಭಿನಯಿಸುತ್ತಿದ್ದರು. ಉಪೇಂದ್ರಾಚಾರ್ ಇನ್ನೊಬ್ಬ ಕಲಾವಿದರು. ಇವರೆಲ್ಲರ ಕೌಟುಂಬಿಕ ಕಾರಣಗಳಿಗಾಗಿ, ಆರ್ಥಿಕ ನೆರವಿಗಾಗಿ ಮನಸುಮಾಡಿ ನಮ್ಮ ಗರಡಿಯ ಕಲಾವಿದರು ಪ್ರತಿಯೊಬ್ಬರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಸಹಾಯಾರ್ಥ ಪ್ರದರ್ಶನಗಳನ್ನು ನೀಡಿ ಕೊಂಚಮಟ್ಟಿನ ಧನಸಹಾಯ ಮಾಡಿದರು.

ಪ್ರಸಿದ್ಧ ನಾಟಕಕಾರರೂ, ಚಲನಚಿತ್ರಕಲಾವಿದರೂ, ಸಂಗೀತಗಾರರೂ ಆದ ಹೊನ್ನಪ್ಪ ಭಾಗವತರು ನಾಟಕ ಕಂಪನಿ ಕಟ್ಟಿ ಕೈಸುಟ್ಟಿಕೊಂಡಿದ್ದರು. ಆಗ ನಮ್ಮ ಕಲಾವಿದರು ಸಹಾಯಾರ್ಥ ಪ್ರದರ್ಶನ ಮಾಡಿ ಆರ್ಥಿಕ ನೆರವು ನೀಡಿದರು. ಸುಮಾರು ಹದಿನಾರು ಸಾವಿರ ರೂಪಾಯಿಗಳಷ್ಟಾದರೂ ಅವರಿಗೆ ಸಹಾಯಾರ್ಥ ಧನ ನೀಡಿರಬೇಕೆಂದು ನನ್ನ ನೆನಪು.

ಹೀಗೆ ಅಶಕ್ತ ಕಲಾವಿದರಿಗೆ ಇಷ್ಟೆ ಇಷ್ಟಾದರೂ ಆರ್ಥಿಕ ನೆರವು ನೀಡುವ ಮೂಲಕ ನಮ್ಮ ಗರಡಿಯ ಕಲಾವಿದರು ಒಳ್ಳೆಯ ಕೆಲಸಮಾಡಿದ್ದಾರೆ ಎಂದು ನನ್ನ ಭಾವನೆ. ಇದರ ಜೊತೆಗೆ ನೇರವಾಗಿ ಕೆಲವು ಸಂಘ ಸಂಸ್ಥೆಗಳಿಗೂ ಗರಡಿಯ ಕಲಾವಿದರು ನೆರವು ನೀಡಿದ್ದಾರೆ. ಈಗ ಟೌನ್‌ಕ್ಲಬ್ಬಿನ ಹತ್ತಿರವಿರುವ ಮಹಿಳಾಸಮಾಜಕ್ಕೂ ಕೂಡಾ ನಮ್ಮ ಗರಡಿಯ ಕಲಾವಿದರಿಂದ ರಾಜಾವೀರ ಮದಕರಿನಾಯಕ ಪ್ರದರ್ಶನ ಮಾಡುವುದರ ಮೂಲಕ ಸಹಾಯ ಮಾಡಿದೆವು. ಆಗ ನಮ್ಮೂರಿಗೆ ಟಿ. ವೆಂಕಟಶಿವರೆಡ್ಡಿ ಅಂತ ಡಿ.ಸಿ. ಆಗಿ ಬಂದಿದ್ದರು. ಅವರು ಹೆಚ್ಚಾಗಿ ಟಿ. ವಿ. ರೆಡ್ಡಿ ಅಂತಾನೆ ಕರೆಯಲ್ಪಡೋರು. ಅವರ

ಹೆಂಡತಿ ಸುಧಾ ವೆಂಕಟಶಿವರೆಡ್ಡಿ ಅಂತ. ಇಬ್ಬರೂ ಗಂಡ-ಹೆಂಡತಿಯರಿಗೆ ಚಿತ್ರದುರ್ಗ ಅಂದರೆ ಬಾಳಾ ಅಭಿಮಾನ. ಊರು ಹೆಂಗಾದರೂ ಮುಂದುವರೆಸಬೇಕು ಅಂತ ಅವರ ಆಸೆ. ಹಿಂಗಾಗಿ ಸುಧಾ ವೆಂಕಟಶಿವರೆಡ್ಡಿಯವರು ಇಲ್ಲಿನ ಮಹಿಳಾ ಸಮಾಜ ನಿರ್ಮಾಣದಲ್ಲಿ ಮುಖ್ಯಪಾತ್ರವಹಿಸಿದರು. ಆ ಸಂದರ್ಭದಲ್ಲಿ ಆರ್ಥಿಕ ನೆರವಿಗಾಗಿ ಸಹಾಯಾರ್ಥ ಪ್ರದರ್ಶನ ಕೇಳಿಕೊಂಡಿದ್ದರಿಂದ, ನಾವು ಪುನಃ ಮದಕರಿನಾಯಕ ನಾಟಕವನ್ನು ಅಭಿನಯಿಸಿದೆವು. ಈ ಮೂಲಕ ಬಂದ ಹಣವನ್ನು ಮಹಿಳಾ ಸಮಾಜದ ನಿರ್ಮಾಣಕ್ಕೆ ದೇಣಿಗೆಯಾಗಿ ನೀಡಿದೆವು.

ಅನೇಕ ಧಾರ್ಮಿಕ, ದೈವಿಕ, ಕೆಲಸಗಳಿಗೂ ನಮ್ಮ ರಾಜಾವೀರ ಮದಕರಿನಾಯಕ ನೆರವಿಗೆ ಮುಂದೆ ಬರಬೇಕಾಯಿತು. ನಮ್ಮೂರಿನ ಗ್ರಾಮದೇವತೆಗಳಾದ ತಿಪ್ಪಿನಗಟ್ಟಮ್ಮ, ಬರಗೇರಮ್ಮ, ಏಕನಾಥೇಶ್ವರಿಗಳ ದೇವಾಲಯಗಳ ಜೀರ್ಣೋದ್ಧಾರ, ಪೂಜಾಸೇವೆಗೆ, ಸಹಾಯಮಾಡಲು ಈ ನಾಟಕವನ್ನು ಪ್ರದರ್ಶಿಸಲಾಯಿತು. ಗೋಪಾಲಪುರದ ಆಂಜನೇಯ ಸ್ವಾಮಿ, ಮಧುಗಿರಿಯ ಆಂಜನೇಯಸ್ವಾಮಿಯ ದೇವಾಲಯಗಳ ಜೀರ್ಣೋದ್ದಾರಕ್ಕೆ ದೊಡ್ಡಗರಡಿಯ ದುರಸ್ಥಿಗೆ ಕೂಡಾ ಸಹಾಯಾರ್ಥ ಪ್ರದರ್ಶನಗಳನ್ನು ಮಾಡಿದೆವು.

ಈ ಕಲಾವಿದರ ಸಂಘವು ನಾಟಕ ಪ್ರದರ್ಶನ, ಸಹಾಯಾರ್ಥ ಪ್ರದರ್ಶನ ಮಾಡಿದ್ದರ ಜೊತೆಗೆ ನಾಡಿನ ಹಲವು ಪ್ರಖ್ಯಾತ ಕಲಾವಿದರನ್ನು ಸನ್ಮಾನ ಮಾಡಿದೆ. ಹೀಗೆ ಸನ್ಮಾನ ಮಾಡಿಸಿಕೊಂಡವರಲ್ಲಿ ಡಾ॥ ರಾಜಕುಮಾರ್, ಪುಟ್ಟಣ್ಣಕಣಗಾಲ್, ಹೊನ್ನಪ್ಪ ಭಾಗವತ, ನರಸಿಂಹರಾಜು, ಪಂಡರೀಬಾಯಿ, ಪದ್ಮಶ್ರೀ ಬಿ. ಸರೋಜಾದೇವಿ, ಚಿಂದೋಡಿ ಲೀಲ, ಮುಖ್ಯರು. ಹಾಗೆಯೇ ಪ್ರಖ್ಯಾತ ಕಾದಂಬರಿಗಾರರಾದ ತರಾಸು, ಪತ್ರಿಕಾ ಸಂಪಾದಕರಾದ ಬಿ. ವಿ. ವೈಕುಂಠರಾಜು ಅವರನ್ನು ಸನ್ಮಾನಿಸಿದೆ.

ಹೀಗೆ ನಮ್ಮ ಗರಡಿಯ ನವಭಾರತ ತರುಣ ಕಲಾವಿದರ ಸಂಘವು ರಾಜಾವೀರಮದಕರಿನಾಯಕ ನಾಟಕದ ಮೂಲಕ ಕಲಾವಿದರನ್ನು ಪರಿಚಯಿಸಿ, ಕಲಾವಿದರಿಗೆ ನೆರವಾಗಿ, ಕಲಾವಿದರಿಗೆ ಸನ್ಮಾನಮಾಡಿ, ಸಂಘ ಸಂಸ್ಥೆಗಳಿಗೆ ನೆರವಾಗಿ ಸಾರ್ಥಕತೆ ಪಡೆಯಿತು. ಈಗ ಕುಸ್ತಿಕಲೆಯ ಬಗ್ಗೆ ಬೆಳೆಯುತ್ತಿರುವ ಅಸಡ್ಡೆಯಂತೆ, ಇಂಥ ನಾಟಕಗಳನ್ನು ಮಾಡಲು ತರುಣರು ಆಸಕ್ತಿ, ತಾಳುತ್ತಿಲ್ಲ. ಅವರಿಗೆ ಯಾವುದೂ ಬೇಕಾಗಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

**ಪೈಲ್ವಾನರ ಊರು ಕೇರಿಗಳು**

ದೊಡ್ಡಗರಡಿಯ ಬೆಳವಣಿಗೆಯಲ್ಲಿ ನಾನು ನೋಡಿರೋ ಹಂಗೆ ಭಾರೀ ಭಾರಿ ಪೈಲ್ವಾನರು ತಮ್ಮ ಕುಸ್ತಿ ಕಲೆಯಿಂದ ಕುಸ್ತಿ ಪ್ರೇಮಿಗಳ ಮನಸ್ಸಿನಲ್ಲಿ ಉಳಿದರು. ಹಂಗೇನೇ ಅನೇಕ

ಕಿರಿಯ ಪೈಲ್ವಾನರುಗಳಿಗೆ ಮಾರ್ಗದರ್ಶಕರಾಗಿದ್ದರು. ಗರಡಿಮನೆ ಎನ್ನುವುದು ಉಸ್ತಾದ್- ಪೈಲ್ವಾನರುಗಳಿಂದ ತುಂಬಿರುತ್ತದೆ ಎಂಬುದು ನಿಜವಾದರೂ, ದೊಡ್ಡಗರಡಿ ಬರೀ ಕುಸ್ತಿಗಷ್ಟೇ ಪ್ರಖ್ಯಾತಿಯಾಗದೆ ನಾಟಕ ಕಲೆಗೂ ಹೇಗೆ ಒಲಿಯಿತು ಎಂದು ತಿಳಿಸಿದ್ದೇನೆ. ನಾಟಕದ ಮೂಲಕ ಅಲ್ಪ ಸ್ವಲ್ಪ ಸಾಮಾಜಿಕ ಸೇವೆಯನ್ನು ಮಾಡಿದ್ದನ್ನೂ ತಿಳಿಸಿದ್ದೇನೆ. ಈಗ ಮತ್ತೆ ಐವತ್ತು ಅರವತ್ತು ವರ್ಷಗಳ ಹಿಂದಿನ ಗರಡಿ, ಉಸ್ತಾದ್, ಪೈಲ್ವಾನರುಗಳನ್ನು ನೆನೆಸಿಕೊಂಡರೆ ಅವರ ಲೋಕ ದೊಡ್ಡದೇ ಎಂದು ಹೇಳಬೇಕು. ಅದನ್ನು ಕುರಿತು ಒಂದೆರಡು ಮಾತು ಹೇಳಬೇಕು ಎನ್ನಿಸಿದೆ.

ಪೈಲ್ವಾನರುಗಳು ಎಂದರೆ ಅವರೂರಿನಲ್ಲಿ ಅವರು ಇದ್ದು, ಅಲ್ಲಿ ಕುಸ್ತಿ ಆಡಿ ಅಲ್ಲೇ ಜೀವನ ಕಳೆದೋರೆ ಅಲ್ಲ, ಎಲ್ಲಿಲ್ಲಿಂದಲೋ ಬರೋರು. ಎಲ್ಲೆಲ್ಲೋ ಕುಸ್ತಿ ಆಡೋರು, ಅವರಿಗೆ ಇಂಥ ಕಡೆ ಅಖಾಡ ಆಗ್ತಾ ಇದೆ; ಇಂಥ ಕಡೆ ಕುಸ್ತಿ ನಡೆಯುತ್ತದೆ ಎಂದು ಗೊತ್ತಾದರೆ ಸಾಕು ಆ ಊರಿನವರು-ಈ ಊರಿನವರು ಅಂಡ್ಕೊಂಡು ಕುಸ್ತಿ ನಡೆಯೋ ಊರಲ್ಲಿ ಸೇರಂಡ್ ಬಿಡೋರು. ಯಾವ ಕಡೆಯಿಂದ ಪೈಲ್ವಾನ್ ಬಂದರೂ ಆ ಊರಿನಲ್ಲಿರೋ ಗರಡಿಗಳಲ್ಲೊಂದರಲ್ಲಿ ಅವರು ಉಳುಕೊಳ್ತಾ ಇದ್ದರು. ಹಂಗೆ ಪರಸ್ಥಳಗಳಿಂದ ಬಂದ ಪೈಲ್ವಾನರುಗಳಿಗೆ ಊರಿನಲ್ಲಿರೋ ಗರಡಿಯವರು ಆಶ್ರಯ ಕೊಡ್ತಾ ಇದ್ದರು. ಗೌರವ ಕೊಡ್ತಾ ಇದ್ದರು.

ಈಗ ನೋಡಿ, ಪಂಜಾಬ್ ಎಲ್ಲಿ? ಚಿತ್ರದುರ್ಗ ಎಲ್ಲಿ? ಪಂಜಾಬಿನ ಪ್ರಖ್ಯಾತ ಪೈಲ್ವಾನ್ ಪರಿಪೈಗರ್ ಕುಸ್ತಿ ಆಡೋಕೆ ಬಂದಿದ್ದು ಮೈಸೂರಿನಲ್ಲಿ, ಅವರನ್ನು ನೋಡಿ ದೊಡ್ಡಗರಡಿಗೆ ಈ ಮನುಷ್ಯ ಬೇಕು ಅಂತ ಕರ್ಕೊಂಡು ಬಂದಿದ್ದು ಗರಡಿಯ ಪೋಷಕರಾದ ಸಿ. ಬಿ. ಮಲ್ಲಪ್ಪನವರು. ದುರ್ಗಕ್ಕೆ ಪರಿಪೈಗರ್ ಸಾಹೇಬರು ಬಂದಮೇಲೆ ದೊಡ್ಡ ಗರಡಿಯ ಪೈಲ್ವಾನರುಗಳಿಗೆ ಮಟ್ಟೆಯಲ್ಲಿ ಪಟ್ಟು ಹೇಳಿಕೊಟ್ಟರು. ನಂಜಪ್ಪನಂಥಾ ಪೈಲ್ವಾನರು ಮೇಲಕ್ಕೆ ಬರುವ ಹಂಗೆ ಮಾಡಿದರು. ಆಮೇಲೆ ಪರಿಪೈಗರ್ ತಮ್ಮ ಜೀವನಾನ ಕೊನೆ ತನಕಾ ಇಲ್ಲೇ ಕಳೆದರು. ಅವರ ಮಗ ಆಶಕ್ ಹುಸೇನ್ ಕೂಡಾ ಅವರ ಜೊತೆಗೆ ಬಂದಿದ್ದರು. ಅವರೂ ಕೂಡಾ ಇಲ್ಲೇ ಉಳಿದರು. ಅವರು ಮುಸ್ಲಿಂರಾದ್ದರಿಂದ ಮಸೀದಿಗೆ ತಪ್ಪದೇ ಹೋಗುತ್ತಿದ್ದರು. ಅವರ ಮಗ ಆಶಕ್ ಹುಸೇನ್ ಅವರಿಗೆ ಚಿಕ್ಕಪೇಟೆಯಲ್ಲಿರುವ ಮಸೀದಿಯ ಮೇಲ್ವಿಚಾರಣೆ ಕೊಟ್ಟಿದ್ದರು. ಅವರೂ ಕೂಡಾ ಇತ್ತಿಚೆಗೆ ತೀರಿಕೊಂಡರು.

ದೂರ-ದೂರ ಇದ್ದರೂ ಪರಿಪೈಗರ್ ಮತ್ತು ಆಶಕ್ ಹುಸೇನ್ ಇಲ್ಲಿನ ಪೈಲ್ವಾನರುಗಳಿಗೆ ಕೆಲಸ ಕಲಿಸಿಕೊಂಡು ಅನೇಕ ವರ್ಷಗಳು ಇಲ್ಲೇ ಇದ್ದರು.

ಕೊಲ್ಲಾಪುರದಿಂದ ಫರೀದ್ ಅನ್ನುವ ಪೈಲ್ವಾನರು ಕುಸ್ತಿ ಆಡೋಕೆ ಅಂತ ಬಂದವರು, ಹೆಚ್ಚ ಕಡಿಮೆ ಆರು ತಿಂಗಳು ನಮ್ಮ ದೊಡ್ಡಗರಡಿಯಲ್ಲಿದ್ದರು. ಅವರು ದಾವಣಗೆರೆ ಶಿವು, ಮಾಯಕೊಂಡದ ಭೀಮಪ್ಪ, ಹೊಳೆಹೊನ್ನೂರು ಮಲ್ಲಪ್ಪ - ಇವರ ಮೇಲೆಲ್ಲಾ ಕುಸ್ತಿ ಆಡಿ ಗೆದ್ದಿದ್ದರು. ಕೊಲ್ಲಾಪುರದಿಂದ ಬಂದಿದ್ದ ಫರೀದ್ ಪೈಲ್ವಾನರು ಮುಸ್ಲಿಂ ಆಗಿದ್ದರೂ, ತಕ್ಷಣ ನೋಡಿದರೆ ಹಿಂದೂಗಳು ಅನ್ನೋ ಹಂಗೆ ಇದ್ದರು. ಎತ್ತರವಾದ ಆಳು, ಕಚ್ಚೆ ಪಂಚೆ, ಟೋಪಿ - ಅವರ ಡ್ರೆಸ್ಸು. ಮಾತು ಬಹಳ ಮೃದು. ಬಹಳ ಸೂಕ್ಷ್ಮ ಆ ಮನುಷ್ಯ.

ಹಿಂಗೆ ಬೇರೆ ಬೇರೆ ಗರಡಿಗಳಲ್ಲಿ ಪರಸ್ಥಳಗಳಿಂದ ಬಂದ ಪೈಲ್ವಾನರು ಆಶ್ರಯ ಪಡೀತಿದ್ದರು. ನಾನು, ಮೂಕಪ್ಪ ಇಬ್ಬರೂ ಇದೇ ರೀತಿಯಲ್ಲಿ ಬೆಂಗಳೂರಿನ ಅರಳೇಪೇಟೆಯಲ್ಲಿರುವ ಗರಡಿಯಲ್ಲಿ ಅಣ್ಣಯ್ಯಪ್ಪರ ನೆರವಿನಿಂದ ಆಶ್ರಯ ಪಡೆದಿದ್ದು.

ಗರಡಿಗೂ ಬರೋ ಜನವಾದರೂ ಅಷ್ಟೆ, ಶ್ರೀಮಂತರೂ ಬರೋರು, ಬಡವರೂ ಬರೋರು. ಹಿಂದೂಗಳೂ ಬರೋರು, ಮುಸ್ಲಿಮರೂ ಬರೋರು. ಆ ಜಾತಿ ಈ ಜಾತಿ ಎನ್ನದಂತೆ ಎಲ್ಲಾ ಜಾತಿಯವರು ಗರಡಿಮನೆಗೆ ಬರೋರು. ಈಗಿನ ಕಾಲದಲ್ಲಿ ಗರಡಿಗೆ ಬರೋರ ಸಂಖ್ಯೆ ಕಡಿಮೆಯಾಗಿದ್ದರೂ, ಆಗಿನಂತೆಯೇ ಜಾತಿಭೇದವಿಲ್ಲ. ಅದೇ ತರ ನಡಕೊಂಡು ಬರ್ತಾ ಇವೆ.

ನಮ್ಮ ದುರ್ಗದ ಪೈಲ್ವಾನರಿಗೂ ದಾವಣಗೆರೆ ಪೈಲ್ವಾನರಿಗೂ ಬೇಕಾದಷ್ಟು ಸಾರಿ ಅಖಾಡದಲ್ಲಿ ಕುಸ್ತಿಗಳಾಗಿವೆ. ಮತ್ಸರ, ಸಿಟ್ಟು ಎಲ್ಲಾ ಪ್ರದರ್ಶನ ಮಾಡಿದ್ದಾರೆ. ಅದು ಅಖಾಡದಲ್ಲಿ ಮಾತ್ರ ಕುಸ್ತಿ ನಡೆಯುವಾಗ ಮಾತ್ರ, ಅದು ಮುಗೀತು ಅಂದ್ರೆ ದಾವಣಗೆರೆ ದುರ್ಗದ ಪೈಲ್ವಾನರುಗಳೆಲ್ಲಾ ಸ್ನೇಹಭಾವದಿಂದ, ಪ್ರೇಮಭಾವದಿಂದ ನಡಕೊಳ್ಳೋರು.

ಹೊಸಪೇಟೆ ಭೀಮಪ್ಪನ ಮೇಲೆ ದಾವಣಗೆರೆ ಚಾರ್ಲಿ ಪೈಲ್ವಾನ್ ಬಳ್ಳಾರಿಯಲ್ಲಿ ಕುಸ್ತಿಮಾಡಿದಾಗ, ನಾನು ಅಲ್ಲಿಗೆ ಹೋಗಿದ್ದೆ ಅಂತ ಹೇಳಿದ್ದೀನಿ. ಆಗ ಬಸ್ ಸ್ಟ್ಯಾಂಡ್‌ನಲ್ಲಿ ಇಳಿದು ಹೋಟಲ್ಲಿಗೆ ಹೋಗೋಣ ಅಂತ ಹೊರಟಿದ್ದಾಗ, ದಾವಣಗೆರೆ ಪೈಲ್ವಾನರು ಎದುರಿಗೆ ಸಿಕ್ಕು ನನ್ನನ್ನು ಕರ್ಕೊಂಡು ಹೋಗಿ ನನ್ನನ್ನ ಪ್ರೀತಿಯಿಂದ ಹೆಂಗೆ ನೋಡ್ಕಂಡರು ಎಂಬುದನ್ನ ಈಗಾಗಲೇ ತಿಳಿಸಿದ್ದೀನಿ. ಪರಿಪೈಗರ್ ಪಂಜಾಬಿನ ಸಂಬಂಧ ಮರೆತಿದ್ದರು ಅಂತೇನೂ ಇಲ್ಲ, ಅವರಿಬ್ಬರೂ ಅಪ್ಪ-ಮಗ ಇಲ್ಲಿದ್ದಾರೆ ಅಂತ ತಿಳ್ಕೊಂಡು ಅವರ ಕುಟುಂಬದ ಸ್ನೇಹಿತ ರೈಫಲ್ ಎಂಬುವರು ಇವರನ್ನು ಹುಡಿಕಿಕೊಂಡು ಚಿತ್ರದುರ್ಗಕ್ಕೆ

ಬಂದಿದ್ದ. ಆತನ ಹೆಸರು ಬೇರೆ ಇದೆ. ಆತ ಪೈಲ್ವಾನ್ ಆಗಿ ಪಡೆದ ಬಿರುದು 'ರೈಫಲ್ ಎಂಬುದು ಅಂದರೆ ಗುಂಡಿನಂತೆ ಎದುರಾಳಿ ಪೈಲ್ವಾನನ್ನು ಅಟ್ಯಾಕ್ ಮಡ್ತಾನೆ ಎಂದು ಅಂತ ಬಿರುದನ್ನು ಜನ ಆತನಿಗೆ ಕೊಟ್ಟಿದ್ದರು. ಆತ ಒಳ್ಳೆ ಕುಸ್ತಿ ಪಟು. ಪಂಜಾಬಿನಿಂದ ಬಂದ ಈ ರೈಫಲ್ ಪೈಲ್ವಾನ್ ದಾವಣಗೆರೆಯಲ್ಲಿ ಕೆಲವು ಕುಸ್ತಿಆಡಿದ. ಅವುಗಳಲ್ಲಿ ದಾವಣಗೆರೆಯ ಪ್ರಖ್ಯಾತ ಪೈಲ್ವಾನ್ ಚಾರ್ಲಿಯ ಅಣ್ಣ ಮಹಮದ್ ಹುಸೇನ್ ಜೊತೆಯಲ್ಲಿ ಒಂದು. ಅದೇ ದಾವಣಗೆರೆಯಲ್ಲಿ ಇಸ್ಮೈಲ್ ಎನ್ನುವವನ ಜೊತೆಯಲ್ಲಿ ಒಂದು. ಆತ ಆರು ತಿಂಗಳು ದೊಡ್ಡಿಗರಡಿಯಲ್ಲಿದ್ದ.

ಆಗಿನ ಕಾಲದಲ್ಲಿ ದೂರ ದೂರದಿಂದ ಪೈಲ್ವಾನರುಗಳು ಬರೋರು. ಕಿರಿಯ ಪೈಲ್ವಾನರುಗಳಿಗೆ ಅವರನ್ನು ನೋಡುವುದೇ ಒಂದು ಹೆಮ್ಮೆಯ ವಿಷಯ. ಅವರ ಕುಸ್ತಿ ನೋಡೋದು ಅದಕ್ಕಿಂತಾ ಹೆಮ್ಮೆಯ ವಿಷಯ ಅಂತ ಅವರು ಅಂದ್ಕೊಳ್ಳುತ್ತಿದ್ದರು. ಯಾಕಂದ್ರೆ ಗರಡಿಯಲ್ಲಿ ಕಲಿತ ಪಟ್ಟುಗಳಿಗಿಂತ, ಈ ದೊಡ್ಡ ಪೈಲ್ವಾನರು ಸಮಸ್ತ ಜನಗಳ ಸಮ್ಮುಖದಲ್ಲಿ ಕುಸ್ತಿ ಮಾಡೋವಾಗ ಯಾವ ಕೆಲಸ ಮಾಡ್ತಾರೆ, ಯಾವ ವಿದ್ಯೆ ತೋರಿಸ್ತಾರೆ ಅಂತ ನೋಡಿ ತಿಳ್ಕೊಳ್ಳೋದು ಬಾಳಾ ಇರ್ತದೆ. ಹಿಂಗಾಗಿ ದೂರದಿಂದ ಬರೋ ಪೈಲ್ವಾನರು ಇಷ್ಟಪಡ್ತಾರೆ. ಅದೇ ಕಾರಣಕ್ಕಾಗಿ ಅಂಥ ಹೊರಗಿನಿಂದ ಬರುವ ಪೈಲ್ವಾನರುಗಳಿಗೆ ನಮ್ಮ ಗರಡಿಗಳಲ್ಲಿ ಸ್ವಾಗತವೇ ಇರುತ್ತಿತ್ತು.

ಒಮ್ಮೆ ಕಾಶ್ಮೀರದಿಂದ ಮೆಹಬೂಬ್ ಎಂಬ ಪೈಲ್ವಾನ್ ಬೆಂಗಳೂರಿಗೆ ಬಂದಿದ್ದ. ಆಗ ಈತ ಹಗಲು ದೀವಟಿಗೆ ಗರಡಿಯಲ್ಲಿ ಉಳುಕೊಂಡು ಸಾಧನೆ, ಲಡತ್ ಮಾಡ್ತಾ ಇದ್ದ. ಆಗ ಮೆಹಬೂಬ್ ಮೇಲೆ ಬೆಳಗಾಂ ಕಡೆಯ ಹುಣಸೆಕಟ್ಟೆ ಸಿದ್ದಪ್ಪ ಎಂಬ ಪೈಲ್ವಾನನ ಮೇಲೆ ದುರ್ಗದಲ್ಲಿಯೇ ಕುಸ್ತಿ ನಡೆಯಿತು. ಹುಣಸೇಕಟ್ಟೆ ಸಿದ್ದಪ್ಪ ದೊಡ್ಡಗರಡಿಯಲ್ಲಿ ಉಳುಕೊಂಡಿದ್ದ. ಈ ಇಬ್ಬರೂ ಪೈಲ್ವಾನರದೂ ದೊಡ್ಡ ಜೊತೆ. ಆದರೆ ಕುಸ್ತಿಯಲ್ಲಿ ಡ್ರಾ ಆಯ್ತು, ಕುಸ್ತಿ ಆಡೋಕೆ ಅಂತ ದೂರ ದೂರದಿಂದ ಬರುವ ಪೈಲ್ವಾನರುಗಳಿಗೆ ಸಾಮಾನ್ಯವಾಗಿ ಅವರಿಗೆ ಬೇಕಾದ ಗರಡಿಗಳು ಎಲ್ಲಾ ಸೌಲಭ್ಯ ಒದಗಿಸಿಕೊಡೋರು.

ನಾಗಪುರದಿಂದ ಅಣ್ಣಪ್ಪ, ದಿವಾನ್ - ಎನ್ನುವ ಇಬ್ಬರು ಪೈಲ್ವಾನರು ಕುಸ್ತಿ ಆಡೋಕೆ ಅಂತ ದುರ್ಗಕ್ಕೆ ಬಂದಿದ್ದರು ಎಂಬುದನ್ನು ತಿಳಿಸಿದ್ದೀನಿ. ಇದು ದುರ್ಗ-ದಾವಣಗೆರೆ ಮಧ್ಯೆ ಮಾತ್ರ ಇರೋ ಸಂಬಂಧ ಅಂತ ತಿಳ್ಕ ಬಾರದು. ನಮ್ಮ ದುರ್ಗಕ್ಕೆ ಆಗ ಬರುತ್ತಿದ್ದ ಪೈಲ್ವಾನರುಗಳಿಗೆ ಇಂಥ ಪ್ರೀತಿ, ಸ್ನೇಹಭಾವಗಳೇ ಸಿಕ್ಕಿವೆ.

ಈಗ ಐವತ್ತು ಅರವತ್ತು ವರ್ಷಗಳ ಹಿಂದೆ ಕುಸ್ತಿ ಕಲೆಗೆ ಸಾಕಷ್ಟು ಜನ ಗಮನ ಕೊಟ್ಟಿದ್ದರು. ಕುಸ್ತಿಗೆ ಪ್ರಾಮುಖ್ಯತೆ ಇತ್ತು. ಒಬ್ಬ ಪೈಲ್ವಾನ್ ಹೊರಗಡೆಯಿಂದ ಬಂದಿದ್ದಾನೆ ಅಂದರೆ ಅವನನ್ನು ಗರಡಿಯ ಪೈಲ್ವಾನರುಗಳು ಹಿರಿಯಣ್ಣನಂತೆ, ಉಸ್ತಾದನಂತೆ ಗೌರವಿಸಿ ನೋಡುತ್ತಿದ್ದರು. ಅಂಥ ಹೊರಗಿನ ಪೈಲ್ವಾನನ ಶಕ್ತಿ, ಮೈಕಟ್ಟು, ಅಖಾಡದಲ್ಲಿ ಅವರು ತೋರಿಸುತ್ತಿದ್ದ ವಿದ್ಯೆ, ಅಂದರೆ ಪಟ್ಟು, ಚತುರತೆ, ಚಾಕಚಕ್ಯತೆ ಇವೆಲ್ಲಾ ಬಾಳಾ ಮುಖ್ಯವಾಗಿ ಗಮನಿಸುತ್ತಿದ್ದರು. ಅದಕ್ಕೆ ಸರಿಯಾಗಿ ಇಂಥ ಪೈಲ್ವಾನರು ಎಚ್ಚರಿಕೆಯಿಂದ, ಮರ್ಯಾದೆಯಿಂದ, ಪ್ರೀತಿಯ ಭಾವದಿಂದ ಎಲ್ಲರೊಡಬೆ ವರ್ತಿಸೋರು. ಒಂದೇ ಮಾತಿನಲ್ಲಿ ಹೇಳುವುದಾದರೆ ಪೈಲ್ವಾನ್ ಅನ್ನಿಸಿಕೊಂಡವನು ಒಂದು ತುಂಬಿದ ಕೊಡ. ಇಂಥ ಒಬ್ಬ ಪೈಲ್ವಾನ್ ಒಂದು ಘನಂಧಾರಿ ಕುಸ್ತಿ ಮಾಡಿ ಕುಸ್ತಿ ಪ್ರೇಮಿಗಳ ಮನಸ್ಸು ಸೆಳೆದ ಅಂದರೆ ಆತನ ವಿಷಯ ಯಾವುದಾದರೂ ಕಥೆ ತರ ಪೈಲ್ವಾನರ ಬಾಯಿಂದ ಬಾಯಿಗೆ ಹರಡಿ ಬಿಡ್ತಾ ಇತ್ತು. ಇಂಥ ದೊಡ್ಡಸ್ತಿಕೆ ಪೈಲ್ವಾನರು ಇಟ್ಟುಕೊಂಡಿದ್ದರೆ, ಅಷ್ಟೆ ಪ್ರೀತಿಯಿಂದ ಕುಸ್ತಿ, ಪ್ರೇಮಿಗಳು ಅವರನ್ನು ನೆನಪಿಸಿಕೊಳ್ತಾ ಇದ್ದರು. ನೆನಪಿಸಿಕೊಂಡು ಮಾತಾಡ್ತಾ ಇದ್ದರು.

**ಮನೆ – ಮಡದಿ- ಮಕ್ಕಳು**

ನನ್ನ ಪೈಲ್ವಾನ್‌ಗಿರಿಯ ಕಥೆ, ಜೊತೆ ಜೊತೆಗೆ ಹೇಳಿದ ಗರಡಿ ಕಥೆ, ಬೇರೆ ಪೈಲ್ವಾನರುಗಳ ಕಥೆ, ಅಷ್ಟೋ ಇಷ್ಟೋ ನನ್ನ ನೆನಪಿನಿಂದ ಇಲ್ಲೀತನಕ ಹೇಳಿಕೊಂಡು ಬಂದಿದ್ದೀನಿ. ಭರಮಸಾಗರದಲ್ಲಿ ಒಂದು ಕುಸ್ತಿ ಆಡೋ ಸಂದರ್ಭ ಬಂದಾಗ ಗರಡಿ ಮರ್ಯಾದೆ ಉಳಿಸೋದಿಕ್ಕಾಗಿ ಆರು ಮಕ್ಕಳ ತಂದೆಯಾಗಿದ್ದರೂ ಅಖಾಡಕ್ಕಿಳಿದಿದ್ದು ಈಗಾಗಲೇ ತಿಳಿಸಿದ್ದೀನಿ. ನಾನು ಮದುವೆಯಾದ ಮೇಲೆ, ಮಕ್ಕಳು ಮರಿಗಳಾದಮೇಲೆ ಆಡಿದ ಮೊದಲ ಕುಸ್ತಿಯೂ ಅದೇ, ಕೊನೆಯ ಕುಸ್ತಿಯೂ ಅದೆ. ಆಮೇಲೆ ನನಗೆ ಕುಸ್ತಿಮಾಡುವ ಅವಕಾಶಗಳೂ ಸಿಗಲಿಲ್ಲ; ಮತ್ತೆ ನನಗೆ ಕುಸ್ತಿಮಾಡುವ ಬಯಕೆಯೂ ಉಂಟಾಗಲಿಲ್ಲ. ಮಕ್ಕಳು ಮರಿ ಸಂಸಾರ-ಅಂದಮೇಲೆ ನಮ್ಮ ಕುಟುಂಬದ ಕೆಲವು ವಿಚಾರಗಳನ್ನಾದರೂ ತಿಳಿಸಬೇಕು.

ನಮ್ಮ ತಾತ ಕೊಂಡಪ್ಪನವರು ಕೋಟೆ ಪ್ರೈಮರಿ ಸ್ಕೂಲಿಗೆ ಟೈಲರಿಂಗ್ ಮಾಸ್ಟರ್ ಆಗಿ ಕೆಲಸ ಮಾಡ್ತಾ ಇದ್ದರು. ನಮ್ಮ ವಂಶದವರು ಮೂಲದಲ್ಲಿ ಮಹಾರಾಷ್ಟ್ರದವರು ಯಾವಾಗ ಈ ಕಡೆಗೆ ಬಂದರೋ ಗೊತ್ತಿಲ್ಲ. ನಮ್ಮ ತಾತವರಿಗೆ ಸುಬ್ಬರಾವ್, ಪಾಂಡುರಂಗರಾವ್, ನಾರಾಯಣರಾವ್, ರಾಮರಾವ್, ಕೃಷ್ಣಜಿರಾವ್ ಅಂತ ಐದು

ಜನ ಮಕ್ಕಳು, ಜೀವನೋಪಾಯ ಹುಡುಕಿಕೊಂಡು ಇಬ್ಬರು ಸಹೋದರರು ಇವರಲ್ಲಿ ಹೊರಗಡೆಗೆ ಹೋದರು. ಅವರಲ್ಲಿ ನಾರಾಯಣರಾವ್ (ನನ್ನ ತಂದೆ), ಕೃಷ್ಣೋಜಿರಾವ್ ಮತ್ತು ಸುಬ್ಬರಾವ್ ಇವರು ಮಾತ್ರ ದುರ್ಗದಲ್ಲೇ ಉಳಕೊಂಡರು.

ನಮ್ಮ ತಂದೆ ತಾತನಿಂದ ಟೈಲರಿಂಗ್ ಕೆಲಸ ಕಲಿತುಕೊಂಡು ದೊಡ್ಡಗರಡಿ, ಸಣ್ಣ ಗರಡಿಗಳೆರಡಕ್ಕೂ ಬಹಳಕಾಲ ಉಸ್ತಾದಾಗಿ ಕೆಲಸ ಮಾಡಿದರು. ನಮ್ಮ ತಂದೆ ಅವರಿಗೆ ನಾನೇ ದೊಡ್ಡ ಮಗ, ನನ್ನನ್ನು ಬಿಟ್ಟರೆ ಎಲ್ಲಪ್ಪ, ಉಮಾಕಾಂತ ಇಬ್ಬರು ನನಗೆ ತಮ್ಮಂದಿರು. ಪುಷ್ಪಾ, ನಂದಿನಿಬಾಯಿ, ಸುನಂದ ಮೂರುಜನ ತಂಗಿಯರು. ಎಲ್ಲರೂ ಸಂಸಾರವಂದಿಗರಾಗಿ ಜೀವನ ಮಾಡ್ತಾ ಇದ್ದಾರೆ. ನಾನು ನಮ್ಮ ಮನೆಯಲ್ಲಿ ಬರೆದಿಟ್ಟಿರೋ ದಾಖಲೆ ಪ್ರಕಾರ ೯-೪-೧೯೩೦ ರಲ್ಲಿ ಮಂಗಳವಾರದಂದು ಹುಟ್ಟಿದೆ. ಅಣ್ಣತಮ್ಮಗಳೆಲ್ಲಾ ಬಹಳಕಾಲ ಅವಿಭಕ್ತ ಕುಟುಂಬದಲ್ಲಿದ್ದೆವು. ಈಗ ಎಲ್ಲಾ ಬೇರೆ ಬೇರೆ ಇದ್ದಾರೆ.

ನಮ್ಮ ಕುಟುಂಬ ಮೊಸಳೆ ಕುಟುಂಬ ಎಂದು ಕರೆಯುತ್ತಾರೆ. ನಾವು ಒಂದೇ ಮನೆಯಲ್ಲಿ ವಾಸಮಾಡದಿದ್ದರು ನಮ್ಮ ದೊಡ್ಡಪ್ಪ, ಚಿಕ್ಕಪ್ಪಗಳು, ಅಣ್ಣ ತಮ್ಮಂದಿರೆಲ್ಲಾ ಕೂಡಿದ ಮೊಸಳೆ ಕುಟುಂಬ ಬಹಳ ದೊಡ್ಡದು. ಹಬ್ಬ ಹರಿದಿನಗಳಲ್ಲಿ, ಕಷ್ಟನಷ್ಟಗಳಲ್ಲಿ ನಾವೆಲ್ಲಾ ಸೇರುತ್ತೇವೆ. ಚಿತ್ರದುರ್ಗದಲ್ಲಿಯೇ ಸುಮಾರು ೧೫ ಮೊಸಳೆ ವಂಶದ ಕುಟುಂಬಗಳಿವೆ.

ನನ್ನ ತಂಗಿ ಪುಷ್ಪಾದು ಮದುವೆಯಾದ ಬಳಿಕ ನನ್ನ ಮದುವೆ ಪ್ರಮೀಳಾಬಾಯಿಯವರ ಜೊತೆಯಲ್ಲಿ ಆಯಿತು. ನನ್ನ ಹೆಂಡತಿ ಪ್ರಮೀಳಾಬಾಯಿಯವರು ಶಿವಮೊಗ್ಗೆಯ ಟಿಂಬರ್ ಮರ್ಚೆಂಟ್ ರಾಮರಾವ್ ಎನ್ನುವವರ ಮಗಳು, ರಾಮರಾವ್ ಅವರ ಕುಟುಂಬವೂ ದೊಡ್ಡದು. ನಾನು ಅವರ ಮನೆಯಲ್ಲಿ ಮದುವೆಯಾದಾಗ ನನ್ನ ಭಾವಮೈದನಂದಿರೆಲ್ಲಾ ಚಿಕ್ಕ ಹುಡುಗರು. ಈಗ ಅವರೆಲ್ಲಾ ಬೇಕಾದಷ್ಟು ದೊಡ್ಡ ಓದು ಓದಿ ದೊಡ್ಡ ದೊಡ್ಡ ಕೆಲಸಗಳಲ್ಲಿ ಅನುಕೂಲವಾಗಿದ್ದಾರೆ. ಎನ್. ಆರ್. ಶಿವಮೂರ್ತಿ ಎಕನಾಮಿಕ್ಸ್ 'ಎಂ. ಎ. ಮಾಡಿ ಸಾಗರದ ಲಾಲ್ ಬಹದ್ದೂರ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತಿಯಾಗಿದ್ದಾರೆ. ಎನ್. ಆರ್. ಶಂಕರ್ ಎನ್ನುವ ಇನ್ನೊಬ್ಬ ಭಾವಮೈದುನ ಡಾಕ್ಟರಾಗಿ ಅಮೇರಿಕಾದ ಎಲಿನಾಯ್ಸ್ನಲ್ಲಿ ಕೆಲಸ ಮಾಡುತ್ತಿದ್ದಾರೆ. ಎನ್. ಆರ್. ವಿಶ್ವನಾಥ್ ಹೆಬ್ಬಾಳು ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಎನ್. ಆರ್. ಮಲ್ಲಿಕಾರ್ಜುನ ಎನ್ನುವವರು ಹಿಮಾಲಯ ಡ್ರಗ್ ಕಂಪನಿಯಲ್ಲಿ ಕೆಲಸಮಾಡುತ್ತಿದ್ದರೆ, ನನ್ನ ಭಾವಮೈದುನ ಅಂದರೆ ನನ್ನ ಹೆಂಡತಿಯ ತಮ್ಮ ಎನ್. ಆರ್. ಮಲ್ಲಿಕಾರ್ಜುನನಿಗೆ ನನ್ನ ಮಗಳು ಅನುರಾಧಾಳನ್ನು ಕೊಟ್ಟು ಮದುವೆ ಮಾಡಿದ್ದೇವೆ. ನಮ್ಮ ಮಾವನವರ ಒಬ್ಬ ಮಗ ಎನ್. ಆರ್. ನಾಗರಾಜ ಇದ್ದಕ್ಕಿದ್ದಂತೆ

ಮನೆ ಬಿಟ್ಟು ಹೋಗಿ ಈಗ ಇಪ್ಪತ್ತು ವರ್ಷಗಳಾಗಿವೆ. ಆತ ವರ್ಷಕ್ಕೊಮ್ಮೆ, ಹಬ್ಬಗಳಿಗೆ ಗ್ರೀಟಿಂಗ್ಸ್ ಕಳಿಸುತ್ತಾನೆ. ಆದರೆ ಆತ ಎಲ್ಲಿದ್ದಾನೆ ಎಂಬುದು ಅವರ ಕುಟುಂಬಕ್ಕೆ ಗೊತ್ತಿಲ್ಲ. ಇದಕ್ಕಾಗಿ ಅವರು ಬಾಳಾ ಕಳವಳ ಪಡುತ್ತಿದ್ದರು. ಈಗ ಹೊಂದಿಕೊಂಡಿದ್ದಾರೆ.

ನನ್ನ ಹೆಂಡತಿಯನ್ನು ನಾನು ಆಕೆಯ ಸೌಂದರ್ಯಕ್ಕಾಗಿ ಮದುವೆಯಾಗಲಿಲ್ಲ. ಆಕೆ ತನ್ನ ಸರಳತೆ, ಆತ್ಮೀಯತೆ, ನೆಂಟರ ಜೊತೆಗೆ ಸೌಹಾರ್ದತೆ, ಪ್ರೀತಿಯಿಂದ ವರ್ತಿಸುವುದು ಇವನ್ನೆಲ್ಲಾ ನೋಡಿದಾಗ ನನ್ನ ಹೆಂಡತಿಯ ಬಗ್ಗೆ ನನಗೆ ವಿಶೇಷವಾಗಿ ಮೆಚ್ಚುಗೆಯಾಗುತ್ತದೆ. ಚಿತ್ರದುರ್ಗದಲ್ಲಿ ಹದಿನೈದು ಮೊಸಳೆ ಕುಟುಂಬಗಳಿವೆ. ಈ ಕುಟುಂಬಗಳಲ್ಲಿ ಯಾವುದೇ ಕೆಲಸ ಕಾರ್ಯಗಳು ನಡೆದರೂ ಈ ಕುಟುಂಬಗಳವರು ನನ್ನ ಹೆಂಡತಿ ಪ್ರಮೀಳಾಬಾಯಿಗೆ ವಿಶೇಷವಾಗಿ ಮನ್ನಣೆ, ಗೌರವ ಕೊಟ್ಟು, ಆಕೆಯಿಂದ ಶುಭಕಾರ್ಯಗಳನ್ನು ಮೊದಲು ಮಾಡಿಸುತ್ತಾರೆ. ಅದು ಆಕೆ ಗಳಿಸಿಕೊಂಡಿರುವ ದೊಡ್ಡಸ್ಥಿಕೆ ಎಂದುಕೊಂಡಿದ್ದೇನೆ.

ನಾನು ನನ್ನ ಆರಂಭದ ದಿನಗಳಲ್ಲಿ ಸೇಲ್ಸ್ ಟ್ಯಾಕ್ಸ್ ಆಫೀಸಿನಲ್ಲಿ ಕ್ಲರ್ಕಾಗಿ ಕೆಲಸ ಆರಂಭಿಸಿದೆ. ನಮ್ಮೂರಿಗೆ ಹೊಸದಾಗಿ ಇಂಟರ್ ಮೀಡಿಯೇಟ್ ಕಾಲೇಜು ಬಂದಿದ್ದರಿಂದ, ಇದ್ದ ಕೆಲಸ ಬಿಟ್ಟು ಕಾಲೇಜಿಗೆ ಸೇರಿದೆ. ಆಮೇಲೆ ನನ್ನ ವಿದ್ಯಾಭ್ಯಾಸ ಮುಂದುವರೆಯಲಿಲ್ಲ. ಆಮೇಲೆ ನಾನು ಹೊಟ್ಟೆಪಾಡಿಗಾಗಿ ಟೈಲರಿಂಗ್ ಕೆಲಸ ಮಾಡತೊಡಗಿದೆ. ಇದರಿಂದ ನನಗೆ ಯಾವತ್ತೂ ಬಾಳಾ ಹಣದ ಅನುಕೂಲವಾಗಿದೆ ಅಂತ ನಾನು ಹೇಳುವುದಿಲ್ಲ. ಜೀವನಕ್ಕಾಗಿ ಒಂದು ಕರ್ತವ್ಯ ಅಂತ ತಿಳಕೊಂಡು ನಾನು ಈ ಕೆಲಸ ಅಂದರೆ ಟೈಲರಿಂಗ್ ಕೆಲಸ ಮಾಡಿದ್ದರಿಂದ ನನಗೆ ಇದು ಕಷ್ಟ ತಂದಿತು, ಸುಖ ತಂದಿತು ಎಂದೂ ಯೋಚಿಸಿಲ್ಲ. ಜೀವನ ನಡೆದಿದೆಯಲ್ಲಾ ಇಲ್ಲೀತನಕ ಅನ್ನೋ ಸಮಾದಾನ ಯಾವಾಗಲೂ ಇದ್ದೇ ಇದೆ. ಅದಕ್ಕೆ ಸರಿಯಾಗಿ ನನ್ನ ಹೆಂಡ್ತೀನೂ ಇಲ್ಲಿ ತನಕ ಮನೆಯಲ್ಲಿ ಎಲ್ಲಾ ಸಂಗತಿಗಳಿಗೂ ಸಹಕರಿಸಿಕೊಂಡು ಬಂದಿದ್ದಾಳೆ. ಒಂದು ದಿವಸಾನೂ ಆಕೆ ನನಗೆ ಒಡವೆ, ಬಟ್ಟೆ ಬೇಕು ಎಂದು ಕೇಳಿದವಳಲ್ಲ. ಒಳ್ಳೆ ಅನುಕೂಲಸ್ತರ ಮನೆಯಿಂದ ಆಕೆ ಬಂದಿದರೂ ಇಂಥ ಒಂದು ಸಂದರ್ಭದಲ್ಲಾದರೂ ಅದು ಬೇಕು, ಇದು ಬೇಕು ಅಂತ ಕೇಳಿಲ್ಲ. ಅದೊಂದು ನಾನು ಆಕೆಯಲ್ಲಿ ಮೆಚ್ಚೋ ಗುಣ.

ನಾನು ತಿಳುವಳಿಕೆ ಬಂದಾಗಿನಿಂದ ಸ್ವಲ್ಪ ರಾಜಕೀಯ ಆಸಕ್ತಿ, ಬೆಳಸಿಕೊಂಡ ಬಂದಿದ್ದೇನೆ. ನನಗೆ ಜನಸಂಘದ ಬಗ್ಗೆ ಒಲವು. ಕಾರ್ಯಕರ್ತನಾಗಿ ದುಡಿದಿದ್ದೇನೆ. ನನ್ನ ಹೆಂಡತಿಗೆ ನನ್ನ ರಾಜಕೀಯ ಓಡಾಟ ಅಷ್ಟೇನೂ ಸಂತೋಷಕೊಡುವ ವಿಷಯವಲ್ಲ. ಸಾರ್ವಜನಿಕ ಸೇವೆ ಮಾಡಿದ್ದಕ್ಕೆ ನಿಮಗೆ ಸಿಕ್ಕಿದ್ದೇನು ಎಂದು ಆಕೆ ನನಗೆ ಕೆಲವು ಸಾರಿ

ಪ್ರಶ್ನೆ ಕೇಳಿದ್ದಾಳೆ. ನಿಮ್ಮದೇನಿದ್ದರೂ 'ಅಮ್ಮಾ ತಾಯಿ ಪಾರ್ಟಿ ಅಂದರೆ ಬಿಕ್ಷೆ ಬೇಡೋ ಪಾರ್ಟಿ ಎಂದು ಹಂಗಿಸಿದ್ದಾಳೆ. ಆದರೆ ನನ್ನ ಭಾರತೀಯ ಜನತಾ ಪಕ್ಷದ ನಿಷ್ಟೆಯೇನೂ ಈಗಲೂ ಕಡಿಮೆಯಾಗಿಲ್ಲ.

೧೯೭೫ರಲ್ಲಿ ಇಂದಿರಾಗಾಂಧಿಯವರು ತುರ್ತುಪರಿಸ್ಥಿತಿ ಘೋಷಿಸಿದಾಗ ಅದನ್ನು ಹಲವು ವ್ಯಕ್ತಿಗಳು, ರಾಜಕೀಯ ಪಕ್ಷಗಳು ಪ್ರಚಂಡವಾಗಿ ವಿರೋಧಿಸಿದವು. ಆಗ ಭಾರತೀಯ ಜನತಾ ಪಕ್ಷ (ಆಗ ಜನಸಂಘ) ವೂ ಅದನ್ನು ಉಗ್ರವಾಗಿ ವಿರೋಧಿಸಿತು. ಆ ಸಂದರ್ಭದಲ್ಲಿ ನಾನು ಐದೂವರೆ ತಿಂಗಳಕಾಲ ಜೈಲಿನಲ್ಲಿದ್ದೆ. ಆಗ ನನ್ನ ಕುಟುಂಬದ ಸ್ಥಿತಿ ಸಾಕಷ್ಟು ಕಷ್ಟಕರವಾಗಿತ್ತು. ನನ್ನ ಹೆಂಡತಿ ಆಗ ನಮ್ಮ ಸಂಸಾರವನ್ನು ಹೇಗೋ ನಿರ್ವಹಿಸಿದಳು. ಅದೂ ಕೂಡಾ ನನ್ನ ಹೆಂಡತಿಯ ಬಗ್ಗೆ ಮೆಚ್ಚುವ ಅಂಶವಾಗಿದೆ.

ನನ್ನ ಟೈಲರಿಂಗ್ ವೃತ್ತಿಯಲ್ಲಿ ಅಂತಹ ಹಣದ ಅನುಕೂಲ ಪಡೆಯಲಿಲ್ಲ. ಆದರೆ ೧೯೮೦ರಲ್ಲಿ ದಾವಣಗೆರೆ ಮುನಿಸಿಪಾಲಿಟಿ, ಅಂಚೆ ಅಂತು ತಂತಿ ಇಲಾಖೆ ಇವುಗಳಿಗೆ (ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಸೇರಿ) ಸಮವಸ್ತ್ರ ಹೊಲಿದುಕೊಡುವ ಒಂದು ಅವಕಾಶ ಸಿಕ್ಕಿತು. ಆ ಸಂದರ್ಭದಲ್ಲಿಯೇ ನನ್ನ ಕೈಯಲ್ಲಿ ಸ್ವಲ್ಪ ಹೆಚ್ಚು ಹಣ ಓಡಾಡಿದ್ದು. ಆ ಸಂದರ್ಭದಲ್ಲಿಯೇ ನನ್ನ ಹೆಣ್ಣುಮಕ್ಕಳ ಮದುವೆ ಮಾಡಿದ್ದು.

ನನ್ನ ಕೌಟುಂಬಿಕ ಜೀವನ ಅಂತಹ ಏರುಪೇರು ಏನೂ ಕಂಡಿಲ್ಲ. ನನ್ನ ಎಲ್ಲಾ ಮಕ್ಕಳ ಮದುವೆಯೂ ನಮ್ಮ ಸಂಬಂಧಗಳಲ್ಲಿಯೇ ಆಯಿತು. ನನ್ನ ನಾಲ್ಕನೆಯ ಮಗಳು ಮಂಜುಳಾಳ ಮದುವೆ ನನ್ನ ಹೆಂಡತಿಯ ಸಂಬಂಧದಲ್ಲಿಯೇ ನಿಶ್ಚಯವಾಯಿತು. ಆ ಸಂದರ್ಭದಲ್ಲಿ ನನಗೂ ನನ್ನ ಹೆಂಡತಿಗೂ ಸ್ವಲ್ಪ ಚಿಂತೆಯಾಯಿತು. ಏಕೆಂದರೆ ನನ್ನ ಮೂರನೆಯ ಮಗಳನ್ನು ಇಟ್ಟುಕೊಂಡು ನಾಲ್ಕನೆಯ ಮಗಳನ್ನು ಮದುವೆಮಾಡುವುದು ಹೆಂಗೆ ಅಂತ ನಮಗೆ ಚಿಂತೆ. ತನ್ನನ್ನು ಬಿಟ್ಟು ತಂಗಿ ಮದುವೆ ಮಾಡ್ತಾರಲ್ಲ ಅಂತ ವೀಣಾ ಎಲ್ಲಿ ದುಃಖಿಸುತ್ತಾಳೋ ಅಂತಾನು ನಮ್ಮ ಮನಸ್ಸಿಗೆ ನೋವಾಗಿತ್ತು.

ಆದರೆ ದೇವರ ದಯೆಯಿಂದ ನಮ್ಮ ಕುಟುಂಬಕ್ಕೆ ಬಂದ ಈ ಕಷ್ಟ ತನ್ನಷ್ಟಕ್ಕೆ ತಾನೇ ಬಗೆಹರಿಯಿತು. ನಮ್ಮ ವೀಣಾಳನ್ನು ಪ್ರಖ್ಯಾತ ಗಾಂಧೀವಾದಿಯಾದ ವೆಂಕೋಬರಾಯರ ಮಗನಿಗೆ ತಂದುಕೊಳ್ಳಲು ಒಪ್ಪಿದರು. ಅದು ಒಳ್ಳೆ ನಾಟಕೀಯವಾಗಿ ನಡೆಯಿತು. ವೆಂಕೋಬರಾಯರು ಹೊಳಲ್ಕೆರೆಗೆ ಬಂದಿದ್ದರು. ಅವರು ನಮ್ಮ ಮಗಳು ವೀಣಾಳನ್ನು ನೋಡಲು ಆಕಸ್ಮಿಕವಾಗಿ ಚಿತ್ರದುರ್ಗಕ್ಕೆ ಬಂದರು. ಆದರೆ ನನ್ನ ಹೆಂಡತಿ

ಮತ್ತು ವೀಣಾ ನನ್ನ ಮೂರನೆಯ ಮಗಳು ಅನುರಾಧಾಳ ಮನೆಗೆ ಸೀಮಂತ ಕಾರ್ಯಕ್ಕೆ ಹೋಗಿದ್ದಳು. ವೆಂಕೋಬರಾಯರು ಬೆಂಗಳೂರಿನಲ್ಲಿಯೇ ನಮ್ಮ ಅಳಿಯಂದಿರ ಮನೆಯಲ್ಲಿ ವೀಣಾಳನ್ನು ನೋಡಲು ಮತ್ತು ತೋರಿಸಲು ಬಲವಂತ ಮಾಡಿದರು. ನಾನು ಬೇರೆ ದಾರಿ ಕಾಣದೆ ಅವರ ಜೊತೆಯಲ್ಲಿ ಬೆಂಗಳೂರಿಗೆ ಹೋಗಬೇಕಾಯಿತು. ಅಕಸ್ಮಾತ್ ನನ್ನ ಹೆಂಡತಿ, ವೀಣಾ ಇವರೆಲ್ಲಾ ದುರ್ಗದ ಕಡೆಗೆ ಹಿಂದಿರುಗುತ್ತಿದ್ದವರು ನಮಗೆ ಭೇಟಿಯಾದರು. ವೆಂಕೋಬರಾಯರು ಸಿರಾದ ಬಸ್ ಸ್ಟಾಂಡಿನಲ್ಲಿಯೇ ವೀಣಾಳನ್ನು ನೋಡಿ ಒಪ್ಪಿಕೊಂಡು ಬಿಟ್ಟರು. ಇಂಥ ಒಂದು ಕೌಟುಂಬಿಕ ಸಮಸ್ಯೆ ಹಾಗೆ ಬಗೆಹರಿದಿದ್ದರಿಂದ ನಮ್ಮ ಮನಸ್ಸಿಗೆ ಹಗುರವಾಯಿತು.

ವೆಂಕೋಬರಾಯರು ಗಾಂಧೀವಾದಿಯಾಗಿದ್ದರಿಂದ ಸರಳತೆಗೆ ಹೆಚ್ಚು ಪ್ರಾಮುಖ್ಯತೆ. ಅವರ ಮಗ ನಮ್ಮ ಮನೆಗೆ ಅಳಿಯಂದಿರಾಗುವ ವಿನೋಬಾ ದಾಸ್ ಕೂಡಾ ಅಷ್ಟೇ ಸರಳತೆಯನ್ನು ಜೀವನದಲ್ಲಿ ರೂಢಿಸಿಕೊಂಡಿದ್ದರು. ಮದುವೆಯಲ್ಲಿ ಅವರದು ಏನೂ ಡಿಮ್ಯಾಂಡಿಲ್ಲ. ಮದುವೆ ಕೂಡಾ ಸರಳವಾಗಿ ಮಾಡಿಕೊಡಬೇಕೆಂದು ಕೇಳಿಕೊಂಡಿದ್ದರು. ನಮ್ಮ ಮನೆಯವರ ಸಂಬಂಧದಲ್ಲಿಯೇ ಮದುವೆ ನಿಶ್ಚಯವಾಗಿದ್ದ ನಾಲ್ಕನೇ ಮಗಳ ಮದುವೆಯೂ ವೀಣಾ ಮದುವೆ ಜೊತೆಗೆ ಆಗಬೇಕಾದುದರಿಂದ ಅವರು ಹೇಳಿದಷ್ಟು ಸರಳವಾಗಿ ಮಾಡಲಾಗಲಿಲ್ಲ. ವಿನೋಬಾ ದಾಸ್ ಅವರಿಗೂ ನಾವು ಯಾವುದೇ ಉಡುಗೆ-ತೊಡುಗೆ ವಿಶೇಷವಾಗಿ ಕೊಡಲಿಲ್ಲ. ಖಾದಿ ಸಿಲ್ಕಿನಲ್ಲಿ ನಾವೇ ಒತ್ತಾಯ ಮಾಡಿ ಒಂದು ಸೂಟ್ ಹೊಲಿಸಿಕೊಟ್ಟೆವು. ಚಿತ್ರದುರ್ಗದ ವಾಸವಿ ಮಹಲ್ಲಿನಲ್ಲಿ ನನ್ನ ಈ ಇಬ್ಬರೂ ಹೆಣ್ಣುಮಕ್ಕಳ ಮದುವೆ ಜನ ಒಪ್ಪುವಂತೆ ಚೆನ್ನಾಗಿ ನೆರವೇರಿತು. ನನ್ನ ಇಬ್ಬರು ಗಂಡುಮಕ್ಕಳು ರಾಜೇಶ್ ಮತ್ತು ಸಂಜೀವ್ ಅವರದೂ ವಿವಾಹವಾಗಿದೆ. ಒಂದು ರೀತಿಯಲ್ಲಿ ಈ ವಯಸ್ಸಿನಲ್ಲಿ ನಾನು ನೆಮ್ಮದಿಯಾಗಿ ಜೀವನ ಸಾಗಿಸುತ್ತಿದ್ದೇನೆ.

**ಸ್ನೇಹದ ಪರಿಮಳ**

ಜೀವನದಲ್ಲಿ ಸಾವಿರಾರು ಜನದ ಜೊತೆಗೆ ನಾವು ಮಾತಾಡಿರುತ್ತೇವೆ. ಎಷ್ಟೋಜನ ಪರಿಚಯವಾಗಿರುತ್ತಾರೆ. ಇವರಲ್ಲಿ ಎಷ್ಟೋಜನ ನಮಗೆ ಬೇಕಾದವರೂ ಆಗಿರುತ್ತಾರೆ. ಆದರೆ ಯಾರೋ ಒಬ್ಬರು ಇಬ್ಬರು ವ್ಯಕ್ತಿಗಳು ಮಾತ್ರ ನಾವು ಆಗಾಗ್ಗೆ ನೆನಪಿಸಿಕೊಳ್ಳುತ್ತಿರುತ್ತೇವೆ. ತಂಪು ಹೊತ್ತಿನಲ್ಲಿ ನೆನಪಿಸಿ ಕೊಳ್ಳಬೇಕು ಆ ಮನುಷ್ಯನನ್ನು ಅಂತಾರಲ್ಲ, ಅಂಥ ಒಬ್ಬ ಮನುಷ್ಯ ನನ್ನ ಜೀವನದಲ್ಲಿ ಅಂದರೆ ಕೆ. ಜಿ. ಚೆನ್ನಬಸಪ್ಪ ಅಂತ, ಆತ ನನಗೆ ಸ್ನೇಹಿತನಾಗಿದ್ದು ಬಹಳ ಚಿಕ್ಕವಯಸ್ಸಿನಲ್ಲಿ.

೧೯೪೬ನೇ ಇಸವಿ ಅಂತ ಕಾಣದೆ. ಆಗ ನಾವೆಲ್ಲಾ ಕೆಲವು ಹುಡುಗರು ರಾಷ್ಟ್ರೀಯ ಸ್ವಯಂ ಸೇವಾ ಸಂಘಕ್ಕೆ ಸೇರಿದ್ದೆವು. 'ಕರುವಿನಕಟ್ಟೆಯಲ್ಲಿರುವ ಕಬೀರಾನಂದ ಮಠದಲ್ಲಿ ಬೆಳಿಗ್ಗೆ ಕವಾಯತ್ ಮಾಡಲು ಬರುತ್ತಿದ್ದೆವು. ಹಂಗೆ ಬರುತ್ತಿದ್ದವರಲ್ಲಿ ನನಗೆ ಚೆನ್ನಾಗಿ ನೆನಪಿರೋದು ಕೆ. ಜಿ. ಚೆನ್ನಬಸಪ್ಪ, ಆತನನ್ನು ಬಿಟ್ಟರೆ ನಮ್ಮ ಜೊತೆಗೆ ಇದ್ದವರು ಪುಟ್ಟಸ್ವಾಮಿ, ನಾವು ಮೂರು ಜನಾನೂ ತುಂಬಾ ಸ್ನೇಹಿತರಾಗಿದ್ದೆವು. ಪುಟ್ಟಸ್ವಾಮಿ ನಮ್ಮ ಮದ್ಯೆ ಬಹಳ ಜಾಣ. ನಾನು ಇಂಟರ್ ಸೀನಿಯರ್ ಓದಬೇಕಾದರೆ, ಅವನು ಜೂನಿಯರ್ ಇಂಟರ್ ಓದುತ್ತಿದ್ದ. ಅವನೆಷ್ಟು ಜಾಣನಪ್ಪ ಅಂದ್ರೆ ಸೀನಿಯರ್ ಇಂಟರ್ ಓದುತ್ತಿದ್ದ ನನಗೆ ಇಂಗ್ಲಿಷ್ ಪದ್ಯ, ಪಾಠಗಳ ನೋಟ್ಸ್ ಎಲ್ಲಾ ಸ್ವಂತ ತಯಾರಿಸಿ ಕೊಡುತ್ತಿದ್ದ! ಆಮೇಲೆ ಅವನು ಇಂಟರ್ ಮೀಡಿಯೇಟ್‌ನಲ್ಲಿ ಪ್ರಥಮ ಬ್ಯಾಂಕ್ ಗಳಿಸಿದ. ಮುಂದೆ ಇಂಗ್ಲಿಷ್ ಎಂ. ಎ. ಮಾಡಿದ. ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕನಾದ.

ಇನ್ನು ನನ್ನ ಗೆಳೆಯ ಕೆ. ಜಿ. ಚೆನ್ನಬಸಪ್ಪನ ಬಗ್ಗೆ ಹೇಳಬೇಕು ಅಂದ್ರೆ ಅವನೊಂದು ಪರಿಮಳ ಬೀರೋ ಊದಿನಕಡ್ಡಿಯಂತೆ. ಉರೀತಿರೋ ಬೀರಿತ್ತೋ ಹಂಗೆ, ಇನ್ನೂ ಸ್ವಲ್ಪ ಕಾಲ ಇರುತ್ತೋ ಕೂಡಾ ಆತನ ದೊಡ್ಡ ಗುಣ, ಸ್ನೇಹ ಇನ್ನೂ ಉಳಿಸಿ ಆತನನ್ನು ನಾನು ಯಾವ್ಯಾವ ರೀತಿ ನೆನಸಿಕೊಳ್ಳಬೇಕೋ ಊದುಬತ್ತಿ ಸುತ್ತ ಹೆಂಗೆ ಪರಿಮಳ ಹಂಗೆ, ಆ ಮನುಷ್ಯ ಸತ್ತಮೇಲೆ ಹೋಗಿದ್ದಾನೆ ನಮ್ಮ ಚೆನ್ನಬಸಪ್ಪ. ಗೊತ್ತಾಗುತ್ತಿಲ್ಲ.

ಚೆನ್ನಬಸಪ್ಪ ನಂದನ ಹೊಸೂರಿನವನು. ಅವರ ತಂದೆಗೆ ಅವನು ಒಬ್ಬನೇ ಮಗ. ಒಳ್ಳೇ ಆಸ್ತಿವಂತರು. ಅಷ್ಟೊಂದು ಅನುಕೂಲಸ್ತರ ಮನೆಯಲ್ಲಿ ಬೆಳೆದ ಆತನಿಗೆ ಚಿಕ್ಕವಯಸ್ಸಿನಲ್ಲಿ ಕ್ಷಯರೋಗ ಬಂದು ಬಿಡು, ದುರ್ಗದಲ್ಲಿ ಈ ಕಾಯಿಲೆಗೆ ಟೀಟ್‌ಮೆಂಟ್ ಸಾಧ್ಯವಿಲ್ಲ ಅಂತ ಯಾವಾಗ ಗೊತ್ತಾದ್ರೆ, ಆಗ ಆತನನ್ನು ಮೈಸೂರಿನ ಸರ್ಕಾರಿ ಸ್ಯಾನಿಟೋರಿಯಂನಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋದರು. ಆತ ದೊಡ್ಡ ಮನುಷ್ಯ, ಪರಿಮಳ ಬೀರೋ ಊದಿನಕಡ್ಡಿಯಂತೆ ಅಂತ ನಾನು ತಿಳಿಸಿದ್ದೆನಲ್ಲಾ, ಅಂಥಾ ಗುಣ ಆತ ಸ್ಯಾನಿಟೋರಿಯಂ ಸೇರಿದಾಗಲೂ ತೋರಿಸಿಕೊಂಡ. ಆತ ಟ್ರೇಟ್‌ಮೆಂಟ್‌ಗೆ ಅಂತ ಬೇಕಾದಷ್ಟು ಹಣ ತರಿಸಿಕೊಳ್ತಾ ಇದ್ದ. ನಮ್ಮ ಜೊತೆಗೆ ಇದ್ದ ಪುಟ್ಟಸ್ವಾಮಿ ಆಗ ಮೈಸೂರಿನಲ್ಲಿ ಇಂಗ್ಲಿಷ್ ಎಂ. ಎ, ಮಾಡುತ್ತಿದ್ದ. ಪುಟ್ಟಸ್ವಾಮಿ ಆಗ ಬಡತನದಲ್ಲಿ ಓದುತ್ತಿದ್ದ. ನಮ್ಮ ಚನ್ನಬಸಪ್ಪ ಟ್ರೇಟ್ ಮೆಂಟ್‌ಗೆ ಅಂತ ತರಿಸಿಕೊಂಡ ಹಣದಲ್ಲಿ ಪುಟ್ಟಸ್ವಾಮಿಗೆ ಬೇಕಾದಷ್ಟು ಹಣಕೊಟ್ಟು ಅವನ ವಿದ್ಯಾಭ್ಯಾಸಕ್ಕೆ ನೆರವಾದ. ಕ್ಷಯ ರೋಗದಲ್ಲಿ ಒದ್ದಾಡ್ತಿದ್ದ ಚನ್ನಬಸಪ್ಪನ ಕೈಯಾವಲೂ ಹಿಂಗೆ ಸಹಾಯಕ್ಕೆ ಚಾಚಿ ಕೊಂಡಿರುತ್ತಿತ್ತು. ಅದಕ್ಕೆ ಆತ ನನಗೆ ಆಗಾಗ್ಗೆ ನೆನಪಾಗೋದು.

ಸ್ಯಾನಿಟೋರಿಯಂನಲ್ಲಿ ಹಿಂಗೆ ಚಿಕಿತ್ಸೆ ಮಾಡಿಸಿಕೊಳ್ಳುತ್ತಿರಬೇಕಾದರೆ ಕ್ಷಯರೋಗದಿಂದ ನರಳುತ್ತಿದ್ದ ಆರು ಜನ ರೋಗಿಗಳ ಸ್ಥಿತಿ ಸ್ವಲ್ಪ ಚಿಂತಾಜನಕವಾಯ್ತು. ಅವರಲ್ಲಿ ನಮ್ಮ ಚನ್ನಬಸಪ್ಪನೂ ಒಬ್ಬ. ಈ ಆರುಜನಗಳನ್ನು ವೆಲ್ಲೂರಿನ ಆಸ್ಪತ್ರೆಯಲ್ಲಿ ಮುಂದಿನ ಚಿಕಿತ್ಸೆ, ಶಸ್ತ್ರಚಿಕಿತ್ಸೆಗಾಗಿ ಕಳಿಸಬೇಕೆಂದು ತೀರ್ಮಾನಿಸಿದರು. ಅದರಂತೆ ಆರೂ ಜನರು ಮುಂದಿನ ಚಿಕಿತ್ಸೆಗಾಗಿ ವೆಲ್ಲೂರಿಗೆ ಹೋದರು. ನಮ್ಮ ಚನ್ನಬಸಪ್ಪನಿಗೆ ಎದೆಯ, ಬೆನ್ನಿನ ಐದಾರು ಮೂಳೆಗಳಲ್ಲಿ ಹರಡಿಕೊಂಡಿದ್ದ ಕ್ಷಯರೋಗವನ್ನು ನಿವಾರಿಸಲು, ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ತೆಗೆದು ಹಾಕಿದರು. ಜೊತೆಗೆ ಒಂದು ಶ್ವಾಸಕೋಶವನ್ನು ತೆಗೆದು ಹಾಕಿದರು. ಹೋಗಿದ್ದ ಆರುಜನದಲ್ಲಿ ಐದು ಜನ ಸತ್ತೇ ಹೋದರು. ಉಳಿದವನು ನಮ್ಮ ಚನ್ನಬಸಪ್ಪ ಒಬ್ಬನೇ. ಆತ ಅಲ್ಲಿನ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಬೇಕಾದರೆ ಅಲ್ಲಿನ ಡಾಕ್ಟರುಗಳು ಮುಂದೆ ಯಾವ ಮಾತ್ರೆ, ಗುಳಿಗೆ ತಗೋಬೇಕು ಅನ್ನುವುದನ್ನೆಲ್ಲಾ ತಿಳಿಸಿ, ಆತನಿಗೆ ನೀನು ಮದುವೆಯಾಗಕೂಡದು ಎಂದು ಅಡ್ವೈಸ್ ಮಾಡಿ ಕಳುಹಿಸಿದರು. ಆತ ನಂದನಹೊಸೂರಿಗೆ ಬಂದು ಡಾಕ್ಟರ್ ಅಡ್ವೈಸ್ ಮಾಡಿದ್ದ ಔಷದೋಪಚಾರವನ್ನು ಮುಂದುವರಿಸಿದ. ನಿಧಾನವಾಗಿ ಗುಣಮುಖನಾದ. ಆತ ತಂದೆಗೆ ಒಬ್ಬನೇ ಮಗ ಅಂತ ಹೇಳಿದ್ದನಲ್ಲಾ. ಅವರ ಮನೆಯವರಿಗೆ ಚನ್ನಬಸಪ್ಪ ಹಂಗೆ ಜೀವಮಾನದುದ್ದಕ್ಕೂ ಇರೋದು ಇಷ್ಟವಾಗಲಿಲ್ಲ. ಮದುವೆ ಮಾಡೋಕು ಅಂತ ಇಷ್ಟಪಟ್ಟರು. ಸಂಸಾರವಂದಿಗನಾಗಿ ವಂಶ ಬೆಳಸಲಿ ಎಂದು ಅವರ ಆಸೆ. ಆಗ ಔಷದೋಪಚಾರ ನಡೆಸಿ ಮೂರು ನಾಲ್ಕು ವರ್ಷವಾಗಿತ್ತು. ಮತ್ತೆ ತೋರಿಸಿಕೊಂಡು ಬರೋಕೆ ಅಂತ ಚನ್ನಬಸಪ್ಪ ವೆಲ್ಲೂರಿಗೆ ಹೋದ. ಅವರು ಅವನನ್ನು ಪರೀಕ್ಷೆಮಾಡಿ ಕಾಯಿಲೆ ಸಂಪೂರ್ಣವಾಗಿ ವಾಸಿಯಾಗಿದೆ, ಮದುವೆ ಮಾಡಬಹುದು ಎಂದರು. ಒಂದೇ ಲಂಗ್‌ನಲ್ಲಿ ಉಸಿರಾಟ, ಕ್ಷಯರೋಗದಿಂದ ವಾಸಿಯಾಗಿರೋನು, ಇದೆಲ್ಲಾ ಹಿನ್ನಲೆ ಗೊತ್ತಿದ್ದರೂ ಆತನ ಅಕ್ಕನ ಮಗಳು ಗೌರಮ್ಮ ಮದುವೆಗೆ ಒಪ್ಪಿಕೊಂಡರು. ಚನ್ನಬಸಪ್ಪ ಮತ್ತು ಗೌರಮ್ಮನವರ ದಾಂಪತ್ಯ ಜೀವನ ಚೆನ್ನಾಗೇ ನಡೆಯಿತು. ಅವರಿಗೆ ಮೂರು ಹೆಣ್ಣುಮಕ್ಕಳು, ಎರಡು ಗಂಡು ಮಕ್ಕಳು. ನನ್ನ ಆತನ ಒಡನಾಟ, ಸ್ನೇಹ, ಸಂಬಂಧ ಎಲ್ಲವನ್ನೂ ಆತನ ಮಕ್ಕಳು ನೋಡಿದ್ದರಿಂದ ನನ್ನನ್ನು ಅವರು ದೊಡ್ಡಪ್ಪ ಅಂತಾನೇ ಕರೆಯೋರು.

ಆತನ ಒಂದು ಗುಣ ಅಲ್ಲ  ನಾನು ಮೆಚ್ಚಿಕೊಳ್ಳೋದು. ಆತ ಹಿಂಗೆ ರೋಗದಿಂದ ಪಾರಾಗಿ, ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರೂ ಆತನ ರೀತೀನೇ ಒಂದು ಥರ. ನನಗೆ ಹಿಂಗಾಗಿದೆ ಅಂತ ಒಂದು ದಿನಾನೂ ಕೊರಗಲಿಲ್ಲ. ಖುಷಿಯಾಗಿದ್ದ. ಆತ ಸಾಹಸಿ. ಅವರ ಆಸ್ತಿ ಬೇಕಾದಷ್ಟಿತ್ತು. ಈತ ಪ್ರಬುದ್ಧಮಾನಕ್ಕೆ ಬಂದಮೇಲೆ ಆ ಜಮೀನಿನಲ್ಲಿ ಹಲವಾರು ಎಕರೆಯನ್ನು ತೋಟವಾಗಿ ಪರಿವರ್ತಿಸಿದ. ಅಡಿಕೆ, ತೆಂಗು, ಬಾಳೆ, ವೀಳೆದೆಲೆ ಬೆಳೆಸಿದ. ಬೆಳೆಸಿದ್ದಾದ ಮೇಲೆ ಅದರ ಫಲವನ್ನು ಕಂಡ, ಆ ಫಲವನ್ನು ಅನುಭವಿಸಿದ.

ಊರು ಜನಕ್ಕೆಲ್ಲಾ ಆಶ್ಚರ್ಯವಾಯಿತು. ಯಾಕೆಂದ್ರೆ ಊರಲ್ಲಿ ನೆಟ್ಟಗಿದ್ದೋರು ಹಿಂಗೆ ತೋಟಮಾಡಿ ಯಶಸ್ಸು ಕಂಡಿರಲಿಲ್ಲ.

ಎಳೆವಯಸ್ಸಿನ ಈ ಸ್ನೇಹ ಕೊನೆಯತನಕ ಮುರೀಲಿಲ್ಲ. ನನ್ನ ಆರ್ಥಿಕಸ್ಥಿತಿ ಅಷ್ಟೇನೂ ಉತ್ತಮವಾಗಿರಲಿಲ್ಲ. ಆದರೆ ಈ ಸ್ನೇಹವನ್ನು ಉಪಯೋಗಿಸಿಕೊಂಡು ನಾನು ಒಂದು ದಿನಾನು ಚನ್ನಬಸಪ್ಪನ ಮುಂದೆ ಒಂದು ಪೈಸೆಗೂ ಕೈಯೊಡ್ಡಲಿಲ್ಲ. ಆತ ಧಾರಾಳಿ. ಅದರಲ್ಲೂ ನನ್ನ ಬಗ್ಗೆ ಇನ್ನೂ ಜಾಸ್ತಿ ಧಾರಾಳಿ, ಸುಮಾರು ೧೯೫೦ನೇ ಇಸವಿಯಿಂದ ಹಿಡಿದು ೧೯೯೦ನೇ ಇಸವಿ ತನಕ ಚನ್ನಬಸಪ್ಪ ಒಂದು ರೀತಿ ನನ್ನನ್ನು ಸಂತೋಷಪಡಿಸಬೇಕೆಂದು ನನಗೆ ಮೆಣಸಿನಕಾಯಿ ಕೊಡುತ್ತಿದ್ದ! ಒಂದಲ್ಲ-ಒಂದು ಚೀಲ! ತನ್ನ ಜಮೀನಿನಲ್ಲಿ ಬೆಳೆದ ಮೆಣಸಿನಕಾಯಿಯನ್ನು ಪ್ರತಿವರ್ಷ ಒಂದು ಚೀಲದಷ್ಟು ತಂದು ನಮ್ಮ ಮನೆಗೆ ಕೊಡುತ್ತಿದ್ದ. ನಮ್ಮ ಮನೆಯಲ್ಲಿ ಯಾರೂ ಇಲ್ಲ ಕಣಪ್ಪ, ಇಷ್ಟೊಂದು ಯಾಕೆ ತಂದು ಕೊಡ್ತೀಯಾ.. ಇನ್ನುಮೇಲೆ ತರಬೇಡ ಕಣಪ್ಪ ಎಂದು ಎಷ್ಟೋ ಸಾರಿ ಹೇಳಿದ್ದೆ. ಆತ ಕೇಳುತ್ತಿರಲಿಲ್ಲ. ನಿನಗೆ ಬೇಡದಿದ್ದರೆ ನಿನ್ನ ಬೆಂಗಳೂರಿನಲ್ಲಿರೋ ಮಕ್ಕಳಿಗೆ ಕಳಿಸು, ಅವರಿಗೆ ಕಳಿಸು, ಇವರಿಗೆ ಕಳಿಸು ಅಂತ ಹೇಳುತ್ತಿದ್ದನೇ ಹೊರತು ತರೋದನ್ನ ನಿಲ್ಲಿಸಲಿಲ್ಲ.

ಹೊರಕೆದೇವರಪುರದಲ್ಲಿ ನನ್ನ ಇಬ್ಬರು ತಂಗಿಯರಿಗೆ ಹೈಸ್ಕೂಲಿನಲ್ಲಿ ಕೆಲಸ ಕೊಡಿಸಿದವನು ಆತನೆ. ಹಂಗೆ ನೋಡಿದರೆ ಅಲ್ಲಿ ಅವರನ್ನು ಅಣ್ಣನ ಸ್ಥಾನದಲ್ಲಿ ನಿಂತು ನೋಡಿಕೊಂಡವನು ಅವನೆ. ಆತ ಧಾರಾಳಿ ಅಂತ ಹೇಳಿದನಲ್ಲಾ. ಅದನ್ನು ಯಾವ ಯಾವ ರೀತಿ ತೋರಿಸುವುದಕ್ಕೆ ಅವಕಾಶವಾಗುತ್ತೋ, ಅದಷ್ಟೂ ರೀತಿಯಲ್ಲಿ ತೋರಿಸುತ್ತಿದ್ದ. ನನ್ನ ಆರುಜನ ಮಕ್ಕಳ ಮದುವೆಯಲ್ಲಿ ಆತ ಬರ್ತಾ ಇದ್ದ ರೀತಿ ನೋಡಬೇಕು! ಮದುವೆ ಅಂದೇಲೆ ಇನ್ನೇನಿದೆ? ಗಲಭೆ, ಗದ್ದಲ, ಓಡಾಟ. ಮನೆಯವರು ಮದುವೆಗೆ ಬಂದವರು ಚಿತ್ರ-ಗಿತ್ರ ಅಂತ ಓಡಾಡುತ್ತಿದ್ದರೆ, ಚನ್ನಬಸಪ್ಪ ತನ್ನ ಕುಟುಂಬದೊಂದಿಗೆ ಮದುವೆ ಹಿಂದಿನ ದಿನ ಸಂಜೆಗೆ ಹಾಜರ್! ಅದೂ ಹೆಂಗೆ? ತನ್ನ ತೋಟದಲ್ಲಿ ಬೆಳೆದ ತೆಂಗಿನಕಾಯಿ, ಅಡಿಕೆ, ಹೂವು, ಬಾಳೆ ಎಲೆ, ವೀಳದೆಲೆ ಸಮೇತ! ನಮ್ಮ ಮನೆಯ ಆರು ಮಕ್ಕಳ ಮದುವೆಯ ಮಂಗಳಕಾರ್ಯಗಳೆಲ್ಲಾ ಈತ ಕೊಟ್ಟ ಫಲ-ತಾಂಬೂಲಗಳಿಂದಲೇ ನಡೆದಿರೋದು. ಇಂಥ ಸ್ನೇಹಿತ ಚನ್ನಬಸಪ್ಪನನ್ನು ವರ್ಷಕ್ಕೊಂದು ಸಾರಿಯಾದರೂ ನಂದನಹೊಸೂರಿಗೆ ಹೋಗಿ ನೋಡಿಕೊಂಡು ಮಾತಾಡಿಸಿಕೊಂಡು ಬರ್ತಾ ಇದ್ದೆ. ಆತನೂ ಅಷ್ಟೆ. ದುರ್ಗಕ್ಕೆ ಬಂದಾಗಲೆಲ್ಲಾ ನಮ್ಮ ಮನೆಗೆ ಬರ್ತಾ ಇದೆ.

ಸ್ನೇಹ, ಪ್ರೀತಿ, ವಿಶ್ವಾಸ ಯಾಕೆ ಹಿಂಗೆ ಬೆಳೆಯುತ್ತೆ ಅನ್ನೋದು ನಮಗೆ ತಿಳಿಯೋದಿಲ್ಲ. ಅಂಥ ಪ್ರೀತಿ, ಸ್ನೇಹ, ವಿಶ್ವಾಸವನ್ನು ಆತ ನನಗೆ ಎಷ್ಟು ಅಂದರೆ ಅಷ್ಟು ಉಣ್ಣಿಸಿದ್ದ. ಹಂಗೆ ಉಣ್ಣಿಸಿದ್ದರಿಂದಲೇ ಆತ ನನ್ನ ಜೀವನದಲ್ಲಿ ಒಂದು ಶಕ್ತಿ. ಇಂಥ ಶಕ್ತಿ ಕೊಟ್ಟ ವ್ಯಕ್ತಿಗಳನ್ನು ಕಳಕೊಳ್ಳೋದು ನಿಜವಾಗಲೂ ದುಃಖದ ವಿಷಯ.

ಆತನಿಗೆ ಶ್ವಾಸಕೋಶದಲ್ಲಿ ಒಂದನ್ನು ತೆಗೆದಿದ್ದರಿಂದ ಆತನ ಜೀವಕ್ಕೆ ಜೀವನಕ್ಕೆ ಯಾವ ತೊಂದರೇನೂ ಆಗಲಿಲ್ಲ. ಆದರೆ ಆತನಿಗೆ ಒಂದು ಸಣ್ಣ ಪುಟ್ಟ ಕಾಯಿಲೆ ಬಂದ್ರೆ ಸುಧಾರಿಸಿಕೊಳ್ಳೋದು ಕಷ್ಟಾ ಆಗ್ತಾ ಇತ್ತು. ಶೀತ, ನೆಗಡಿ, ಜ್ವರ ಬಂದರೂ ಹಾಸಿಗೆ ಹಿಡಿದು ಬಿಡ್ತಾ ಇದ್ದ. ವಾಸಿಯಾದ ತಕ್ಷಣ ಮಾಮೂಲಾಗಿ ಬಿಡ್ತಾ ಇದ್ದ. ಮೊನ್ನೆ ಮೊನ್ನೆ ಸತ್ತ. ಏನೋ ಹುಷಾರಿಲ್ಲ ಅಂದನಂತೆ. ಹಂಗನ್ನುವುದರೊಳಗೆ ಆತನನ್ನು ಕರಕೊಂಡು ದುರ್ಗದ ಆಸ್ಪತ್ರೆಗೆ ಬಂದರು. ದುರ್ಗದ ಆಸ್ಪತ್ರೆಗೆ ಸೇರಿಸಿದರು. ಸಾಯಂಕಾಲ ಏಳೂ- ಏಳೂವರೆ ಗಂಟೆಗೆ ಆಸ್ಪತ್ರೆಗೆ ಸೇರಿಸಿದ್ದಾರೆ. ನನಗೆ ತಿಳಿಸಿಯೇ ಇರಲಿಲ್ಲ. ರಾತ್ರಿ ಹನ್ನೊಂದೂವರೆಯಷ್ಟೊತ್ತಿಗೆ ಚನ್ನಬಸಪ್ಪ ಸತ್ತೆ ಹೋಗಿಬಿಟ್ಟಿದ್ದಾನೆ. ಆಗ ಅವನ ಮಗ ಬಂದು ಈ ವಿಷಯ ತಿಳಿಸಿದ. ನನಗೆ ಆ ವಿಷಯ ಕೇಳಿ ಆದ ದುಃಖ ಎಷ್ಟು ಅಂತ ಹೇಳೋಕೆ ಬರಲ್ಲ. ಆತ ಎಂದೂ ನನ್ನ ಬಳಿ ಒಂದು ಕಾಸು ಕೇಳಿರಲಿಲ್ಲ. ನಾನು ಅವನ ಬಳಿ ಒಂದು ಕಾಸು ಕೇಳಿರಲಿಲ್ಲ. ಇದ್ದಕ್ಕಿಂದಂತೆ ಆಸ್ಪತ್ರೆಗೆ ಸೇರಿಸಿ ಇಂಥ ದುಃಖ ಒದಗಿದಾಗ ಅವರ ಮನೆಯವರಿಗೆ ಎಷ್ಟು ದುಃಖವಾಗಿರಬೇಡ! ನನ್ನ ಸ್ನೇಹಿತನಿಗೆ ಅದೂ ಸತ್ತು ಹೋಗಿರುವ ನನ್ನ ಸ್ನೇಹಿತನಿಗೆ ನಾನು ಏನು ಸಹಾಯಮಾಡಲಿ ಅಂತ ನನ್ನ ಮನಸ್ಸು ಒಂದೇ ಸಮನೆ ಚಡಪಡಿಸಿತು. ಕೊನೆಗೆ ನಾನು ಮತ್ತು ನನ್ನ ಹೆಂಡತಿ ಇಬ್ಬರೂ, ಟ್ಯಾಕ್ಸಿ ಗೊತ್ತು ಮಾಡಿ, ಚನ್ನಬಸಪ್ಪನ ಮೃತದೇಹವನ್ನು ಅವರ ಬಂಧುಗಳ ಜೊತೆ ಕೊಂಡೊಯ್ದು ನಂದನ ಹೊಸೂರಿನ ಅವರ ಮನೆಗೆ ತಲುಪಿಸಿದೆವು. ನಾನು ಅಂತ್ಯ ಸಂಸ್ಕಾರ ಯಾವಾಗ ಮಾಡುತ್ತೀರಿ ಅಂತ ಕೇಳಿದೆ. ಮನೆಯವರು ಏನಿದ್ದರೂ ನಾಳೆ ಸಂಜೆ ನಾಲ್ಕು ಗಂಟೆಯ ಮೇಲೆಯೇ ಎಂದರು. ನಾನು ನನ್ನ ಹೆಂಡ್ತಿ ಅದೇ ಟ್ಯಾಕ್ಸಿಯಲ್ಲಿ ಸರ್ವೊತ್ತಿನಲ್ಲಿ ಊರಿಗೆ ಹಿಂದಿರುಗಿದೆವು. ನಾಲ್ಕು ಗಂಟೆಗೆ ಅಂತ್ಯ ಸಂಸ್ಕಾರ ಎಂದಿದ್ದರೂ ಮಾರನೆ ದಿನ ನಾನು ನಂದನಹೊಸೂರಿಗೆ ಮಧ್ಯಾಹ್ನ ಹನ್ನೆರಡುಗಂಟೆಗೆ ಹೋದೆ. ಆತನ ಅಂತ್ಯ ಸಂಸ್ಕಾರ ಮುಗಿಸಿ, ಊರಿಗೆ ಹಿಂದಿರುಗಲು ಬಸ್ಸು ಹತ್ತಿ ಕುಳಿತ್ತಿದ್ದೆ. ಈ ಪಾಟಿ ಜನ ಯಾರು ಸತ್ತಾಗಲೂ ನಮ್ಮೂರಲ್ಲಿ ಸೇರಿರಲಿಲ್ಲ ಎಂದು ಹಳ್ಳಿಯವರು ಹೇಳುತ್ತಿದ್ದುದು ನನ್ನ ಕಿವಿಗೆ ಬೀಳುತ್ತಿತ್ತು. ಚನ್ನಬಸಪ್ಪ ಎಷ್ಟು ದೊಡ್ಡಮನುಷ್ಯ, ಎಷ್ಟು ಜನಕ್ಕೆ ಬೇಕಾಗಿದ್ದ ಅನ್ನೋದು ಹಳ್ಳಿಯವರ ಮಾತಿನಲ್ಲಿಯೇ ಗೊತ್ತಾಗುತ್ತಿತ್ತು. ಅಂತ ಸ್ನೇಹಿತನ ಕಳಕೊಂಡು ಅವನ ವಿಷಯ ಹೇಳ್ತಾ ಇದ್ದರೆ ಈಗಲೂ ನನಗೆ ದುಃಖ ಆಗುತ್ತಿದ್ದೆ. ಕಣ್ಣಲ್ಲಿ ನೀರು ಬರುತ್ತೆ. ಒಬ್ಬಮನುಷ್ಯ ಬಾಳಿದರೆ ಹಿಂಗೆ ಬಾಳಬೇಕು ಅಂತ ನನಗೆ ಯಾವಾಗಲೂ ಅನ್ನಿಸುತ್ತೆ.

**ಮನೆಗೆ ಹತ್ತಿರ – ಮನಸ್ಸಿಗೆ ಹತ್ತಿರವಾದ ದೇವತೆ**

ನಮ್ಮ ಮನೆ ಗರಡಿ ಹಿಂಭಾಗಕ್ಕೆ ಬಂದರೆ, ನಮ್ಮ ಮನೆಯ ಮುಂದೆ ನಾಲ್ಕೈದು ಮನೆ ದಾಟಿದರೆ ತಿಪ್ಪಿನಗಟ್ಟಮ್ಮನ ಗುಡಿ ಸಿಕ್ಕುತ್ತದೆ. ನಮ್ಮ ಮನೆಯೊಳಗೆ ಬಂದರೆ ಬರಗೇರಮ್ಮ, ಏಕನಾಥೇಶ್ವರಿ ಗ್ರಾಮದೇವತೆಗಳ ದೊಡ್ಡ ಫೋಟೋಗಳಿವೆ. ನಮ್ಮ ಮನೆಯವರು ಈಗ ಮೂರೂ ದೇವತೆಗಳ ಪೂಜೆ ಮಾಡಿಸಿಕೊಂಡು ಬರುತ್ತಾರೆ. ಹಂಗೆ ನೋಡಿದರೆ ನಮ್ಮ ಜನಾಂಗದವರಿಗೆ ಕುಲದೇವತೆ ಸವದತ್ತಿ ಎಲ್ಲಮ್ಮ, ನಮ್ಮ ಜನ ಈಗಲೂ ನಡಕೊಳ್ಳೋದು ಸವದತ್ತಿ ಎಲ್ಲಮ್ಮನಿಗೇನೇ. ನಮ್ಮ ತಾತ ಈ ಊರಿಗೆ ಬಂದು ಕನಿಷ್ಠ ನೂರುವರ್ಷಗಳ ಮೇಲಾಗಿರಬಹುದು. ಅಲ್ಲಿಂದ ನಮಗೆ ದುರ್ಗಾನೇ ನಮ್ಮೂರು. ನಮ್ಮವರೇ ನಮ್ಮನ್ನು ಕೇಳಿದರೂ ನಾವು ಹೇಳೋದು ದುರ್ಗದವರು ಅಂತಾನೇ.

ದುರ್ಗದಲ್ಲಿ ನಾವು ನೆಲಸಿ ನಾವು ಕರುವಿನ ಕಟ್ಟೆಯಲ್ಲಿ ಮನೆ ತಗೊಂಡ ಮೇಲೆ ನಮ್ಮ ಮನೆಗೆ ತುಂಬಾ ಹತ್ತಿರದ ದೇವತೆ ಅಂದರೆ ತಿಪ್ಪಿನಗಟ್ಟಮ್ಮ, ತಿಪ್ಪಿನಗಟ್ಟಮ್ಮನೂ ಸ್ತ್ರೀ ದೇವತೆ, ಸವದತ್ತಿ ಎಲ್ಲಮ್ಮನೂ ಸ್ತ್ರೀ ದೇವತೆ. ಇಬ್ಬರಿಗೂ ಭೇದ ಎಲ್ಲಿದೆ ಎಂದುಕೊಂಡು ನಾವು ಹೆಚ್ಚು ಭಕ್ತಿ ಗೌರವಗಳಿಂದ ಪೂಜಿಸೋ ದೇವತೆ ತಿಪ್ಪಿನಗಟ್ಟಮ್ಮನೇ ಆಗಿದ್ದಾಳೆ. ಅದರೆ ಜೊತೆಗೆ ತಿಪ್ಪಿನಗಟ್ಟಮ್ಮ ನಮ್ಮ ಮನೆಗೆ ಆಗಿಬಂದಿರುವ ದೇವತೆ.

ತಿಪ್ಪಿನಗಟ್ಟಮ್ಮನನ್ನು ನಾನು ಸ್ವತಃ ನೋಡಿರುವುದರಿಂದ ಅನುಭವಿಸಿರುವುದರಿಂದ ಹೇಳ್ತಾ ಇದ್ದೀನಿ. ಆಕೆ ಬಾಳಾ ಮಹಿಮಾವಂತ ದೇವತೆ. ಈಯಮ್ಮನ ಪೂಜೆ ಉತ್ಸವಗಳಲ್ಲಿ ಬೇಕಾದಷ್ಟು ಸಾರಿ ನಾನು ಪಾಲುಗೊಂಡಿದ್ದೀನಿ. ಈಕೆ ಉರುಮೆಯ ಶಬ್ದಕ್ಕೆ ಮೈದುಂಬಿದಾಗ ಹಿಡಿಯುವುದಕ್ಕೆ ಹತ್ತು ಜನರಿಂದ ಕೂಡಾ ಸಾಧ್ಯವಿಲ್ಲ. ಅಷ್ಟು ಶಕ್ತಿ ಆಕೆಗೆ, ಅಪ್ಪಣೆ ಕೇಳಿದಾಗಲೂ ಅಷ್ಟೆ. ನೀವು ಯಾವ ಕುರುಹು ಕುರಿತು ಕೇಳಿದರೂ ಆಕೆ ಅದನ್ನು ತೋರಿಸದೆ ಬಿಡುವುದಿಲ್ಲ. ಆಗುತ್ತೆ ಅನ್ನೋದಿಕ್ಕೆ ಇದನ್ನು ತೋರಿಸು; ಆಗೋಲ್ಲ ಅನ್ನೋದಿಕ್ಕೆ ಅದನ್ನು ತೋರಿಸು ಎಂದು ಎರಡು ವಸ್ತುಗಳನ್ನು ನೀವು ಮನಸ್ಸಿನಲ್ಲಿಟ್ಟುಕೊಳ್ಳಿ. ಅದರಂತೆಯೇ ಆಕೆ ಅಲ್ಲಿ ಹೋಗಿ ನಿಂತು ನೀವು ಹೇಳಿದ್ದನ್ನು ತೋರಿಸುತ್ತಾಳೆ.

ತಿಪ್ಪಿನಗಟ್ಟಮ್ಮ ಮತ್ತು ಬರಗೇರಮ್ಮನ ಭೇಟಿ ದುರ್ಗದಲ್ಲಿ ನಡೆಯುವ ದೊಡ್ಡ ಉತ್ಸವಗಳಲ್ಲಿ ಒಂದು. ಆಗ ಭೇಟಿ ಸಮಯದಲ್ಲಿ ಎರಡೂ ದೇವತೆಗಳು ಊರಿನ ಎಲ್ಲಾ ಕಡೆಗೂ ಪೂಜೆ ಸ್ವೀಕರಿಸಲು ಹೋಗುತ್ತವೆ. ತಿಪ್ಪಿನಗಟ್ಟಮ್ಮ ಎಲ್ಲಾ ಕಡೆಗೂ ಹೋಗೋದು ಒಂದು ಥರ ಆದರೆ, ಕೆಳಗೋಟೆಗೆ ಹೋಗೋದೇ ಒಂದು ಥರ. ಕೆಳಗೋಟೆಗೆ ಆಯಮ್ಮ ಹೋದಾಗ ಆಯಮ್ಮನ ಆಟ ನೋಡಬೇಕು! ಕೆಳಗೋಟೆ ಆಕೆಗೆ ತೌರುಮನೆ ಇದ್ದಂಗೆ

ಅಲ್ಲಿರುವ ನಾಯಕ ಜನಾಂಗದವರಿಗೆ ಆಕೆ ಕುಲದೇವತೆ. ಹಿಂಗಾಗಿ ಈಯಮ್ಮನನ್ನು ಕಂಡ್ರೆ ಆ ಜನಕ್ಕೆ ಸದರ ಜಾಸ್ತಿ. ಅಪ್ಪಣೆ ಸ್ವಲ್ಪ ಲೇಟಾಗಿ ಕೊಟ್ಟರೆ 'ಹೊಗೆ ಹೋಗೆ.. ಹೋಗು ನಿನ್ನ ಕೈಯಲ್ಲಾಗಲ್ಲ' ಹಿಂಗೆಲ್ಲಾ ಆಕೇನಾ ರೇಗಿಸ್ತಾ ಇರುತ್ತಾರೆ. ಅವರಿಗೆ ಈಯಮ್ಮನ ಬಗ್ಗೆ ಪ್ರೀತಿ ಜಾಸ್ತಿ.

ಸುಮಾರು ಈಗ ಮುವ್ವತ್ತು ನಲವತ್ತು ವರ್ಷಗಳಿಂದ ನಾವು ವಿಶೇಷವಾಗಿ ಪೂಜೆ ಮಾಡ್ತಾ, ಬಂದಿದ್ದೀವಿ, ಆಕೆ ಮಹಿಮಾವಂತ ದೇವತೆ ಅಂತ ಹೇಳಿದ್ದೀನಿ. ವರ್ಷಕ್ಕೊಂದು ಸಲ ನಡೆಯುವ ಈ ಭೇಟಿ ಸಮಯದಲ್ಲಿ ನಾನು ಈಯಮ್ಮನ ಮೆರವಣಿಗೆಯ ಜೊತೆಯಲ್ಲಿದ್ದು ಹತ್ತಿರದಿಂದ ಗಮನಿಸಿದ್ದೇನೆ. ಬಹಳ ಕಟ್ಟುನಿಟ್ಟು ಆಕೆಯದು. ಆಕೆಯ ಪೂಜೆಯ ಕ್ರಮದಲ್ಲಿ ಒಂದು ಕಡಿಮೆಯಾಗಬಾರದು. ಆರತಿ ಮಹಾಮಂಗಳಾರತಿ, ಹಣ್ಣು-ಕಾಯಿ, ಧೂಪ-ದೀಪಗಳಿಂದ ಹಿಡಿದು ನಿಂಬೆಹಣ್ಣು ನೀವಾಳಿಸಿ ಹಾಕುವ ತನಕ-ಒಂದೂ ಕಡಿಮೆಯಾಗಬಾರದು. ಹೀಗೆ ಪೂಜೆಯಲ್ಲಿ ಒಂದು ಕಡಿಮೆಯಾದರೆ ಒಂದು ಹೆಜ್ಜೆ ಮುಂದೆ ಇಡಲ್ಲ. ಹೀಗೆ ಎಲ್ಲಾ ಪೂಜೇನೂ ಮುಗಿಸಿಕೊಂಡು ಹೊರಟಳೆಂದರೆ ಆಕೇನ ಹಿಡಿಯೋದು ಬಾಳಾ ಕಷ್ಟ. ಆಕೆಗೆ ಎಲ್ಲಿಲ್ಲದ ಆವೇಶ, ಶಕ್ತಿ. ಭೇಟಿ ಮುಗಿದ ಬಳಿಕ ಮೂರನೆಯ ರಾತ್ರಿ ದೇವಸ್ಥಾನಕ್ಕೆ ಬಂದಾಗ ಆಕೆಯನ್ನು ಕೆಳಗಿಳಿಸಿ, ದೇವಸ್ಥಾನದೊಳಗೆ ಮತ್ತೆ ಕೂರಿಸುವುದು ಕಷ್ಟ ಅಂದರೆ ಕಷ್ಟ. ಅದೆಷ್ಟು ಶಕ್ತಿ ಆಯಮ್ಮನಿಗೆ ಇರುತ್ತೆ ಅಂದ್ರೆ ಆಕೆಯನ್ನು ಇಳಿಸಿಕೊಂಡು ದೇವಸ್ಥಾನ ಕಳಿಸಿದವರಿಗೆ ಮಾತ್ರ ಗೊತ್ತಾಗುತ್ತೆ. ಯಾರು ಹಿಡಿದರೂ ದೇವಸ್ಥಾನದೊಳಗೆ ಹೋಗಲು ಆಯಮ್ಮ ಇಷ್ಟಪಡುವುದಿಲ್ಲ. ಅಕಸ್ಮಾತ್ ಪೂಜಾರಿಯ ತಲೆಯ ಮೇಲಿಂದ ಕೆಳಗಿಳಿಸಿಕೊಂಡರೂ, ಆಕೆಯನ್ನು ಪೀಠದ ಮೇಲೆ ಕೂರಿಸಲು ಆಗದಷ್ಟು ಹಟ ಮಾಡುತ್ತಾಳೆ! ಇದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ.

ನಮ್ಮ ಮನೆಯ ಮುಂದೆ ಇದ್ದ ತಿಪ್ಪಿನಗಟ್ಟಮ್ಮನ ಗುಡಿ ಕರುವಿನಕಟ್ಟೆಯ ಸರ್ಕಲ್ಲಿಗೆ ಹೊಂದಿಕೊಂಡಂತೆ ಇತ್ತು. ಸರ್ಕಲ್ ವಿಶಾಲವಾಗಿರೋದರಿಂದ ಈಕೆ ಗುಡಿ ಇಲ್ಲಿದೆ ಚೆಂದಾ ಅಂತ ನಾವು ಅಂದೊಂಡಿದ್ದೆವು. ಆದರೆ ಆಕೆ ನಾನು ನನ್ನ ಮೊದಲಿನ ಗುಡಿಗೆ ಹೋಗ್ತಿನಿ ಅಂತ ಅಪ್ಪಣೆಕೊಟ್ಟಳು. ಅದರ ಮೇರೆಗೆ ರಂಗಯ್ಯನ ಬಾಗಿಲ ಕೋಟೆಸಾಲಿನ ಎದುರುಗಡೆ ಇರುವ ಆಕೆಯ ದೇವಾಲಯವನ್ನು ಪೂರ್ತಿ ಹೊಸದಾಗಿ ಕಟ್ಟಿ, ಈಗ ಆಕೆಯ ಪೂಜೆಯನ್ನು ಅಲ್ಲಿಯೇ ಮಾಡಲಾಗುತ್ತಿದೆ. ಕರುವಿನಕಟ್ಟೆಯಲ್ಲಿರುವ ಗುಡಿಯಲ್ಲಿ ಈಗ ಮುಖ್ಯವಾಗಿ ಅಂತರಗಟ್ಟಮ್ಮ ಮತ್ತು ಗಾಳಿಮಾರಮ್ಮ ಈ ಗ್ರಾಮದೇವತೆಗಳಿವೆ.

ಇನ್ನು ತಿಪ್ಪಿನಗಟ್ಟಮ್ಮನಗುಡಿ ಎಂದರೆ ಮೂಲಗುಡಿ ಸುಣ್ಣ ಗುಮ್ಮಿಯ ಹತ್ತಿರವಿದೆ. ೧೯೬೫ರಲ್ಲಿ ಈ ಗುಡಿಯ ಜೀರ್ಣೋದ್ದರದ ಕೆಲಸಕೂಡಾ ಮಾಡಲು ಊರಿನ ನಾಗರಿಕರು,

ಭಕ್ತರು ಕೈಗೊಂಡರು. ಈ ಗುಡಿಯ ಜೀರ್ಣೋದ್ಧಾರಕ್ಕಾಗಿ ಪೈಲ್ವಾನ್ ಬಸವರಾಜ್, ಮಿಯಾಸಾಬ್, ಐಯ್ಯಣ್ಣ, ನಾಗಣ್ಣ ಇನ್ನೂ ಮುಂತಾದ ಮಹನೀಯರು ಮತ್ತು ನಾನು ಬಹಳ ಶ್ರಮ ಪಟ್ಟು ಗುಡಿಯ ನಿರ್ಮಾಣ ಮತ್ತು ಮೂಲ ಮೂರ್ತಿಯ ರಚನೆಯನ್ನು ಮಾಡಿಸಿ ಉದ್ಘಾಟನೆಯನ್ನು ಮಾಡಿಸಿದೆವು. ಆ ಕಾರ್ಯಕ್ರಮ ಆಯಮ್ಮನ ದಯೆಯಿಂದ ಯಾವ ತೊಂದರೆಯೂ ಇಲ್ಲದೆ ಬಹಳ ಚೆನ್ನಾಗಿ, ಬಹಳ ವೈಭವದಿಂದ ನಡೆಯಿತು. ನನ್ನ ಮಟ್ಟಿಗೆ ತಿಪ್ಪಿನಗಟ್ಟಮ್ಮ ನಮ್ಮಮನೆಗೆ ಆಗಿಬಂದ ದೇವತೆ. ನಾಲ್ಕು ಹೆಣ್ಣು ಮಕ್ಕಳಾದ ಮೇಲೆ ನನಗೆ ರಾಜೇಶ್ ಗಂಡುಮಗ ಹುಟ್ಟಿದ. ರಾಜೇಶ್ ಒಬ್ಬನೇ ಅಲ್ಲ, ಹುಟ್ಟಿದ್ದು ಅವಳಿ ಮಕ್ಕಳು. ಅದರಲ್ಲಿ ಒಂದು ಮಗು ಸತ್ತು ಹೋಯಿತು. ರಾಜೇಶ್ ಉಳಿದ. ಇವನ ಬಳಿಕ ಇನ್ನೊಬ್ಬ ಮಗ ಸಂಜಯ್ ಹುಟ್ಟಿದ. ನನ್ನ ಮನಸ್ಸಿಗೆ, ನನ್ನ ಮನೆಗೆ ಹಿಂಗೆ ಗಂಡುಮಕ್ಕಳನ್ನು ಕೊಟ್ಟು ಸಂತೋಷಪಡಿಸಿದಳು ತಿಪ್ಪಿನಗಟ್ಟಮ್ಮ ಎಂತಲೇ ನನ್ನ ಭಾವನೆ. ಮೂಲದೇವಸ್ಥಾನದಲ್ಲಿ ತಿಪ್ಪಿನಗಟ್ಟಮ್ಮನ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಿದ ಮೇಲೆ ಮೂಗಿನಿಂದ ಮೂಗುತಿಯನ್ನು ಕುರುಹು ಕೊಟ್ಟಳು. ಅದು ನನ್ನ ಪಾಲಿಗೆ ಶುಭ ಸೂಚನೆಯಾಯಿತು. ನಮ್ಮ ಮನೆಯಲ್ಲಿ ನನ್ನ ಇಬ್ಬರು ಗಂಡುಮಕ್ಕಳಿಗೂ - ರಾಜೇಶ್ ಸಂಜಯ್‌ರಿಗೆ ಒಂದೊಂದು ಗಂಡುಮಗು ಆಗಿದೆ. ಇದೂ ಕೂಡಾ ಆಕೆಯದೇ ಕೃಪೆ ಅಂತ ನನ್ನ ನಂಬಿಕೆ. ಹಿಂಗೆ ನಮ್ಮ ಮನೆಯವರಿಂದ ಪೂಜಿಸಿಕೊಂಡು, ನಮ್ಮ ಮನೆಯವರಿಗೆಲ್ಲಾ ನೆಮ್ಮದಿ, ಸಂತೋಷ ಕೊಡುತ್ತಿರುವ ತಿಪ್ಪಿನಗಟ್ಟಮ್ಮ ನಮ್ಮ ಮನೆಯ ದೇವತೆಯೂ ಹೌದು; ನಮ್ಮ ಮನಸ್ಸಿನ ದೇವತೆಯೂ ಹೌದು.

ಇಷ್ಟು ವರ್ಷಗಳಾದ ಮೇಲೆ ನಾನು ಯೋಚನೆ ಮಾಡಿದರೆ ಪೈಲ್ವಾನ್ ಆಗಿ ಗರಡಿಯಲ್ಲಿ ಓಡಾಡಿ, ಅಖಾಡದಲ್ಲಿ ಕುಸ್ತಿಯಾಡಿ ಸಂತೋಷಪಟ್ಟಿದ್ದೇನೆ. ನಮ್ಮ ಗರಡಿಯು ಕಾಲಕ್ಕೆ ತಕ್ಕಂತೆ ಬದಲಾಗಿ ನಾಟಕದಲ್ಲಿ ಪಾಲುಗೊಂಡಾಗ, ನಾನೂ ನಾಟಕದಲ್ಲಿ ಪಾಲುಗೊಂಡೆ. ನನ್ನ ಮನೆ, ಹೆಂಡತಿ, ಹೆಣ್ಣು ಮಕ್ಕಳು, ಬಂಧುಬಳಗ ಎಲ್ಲಾ ನನ್ನ ಜೊತೆಗೆ ಚೆನ್ನಾಗಿ ನಡಕೊಂಡಿದ್ದಾರೆ. ಒಳ್ಳೆಯ ಸ್ನೇಹಿತರು, ಅದರಲ್ಲೂ ಚೆನ್ನಬಸಪ್ಪನಂತಃ ಸ್ನೇಹಿತರು ಜೀವನದಲ್ಲಿ ಸಿಕ್ಕಿದ್ದಾರೆ. ನಮ್ಮ ನಂಬಿಕೆಗನುಗುಣವಾಗಿ ಮನೆತುಂಬಾ ನೆಮ್ಮದಿ ಕೊಟ್ಟಿರುವ ತಿಪ್ಪಿನಗಟ್ಟಮ್ಮ ನಮ್ಮನ್ನೆಲ್ಲಾ ಕಾಪಾಡುತ್ತಿದ್ದಾಳೆ. ನನಗೆ ಅನ್ನಿಸಿದ ನೆನಪಿಗೆ ಬಂದ ಸ್ವಲ್ಪ ವಿಷಯವನ್ನು ನಿಮಗೆ ಹೇಳಿದ್ದೇನೆ. ಇದರಲ್ಲಿ ಸ್ವಲ್ಪನಾದರೂ ಸಂತೋಷ ಸಿಗುತ್ತೆ ಅಂತ ನಾನು ಅಂಡ್ಕೊಂಡಿದ್ದೀನಿ.

---

ಟಿ. ಆರ್. ರಾಧಾಕೃಷ್ಣ, ನಿವೃತ್ತ ಉಪಾಧ್ಯಾಯರು, ಆತ್ಮೀಯ

ಫಿಲ್ಟರ್ ಹೌಸ್ ರಸ್ತೆ, ಕರುವಿನಕಟ್ಟೆ ಸರ್ಕಲ್ ಸಮೀಪ, ಚಿತ್ರದುರ್ಗ-೫೭೭ ೫೦೧

**ಗ್ರಾಮದೇವತೆಗಳ ದೂತ**

**ಸೋಮನ ಕರಿಯಪ್ಪ**

- ಪ್ರೊ. ಎಚ್. ಶ್ರೀಶೈಲ ಆರಾಧ್ಯ


ಗ್ರಾಮತೆಗಳ ದೂತ, ಅಂಗರಕ್ಷಕ ದೈವ ಸೋಮ. ಇದು ಒಂದು ಅಧೀನ ದೈವವಾದರೂ ತನ್ನದೇ ಆದ ವೈಶಿಷ್ಟ್ಯಪೂರ್ಣ ಆಚರಣೆಗಳ ಮೂಲಕ ಸ್ವತಂತ್ರ ದೈವದಂತೆ ಮೆರೆಯುವುದೂ ಉಂಟು. ಸೋಮನನ್ನು ಹಾಕಿಕೊಂಡು ದೈವವಾಗಿ ನಡೆಯುವ ಮನೆತನಗಳೂ ಉಂಟು. ಅಂತಹ ಕುಟುಂಬಗಳಲ್ಲಿ ಬನ್ನಿಹಳ್ಳಿ ಕರಿಯಣ್ಣನವರದೂ ಒಂದು. ಕ್ರಮೇಣ ಹಿನ್ನಲೆಗೆ ಸರಿಯುತ್ತಿರುವ ಈ ಕಲೆಯ ಕಾಯಕ ಮಾಡುತ್ತಲೇ ಜೀವ ತೇಯ್ದ ಜೀವವೊಂದರ ಅಂತರಂಗವನ್ನು ಇಲ್ಲಿ ಬಿಚ್ಚಿಡಲಾಗಿದೆ.

ಮೂಲತಃ ಇತಿಹಾಸ ಆಸಕ್ತರಾದ ಪ್ರೊ. ಶ್ರೀಶೈಲ ಆರಾಧ್ಯರು ಇಲ್ಲಿ ಜನಪದ ಚೇತನವೊಂದರ ಕಥನದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕಲಾವಿದರ ಆತ್ಮಕಥನ ಬರೆಯುವ ಈ ಕಾಯಕವನ್ನು ಕರ್ತವ್ಯವೆಂದು ಬಗೆದಿದ್ದಾರೆ, ಋಣ ತೀರಿಸುವ ಕೆಲಸವೆಂದು ಭಾವಿಸಿದ್ದಾರೆ. ಸಂಶೋಧನೆಯ ಹಾದಿಯಲ್ಲಿ, ಸೀಮೇಗಿಲ್ಲದೋರ ಸೂರಿನ ಕೆಳಗೆ ಅವರ ಪ್ರಕಟಿತ ಕೃತಿಗಳು. ಜ್ಯೋತಿಷ್ಯ ಶಾಸ್ತ್ರದಲ್ಲೂ ಆಸಕ್ತಿ ಇರುವ ಇವರು ತ.ರಾ.ಸು ರವರನ್ನು ಕುರಿತ ಗಿರಿಮಲ್ಲಿಗೆ ಎಂಬ ಅಭಿನಂದನ ಗ್ರಂಥವನ ಸಂಪಾದಿಸಿದ್ದಾರೆ.

---

ಸೋಮನ ಕರಿಯಪ್ಪ, ಬನ್ನಿಹಳ್ಳಿ ಅಂಚೆ,

ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



**ನನ್ನ ಬದುಕು ಬಾಳು**

ನನ್ನೆಸರೇ ಕರಿಯಪ್ಪ, ಸೋಮನ ಕರಿಯಪ್ಪ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಬನಸಿಹಳ್ಳಿ ನನ್ನ ಸ್ಥಳ ಮನೆ, ನಮ್ಮ ಅಜ್ಜ, ಮುತ್ತಜ್ಜಗಳೆಲ್ಲಾ ಬಾಳಿ ಬದುಕಿ ಅವ್ವನ ಪಾದ ಸೇರಿದ್ದು ಇಲ್ಲೇ. ಇದು ಅಂತಿಂತಾ ಜಾಗ ಅಲ್ಲ, ದೊಡ್ಡವಳು ಏಕನಾಥವ ನೆಲೆಯಾದ ಜಾಗ, ರಾಕ್ಷಸರನ್ನು ಸಂಹಾರ ಮಾಡಿದ ಪಾರ್ವತೀದೇವಿ ನೆಲಮುಗಿಲಿಗೆ ಒಂದೇ ಸಮಕ್ಕೆ ನಿಂತು ಬಿಟ್ಟಳಂತೆ! ಅವಳ ಭೀಕರವಾದ ರೂಪು, ಅಬ್ಬರಗಳಿಂದ ದೇವಾನುದೇವತೆಗಳು ಬೆವೆತು ಹೋದರು. ದೇವಿಯನ್ನು ಹಿಂಗೇ ಬಿಟ್ಟರೆ ಇಡೀ ಬ್ರಹ್ಮಾಂಡವನ್ನೇ ನುಂಗಿ ನೊಣೆದಾಳೆಂದು ವಿಷ್ಣು ತನ್ನ ಸುದರ್ಶನ ಚಕ್ರವನ್ನೇ ಚರ್ಮದ ಹಲಗೆ ವಾದ್ಯ ಮಾಡಿ ಅದನ್ನು ಬಡಿದುಕೊಂಡು ದೇವಿಯನ್ನು ಸ್ತುತಿಸಿದ. ಅದರ ಸಂಕೇತವೇ ಇಂದಿನ ಅಸಾದಿ

ಇನ್ನು ಶಿವ ತನ್ನ ತ್ರಿಶೂಲವನ್ನು ತೆಗೆದು ಹತ್ತಿರ ಇದ್ದ ಈಚಲಮರಕ್ಕೆ ತಿವಿದ, ಮರದ ತೂತುಗಳಿಂದ ಹಾಲಿನಂತಹ ದ್ರವ ಹರಿಯಿತು. ದೇವಿ ಅದನ್ನು ಕುಡಿದಳು, ಶಾಂತಳಾದಳು, ಪ್ರಸನ್ನಳಾದಳು. ಶಿವನ ನೆನಪಿಗೆ ಇರೋನೇ ಚಾಟಿ ಪೋತ. ಇವೆಲ್ಲಾ ಹಿಂದಿನವರು ಹೇಳಿಕೊಂಡು ಬಂದಿರೋ ಕತೆ. ಅಂತೂ ಒಂದು ನಿಜ, ಅಮ್ಮ ಹೊರಟರೆ ಸೋಮ ಹೊರಟರೆ ಚಾಟಿ ಪೋತ, ಅಸಾದಿ ಇವರೆಲ್ಲಾ ಹೊರಡಲೇ ಬೇಕು. ಅಮ್ಮನಿಗೆ

ಉತ್ಸಾಹ ಬರಲು, ಸೋಮನಿಗೆ ರಂಗೇರಲು ವಾದ್ಯದವರು, ಬಡಿಯೋರು, ಪತ್ರದವರು ಕೂಡಿಕೋಬೇಕು.

ನನಗೆ ಅರವತ್ತು ಮೂರು ವರ್ಷ ಆಗೈತೆ. ನಾವು ನಾಯಕ ವಂಶಸ್ಥರು, ಪಾಳ್ಳೇಗಾರರು, ನನಗೆ ಇಪ್ಪತ್ತನೇ ವಯಸ್ಸಿಗೆ ಸೋಮನ್ನ ಹೊರುವುದಕ್ಕೆ ಪಟ್ಟೆ ಆಯ್ತು. ಆಗಿನಿಂದ ಅರವತ್ತೊಂದನೆ ವರ್ಷ ವಯಸ್ಸಿನ ತನಕ, ಅಂದ್ರೆ ನಲವತ್ತೊಂದು ವರ್ಷ ಕರೇ ಸೋಮನ್ನ ಹೊತ್ತು ಮೆರೆಸಿದ್ದೀನಿ. ಈಗ ಎರಡು ವರ್ಷದ ಕೆಳಗೆ ನನ್ನ ಒಬ್ಬನೇ ಮಗ ಜಯಪ್ಪನಿಗೆ ಪಟ್ಟ ಕಟ್ಟಿದೆ. ನಾನು ಒಂದು ವಾರದಲ್ಲಿ ಮೂರು ನಾಕು ದಿನ ಸೋಮನ್ನ ಹಾಕಿಕೊಂಡಿದ್ದೀನಿ, ಆನಾಡಿ ಕೆಲಸ ಕಾರ್ಯಗಳು! ದಿನಾ ಕಷ್ಟ ಸುಖಕ್ಕೆ ಬರೋ ಜನ, ಅವರ ಊರು ಕೇರಿಗಳಿಗೆ ಕರೆಸುವ ಜನ, ಇವರೊಡನೆ ವರ್ಷವೆಲ್ಲಾ ನಡೆಯುವ ಅಮ್ಮನ ಕಟ್ಟಳೆ, ಪೂಜೆ, ಕೆಲಸಗಳು ಇಷ್ಟಕ್ಕೆಲ್ಲಾ ಸೋಮನ್ನ ಹಾಕಿಕೊಳ್ಳಲೇ ಬೇಕು. ಒಂದು ಮಾತಿನಲ್ಲಿ ಹೇಳಬೇಕು ಅಂದ್ರೆ ಸೋಮನ್ನ ಕುಣಿತ ಕುಣಿತಾಲೇ ನಾನು ಮುದುಕ ಆಗಿದ್ದೀನಿ. ನಾನು ಮುದುಕ ಆಗಿದ್ದು ಅವಾಗ ಗೊತ್ತಾಗಲೇ ಇಲ್ಲ! ಸೋಮನ್ನ ನಾನು ಕುಣಿದಿಲ್ಲ, ಅದೇ ನನ್ನ ಕುಣಿಸೈತೆ. ನನಗೆ ತಿಳಿದಂಗೆ, ಬಿಟ್ಟಂಗೆ ಇದ್ಯಾವುದೂ ಆಗಿಲ್ಲ, ಎಲ್ಲಾ ಆ ನಮ್ಮಪ್ಪ ಅಂದು ಕೊಂಡಂಗೆ ಆಗೈತೆ. ಈಚೀಚೆಗೆ ನಂಗೂ ವಯಸ್ಸಾಯ್ತು ಅನ್ನಿಸುತ್ತೆ. ಭಾರಹೊತ್ತು ಹಗಲೂ ಇರುಳೂ ಕುಣಿದೆ, ಆ ನಮ್ಮಪ್ಪ ಅಂದು ಹೂವಿನೋಟು ಹಗುರವಾಗಿ ಕುಂತು ಆಡಿಸಿದ. ಈಗ ಕುತ್ತಿಗೆ ಪಟ್ಟೆಶಿರ, ಪಾದ, ಮೊಣಕಾಲು, ಕೈ, ಭುಜ ನೋಯಿಸ್ತವೆ. ರಕ್ತ ಪುಷ್ಟಿ ಕಮ್ಮಿಯಾತು, ಶರೀರಕ್ಕೆ ಇವು ಒಂದೊಂದೇ ಅಮರಿಕೊಳ್ತಿದಾವೆ.

ಅದೇನೇ ನೋವಿದ್ರೂ ನೀವಿಕೊಂಡು ಸುಧಾರಿಸಿಕೊಳ್ತೀನಿ, ಇಡೀ ದಿನವೆಲ್ಲಾ, ಸಂಜೆಯೆಲ್ಲಾ ಬಿಡುವು. ಮಗ ಜಯಣ್ಣ ದೇವರ ಕೆಲಸ ಬೆಳ್ಳಿಟ್ಟು ತೋರಿಸದಂಗೆ ಮಾಡಿಕೊಂಡು ಹೋಗ್ತಾನೆ. ನಾನಾದ್ರೂ ಮೈ ಲಗುವಾಗಿರೋತನಕ ಮಗನ್ನ ಕರೀಲಿಲ್ಲ. ನೋಡ್ರಿ, ಮಗನಿಗೆ ಪಟ್ಟ ಆದಾಗ ಅವನಿಗೆ ಮೂವತ್ತು ವರ್ಷ, ನನಿಗೆ ಪಟ್ಟ ಆದಾಗ ಇಪ್ಪತ್ತು ವರ್ಷ. ಈ ನಾಡಿ ಜಲ್ದು ನನಗೇ ಪಟ್ಟ ಆಗಲು ಕಾರಣ ಅಂದ್ರೆ ಅಪ್ಪ ತಿಮ್ಮಪ್ಪ ಐವತ್ತೈದು ವರ್ಷಕ್ಕೇ ಅಮ್ಮನ ಪಾದ ಸೇರಿದ್ದರಿಂದ ನಾನು ಸೋಮನ್ನ ತಕ್ಷಣ ಹೊರಬೇಕಾತು. ನಮ್ಮಪ್ಪನಾಗಲೀ, ಅವರಪ್ಪ ಕರಿಯಪ್ಪನಾಗಲಿ, ಅವರಪ್ಪ ಕೆಂಚಪ್ಪನಾಗಲೀ ಅಂತೂ ವಂಶದ ಉದ್ದಕ್ಕೂ ಸೋಮನ ಸೇವೆ ಮಾಡಿಕೊಂಡು ಬಂದಿದ್ದೇವೆ. ಷುರುವಾಗಿ ಏಸುವರ್ಷ ಆಗಿರಬೌದು ಅಂತ ಕೇಳಿದರೆ ಗೊತ್ತಿಲ್ಲ. ಅದ್ಯಾವಾಗ ಇದು ನಮ್ಮ ವಂಶಕ್ಕೆ ಪ್ರಶಸ್ತಿ ಆತೋ ಗೊತ್ತಿಲ್ಲ. ಅಂತೂ ಆಗಿನಿಂದ ಈಗಿನವರೆಗೆ ವಂಶದಲ್ಲಿ ಏನೂ ಮುಟ್ಟು ಚಟ್ಟು ಆಗದಂಗೆ ನಡಕೊಂಡು ಬಂದೈತೆ. ಏನೋ ಅಮ್ಮನ ಕೃಪೆಯಿದ್ದರೆ ಮುಂದಕ್ಕೂ ನಡಕೊಂಡು ಹೋಗುತ್ತೆ. ನಮ್ಮ ಹಿರಿಯರೆಲ್ಲಾ ಈ ಸೋಮನ್ನ ಹೊರುವ ಕೆಲಸವನ್ನು ಸಾಕ್ಷಾತ್ತು ದೇವಿ ಸೇವೆಯೆಂದೇ ಮಾಡಿಕೊಂಡು ಬಂದಿದ್ದಾರೆ. ಅವರೆಲ್ಲಾ ಆಸ್ತಿ ಪಾಸ್ತಿ

ಮಾಡಿದವರಲ್ಲ, ಕಣ್ಣಿಗೆ ಬೇಕಾದ್ದು ಉಟ್ಟು ತೊಟ್ಟು ಬೇಕಾದನ್ನೇ ಉಂಡು ಮೆರೆದವರಲ್ಲ. ಆಗಲೇ ಹೇಳಿದ್ದೀನಿ, ವಾರದಲ್ಲಿ ಮೂರು ನಾಕು ದಿನ ನಾನು ನಮ್ಮ ಹಿರಿಯರು ದೇವರ ಕೆಲಸದಲ್ಲಿ ಕಳೆದರೆ, ಇನ್ನು ಉಳಿದ ಮೂರು ನಾಕು ದಿನದಲ್ಲಿ ಬಟ್ಟೆ ಮಡಿ ಮಾಡಿಕಬೇಕು, ದೇವರ ಕೆಲಸ ಮಾಡೋದಕ್ಕೆ ಪ್ರತಿಯಾಗಿ ಗ್ರಾಮದ ದೈವದವರು ಕೊಟ್ಟಿರೋ ನಾಕೆಕರೆ ಹೊಲದ ಗೆಯ್ಮೆ, ಬಿತ್ತನೆ ಮಾಡೋದು, ಅಗೋ ಇಗೋ ಅನ್ನೊದರೊಳಗೆ ಮೂರುದಿನ ಮುಗಿದೇ ಹೋಗುತ್ತೆ. ಇದ್ದಕ್ಕಿದ್ದಂತೆ ಕೆಲಸ ಬಂತು ಅಂದ್ರೆ ಉಕ್ಕೆ ಗೆರೆ ಮೇಲೇ ನೇಗಿಲು ಬಿಟ್ಟು ಮನೆ ಹೆಂಗಸರಿಗೆ ಎತ್ತು ಕೊಳ್ಳಬಿಟ್ಟಗಂಡು ಹೋಗ್ರಿ ಅಂತೇಳಿ ನಡೀತಿರಬೇಕು. ಅದಕ್ಕೆ ನಮ್ಮ ಕೈವಾಡದವರ ಆರಂಭದ ಕೆಲಸ ಕೊನೆಮುಟ್ಟಿಸೋ ಕೆಲಸವಲ್ಲ. ಇತ್ತಲಾಗೆ ರೂಪಾಯಿಗೆ ರೂಪಾಯಿ ರೈತರಾದರೂ ಸರಿಯಾಗಲ್ಲ. ಹೊಲ, ಗೆಸ್ಟ್ ಬಿಟ್ಟು ಗುಡಿ, ದೇವರ ಕೆಲಸ ಅಂತ ಇದ್ರೆ ಸಂಸಾರದ ಖರ್ಚು ವೆಚ್ಚ ಸಾಗೋಲ್ಲ. ನಮ್ಮ ಹಿರಿಯರ ಕಾಲದಗೆ ಇಂತಹ ತೊಂದ್ರೆಗಳು ಇರಲಿಲ್ಲವೆಂದು ಕಾಣುತ್ತೆ, ಅದು ಸುಭಿಕ್ಷದ ಕಾಲ, ದೇವರ ಕೆಲಸಮಾಡುವ ಜನಕ್ಕೆ ಭಕ್ತರು ಹಿಂದು ಮುಂದು ನೋಡದೆ ಕೊಡ್ತಿದ್ದರಂತೆ. ಘನವಾದ ಆಯ ಬರ್ತಿತ್ತು. ತಿನ್ನಕೆ ಕಾಳು, ದನಗಳಿಗೆ ಮೇವು. ಈಗ ನಮ್ಮವ್ವ ನಮ್ಮನ್ನು ಉಪವಾಸ ಕೆಡವಿಲ್ಲ. ಸೋಮನರಿಗೆ, ಪೂಜಾರಿಗೆ ತಲಾ ನಾಕು ಎಕರೆ ಹೊಲವಿದ್ದರೆ, ಚಾಟಿಪೋತ ಮತ್ತು ಉರುಮೆಯವನಿಗೆ ತಲಾ ಎರಡೂವರೆ ಎಕರೆ ಹೊಲವನ್ನು ಬಿಟ್ಟಿರುವುದುಂಟು. ಇದ್ದದ್ದರಲ್ಲಿ ನಮ್ಮದು ಪರವಾಗಿಲ್ಲ, ಅಸಾದಿ ಮಾತ್ರ ಸುಗ್ಗಿಕಾಲದಲ್ಲಿ ಆಯ ಎತ್ತಿಕೊಳ್ಳಬೇಕು. ನಿಜ ಆಯದ ಕಾಳು, ಹುಲ್ಲು ಎಲ್ಲಾ ಅಂದುಕೊಂಡಂಗೆ ಬಂದ್ರೆ ಸಾಕೇ ಸಾಕು. ಒಂದಲ್ಲ ಎರಡೆರಡು ಸಾರಿ ಓಡಾಡಬೇಕು, ಕೊಟ್ಟಿದ್ದೇ ಬೇಕಾದೋಟು ಅಂತ ಸಮಾಧಾನಪಡಬೇಕು. ಇದು ಆದಾಯವೋ, ಅಲ್ಲೊ ನಾವ್ಯಾರೂ ಬಲು ತಲೆಕೆಡಿಸಿಕೊಂಡಿಲ್ಲ. ಜಾತ್ರೆ ಕಾಲದಲ್ಲಿ, ಮಿಕ್ಕ ಬಿಡುದಿನಗಳಲ್ಲಿ ಸೋಮನ ಬಂಕ ಹಾಕಿಸುವಾಗ ಒಂದು ಕುರಿ ಕಡಿಯುವುದಿದೆ. ಹಿಂಗೆ ಎಷ್ಟು ಬಾರಿ ಕುರಿ ಕಡಿದರೂ ಅದನ್ನು ಐದು ಬಾಗ ಮಾಡಿ ಸೋಮ, ಪೂಜಾರಿ, ಚಾಟಿ ಪೋತ, ಉರುಮೆಯವನು ಇವರಿಗೆ ನಾಲ್ಕು ಭಾಗ ಹಂಚಿಕೆ ಮಾಡುತ್ತಾರೆ. ತಲೆ ಬುರುಡೆ ಮಾತ್ರ ಅಸಾದಿಗೆ ಸಲ್ಲುತ್ತದೆ. ಇದೆಲ್ಲಾ ಪೂರ್ವದಿಂದ ನಡಕೊಂಡು ಬಂದಿರುವ ರಿವಾಜು,

ಇದೆಲ್ಲದರಿಂದ ನಮ್ಮ ಮನೆಗಳವರಿಗೆ ಭಾರೀ ವರಮಾನ ಅಂತಲ್ಲ. ಈನಾಡಿ ಜನ ಇರುವ ತುಂಬಿದ ಊರಿನಲ್ಲಿ, ಸೀಮೇಲಿ ನಮ್ಮ ವಂಶೀಕರನ್ನೇ ದೇವಿ ತನ್ನ ಸೇವೆಗೆ ಆರಿಸಿಕೊಂಡಿದ್ದಾಳಲ್ಲ! ಅದು ಬಲು ಮುಖ್ಯ, ಇದಕ್ಕಿಂತ ದೊಡ್ಡ ಪದವಿ ಯಾವ್ದೂ ಇಲ್ಲ. ಸಾಕ್ಷಾತ್ ದೇವಿಯ ಅಪ್ಪಣೇನ ಹೇಳೋನು, ನಡೆಸೋನು ಸೋಮನ್ನ ಹೊತ್ತುಕೊಳ್ಳುವವನು.

ಸೋಮಗಳಿಗೆ, ಅದು ಬಿಳೇದಾಗಲಿ, ಕರೇದಾಗಲೀ, ಬಂಕ ಹಾಕದೆ ಪೂರ್ತಿ ಶಕ್ತಿ ಬರಲ್ಲ. ಬಂಕ ಅಂದ್ರೆ ಸೋಮನ ನೆತ್ತಿಯ ಮೇಲೆ ಪ್ರಭಾವಳಿಯಂತೆ ಮೂರು

ಬೆತ್ತದ ಕಡ್ಡಿಗಳನ್ನು ಬಗ್ಗಿಸಿ ಕಟ್ಟಬೇಕು. ಬೆತ್ತದ ಕಡ್ಡಿಗಳನ್ನು ಬಗ್ಗಿಸಿ ಕಟ್ಟಬೇಕು. ಬೆತ್ತದ ಕಡ್ಡಿ ಅಂದ್ರೆ ಎಲ್ಲೋ ಅಂಗಡೀಲಿ, ಕಾಡಿನಲ್ಲಿ ಸಿಕ್ಕೋದು ಅಂತ ಅಲ್ಲ, ಅದು ನಾಗ ಬೆತ್ತವಾಗಿರಬೇಕು. ಮುರಿದರೆ ತರಕೆ ಹೋಗಬೇಕಾದರೂ ಬಲು ಕ್ರಮವಾಗೇ ಹೋಗಬೇಕು, ಅದರ ಬಗ್ಗೆ ಒಳ್ಳೆ ಅನುಭವ ಇರಬೇಕು. ನನಗಂತೂ ಇದುವರೆಗೂ ನಮ್ಮ ಸೋಮಗಳಿಗೆ ಹೊಸ ಬಂಕದಕಡ್ಡಿ ತಂದಿದ್ದು ಗೊತ್ತೇ ಇಲ್ಲ. ಬಂಕದ ಕಡ್ಡಿಗಳಿಗೆ ರೇಷ್ಮೆ ಬಟ್ಟೆ ಸುತ್ತಬೇಕು, ಬೆಳ್ಳಿಗುಂಡು, ಬೆಳ್ಳಿ ಕಿರುಗಂಟೆ, ಬೆಳ್ಳಿ ಸರಗಳನ್ನೂ ಕಟ್ಟಬೇಕು. ಆಮೇಲೆ ಬೇವಿನ ಸೊಪ್ಪ ಮುಡಿಸಬೇಕು.

ಒಂದು ಸಾರಿ ಬಂಕ ಹಾಕಿದರೆ ಸ್ವಲ್ಪ ಕಮ್ಮಿಯಾಗಿ ಒಂದು ವರ್ಷ ಹಂಗೇ ಇರುತ್ತೆ. ಅಮ್ಮನ ಜಾತ್ರೆ, ರಥ ಮುಗಿದು ದೇವರು ಗುಡಿ ತುಂಬಿದಾಗ ಸೋಮಗಳೂ ಗುಡಿಯಲ್ಲಿ ಕುಂತು ಬಿಡುತ್ತವೆ. ಅಲ್ಲಿಂದ ಒಂದು ತಿಂಗಳು ಬಂಕ ತೆಗೆದು ಬಿಡ್ತಾರೆ. ಇದು ಒಂದು ತರಹೆ ವಿರಾಮದ ಕಾಲ. ತರಾತುರಿಯಿಂದ ಕಷ್ಟ, ಅನಾಹುತಗಳಿಗೆ ಸೋಮನ್ನ ಹೊರಡಿಸಲೇ ಬೇಕು ಅಂತ ಯಾರಾದ್ರೂ ಬಂದ್ರೆ ಒಂದು ಕುರಿ ಕಡಿದು, ಕ್ರಮವನ್ನು ಜರುಗಿಸಿ ಹೊರಡಿಸಬೇಕು. ಈ ದೊಡ್ಡ ಖರ್ಚುಗಳನ್ನು ಕೇಳಕೆ ಬಂದಿರೋರೇ ಕೊಡಬೇಕು. ಒಂದು ವೇಳೆ ಇಂತಹದ್ದೇನೂ ಆಗದೆ ಒಂದು ತಿಂಗಳ ಸಮಯ ಮುಗಿಯಿತೆಂದರೆ ದೇವಸ್ಥಾನದ ಖರ್ಚಿನಿಂದಲೇ ಕುರಿ ಕಡಿದು ಬಂಕ ಹಾಕಿ ಬಿಟ್ಟರೆ ಇನ್ನು ವರ್ಷದವರೆಗೂ ಯಾರು ಏನೂ ಕೇಳಿಕೊಳ್ಳಬಹುದು. ತನಗೂ ಗ್ರಾಮದಲ್ಲಿ ಮನೆ ಐತೆ, ಚಿಕ್ಕಪ್ಪ, ದೊಡ್ಡಪ್ಪನ ಮಕ್ಕಳು, ಮರಿ, ಬಂಧು ಬಳಗ ಎಲ್ಲಾ ಐತೆ, ಸೋಮನ್ನ ಹಾಕುವ ಮೊದ್ಲು ನಮ್ಮಪ್ಪನಿಂದಲೇ ನನಿಗೆ ಟ್ರೈನಿಂಗು ಆತು, ಈಗಲೂ ಅಷ್ಟೆ ನನ್ನಿಂದ ನನ್ನ ಮಗನಿಗೆ ಆಗ್ತೈತೆ. ನಾನಿಂಗೆ ಹೇಳಿದ ಕೂಡ್ಲೆ ಓಹೋ ಇದಕ್ಕೆಲ್ಲಾ ಮೊದ್ಲೇ ಶಿಕ್ಷಣ ಆಗಿರುತ್ತೆ ಅಂದಕಾ ಬೇಡಿ. ಸ್ಕೂಲಿನಲ್ಲಿ ಹೇಳಿಕೊಟ್ಟ ರೀತೀಲಿ ಇದು ಹಿಂಗೆ, ಹಿಂಗೆ ಅಂತ ಏನೂ ಹೇಳಲ್ಲ. ಜಾತ್ರೆ, ಪರಿಷೆಗಳಲ್ಲಿ ನಾವು ಸೋಮನ್ನ ಹೊತ್ತು ಕುಣಿಯುವುದು, ಬಂಕಾ ಹಾಕೋದು, ತೆಗೆಯೋದು, ಮಂಡಲ, ಕುರುವು ಇಂಥದ್ದನ್ನೆಲ್ಲಾ ಮುಂದೆ ಹಾಕೋನು ನೋಡಿಕಬೇಕು. ಇದರ ತುದಿ ತಳ ಎಲ್ಲಾ ಅರಿತುಗೋಬೇಕು. ನಾವು ಬಾಯಿ ಬಿಟ್ಟು ಹೇಳದಿದ್ದರೇನಾತು, ಕೆಲಸ ಕಾರ್ಯಗಳನ್ನು ನೋಡ್ತಾಲೇ ನೆನಪಿಟ್ಟುಕೋಬೇಕು. ಇದು ಅಮ್ಮನ ಸೇವೆಯಲ್ಲದೆ ಬ್ಯಾರೆ ಅಲ್ಲ ಅನ್ನೋ ನಿಷ್ಠೆಯಿದ್ದು ಬಿಟ್ಟರೆ ಎಲ್ಲಾ ತನಿಗೆ ತಾನೇ ಬಂದು ಬಿಡುತ್ತೆ. ನನಿಗೆ ನಮ್ಮಪ್ಪ ಕಲಿಸಿದ ಅಂದ್ರೆ ಈ ತರಹ ಅರ್ಥಮಾಡಿಕೊಳ್ಳಬೇಕು. ಬಿಳಿಸೋಮನನ್ನು ಹಾಕ್ತಾ ಇದ್ದರೆ ಭಾರ ಹೊರುವುದು, ಕೈ ಕಾಲು, ಕುತ್ತಿಗೆ ಆಡಿಸೋದು ಅನುಭವ ಆಗುತ್ತೆ. ಸೋಮನ್ನ ಹಾಕಿದಾಗ ಒಂದೀಟು ಕತ್ತು ಎಡಕ್ಕೆ ಬಲಕ್ಕೆ ಬಗ್ಗಿಸಿದರೆ ನೋಡೋರಿಗೆ ಏಟೋ ಬಗ್ಗಿಸಿದಂಗೆ ಕಾಣುತ್ತೆ, ಕುಣಿದಾಗಲೂ ಅಷ್ಟೆ, ಏಕದಮ್ ತಕತಕ ಕುಣಿದು ಆಯಾಸ ಮಾಡಿಕೋಬಾರದು. ಏನಿದ್ರೂ ನಿಧಾನವೇ ತಾಳಿಕೆ ಬರೋದು. ಸೋಮನ

ಕುಣಿತ ರಾತ್ರಿ ಎಲ್ಲಾ ಆಗುತ್ತೆ. ಒಂದೇ ಗಂಟೆಯಲ್ಲಿ ಕುಣಿದು ಕುಪ್ಪಳಿಸಿ ಸುಸ್ತಾದರೆ ಬೆಳಕು ಹರಿಯುವ ತನಕ ಅದನ್ನ ಹೊತ್ತು ಮೆರೆಸೋರು ಯಾರು?

ಕೈವಾಡದವರೆಲ್ಲಾ ಅಮ್ಮನಿಗೆ, ಸೋಮನಿಗೆ ಪೂರಕವಾಗಿರುತ್ತಾರೆ. ಅಮ್ಮನದು ಕುಣಿತ ಇರಲ್ಲ, ಸೋಮನದೇ ಕುಣಿತ, ಅದೇ ಕೇಂದ್ರ. ಬಡಿಯೋರು, ಬಾರಿಸೋರು ಇವರೆಲ್ಲಾ ಸೋಮ ಹೆಜ್ಜೆ ಹಾಕಲು ಬೇಕಾದ ತಾಳ, ಗತ್ತುಗಳನ್ನು ವಾದ್ಯಗಳ ಮೂಲಕ ತೋರಿಸ್ತಾ ಹೋಗ್ತಾರೆ. ಯಾವುದನ್ನು ನುಡಿಸಿದ್ರೆ ಹೆಂಗೆ ಕೈ, ಕಾಲು, ಕುತ್ತಿಗೆ ಇವೆಲ್ಲಾ ಆಡಿಸಬೇಕು ಎಂಬೋದು ಅನುಭವಕ್ಕೆ ಬರುತ್ತೆ.

**ಅವ್ವನಿಗೆ ಕಾಣದ್ದು ಯಾವುದೈತೆ?**

ಬನಸಿಹಳ್ಳಿ ಏಕನಾಥವ್ವನ ಪರಿಷೆ, ಪಾಡ್ಯ ಅಂದ್ರೆ ಜನ ಹಳ್ಳಕೊಳ್ಳದ ನೀರು ಹರಿದಂಗೆ ಕೂಡಿಕೊಂಡು ಬರ್ತಾರೆ. ಅಮ್ಮನ ಅಲಂಕಾರ, ಸೋಮನ ಕುಣಿತ, ಚಾಟಿಪೋತನ ಗುಂಡಿನ ಸೇವೆ, ಅಸಾದಿಯ ಪದಗಳು ಹಿಂಗೆ ಒಂದೇ ಎರಡೇ. ಇವೆಲ್ಲಾ ನೋಡೋ ಕಣ್ಣುಗಳಿಗೆ ಹಬ್ಬ. ಇದಕ್ಕಿಂತ ಮುಖ್ಯ ಅಂದ್ರೆ ಅಮ್ಮನ ಮೊರೆ ಹೊಕ್ಕರೆ ಇನ್ಯಾತರ ಭಯವೂ ಇಲ್ಲವೆಂಬ ಅನನ್ಯ ನಂಬಿಕೆ. ಈ ಶ್ರದ್ಧಾ ಭಕ್ತಿಗಳ ಫಲವೇ ಜನ ಇರುವೆ ಸಾಲಿಟ್ಟಂತೆ ತುಂಬಿ ಬರೋದು.

ಜಾತ್ರೆಗೆ ಬಂದ ನೆಂಟರು ಇಷ್ಟರು, ನಾಕು ದಿನ ಇಲ್ಲೇ ಬಿಡಾರ ಹೂಡುವುದಿದೆ. ಜಾತ್ರೆಯ ಒಂಬತ್ತು ದಿನಗಳು ಅಂದ್ರೆ ಪೂರ್ವದ ಅಡುಗೆ ಊಟದ ವೈಭವ, ಹುಗ್ಗಿ, ಹೋಳಿಗೆ, ಕರಿಗಡುಬು, ಹೂರಣಗಡುಬು, ಒತ್ತು ಶಾವಿಗೆ, ಗೌಲಿ, ಕಲಸುರೊಟ್ಟಿ, ಕಡುಬು ಒಂದೇ ಎರಡೇ, ದಿನವೂ ಎರೆಡೆರಡು ಅಡುಗೆಗಳು, ತಾವು ಉಣೋದಷ್ಟೇ ಅಲ್ಲ, ಬಂದವರಿಗೆ ಇಕ್ಕುವುದು, ಆ ಮೂಲಕ ಸಂತೋಷಪಡುವುದು ಜೀವನದ ಭಾಗ್ಯವಲ್ಲದೆ ಮತ್ತೇನು?

ನಮ್ಮ ಡಿಸ್ಟ್ರಿಕ್ಟಿನಲ್ಲಿ, ನಮ್ಮ ಸೀಮೇಲಿ ಎಷ್ಟು ಸೋಮಗಳಿವೆ ಗೊತ್ತಿಲ್ಲ. ಇರಬಹುದು, ಬಹಳ ಇರಬಹುದು. ಆದ್ರೆ ನಾನು ನೋಡಿದಂಗೆ ಏಸೋ ಸೋಮಗಳು ಊರೂರುಗಳನ್ನೇ ಸೊಂಟ ಮುರಿದ ಸೋಮಗಳು, ಲೋಕಕ್ಕೆ ಮಳೆಬೆಳೆಯಾಗದಿದ್ದರೂ ತನ್ನ ತಾಲೆಯಲ್ಲಿರುವ ಊರುಗಳಿಗೆ ಮಳೆ ಬೆಳೆ ಕೊಟ್ಟ ಸೋಮಗಳು ಇವತ್ತು ಗುಡಿಯ ಕತ್ತಲ ಮೂಲೆಗಳಲ್ಲಿ ನಿರ್ಜಿವವಾಗಿ ಕುಂತಿವೆ. ಯಾಕೆ ಹಿಂಗಾಯ್ತು, ಕಾರಣ ಬಲು ಸರಳ. ಲಾಗಾಯ್ತಿನಿಂದಲೂ ಸೋಮನ್ನ ಹಾಕ್ತಾ ಇದ್ದ ವಂಶಸ್ಥರು ಇದನ್ನು ಕೈ ಬಿಟ್ಟರು. ಬಿಡೋಕೆ ಕಾರಣ ಏನಿರಬಹುದು? ದೇವರ ಕೃಪೆಯಿಂದ ದೊಡ್ಡ ದೊಡ್ಡ ನೌಕರಿಗೆ ಹೋದರು, ದೊಡ್ಡ ವ್ಯಾಪಾರ ಮಾಡಿದರು. ಅವರವರ ಕೆಲಸಗಳಿಗೆ ಟೈಮು ಸಾಲದು

ಬರುತ್ತೆ. ಮೇಲಾಗಿ ಅವರು ಉದ್ಯೋಗ, ವ್ಯಾಪಾರ ಮಾಡೋದು ದೂರದ ಎಲ್ಲೋ ಒಂದು ಕಡೆ, ಸೋಮ ಇರೋದು ಹುಟ್ಟೂರಿನಲ್ಲಿ. ಇಂಥಾದ್ದೇ ಏನಾದರೂ ತೊಂದರೆಗಳ ಕಾರಣ ತಮ್ಮ ವಂಶ ಪಾರಂಪರ್ಯ ನಡೆಸಿಕೊಂಡು ಬಂದ ಸೋಮ ಶಾಶ್ವತವಾಗಿ ವಿಶ್ರಾಂತಿಯಲ್ಲುಳಿಯಿತು. ಇಂಥಾ ಯಾವೂ ಸಕಾರಣಗಳಿಲ್ಲದಿದ್ದರೂ ತಮ್ಮ ಊರುಗಳಲ್ಲಿದ್ದುಕೊಂಡೇ ಸೋಮನ್ನ ಹೊರೋದು ಬಿಟ್ಟಿರಬಹುದು. ಇದಕ್ಕೂ ಕಾರಣ ಬಲು ನಿಚ್ಚಳ. ವರ್ಷವೆಲ್ಲಾ ಸೋಮನ್ನ ಹೊತ್ತು, ಕಷ್ಟ ಕಾರ್ಪಣ್ಯ ದೂರ ಮಾಡಿದವನ ಸ್ವಂತ ಬದುಕು, ಸ್ವಂತ ಕುಟುಂಬವೇ ಹೊಟ್ಟೆಗೆ, ಬಟ್ಟೆಗೆ ಒದ್ದಾಡುವಂತಾದರೆ? ಇಷ್ಟಕ್ಕೇ ಮನಸ್ಸು ಕೆಡಿಸಿಕೊಳ್ಳೋ ಜನ ಸೋಮನ್ನ ಹೊರೋದನ್ನು ಕೈ ಬಿಟ್ಟರು. ಯಾವಾಗ ಆಯಾ ವಂಶಗಳು ಇದನ್ನು ಕೈ ಬಿಟ್ಟವೋ ಸೋಮನಿಗೆ ಆಗಲೇ ಬೇಕಾದ ಎಡೆ ಬಿಡಾರಗಳು ಆಗಲಿಲ್ಲ, ನೇಮ ನಿಷ್ಠೆ, ಕ್ರಮ, ಎಲ್ಲಾ ನಿಂತುಬಿಟ್ಟವು. ಜನರ ಕಷ್ಟ ಸುಖಕ್ಕೆ ಮಾತಾಡ್ತಾ ಇದ್ದ ಕರೇ ಸೋಮ ಕತ್ತಲಲ್ಲಿ ಉಳೀತು. ಅಲಂಕಾರದ ಬಿಳೇ ಸೋಮ ಹಬ್ಬ ಹಡೇವದಲ್ಲಿ ಕಾಣಿಸಿಕಂತು. ಆದರೇನು ಅಪ್ಪಣೆ ಮಾಡಲ್ಲ, ಕುರುವು ತೋರಿಸಲ್ಲ, ಜೀವಕಳೇನೇ ಇಲ್ಲದ ಮರದ ಮೊಗವಾಡ.

ಕರೆ ಸೋಮ ಇದೆ ಎಂದರೆ, ಅದನ್ನು ನಡೆಸಿಕೊಂಡು ಹೋಗಲು ಒಂದು ವಂಶ ಹಗಲೂ ಇರುಳೂ ಸಿದ್ಧವಾಗಿರಬೇಕು. ಸ್ವಂತಕ್ಕೆ ಹಣಕಾಸು, ಆಸ್ತಿಪಾಸ್ತಿ ಏನೂ ಮಾಡಲಿಕ್ಕಾಗದ ಸ್ಥಿತಿಯಿದು. ಮನೆಯ ಯಜಮಾನ ಊರಿನ ಜನರ ಕಷ್ಟ ಕಾರ್ಪಣ್ಯಗಳಿಗೆ ಪರಿಹಾರ ತೋರೋನು ಅಂತ ಆದಮೇಲೆ ಅವನು ತನ್ನ ಮನೆ ಕಡೆ ನೋಡಲಿಕ್ಕಾಗೋಲ್ಲ, ಆ ಮನೆ ಹಣಕಾಸಿನ ದೃಷ್ಠಿಯಿಂದ ದಡೂತಿಯಾಗಿ ಬೆಳೆಯಲಾಗೋಲ್ಲ. ಇವೆಲ್ಲಾ ತ್ಯಾಗಗಳಿಗೆ ಸಿದ್ಧವಾದೋನು ಮಾತ್ರ ಈ ಕರೇಸೋಮನ್ನ ಹೊರಬಹುದು. ಕರೆ ಸೋಮನ್ನ ಹಾಕುವನಿಗೆ ಅನ್ನ, ನೀರು, ಮಲ, ಮೂತ್ರ ಹಿಂಗೆ ಎಲ್ಲದರಲ್ಲೂ ಒಂದು ಶಿಸ್ತು ಇರಬೇಕು, ಅಧಿಕಾರ ಇರಬೇಕು. ಯಾಕೇಂದ್ರೆ ಸೋಮನ್ನ ಧರಿಸುವುದು ಅಂದ್ರೆ ದಿನಾ ಅಗ್ನಿ ಪರೀಕ್ಷೆ, ಈ ಸಲ ತಪ್ಪಾತು ಮುಂದೆ ತಿದ್ದಿಕಂತೀನಿ ಅಂದ್ರೆ ಆಗಲ್ಲ. ವಾದ್ಯಕ್ಕೆ ಸರಿಯಾಗಿ ಹೆಜ್ಜೆ ಹಾಕಿ ಕುಣಿದು ಸೈ ಅನ್ನಿಸಿಕಂಡು ಪ್ರಯೋಜನವಿಲ್ಲ. ಯಾವುದೋ ಆಸೆಗೆ ಇಲ್ಲಂದ್ರೆ ನಮ್ಮಪ್ಪ, ನಮ್ಮ ಸೋಮನ್ನ ಹಾಕತಿದ್ರು ಅಂತ ವಂಶಾವಳಿ ಹೇಳಿಕೊಂಡು ಹಾಕಿದ್ದೂ ಅದು ಯಶಸಾಗಲ್ಲ. ಇದಕ್ಕೆ ಬೇಕಾದ್ದನ್ನು ದುಡಕಬೇಕು, ಪಡಕಬೇಕು. ಸಾಮಾನ್ಯವಾದ ಮಲಮೂತ್ರ ತಡೆಯೋದು ಏಟು ಕಷ್ಟ, ಹಸಿವು ಬಾಯಾರಿಕೆ ತಡೆಯೋದು ಕೂಡಾ ಅಷ್ಟೇ ಕಷ್ಟ. ಇವಕ್ಕೆಲ್ಲಾ ನಿಗದಿಯಾದ ಸಮಯ ಇರಬೇಕು. ಸಂದರ್ಭ ಬಂದ್ರೆ ಇವನ್ನ ತಡೆಯಬೇಕು, ಅಷ್ಟೇ ಅಲ್ಲ ತಡೆದಿದ್ದೇನೆ ಎಂಬ ಯೋಚನೆ ಕೂಡ ಮನಸ್ಸಿನಲ್ಲಿ ಬರಬಾರದು. ಇವೆಲ್ಲಾ ಶರೀರ ಧರ್ಮಕ್ಕೆ ಸಂಬಂಧಿಸಿದ್ದು. ಇದನ್ನು ಮೀರಿದ್ದು, ಇದಕ್ಕಿಂತಾ ದೊಡ್ಡದು ಇನ್ನೊಂದು, ಅದು ಮನಸ್ಸನ್ನು ಸರಿಯಾಗಿಟ್ಟುಕೊಳ್ಳಬೇಕು.



ನಾವು ಹಾಕುವ ಸೋಮನೆಂದರೆ ಇದುವರೆಗೆ ನೀವು ತಿಳಕಂಡಂಗೆ ಸಾಕ್ಷಾತ್ ಅಮ್ಮನ ದೂತ! ಮಾನವ ದೂತ. ಆಕೆಯ ಹೇಳಿಕೆ ಕೇಳಿಕೆಗಳನ್ನು ಲೋಪವಿಲ್ಲದಂತೆ ಸಂಬಂಧಿಸಿದ ಜನಕ್ಕೆ ಮುಟ್ಟಿಸಬೇಕು. ದೂತನಾದ ಸೋಮನ್ನ ಹೊರುವ ನಮ್ಮ ಶರೀರದಲ್ಲಿ ದೈವಶಕ್ತಿ ಬರಬೇಕು. ಅದಕ್ಕಾಗಿ ಮನಸ್ಸು, ಬುದ್ಧಿ ಎಲ್ಲಾ ನಿಚ್ಚಳವಾಗಿ, ಬೆಳ್ಳಂಬೆಳಗೆ ಇರಬೇಕು. ಏನ್ಕೈತೋ ಅದರಲ್ಲಿ ಸುಖ ಸಂತೋಷ, ನೆಮ್ಮದಿ ಪಡೆಯೋನಿಗೆ ಬೇರೆ ಬಯಕೆಗಳು ಸುಳಿಯೋಲ್ಲ. ಹಿಂಗೆ ದೇವರ ಕಾಯಕ ಮಾಡುವಾಗ ಆ ದೇವರು ಮೆಚ್ಚುವಂಗಿರಬೇಕು. ನಮ್ಮ ಜೀವನ ತಲೆತಲಾಂತರದಿಂದ ಬಂದಿರುವ ಈ ಜವಾಬ್ದಾರಿ, ಅದನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದನ್ನು ಕಿರಿಯರು ನೋಡ್ತಾರೆ, ಅವರ ಸರದಿ ಜವಾಬ್ದಾರಿ ಬಂದಾಗ ನಾನೂ ನಮ್ಮ ಹಿರಿಯರಂತೆ ಆಗಬೇಕು ಅನ್ನುವ ಗುರಿ ಇರುತ್ತೆ.

ದೇವರ ಸೇವೆಯಲ್ಲಿ ಇಷ್ಟು ವರ್ಷ ನಾನು ಕಳೆದೆ, ನಲವತ್ತೊಂದು ವರ್ಷ, ಅಂದ್ರೆ ಹೆಚ್ಚು ಕಮ್ಮಿ ಒಬ್ಬ ಮನುಷ್ಯನ ಅರ್ಧಾಯುಷ್ಯ, ದೊಡ್ಡ ದೊಡ್ಡ ಕಷ್ಟಗಳನ್ನು ನಮ್ಮ ಸೋಮ ಎತ್ತಿ ಒಗದೈತೆ, ಬಿಕ್ಕಟ್ಟಿನಲ್ಲಿ ದಾರಿ ತೋರಿಸ್ಯೆತೆ. ಇಂಥಾ ಅನೇಕಾನೇಕ ಸಂಗತಿಗಳನ್ನು ನಮ್ಮ ಗ್ರಾಮದ, ಅಕ್ಕಪಕ್ಕದ ಗ್ರಾಮಗಳ ಹಿರೇತಲೆಗಳನ್ನು ಕೇಳಿ ತಿಳಕಬೌದು. ಸೋಮನ ಬಂಕ ಹಾಕೋದು ಅಂದ್ರೆ ಮೊದಲಿಗೆ ಒಂದು ರೀತಿ ಅಲಂಕಾರವೇ. ಕಣ್ಣು ಕುಕ್ಕುವಂತಹ ದಟ್ಟವಾದ ಬಣ್ಣದ ರೇಷ್ಮೆ ಸೀರೆಯನ್ನು (ಈಚೆಗೆ ನಕಲಿ ರೇಷ್ಮೆ) ಸೊಂಟದ ಸುತ್ತ ಉಡಬೇಕು. ಹೆಂಗಸರ ಸೀರೆಗೆ ಇದ್ದಂತೆ ಇಲ್ಲಿ ಸೆರಗು ಇರಲ್ಲ. ಸೊಂಟದ ಸುತ್ತ ಬಂದಿರುತ್ತೆ. ಮುಂದುಗಡೆ ಮಾತ್ರ ನೆರಿಗೆ ಮಾಡಿ ಸಿಗಸಿದ್ದಾರೆ. ಹಿಂಗೆ ಮಾಡಿದಾಗಲೇ ಕಾಲು ಎತ್ತ ಬೇಕಾದ್ರೂ ಸಲೀಸಾಗಿ ಆಡಿಸೋಕೆ ಸಾಧ್ಯ. ಸೊಂಟದ ಸುತ್ತ ಬಂದೂಬಸ್ತಾಗಿ ಬಿಗಿದು ಕಟ್ಟಿದ ನಡುಪಟ್ಟಿ ಇದೂ ಒಂದು ಬಟ್ಟೆ, ಬಲಮುಖ್ಯವಾದ್ದು . ಕುಣಿವಾಗ ಬಟ್ಟೆ ಬೀಳದಂಗೆ, ನಡ ನೋವು ಬರದಂಗೆ, ತಡೆಯೋ ರಕ್ಷಣೆ ಇದು. ಇದಾದ ಮೇಲೆ ಒಂದು ಸಡಿಲವಾದ ನಿಲುವಂಗಿ, ಸೊಂಟಕ್ಕೆ ಒಳ್ಳೆ ಕೆತ್ತನೆ ಕೆಲಸದ ಬೆಳ್ಳಿಯ ಗೆಜ್ಜೆ ಪಟ್ಟಿ, ಎರಡೂ ಕೈಗೆ ಬೆಳ್ಳಿಯ ಬದ್ದು, ಕಾಲಿಗೆ ಗೆಜ್ಜೆ, ಕೊರಳಲ್ಲಿ ಅಮ್ಮನ ಆಕಾರವಿರುವ ಬಂಗಾರದ ತಾಳಿ ಪದಕ. ಇಷ್ಟಲ್ಲದೆ ಸೋಮನ ಬಂಕಕ್ಕೆ ಏನೇನು ಅಲಂಕಾರವಿದೆಯೋ ಅವೆಲ್ಲಾ ಆಗಿರುತ್ತೆ. ಸೋಮನ ಹಣೆಯಲ್ಲಿ ದೊಡ್ಡದಾಗಿ ಕಾಣುವ ಅರಿಸಿನದ ಭಂಡಾರ, ಯಾಕೇಂದ್ರೆ ಇದು ಅಮ್ಮನ ದೂತ, ಅದೇ ಭೂತಪ್ಪಗಳಿಗಾದ್ರೆ ಒಂದೋ, ಎರಡೋ, ಮೂರೋ ನಾಮ ಇಡಬಹುದು. ಈಚೀಚೆಗೆ ಕರಿಸೋಮಗಳಿಗೆ ನಾಮ ಬರೆಸೋದು ನೋಡಿದ್ರೆ ಇದೇನು ಎಂಥಾ ಕಾಲ ಬಂತಪ್ಪಾ ಅನ್ನಿಸುತ್ತೆ.

ಇಷ್ಟೆಲ್ಲಾ ಆದಮೇಲೆ ವಾಲಗ, ಉರುಮೆ, ದೋಣು ಸುರುವಾಗ್ತವೆ. ಅಸಾದಿ ಹಲಗೆ ಬಡಕಂತ ಅಮ್ಮನ ಮೇಲೆ ಸೋಮನ ಮೇಲೆ ಪದ ಹೇಳ್ತಾನೆ. ನಮ್ಮ ಮಗ್ಗುಲಾಗೇ ಇರುವ ಚಾಟಿಪೋತ ಸೋಮನ್ನ ಮುಟ್ಟುತ್ತಾನೆ. ಆಗ ನಮಗೆ ಜನ ಎಲ್ಲಿದ್ದಾರೆ, ದಾರಿ

ಎಲ್ಲಿ ಏನೂ ಕಾಣಲ್ಲ. ಪೋತರಾಜ ಮಾಡೋ ಸನ್ನೆಯೇ ನಮಗೆ ದಾರಿಯಾಗುತ್ತೆ. ಇದೆಲ್ಲಾ ಹತ್ತು ಹದಿನೈದು ನಿಮಿಷ ಅಷ್ಟೆ. ನಮ್ಮ ಕಣ್ಣು ಹಾರೋಕೆ, ಎಡ ಬಲಕ್ಕೆ ಹರಿದಾಡಕ್ಕೆ ಪ್ರಾರಂಭವಾಗುತ್ತೆ. ಅಷ್ಟು ಹೊತ್ತಿಗೆ ಆಗಲೇ ಎಲ್ಲಾ ಮಂಪರು, ಮಂಪರು. ನಾನು ಸೋಮನ ಕರಿಯಪ್ಪ ಅನ್ನೋದು, ಬಂಕ ಹಾಕಿದ್ದೀನಿ ಅನ್ನೋದು ಯಾವುದೂ ಎಚ್ಚರವಿರಲ್ಲ. ಇಲ್ಲಿಂದ ಮುಂದಿನದು ಕುರುವು ಕೇಳೋದು, ಕಟ್ಟೆ ಮಾಡೋದು ಎಲ್ಲಾ. ನಂದು ಅನ್ನೋದು ಏನೂ ಇಲ್ಲ, ಎಲ್ಲಾ ಆ ನಮ್ಮಪ್ಪಂದು. ಉತ್ಸವದಾಗೆ ಕುಣೀವಾಗ ಏನು ಎತ್ತ ತಿಳಿಯುತ್ತೆ. ಆದರೆ ಅಪ್ಪಣೆ, ಕಷ್ಟ ಸುಖ ಅಂತ ಕೇಳಿದಾಗ ಮಾತ್ರ ನಂಗೆ ಏನೂ ನೆನಪಿರಲ್ಲ. ಆ ಕೆಲಸ ಕಾರ್ಯಗಳು ಮುಗಿದಮೇಲೆ ಮತ್ತೆ ಮೊದಲಿನಂಗೆ ದೇವಿ ತನ್ನ ಉತ್ಸವ ಮುಗಿಸಿಕೊಂಡು ಗುಡಿ ತುಂಬಿದ ಮೇಲೆ ಸೋಮನ್ನ ಇಳಿಬೇಕು. ಅಷ್ಟು ಹೊತ್ತಿಗೆ ಈ ಶರೀರ, ಮನಸ್ಸು ಎಲ್ಲಾ ಸುಸ್ತಾಗಿರ್ತವೆ. ಚಾಟೀಪೋತ ಮೊದಲಾದವರು ಸೇರಿ ಸೋಮನ ಬಂಕ ತೆಗೆಯುತ್ತಿದ್ದಂತೆ ಹಂಗೇ ರಪ್ ಅಂತ ಹಿಂದಕ್ಕೆ ಬಿದ್ದು ಬಿಡ್ತೀವಿ. ಆಗ ಬೀಳದಂಗೆ ನಮ್ಮನ್ನ ತೋಳುಗೈಯ್ಯಾಗೆ ಹಿಡಕಬೇಕು. ಮೆಲ್ಲಗೆ ಕುಂಡ್ರಿಸಿ, ಗಾಳಿ ಬೀಸ್ತಾರೆ, ಕುಡಿಯಕೆ ಒಂದು ಎಳನೀರು ಕೊಡ್ತಾರೆ. ಇಷ್ಟೆಲ್ಲಾ ಮುಗಿದ ಮೇಲೆ ನಾನು ಕರಿಯಪ್ಪ, ಸೋಮನ ಕರಿಯಪ್ಪ ಆಗ್ತಿನಿ.

ಸೋಮನ್ನ ಇಳಿಸಿ ಗಂಟೆ ಎರಡುಗಂಟೆ ಆದರೂ ನೆತ್ತಿ ಭಗಭಗ ಅಂತ ಉರೀತಿರುತ್ತೆ, ಗಪಗಪ ಅಂತ ಹೊಡಕಂತಿರುತ್ತೆ. ವಿಶ್ರಾಂತಿ ತಗಂಡ ಏಟೋ ಹೊತ್ತಿನ ಮೇಲೆ ನನಗ ಅಳಾರ ಆಗುತ್ತೆ. ಸೋಮ ಏನು ಹೇಳ್ತು? ಏನು ತೋರಿಸ್ತು? ನನಗೇ ಏನೂ ನೆನಪಿರೋಲ್ಲ. ಅದನ್ನು ಕೇಳಿದವರು ಬಂದು ಈ ತರಕೆ ಈತ ಹೇಳಿಕೆ ಆತು, ಕಟ್ಟೆ ಮಾಡಬೇಕು, ಕಳಸಪೂಜೆ ಆಗಬೇಕು, ಗುರುಪೂಜೆ, ನವಗ್ರಹಪೂಜೆ ಆಗಬೇಕು - ಇಂಥಾದ್ದು ಯಾವುದನ್ನೋ ಹೇಳ್ತಾರೆ. ಇದಕ್ಕೆ ಸಾಮಾನು ಏನೇನು ಓಜು ಮಾಡಬೇಕು, ಯಾವದಿನ ಪೂಜೆ ಮಾಡಿಸೋದು ಇಂತಹ ವಿವರಗಳನ್ನೆಲ್ಲಾ ನನ್ನಿಂದ ಕೇಳಿ ತಿಳಕಂತಾರೆ. ಅಪ್ಪಣೆ ಕೇಳುವಾಗ ಮಾತ್ರ ನನ್ನದು ಅನ್ನೋದು ಏನೂ ಇಲ್ಲ. ಇದನ್ನೆಲ್ಲಾ ತಿಳಿಸಿಕೊಡುವಾಗಲೇ ನನಿಗೆ ಒಂಥರಾ ಅರೆ ಬರೆ ಜ್ಞಾನ, ಎಲ್ಲೋ ಏನೋ ಆಗ್ತಾ ಐತೆ ಅನ್ನೋ ಹಂಗೆ ನನ್ನ ಸ್ಥಿತಿ ಇರುತ್ತೆ. ಈ ತರಾ ಆದ್ರೇನೇ ಕುರುತೇಟಿಗೆ ಹೇಳಿಕೆ, ಕುರುವು ಎಲ್ಲಾ ಆಗ್ತವೆ. ಇದೆಲ್ಲಾ ನನಿಗೆ ತಿಳಿಯೋದಾಗಿದೆ ಪರಿಹಾರ ಹೇಳೋಕೆ ಆಗ್ತಿತ್ತಾ? ನನ್ನ ಮಾತು ಆದರೆ ಅವುಗಳಿಗೆ ಏನು ಕಿಮ್ಮತ್ತು?

ಏಟೋ ಹೊತ್ತಾದರೂ ಸೋಮ ಮೈಮೇಲೆ ಬರದೆ ಇದ್ರೆ, ಬಂಕ ಇಳಿಸಿ ಇನ್ನೊಂದು ದಿನ ಕೇಳಬೇಕಾಗುತ್ತೆ. ನನ್ನ ಸರ್ವಿಸಿನಲ್ಲಿ ಇಂಥ ಪ್ರಸಂಗ ಬಂದಿಲ್ಲ. ಲೀಲಾ ಜಾಲವಾಗಿ ಸೋಮ ಬಂದೈತೆ, ಕೆಲಸ ಮಾಡಿಕೊಟ್ಟು ಹೋಗೈತೆ.

ಎಂಥಾ ಕುರುವು ಅಂತೀರ

ಜನ ತಮ್ಮ ಕಷ್ಟ ಕಾರ್ಪಣ್ಯಗಳಿಗೆ ಅಮ್ಮನ ಮೂಲಸ್ಥಾನದಲ್ಲಿ ತುಂಬೆ ಹೂವಿನ ಅಪ್ಪಣೆ ಕೇಳ್ತಾರೆ. ಬೇರೆ ಯಾವ ಹೂವೂ ಹಾಕದೆ ಬರೇ ತುಂಬೇ ಹೂವು ಮುಡಿಸಿದರೆ ಸಲೀಸಾಗಿ ಅಪ್ಪಣೆ ಆಗುತ್ತೆ, ಕೆಲವು ಬಾರಿ ಒಂದು ಕಡೆ ನಿಟ್ಟೆಗೆ ನಿಟ್ಟೆ ಉದುರಿಬಿಡುತ್ತೆ. ಇನ್ನು ಕೆಲವು ಸಾರಿ ಅಮ್ಮನೇ ಸೋಮನ್ನ ಕೇಳಲು ತಿಳಿಸುತ್ತೆ, ಸೋಮನ್ನ ಕೇಳೋಕೆ ಬರೋ ಜನರ ಸಮಸ್ಯೆಗಳು ಕೂಡಾ ಒಂದು ತರದನಲ್ಲ. ಹೊಲ ತೋಟಗಳಲ್ಲಿ ಬೋರ್ ಕೊರೆಸುವುದಕ್ಕೆ ಸೋಮನ್ನ ಕೇಳ್ತಾರೆ. ಸೋಮನ್ನ ಹೊರಡಿಸಿ ಅದರ ಕೈಗೆ ಒಂದು ಸುಲಿದ ತೆಂಗಿನಕಾಯಿ ಕೊಡ್ತಾರೆ. ಸೋಮ ಆ ಜಮೀನಿನಲ್ಲಿ ಹೆಜ್ಜೆ ಹಾಕ್ತಾ ಹಾಕ್ತಾ ನೀರಿನ ಸೆಲೆ ಇರೋ ಜಾಗದಲ್ಲಿ ತನ್ನ ಕೈಯಲ್ಲಿರುವ ತೆಂಗಿನಕಾಯಿಯನ್ನ ಉರಿಬಿಡುತ್ತೆ. ಆ ಸ್ಥಳದಲ್ಲಿ ಬೋರ್‌ವೆಲ್ ಕೊರೆಸಿ, ಇಂದಿಗೂ ಹೊಲಾ ತೋಟ ಮಾಡಿಕೊಂಡು ಇರೋರನ್ನು ನೋಡಬಹುದು. ನೀರಿನ ಪಾಯಿಂಟ್ ತೋರಿಸೋ ಜನ ಬೇಕಾದೋಟು ಐತೆ. ಹಸಿಕಡ್ಡಿ, ತಾಮ್ರದ ತಂತಿ, ಸರಪಣಿ, ತೆಂಗಿನಕಾಯಿ, ಮಿಷಿನ್ ಮೂಲಕ ಶೋಧನೆ ಹೀಗೆಲ್ಲಾ ಬೇರೆ ಬೇರೆ ವಿಧಾನಗಳಿವೆ. ಇದಕ್ಕೆಲ್ಲಾ ಅನುಭವ, ಸೂಕ್ಷ್ಮ ಬುದ್ದಿ ಎಲ್ಲಾ ಬೇಕು. ಆದರೆ ಸೋಮ ಬೋರ್ ಪಾಯಿಂಟು ತೋರಿಸುವಾಗ ಇಂಥದ್ದೇನೂ ಇಲ್ಲ. ಅದು ಎಲ್ಲಿ ನಿಲ್ಲುತ್ತೋ, ಎಲ್ಲಿ ಕಾಯಿ ಉರುತ್ತೋ ಅದೇ ಪಾಯಿಂಟ್. ಇದು ಹೇಗೆ ಏನು ಯಾವುದೂ ಹೇಳಕಾಗಲ್ಲ. ನೀರಂತೂ ಗ್ಯಾರಂಟಿಯಾಗಿ ಬರುತ್ತೆ.

ಈಗಾಗಲೇ ಇಪ್ಪತ್ತು ವರ್ಷಗಳ ಕೆಳಗಿನ ಒಂದು ಪ್ರಸಂಗ ನೆನಪಿಗೆ ಬರುತ್ತೆ. ಇದೇ ನಮ್ಮ ಸೀಮೆಯ ಒಬ್ಬ ಸಭ್ಯ ಮನುಷ್ಯ. ಅವನಿಗೇನೋ ಕಷ್ಟ, ಸೋಮನ್ನ ಹೊರಡಿಸಿ ಹೇಳಿಕೆ ಅಪೇಕ್ಷಿಸಿದ. ನೀನು ಎತ್ತಲಾಗಾದ್ರೂ ಒಂದು ತಿಂಗಳು ಊರು ಬಿಟ್ಟು ಬಿಡು. ಇಲ್ಲೇ ಉಳಿದರೆ ಜೀವಕ್ಕೆ ಆಪತ್ತು, ಈ ಗಡುವು ಕಳಕೊಂಡು ಬಾ ಅಂತ ಸೋಮನ ಅಪ್ಪಣೆಯಾಯ್ತು, ಕೇಳಿದ ಮನುಷ್ಯ ಅಷ್ಟು ಸಲೀಸಾಗಿ ಒಪ್ಪಿಕೊಳ್ಳಲಿಲ್ಲ. ಒಂದು ವೇಳೆ ನಿನ್ನ ಹೇಳಿಕೆಯಂತೆ ನನ್ನ ಜೀವಕ್ಕೆ ಆಪತ್ತು, ಅಂತ ಅನ್ನೋದಾದ್ರೆ ನಾನು ಮಾಡಿಕಂಡಿರೋ ಕುರುವು ತೋರಿಸಬೇಕು ಅಂತ ಸವಾಲು ಹಾಕಿದ! ಸೋಮ ಆ ಕಡೆ ಈ ಕಡೆ ಹಾಕ್ಯಂಡ್ರಂತೆ, ಮೈಕೈ ಪದ ಹೇಳೋವೋಟು ಕುಣೀತಂತೆ, ಕೊನಿಗೆ ನಿಂತ ಜಾಗದಿಂದ ಬಿರುಗಾಳಿಯಂತೆ ಒಂದು ಪರ್ಲಾಂಗು ದೂರ ಓಡು, ಸೋಮ, ಅದರ ಹಿಂದೆ ಉರುಮೆ, ವಾಲಗ, ಪೂಜಾರಿ, ಚಾಟಿಪೋತ ಮತ್ತೆ ನಾಕೈದು ಜನ. ಅಲ್ಲೇ ಇದ್ದ ಮೆಟ್ಟಿಲು ಭಾವಿಯೊಳಕ್ಕೆ ಇಳಿದ ಸೋಮ ಮೊಣಕಾಲುದ್ದ ನೀರಿನಲ್ಲಿ ನಿಂತು ಬಿಡು, ಭಾವಿಯ ಕಲ್ಲು ಕಟ್ಟಡದ ಸಂದಿನಲ್ಲಿ ಪಾಕೀಟಿನೊಳಗಿಟ್ಟಿದ್ದ ನೂರು ರೂಪಾಯಿ ನೋಟು - ಇದನ್ನು ಕೈಯಿಟ್ಟು ತೆಗೆದ ಸೋಮ ಆ ಮನುಷ್ಯನ ಮುಂದೆ ಎಸೀತು. ಕೇಳಿದವನು, ಜತೆಯವರು ಥರ ಥರ ನಡುಗೋಕೆ

ಸುರುಮಾಡಿದ್ರು. ತಪ್ಪಾತು ಅಂತ ನಾಕು ನಾಕು ಸಾರಿ ಅಡ್ಡಬಿದ್ದ. ಸೋಮನ್ನೇ ಪರೀಕ್ಷೆ ಮಾಡೋಕೆ ಬಂದ ಅಂಥ ಸಿಟ್ಟಾಗಲಿಲ್ಲ ಮೊದ್ಲು ನೀನು ಊರು ಬಿಡು ಅಂತ ಕಳಿಸ್ತು. ಮುಂದೆ ಆ ಮನುಷ್ಯನ ಜೀವ ರಕ್ಷಣೆಯಾಯ್ತು. ಎಲ್ಲಾ ತೊಂದರೆ ಕಳಕೊಂಡು ಆಮೇಲೆ ಬಂದು ಅವನು ಅಮ್ಮನ ಸೇವೆ ಮಾಡಿಕೊಂಡು ಹೋದ.

ಇನ್ನೊಂದು ಬಾರಿ ಚಿತ್ರದುರ್ಗದ ಕಡೆಯ ಒಬ್ಬ ಮನುಷ್ಯ ಅವನಿಗೆ ನಮ್ಮ ಸೀಮೆಯಿಂದ ಹೆಣ್ಣುಕೊಟ್ಟಿದೆ. ಏನೋ ದ್ವೇಷದಿಂದ ಆಗದವರು ಅವನಿಗೆ ಮಾಟ ಮಾಡಿಸಿ ಬಿಟ್ಟರು. ಅವನು ಒಂದು ರೀತಿ ಹುಚ್ಚು ನಾಯಿಯಂತಾದ. ಹಾದಿ ಬೀದೀಲಿ ಸಿಕ್ಕಸಿಕ್ಕವರನ್ನು ಹಲ್ಲಗೆ ಕಡೀತಿದ್ದ. ಜನ ಅಡ್ಡಾಡೋದೇ ಕಷ್ಟ ಆತು. ಕೊನಿಗೆ ಅವನ್ನ ಹಗ್ಗದಿಂದ ಕಟ್ಟಿದರು, ಕಾದರು. ಹಿಂಗೇ ಏಸೋ ದಿನ ಕಳೆದ ಮೇಲೆ ಯಾರೋ ಹೇಳಿದರಂತೆ, ಬನಸಿಹಳ್ಳಿ ಏಕನಾಥವ್ವನಿಗೆ ಶರಣಾಗಿರಿ ಅಂತ. ಅವರು ಬಂದು ಕೈ ಮುಕ್ಕೊಂಡು ನಿಂತರು. ಸೋಮ ಹೊರಡು, ಒಂದು ಹೊಸಕುಂಭ ತರಿಸಿ, ನೀರು ತುಂಬಿಸಿ, ಆ ಮಾಟದ ದುಷ್ಟಶಕ್ತಿಯನ್ನು ಕುಂಭದೊಳಗೇ ಬಂಧಿಸಿ, ಮಾಟಕ್ಕೆ ಗುರಿಯಾದವನ ಮೇಲೆ ಹೊರಿಸಿ, ಊರಾಚೆ ಕರೆದುಕೊಂಡು ಹೋಯ್ತು, ಅದನ್ನು ವಿಸರ್ಜಿಸಿತು. ಮುಂದೆ ಆ ಮನುಷ್ಯ ನಮ್ಮಂತೆ ನೇರ್ಪಾದ! ಇಂತಾ ಏನೋ ಸಂಗತಿಗಳು ನಡೆದೇ ಹೋಗಿವೆ.

**ಕುಣಿತ ನೋಡಲು ಸೇರುವ ಜನ**

ಮಾಘಮಾಸದ ದ್ವಾದಶಿಯ ದಿನ ಏಕನಾಥಮ್ಮನ ಪರಿಷೆ ಪ್ರಾರಂಭ. ಮೊದಲನೇ ದಿನ ಮದುವಣಿಗ ಶಾಸ್ತ್ರ ಎರಡನೇ ದಿನ ಅಮ್ಮನ ಬಾನ, ಊರೊಳಗೆ ಉತ್ಸವ. ಮೂರನೇ ದಿನ ಪೂಜೆ, ಎಡೆಬಿಡಾರ, ರಾತ್ರಿ ಮಾತ್ರ ಬಲು ವಿಶೇಷ. ಏಳೆಂಟು ಪ್ರಾಯದ ಸಣ್ಣಮಕ್ಕಳ ತಲೆಮೇಲೆ ದೇವರ ಕೇಲುಗಳನ್ನಿಟ್ಟು ಉತ್ಸವದಲ್ಲಿ ಮರೆಸಲಾಗುತ್ತೆ, ಅಂದ್ರೆ ಆಡೋ ಮಕ್ಕಳ ತಲೆ ಮೇಲೆ ದೇವಿ ಭಾರವಾಗದಂಗೆ ಕೂತು ಮೆರವಣಿಗೆಯಲ್ಲಿ ಬರುವುದೇ ಒಂದು ಸೊಗಸು. ಕೇಲು ಅಂದ್ರೆ ಮಣ್ಣಿನಿಂದ ಮಾಡಿದ ಗಿಂಡಿಗಳು, ಅವಕ್ಕೇ ಮುಚ್ಚಳ ಹಾಕಿ ಮೆತ್ತಿಬಿಡುತ್ತಾರೆ. ಕೇಲಿನ ಗಿಂಡಿ ಮಾಡಲು ಶುದ್ಧ ಮಣ್ಣು ತಂದು ಹಸುವಿನ ಹಾಲು, ಎಳನೀರಿನಿಂದ ಅದನ್ನು ಕಲೆಸಬೇಕು. ಒಂದು ಹೊತ್ತಿನ ಊಟದಿಂದ ಇದ್ದು ಮಡಿಯಲ್ಲಿ ಮಾಡಬೇಕಾದ ಈ ಕೆಲಸ ದೇವಪುರದ ಕುಂಬಾರರದು. ಇವುಗಳ ಒಳಗೆ ಲಾಗಾಯ್ತಿನಿಂದಲೂ ಬಂದಂತ ಸಾಲಿಗ್ರಾಮಗಳು, ಅಮ್ಮನ ವಾಲೆ ಭಾಗ್ಯ ಇಂಥ ಅನರ್ಘ ವಸ್ತುಗಳಿರುತ್ತವೆ. ಇವನ್ನು ಮುಚ್ಚಳ ಮುಚ್ಚಿ ಮೆತ್ತಗೆ ಮಾಡಿದರು ಅಂದ್ರೆ ಮುಗೀತು ಯಾರೂ ನೋಡೋ ಹಂಗಿಲ್ಲ, ನೋಡೋಕು ಬರೋಲ್ಲ. ಇವು ವರ್ಷವೆಲ್ಲಾ ಅಮ್ಮನ ಗುಡಿಯಲ್ಲಿ ಗೂಡಿನಲ್ಲಿರುತ್ತವೆ. ಇವಕ್ಕೂ ಪೂಜೆ ನಡೆಯುತ್ತೆ, ಆದರೆ ಹೊರಗೆ ಹೊರಡಲ್ಲ,

ವರ್ಷಕ್ಕೆ ಒಂದೇ ಸರತಿ ಇವು ಹೊರಕ್ಕೆ ಬರ್ತವೆ, ಇದೇ ಕೇಲು ಬಾನದ ಉತ್ಸವ. ಇವೇನು ಮಣ್ಣಿನ ಗಿಂಡಿಗಳು ಅನ್ನೋ ಹಂಗಿಲ್ಲ ಸಾಮಾನ್ಯವಾದವಲ್ಲ, ದೇವಿಯ ಶಕ್ತಿಯೇ ಅಲ್ಲಿರುತ್ತೆ. ಈ ಗಿಂಡಿಗಳು ಮುಕ್ಕಾದರೆ ಬಲುಕಷ್ಟ, ಮತ್ತೆ ಹೊಸದಾಗಿ ಮಾಡಿಸಬೇಕು. ನನ್ನ ಸರ್ವಿಸಿನಲ್ಲಿ ಒಂದು ಸರತಿ ಮಾಡಿಸಿದ್ದಾಗಿದೆ. ಕೂದಲೆಳೆಯೋಟೂ ಕ್ರಮ ತಪ್ಪದಂಗೆ ನಡೀಬೇಕು ಇದು. ಸ್ವಲ್ಪ ಹೆಚ್ಚು ಕಮ್ಮಿ ಏಳೆಂಟು ಸಾವಿರ ರೂಪಾಯಿ ಖರ್ಚು ಬರುತ್ತೆ ಇದಕ್ಕೆ ಅಪರೂಪದ ಕಟ್ಟೆಯ ಈ ಉತ್ಸವ ಆದ ಮರುದಿನ ಸಣ್ಣ ಉತ್ಸವ. ಐದನೇ ದಿನ ಬೆಳಿಗ್ಗೆ ಮೂರು ಘಂಟೆಯಿಂದಲೇ ರಥೋತ್ಸವ, ಆರನೇ ದಿನ ರಾತ್ರಿ ಹತ್ತು ಘಂಟೆ ಸುಮಾರಿಗೆ ಸಿಡಿ ಆಡುವುದು, ಮಾರನೇ ದಿನ ಮಧ್ಯಾಹ್ನ ಮೂರು ಘಂಟೆಗೆ ಹಗಲು ಪಲ್ಲಕ್ಕಿ ಉತ್ಸವ. ಕೊನೇ ದಿನ ಅಂದ್ರೆ ಒಂಬತ್ತನೇ ದಿನ ಬೆಳಿಗ್ಗೆ ಊರೊಳಗಿನ ಅಮ್ಮನ ಗುಡಿಯಲ್ಲಿ ಬೆಲ್ಲದ ರಾಶಿ ಜರುಗುತ್ತೆ. ಹರಕೆ ಮಾಡಿಕೊಂಡೋರು, ಸೀಮೆಯ ಭಕ್ತರು ತಮಗೆ ಇಷ್ಟ ಬಂದಷ್ಟು ಬೆಲ್ಲ ತಂದು ಗುಡೀಲಿ ರಾಶಿ ಹಾಕ್ತಾರೆ. ಇದನ್ನು ಕ್ರಮವಾಗಿ ಕೈವಾಡದವರಿಗೆ ಹಂಚಿಕೆ ಮಾಡುತ್ತಾರೆ.

ಹತ್ತನೇ ದಿನ ದೇವಿಯ ಮೂಲಸ್ಥಾನದ ಗುಡಿಯ ಪೌಳಿಯೊಳಗೆ ಗಾವುಮರಿ ಸಿಗಿಯುವಂಥ ಕಟ್ಟಳೆ ಜರುಗುತ್ತೆ, ಪೋತರಾಜ ಮೇಕೆಮರಿಯ ಕುತ್ತಿಗೆಯನ್ನು ತನ್ನ ಹಲ್ಲುಗಳಿಂದಲೇ ಕಿತ್ತು ಕಿತ್ತು ತುಂಡು ಮಾಡುವ ಕ್ರಿಯೆ. ಇದೇ ಗಾವುಮರಿ, ಇದು ನಡೆಯುವಾಗ ಏಕನಾಥವ್ವನಿಗೆ ಕಾಣದಂಗೆ ಒಂದು ಬಿಳೀ ಪರದೆ ಹಿಡಿದಿರುತ್ತಾರೆ. ಯಾಕೇಂದ್ರೆ ಈ ದೇವಿಗೆ ಕುರಿ, ಮೇಕೆ ಇಂಥಾ ಯಾವುದೇ ರಗುತ ಬಲಿಯಿಲ್ಲ . ಇವೆಲ್ಲಾ ಏನಿದ್ರೂ ಏಕನಾಥವ್ವನ ಪರಿವಾರದಲ್ಲಿರುವ ಮಾತಂಗಮ್ಮ, ಮರಾಳಮ್ಮನಿಗೆ ಮತ್ತು ಸೋಮನಿಗೆ ಮಾತ್ರ. ಇಲ್ಲಿಗೆ ವರ್ಷದ ಜಾತ್ರೆ ಕಾರ್ಯಕ್ರಮ ಮುಗಿದಂತೆ. ಇಷ್ಟೂ ದಿನ ನೆಂಟರು, ಇಷ್ಟರು, ಆಕಡೆ ಈ ಕಡೆ ಭಕ್ತಾದಿಗಳು ಊರಿಗೆ ಬರಲೇ ಇದ್ದಾರೆ, ಹೋಗ್ತಾಲೇ ಇದ್ದಾರೆ. ಹೆಚ್ಚುಕಮ್ಮಿ ಪ್ರತಿದಿನವೂ ಅಮ್ಮನಿಗೆ ವಿಶೇಷ ಪೂಜೆಗಳು ನಡೆಯುವ ಈ ದಿನಗಳಲ್ಲಿ ಸೋಮನದೇ ಕಾರುಬಾರ. ದೇವರು ಶೃಂಗಾರವಾಗಿ ಊರು ಬೀದಿ ಮೇಲೆ ಹೊರಟಾಗ ಜನ ಮುತ್ತಿಕೊಂಡುಬಿಡ್ತಾರೆ. ಕೈ ಕಾಲು ಆಡಿಸಲು, ನಿಲ್ಲಲು ಮೈದಾನವಾಗಿರುವ ಒಂದು ಜಾಗದಲ್ಲಿ ಮಣೇವು ಅಂತ ಹಾಕುವರು. ಇದನ್ನು ಧೂಳೆಡೆ ಎಂದೂ ಕರೆಯುವುದಿದೆ. ಮೂರು ಬಾಳೆ ಹಣ್ಣು ಸುಲಿದು, ಅವುಗಳ ಸಿಪ್ಪೆಮೇಲೇ ಸುಲಿದ ಹಣ್ಣನ್ನು ಇಡ್ತಾರೆ. ಆ ಹಣ್ಣಿನ ಮೇಲೆ ಸಕ್ಕರೆ ಹಾಕುವರು. ಉತ್ಸವದಲ್ಲಿರುವ ಅಮ್ಮನಿಗೆ ಆರತಿ ಆಗುತ್ತಿದ್ದಂಗೆ ವಾಲಗ, ಉರುಮೆ ಜೋರಾಗ್ತವೆ. ಸೋಮ, ಪೋತರಾಜನನ್ನು ನೂಕಿಕೊಂಡು ಬಂದು ಆ ದೂಳೆಡೆ ತಿನ್ನು ಅಂತ ಕೆಡವುತ್ತೆ, ಪೋತರಾಜನಾದರೋ ಕೈ ಹಾಕದೆ ನೆಲದ ಮೇಲಿರುವ ಆ ಬಾಳೆ ಹಣ್ಣುಗಳನ್ನು ಬಾಯಿ ಹಾಕಿ ತಿನ್ನುವನು. ಇಲ್ಲೆಲ್ಲಾ ಸೋಮನ ಕುಣಿತವೇ ಕುಣಿತ, ಇಂಥಾ ಒಂದೊಂದು ಪ್ರಕ್ರಿಯೆಗಳು ಆರಂಭವಾದಾಗ, ಸುಲಲಿತವಾಗಿ * ಮುಗಿಯುವಾಗ ಸೋಮ ಕುಣಿಯುತ್ತೆ, ತೇರಿನ ಮೇಲೆ ಹತ್ತಿ ಕುಣಿಯುತ್ತೆ, ನೆಲದಲ್ಲಿ

ನೆಟ್ಟಿರುವ ಮೊಳದ ಉದ್ದುದ್ದ ಚಪ್ಪಡಿ ಕಲ್ಲಿನ ಮೇಲೆ ನಿಂತು ಕುಣಿಯುತ್ತೆ. ವಾದ್ಯದವರು ನುಡಿಸುವ ಆರೇಳು ಮಟ್ಟು, ತಾಳಗಳಿಗೆ ಲಗತ್ತಾಗಿ ಹೆಜ್ಜೆ ಹಾಕಿ ಕುಣಿಯುವುದನ್ನು ನೋಡೋಕೇ ಜನ ಸೇರುತ್ತೆ. ಒಂದೊಂದು ಕೆಲಸಗಳು ಮುಗಿದದ್ದು ಸೋಮನಿಗೆ ಬಲು ಸಂತೋಷದ ವಿಷಯ. ಯಾಕೇಂದ್ರೆ ಇವೆಲ್ಲಾ ಜರುಗಿಸಬೇಕಾದ ಜವಾಬ್ದಾರಿ ಸೋಮನದು. ಅಮ್ಮನ ದೂತನಾಗಿ ಕಂಕಣ ಕಟ್ಟಿ ಕೊಂಡ ಸೋಮ ಧನ್ಯವಾಗಿ ಬಿಡುತ್ತೆ. ಇಲ್ಲಿ ಅಬ್ಬರ, ಆರ್ಭಟ, ಆವೇಶಗಳು ಬಹಳ.

ಕುಣಿಯುವಾಗ ಮಾತ್ರ ತಾಳದ ಮಟ್ಟು ಮತ್ತೊಂದು ಎಲ್ಲದರ ಅರಿವೂ ನಮಗಿರುತ್ತೆ, ನಾಗಸ್ವರ, ಉರುಮೆ, ದೋಣು, ಹಲಗೆ ಇಂಥಾ ಅನೇಕ ವಾದ್ಯಗಳಿಗೆ ಇವು ಒಂದೊಂದೇ ಇರಲಿ, ಎಲ್ಲವೂ ಮೇಳವಿಸಲಿ, ಇದಕ್ಕೆ ಸರಿಯಾಗಿ ಹೆಜ್ಜೆಹಾಕಿ ಕುಣಿಯುತ್ತವೆ. ಹಾಗೆ ಕುಣಿದಾಗಲೇ ಚಂದ, ಬಲುಚಂದ ಅಂತ ಅನ್ನಿಸೋದು. ಇಲ್ಲವಾದರೆ ವಾದ್ಯ, ತಾಳ ಎತ್ತಲಗೋ, ಸೋಮನ ಕುಣಿತ ಎತ್ತಲಗೋ ಆಗಿ ನೋಡೋರಿಗೆ ಇರಲಿ, ವಾದ್ಯ ಮಾಡೋರಿಗೆ, ಬಡಿಯೋರಿಗೆ ಸೋಮನ ಬಂಕ ಹಾಕಿದವರಿಗೆ ಒಂದು ತರಾ ಮಕರಸುತ್ತು ಆಗುತ್ತೆ. ಸಾಮಾನ್ಯವಾಗಿ ಇಂಥದ್ದು ಆಗಲ್ಲ. ಕುಣಿತ ನಿಧನಿಧಾನವಾಗಿ ತಾರಕಕ್ಕೆ ಹೋಗುತ್ತೆ, ಮತ್ತೆ ನಿಧಾನವಾಗಿ ಇಳಿಯುತ್ತೆ. ಇದಕ್ಕೆಲ್ಲಾ ಒಂದು ಕ್ರಮ, ರೀತಿ ಇದ್ದೇ ಇದೆ. ಪುಸ್ತಕದಲ್ಲಿ ಬರೆದಿಲ್ಲ. ವರ್ಷರಡು ವರ್ಷ ಯಾರೂ ತಿದ್ದಿ ತೀಡಿ ಕಲಿಸೋಲ್ಲ. ಆದರೇನು ಕ್ರಮವಿದ್ದೇ ಇದೆ. ಆಗಲೇ ತಿಳಿಸಿದಂತೆ ಮೈಯೆಲ್ಲಾ ಕಣ್ಣಾಗಿ, ಕಿವಿಯಾಗಿ ನೋಡಿ, ಕೇಳಿ ಕಲೀಬೇಕು. ಇದನ್ನು ಕಲೆ ಅಂತೀರೇನೋ, ನನ್ನ ದೃಷ್ಟಿಯಲ್ಲಿ ಆಚರಣೆ.

ಊರುಗಳಲ್ಲಿ ದೇವರು ಕುಣಿಯುವುದನ್ನು ನೋಡಿದ್ದೀರಿ. ಕೆಲವು ದೇವರುಗಳನ್ನು ಇಬ್ಬರು ಕೈಯಲ್ಲಿ ಹಿಡಿದರೆ, ಇನ್ನೂ ಕೆಲವನ್ನು ಒಬ್ಬರೇ ತಲೆ ಮೇಲೆ ಹೊರುತ್ತಾರೆ. ಇನ್ನು ಕೆಲವು ದೇವರು ಪಲ್ಲಕ್ಕಿಯಲ್ಲಿ, ಅಡ್ಡಣಿಕೆಯಲ್ಲಿ, ಮಂಟಪದಲ್ಲಿ ಕುಳಿತುಕೊಳ್ಳುತ್ತವೆ. ಇವನ್ನು ನಾಲ್ಕು ಆರು, ಎಂಟು ಜನ ಹಂಸಪಾದಗಳನ್ನು ಹಿಡಕೊಂಡು ಹೊತ್ತು ಮೆರೆಸುವರು. ಇಬ್ಬರು ಹಿಡಿಯುವಾಗ, ಒಬ್ಬರೇ ತಲೆ ಮೇಲೆ ಹೊತ್ತಾಗ ಕುಣಿತ ನೋಡುವಂತಿರುತ್ತೆ. ಹಿಡಿದಿರುವ ದೇವರು ಕೆಳಗೆ ಬಿದ್ದೇ ಬಿಡು ಎಂಬಂತೆ ತುದಿಬೆರಳಲ್ಲಿ ದೇವರ ಪೀಠ ಹಿಡಕಂಡು ಮೇಲಕ್ಕೆ ಎತ್ತುವುದೇನು, ಕೆಳಕ್ಕೆ ಬಗ್ಗಿಸುವುದೇನು, ವಾಲಾಡಿಸುವುದೇನು. ಪಲ್ಲಕ್ಕಿ ಅಡ್ಡಣಿಕೆಗಳಲ್ಲಿ ಕುಳಿತ ದೇವರುಗಳು ಮನಸೋ ಇಚ್ಚೆ ಕುಣಿಯುವಂತಿಲ್ಲ. ಮುಂದೆ, ಹಿಂದೆ, ಎಡಬಲ ಹೋಗೋವಾಗ ಹೊತ್ತಿರುವ ಅಷ್ಟೂ ಜನ ಸೂಕ್ಷ್ಮವಾಗಿರಬೇಕು. ಹೀಗೆ ಪಲ್ಲಕ್ಕಿಯ ದೇವರುಗಳು ಮೆಲ್ಲಗೆ ಆಕಡೆ ಈಕಡೆ ವಾಲಾಡುತ್ತವೆ. ಇದಕ್ಕೂ ಕೂಡಾ ವ್ಯಾಖ್ಯಾನವಿದೆ! ದೇವರು ಹಿಂಗೇ ಹೇಳ್ತಾ ಇದೆ ಎಂದು ಅರ್ಥೈಸುತ್ತಾರೆ. ನಮ್ಮ ರಾಜ್ಯದಲ್ಲಿ ಮಹಿಮಾವಂತ ಪಲ್ಲಕ್ಕಿಗಳಿವೆ. ಮಾಡಿಕೊಂಡ ಕುರುವು ತೋರಿಸುವ ಪಲ್ಲಕ್ಕಿಗಳು ಅಲ್ಲಿ ಇಲ್ಲಿ ಇವೆಯೆಂದು ಕೇಳಿದ್ದೇನೆ. ನಮ್ಮ ಮಗ್ಗುಲ ಜಿಲ್ಲೆ ಚಿಕ್ಕಮಗಳೂರು ಇಲ್ಲಿನ ಹೂಲಿಕೆರೆ ಪಲ್ಲಕಿಯ ಬಗ್ಗೆ ಭಾರೀ ಹೇಳ್ತಾರೆ. ಇದು ಕುರುವು ತೋರಿಸುತ್ತದೆಯಂತೆ.



ಇಂಥಾ ಯಾವುದೇ ಒಂದು ಪದ್ಧತಿ ಉಳಿದುಕೊಂಡು ಬರೋದು ಸುಲಭವಲ್ಲ. ಹೊರುವ ಜನ ತಮ್ಮ ಇಷ್ಟದಿಂದಲೇ ಸಿದ್ಧವಾಗಿರಬೇಕು. ಇದಕ್ಕೆಲ್ಲಾ ಕಾನೂನು, ಕಟ್ಟಳೆ, ದುಡ್ಡು ಕಾಸು ಏನೂ ಇಲ್ಲ. ನಮ್ಮ ನಮ್ಮ ಮನಸ್ಸು ವಿವೇಕದ ಮೇಲೇ ಇವೆಲ್ಲಾ ನಡಕಂಡು ಹೋಗಬೇಕಷ್ಟೆ. ನೀವು ಯಾವುದಾರೂ ಒಂದು ದೊಡ್ಡ ಗುಡಿಗೆ ಹೋಗ್ರಿ, ಅಲ್ಲಿನ ಮೂಲೆಯಲ್ಲಿ ಎರಡು ನಗಾರಿ ಕಾಣ್ತವೆ, ಇವಕ್ಕೆ ಚರ್ಮ ಕಟ್ಟಿರಲ್ಲ, ಬಡಿಯೋರಿಲ್ಲದೆ ಏಸೋ ವರ್ಷಗಳಿಂದ ಸುಣ್ಣದ ಗುಡಾಣ ಮಾಡಿಕೊಂಡಿದ್ದಾರೆ! ಇನ್ನೂ ಎಷ್ಟೋ ಊರುಗಳಲ್ಲಿ ದೇವರನ್ನು ಹೊರಗೆ ಹೊರಡಿಸುವುದೇ ಪಜೀತಿ. ಅದನ್ನು ಹಿಡಿಯೋರು, ಹೊರೋರು ಸಿಕ್ಕೋದೇ ಇಲ್ಲ. ಇವು ಯಾವೂ ಸಂಬಳಕ್ಕೆ ಕೂಲಿಗೆ ನೇಮಕ ಮಾಡಿದ ಕೆಲಸಗಳಲ್ಲ. ಹಿಂದೆಲ್ಲಾ ಜನ ದೇವರನ್ನು ಹಿಡಿಯೋದು ಒಂದು ಜವಾಬ್ದಾರಿ, ಇದು ಗ್ರಾಮದ ಎಲ್ಲರ ಜವಾಬ್ದಾರಿ ಅಂತಾ ತಿಳುಕಂಡಿದ್ರು. ಯಾರೇ ದೇವರ ಅಪ್ಪಣೆ, ಹೇಳಿಕೆ ಕೇಳಲು ಬಂದ್ರೆ ತೊಂದ್ರೆ ಆಗ್ತಿರಲಿಲ್ಲ. ಅವರು ಊರಿನವರಿರಲಿ, ಪರ ಊರಿನವರಿರಲಿ, ಆಗಿಂದಾಗಲೇ ದೇವರನ್ನು ಹೊರಡಿಸಿ ಅಪ್ಪಣೆ ಮಾಡಿಸುತ್ತಿದ್ದರು. ಬಲು ಕಷ್ಟ ಬಂದೈತೆ, ನಿನ್ನ ದಮ್ಮಯ್ಯಾ ಅಂತೀನಿ, ಒಂದೀಟು ದೇವರು ಹಿಡಕ ಬಾರಪ್ಪ ಅಂತಾ ಬೇಡಿಕೋ ಬೇಕಾಗಿರಲಿಲ್ಲ. ಈಗ ಹಂಗಾಗಿಲ್ಲ, ಜನ ಇಂಥದ್ದಕ್ಕೆ ಬರೋದೇ ಕಮ್ಮಿಯಾಗೈತೆ. ನಮ್ಮ ಬದುಕು ಬಾಳು ಬಿಟ್ಟು ಎಲ್ಲಿ ಬರಕಾಗೈತೆ, ಹೋಗಪ್ಪ ಅಂತಾರೆ, ಹಂಗೂ ಬಂದರೆ ದೇವರು ಎತ್ತಲಾಗೆ ತೋರಿಸುತ್ತೆ ಅದರ ವಾಸರ ಎಲ್ಲಿ ಏನೂ ಅರಿವಿಲ್ಲದೇ ಅದನ್ನು ಹಿಡಕೊಂಡು ಗರುಡಗಂಬದ ಹಾಗೆ ನಿಂತು ಬಿಡ್ತಾರೆ. ಈ ತರಹ ಆದ್ರೆ ಅಪ್ಪಣೆ ಆದಂಗಾತಾ? ಇವೆಲ್ಲಾ ಅನುಭವ ತಗಂಡಿರಬೇಕು, ರಾಸಿಯಿಂದ ದೊಡ್ಡವರು ಮಾಡೋದನ್ನು ನೋಡಿರಬೇಕು. ಸುಮ್ಮನೆ ಕರೆಸೋಮನ್ನ ಹೊತ್ತಗಂಡರೆ ಸೋರೆ ಕವುಚಿಕೊಂಡಂತೆ ಆಗುತ್ತೆ. ಅದರ ಅಳಿವು ಬಿಳುವು, ಮರ್ಮ ಹಿಡದಿರಬೇಕು. ಇವೆಲ್ಲಾ ಸಾವಿರಾರು ವರ್ಷಗಳಿಂದ ನಡಕೊಂಡು ಬಂದವೆ. ನಮ್ಮ ಪೂರ್ವಿಕರು ಬುದ್ದಿ ಇಲ್ಲದೆ ಮಾಡಿದಾ, ಖಂಡಿತ ಇಲ್ಲ. ಇವನ್ನು ಶಾಸ್ರೋಕ್ತವಾಗಿ ಮಾಡಿದ್ದಾರೆ, ತಮಗೆ ಬೇಕಾದ್ದನ್ನು ಇವುಗಳಿಂದ ಪಡೆದು ಕೊಂಡಿದ್ದಾರೆ. ಕೊಡದೆ ಇರೋ ದೇವರನ್ನು ಜನ ಇಟ್ಟುಕೊಳ್ಳೋದುಂಟೆ, ಹೇಳಿ? ನಾವುಗಳೇ ಏನೇ ಆವುಟ ಕಟ್ಟಿ ಮೆರೆಸೋದಾಗಿದ್ರೆ ಇಷ್ಟು ವರ್ಷಗಟ್ಟಳೆ ನಡಕೊಂಡು ಬರೋಕಾಗಿತ್ತೆ? ಹಿರಿಯರು ಗುಡಿ ಗುಂಡಾರಗಳಿಗೆ ಅಂತ ಎಷ್ಟು ತೋಲೆ ಆಸ್ತಿ ಪಾಸ್ತಿ, ನಗನಾಣ್ಯ ಮಾಡಿದ್ದಾರೆ, ಆ ರೀತಿ ರಿವಾಜುಗಳೇನು. ಇಂದಿನ ದಿನಮಾನಗಳಲ್ಲಿ ಇವು ಕೈ ತಪ್ಪುತ್ತಿವೆ, ನಿಜ. ದೇವರು ಪಟ್ಟಕ್ಕೆ ಕೂತುಕೊಳ್ಳೋಕೆ ಮೊದಲು ಗಂಗಾಸ್ನಾನ ಮಾಡಿಸೋಕೆ ನದಿ, ತೊರೆ, ಹಳ್ಳಗಳಿಗೆ ಅವನ್ನು ಹೊತ್ತಯ್ಯಬೇಕು. ದೇವರ ಆಯುಧಗಳು, ಪೂರ್ವದ ಹಿತ್ತಾಳೆ, ತಾಮ್ರದ ಕುದುರೆ, ಆನೆಗಳನ್ನು ಹೊತ್ತು ಹೋಗಬೇಕು. ಇವೆಲ್ಲಾ ಸಣ್ಣ ವಿಷಯಗಳೆಂದು ಕಾಣಬಹುದು. ಆದರೆ ಈಗಿನ ಕಾಲದಲ್ಲಿ ಯಾರು ತಮ್ಮ ಮನೆತನದ ಬದುಕು ಬಾಳು ಬಿಟ್ಟು ದೇವರ ಕೆಲಸಕ್ಕೆ ಬಾರೆ ಯೋಚನೆ ಮಾಡಿ, ಪಟ್ಟಕ್ಕೆ ಕೂತುಕೊಳ್ಳುವುದಕ್ಕೆ ಅಲಂಕಾರ

ಮಾಡಬೇಕು. ಬೆಳ್ಳಿಯ ಚತ್ರಿ, ಪಕ್ಕೆ ಹೂವುಗಳಿಗೆ ಕಿರುಬೆಳ್ಳಿಗಿಂತಾ ಸಣ್ಣದಾಗಿ ಬಿದರಕಡ್ಡಿ ಹೆರೆದು ಸಿಗಿಸಬೇಕು. ಹೊರಗೆ ಹಿಡಿಯುವ ಭೂಚಕ್ರದ ಕೊಡೆ, ಸೂರ್ಯಪಾನ, ಚಂದ್ರಪಾನಗಳಿಗೆ ಕಳಸ ಸಿಕ್ಕಿಸಿ ಓಜುಮಾಡಬೇಕು. ಹೌದು ಇವೆಲ್ಲಾ ಯಾರು ಮಾಡಬೇಕು. ವರಮಾನ ದಪ್ಪನಾಗಿ ಬರೋ ಗುಡಿಯಲ್ಲಾದರೆ ಅಡ್ಡಿಯಿಲ್ಲ. ಹಳ್ಳಿ ಊರುಗಳ ನಮ್ಮ ದೇವರುಗಳ ನಿತ್ಯ ಕೆಲಸ ಮಾಡುವ ನಮ್ಮ ಸ್ಥಿತಿಗತಿ ಹೇಳಿಕೊಳ್ಳುವಂಥದಲ್ಲ. ಅದರಿಂದಲೇ ಎಷ್ಟೋ ದೇವರ ಸೋಮಗಳ ಮುಖವಾಡಕ್ಕೆ ಗುಡಿಯಲ್ಲಿ ಒಂದು ಊದುಕಡ್ಡಿ ಬೆಳಗ್ತಾರೆ ಅಷ್ಟೆ. ಅದಕ್ಕೆ ಬಂಕ ಕಟ್ಟಿ ಕುಣಿಯುವರೇ ಇಲ್ಲ! ನಮ್ಮೂರಿನಂಗೆ ಅಲ್ಲೊಂದು ಇಲ್ಲೊಂದು ಸೋಮಗಳು, ಕೈವಾಡದವರು ಇಂದಿಗೂ ತಪ್ಪದೆ ನಡಕೊಂಡು ಬಾ ಇವೆ. ಏನೋ ಅಮ್ಮನ ಅನುಗ್ರಹ ಇರೋವರ್ಗು ಹಿಂಗೇ ನಡೆಯುತ್ತೆ. ಅಂತೂ ಈಚೆಗೆ ಸೂರ್ಯನ ಬಣ್ಣ ಮಾಸಿದರೆ, ಮುಖ ಸುಲಿದರೆ ಅದನ್ನು ಮೊದಲಿನಷ್ಟು ಚೆಂದವಾಗಿ ಮಾಡೋ ಜನಾನೇ ಸಿಕ್ತಾ ಇಲ್ಲ. ನಾಲ್ಕೈದು ಸಾವಿರ ರೂಪಾಯಿ ಖರ್ಚುಮಾಡಿ ಬಣ್ಣ ಮಾಡಿಸಿದ್ರೂ ವರ್ಷ ಎರಡು ವರ್ಷದಾಗೆ ಮತ್ತೆ ಮಾಸಲಾಗುತ್ತೆ, ಉದುರೇ ಹೋಗುತ್ತೆ ಅಂದ್ರೆ ಅದಿನ್ನೆಂಥಾ ಬಣ್ಣ! ಅರದು, ರುಬ್ಬಿ ಬಣ್ಣ ಮಾಡು ಮಾಡಿಕೊಳ್ಳೋ ಜನಾನೂ ಇಲ್ಲ, ಆ ಕ್ರಮವೂ ಈಗಿನವರಿಗೆ ಗೊತ್ತಿಲ್ಲವೆಂದೇ ಕಾಣುತ್ತೆ. ಡಬ್ಬದ ಪೆಯಿಂಟ್ ತಂದು ಕಿಟಕಿ, ಬಾಗಿಲಿಗೆ ಬಳದಂಗೆ ಬಳೆದರೆ ಅದು ಯಾತಕ್ಕೆ ಆದೀತು. ಎಷ್ಟೋ ಕಡೆ ಐವತ್ತು ವರ್ಷದ ಹಿಂದೆ ಮಾಡಿದ ಬಣ್ಣಗಳು ಇನ್ನೂ ಲಕ ಲಕ ಅಂತ ಹೊಳೀತಿವೆ. ಒಟ್ಟಿನಲ್ಲಿ ಅವೆಲ್ಲಾ ಹೇಳಿದ್ರೆ ಕತೆ ಅಂದಕಂತೀರಿ. ಆದರೆ ಏನು ಮಾಡಲಿ ಅದನ್ನೆಲ್ಲಾ ಹೇಳಬೇಕು ಅನ್ನಿಸುತ್ತೆ.

**ಏಕನಾಥವ್ವನ ಸೇವೆ**

ನಾನೇನು ಮುಪ್ಪಿನ ಮುದುಕ ಅಲ್ಲ ನಿಜ. ಆದರೆ ನಲವತ್ತೊಂದು ವರ್ಷ ಸೋಮನ್ನ ಹೊತ್ತು ಅಮ್ಮನ ಸೇವೆ ಮಾಡಿದ್ದೀನಿ. ನನ್ನ ನೆನಪಿನ ಪ್ರಕಾರ ನನ್ನ ವಂಶದ ಹಿಂದಿನ ಮೂರು ತಲೆಯವರು ಅಪ್ಪ, ಅಜ್ಜ, ಮುತ್ತಜ್ಜ ಯಾರೂ ಇಷ್ಟೊಂದು ವರ್ಷ ಸೋಮನ್ನ ಹಾಕಲಿಲ್ಲ. ಅದೇನೋ ಅಮ್ಮ ನನ್ನ ಮೇಲೆ ವಿಶೇಷ ಪ್ರೀತಿ ತೋರಿಸಿ ಇಷ್ಟು ವರ್ಷ ದೂತನ್ನ ಮಾಡಿಕೊಂಡಳು. ಈಚೆಗೆ ಅಂದ್ರೆ ಎರಡು ವರ್ಷದ ಹಿಂದೆ ನನ್ನ ಮಗ ಜವಾಬ್ದಾರಿ ಹೊತ್ತುಕೊಂಡ. ನನ್ನ ಇಷ್ಟು ವರ್ಷದ ದೇವರ ಕೆಲಸದಲ್ಲಿ ಬೇಜಾವಾಬ್ದಾರಿ ಮಾಡಿಲ್ಲ. ಜನಕ್ಕೆ ತೊಂದ್ರೆ ಅಂದಾಗ ಸೋಮನ್ನ ಹೊತ್ತಿದೇನೆ. ನನ್ನ ಮನೆತನಕ್ಕೆ ಸೂತಕ, ಮುಟ್ಟು ಬಂದಾಗ ಅಷ್ಟು ಬಿಟ್ಟರೆ ಉಳಿದ ಎಲ್ಲಾ ಹೊತ್ತಿನಲ್ಲೂ ನಾನು ಕೆಲಸಮಾಡಿದ್ದೀನಿ. ಸೂತಕ ಬಂದಾಗ ಅನಿವಾರ್ಯ. ಬೇರೆಯವರು ಸೋಮನ್ನ ಹಾಕೋ ಹಾಗಿಲ್ಲ, ಮೊದಲು ಸೂತಕ ತಕ್ಕೊಂಡು ಆಮೇಲೇ ಅದನ್ನು ಮುಟ್ಟುವುದು. ಈ ಪ್ರಾಂತ್ಯದ ಎಷ್ಟೋ ದೇವರ ಪೂಜಾರಿಕೆಗೆ ಪಟ್ಟ ಆಗುವಾಗ ಏಕನಾಥಮ್ಮನ ತಟ್ಟೆ ಹಿಡಕೊಂಡು ಪೂಜಾರಿ, ನಾನು,

ಚಾಟಿಪೋತ ಕೂಡಿಕೊಂಡು ಹೋಗಿ ಕೆಲಸ ಮಾಡಿಕೊಟ್ಟಿದ್ದೇವೆ. ಇವೆಲ್ಲಾ ಮನಸ್ಸಿಗೆ ಸಂತೋಷಕೊಡುವಂತ ನೆನಪುಗಳು. ಅವ್ವನ ಚಾಕರಿಯನ್ನು ನಾನು ವಂಚನೆಯಿಲ್ಲದೆ ಮಾಡಿದ್ದೇನೆ.

**ಎಂಥಾ ಕಾಲ ಬಂತು !**

ಈಗ ಮೂರುನಾಕು ವರ್ಷದ ಹಿಂದೆ ನಾನು ಪೇಟೆಗೆ ಹೋದಾಗ ನೋಡಿದ್ದು ಚೆನ್ನಾಗಿ ನೆನಪೈತೆ. ಯಾವುದೋ ಒಂದು ಮೆರವಣಿಗೆ, ಕಣ್ಣು ಮನ ಸಾಲದು. ಅದನ್ನ ನೋಡಾಕೆ, ಕೋಲುಮ್ಯಾಳ, ನಂದಿಧ್ವಜ, ಭೂತರಾಯ, ಆಮೇಲೆ ನೋಡಿದ್ರೆ ಸೋಮಗಳು-ದೇವರಿಲ್ಲ, ದಿಂಡ್ರೆಲ್ಲ ಏನೋ ಮೆರವಣಿಗೆಯಂತೆ, ಯಾರು ಬೇಕಾದ್ರೂ ಹಾಕಿಕೊಂಡು ಕುಣಿಯುವ ಬಿಳೇ ಸೋಮಗಳಿದ್ರೆ ಸೋಜಿಗವಿಲ್ಲ, ಅವುಗಳ ಜೊತೇಲಿ ಕರೇ ಸೋಮ!

ಯಾಕೆ ಹಿಂಗಾಯ್ತು ಗೊತ್ತಿಲ್ಲ, ಇವು ಗುಡಿಗಳ ಸೋಮಗಳಾಗಿರಲಿಕ್ಕಿಲ್ಲ. ಏನೋ ಅಲಂಕಾರಕ್ಕೆ, ಕುಣಿಯೋಕೆ ಮಾಡಿಸಿದೆವು ಇರಬೇಕೇನೋ. ಇದೇ ಆಗಿದ್ದರೇನೋ ಸರಿ, ಇಲ್ಲಾ ಗುಡಿಸೋಮನ್ನೇ ಎತ್ತಿಕೊಂಡು ಮೆರವಣಿಗೇಲಿ ಹೊರಟಿದ್ರೆ ತಪ್ಪಾಗುತ್ತೆ. ಅವು ಇರೋದು ಅಮ್ಮನ ಸೇವೆಗೆ, ಜನರ ಕಷ್ಟ ಒಡೆಯೋಕೆ. ಇದು ಬಿಟ್ಟು ಬೇಕು ಬೇಕಾದ ಕಡೆಗೆ ಕವುಚಿಕೊಂಡು ಹೋಗಲಿಲ್ಲ. ನನ್ನ ಕುಣಿತ ಲಾಯಕ್ಕಾಗಿರಬಹುದು, ಜನಕ್ಕೆ ಬಲುಚಂದ ಅನ್ನಿಸಿರಬಹುದು, ಆದರೆ ಅಷ್ಟಕ್ಕೇ ಹಾಕುವಂತಿಲ್ಲ. ಇದಕ್ಕೊಂದು ಕ್ರಮ, ಪದ್ಧತಿ ಇದೆ. ಎಷ್ಟೋ ಅಗಲಕ್ಕೆ ಮುಖರೂಡಿಸಿ ಮನಸೋ ಇಚ್ಚೆ ಅದಕ್ಕೆ ಬಣ್ಣಗಳ ಬಳಿಸಿ ಅದು ಕುಣಿಯುವುದನ್ನು ನೋಡಿ ಜನ ಏನು ಅಂತ ತಿಳಿದುಕೊಳ್ತಾರೋ ನಾನು ಬೇರೆ ಕಾಣೆ. ಪೇಟೆಗಳಲ್ಲಿ ಯಾವು ಯಾವೋ ಉತ್ಸವ, ಮೆರವಣಿಗೆಗಳಿಗೆಲ್ಲಾ ಇದನ್ನು ಹಾಕಿ ಕುಣೀತಾ ಹೋಗ್ತಾರೆ. ನನಗೇನು ಭಯ ಅಂದ್ರೆ, ಎಲ್ಲಿ ನಮ್ಮ ಗುಡಿ ಸೋಮಗಳನ್ನ ಜನ ಹಿಂಗೇ ಸುಲಭವಾಗಿ ತಿಳಿದುಕೊಂಡುಬಿಡ್ತಾರೋ ಅಂತ.

ಏನೋ ಇರಲಿ ಬಿಡಿ, ನನ್ನ ಕಾಲ ಮುಗೀತು. ಇಷ್ಟು ವರ್ಷದ ದೇವರ ಕೆಲಸದಲ್ಲಿ ನನಗೆ ಭಾರ ಹೊತ್ತುಕೊಂಡು ತಲುಪಿಸಿದ ನೆಮ್ಮದಿ ಇದೆ. ಎಲ್ಲೂ ತಪ್ಪಲಿಲ್ಲ, ನನ್ನ ಮಗನೂ ಹಂಗೇ ನಡೆಸಿಕೊಂಡು ಬರ್ತಾ ಇದ್ದಾನೆ, ಅದು ಇನ್ನೂ ಒಂದು ಸೌಭಾಗ್ಯ, ಕಾಲ ನವೀನ ಆದಂಗೆ ದೇವರ ಕೆಲಸ, ಕಟ್ಟಳೆಗಳೂ ಅಷ್ಟಿಷ್ಟು ಸಡಿಲಾಗ್ತಾ, ಬರ್ತಾ ಇರೋದನ್ನು ಎಲ್ಲ ಕಡೇಲೂ ಕಾಣ್ತೀವಿ. ಆದರೇನು ನಿಂತ ನೆಲ, ಬೆಳಗೋ ಸೂರ್ಯ, ಸುರಿಯೋ ಮಳೆ, ಬೀಸೋ ಗಾಳಿ ಇರೋತನಕ ದೇವರು, ದಿಂಡರು ಹೋಗದೇ ಇಲ್ಲ, ಅಂತ ನನ್ನ ವಿಶ್ವಾಸ, ಸಾವು ನೋವು ಇರೋತನಕ ದೇವರು ಬೇಕೇ ಬೇಕು. ಅಷ್ಟಿಷ್ಟು ಭಯಭಕ್ತಿ

ಕಮ್ಮಿ ಆಗಬಹುದು, ಜಾಸ್ತಿಯೂ ಆಗಬಹುದು. ಆದರೇ ಕಟ್ಟು ಚಟ್ಟಾಗಿ ನಿಂತೇಹೋಗುವುದಿಲ್ಲ.

**ಪಟ್ಟ ಇಳಿದೆ**

ಈಗ ಮೂರು ವರ್ಷದಿಂದ ನಾನು ಖಾಸಗಿ ಮನುಷ್ಯ ಆಗಿದ್ದೇನೆ. ಸೋಮನ ಪಟ್ಟ ಇರೋವರ್ಗೂ ನಾನು ಊರವರ ಮನುಷ್ಯ, ಸುತ್ತ ಮುವ್ವತ್ತು, ಮೂರು ಹಳ್ಳಿಯವರ ಮನುಷ್ಯ. ಇನ್ನೂ ಇಂಬಾಗಿ ಹೇಳಬೇಕು ಅಂದ್ರೆ ಕಷ್ಟ ಬಂದವರೆಲ್ಲಾ ನನ್ನ ಹೊರಡಿಸಿ(ಸೋಮ) ಕೇಳಬಹುದಾಗಿತ್ತು. ಆಗಲೋ ಈಗಲೋ ಎನೋ ಜೀವ, ಮನೆಗೆ ಹತ್ತಿ ಕಾಡ್ತಿರುವ ತೊಂದರೆ, ಆಸ್ತಿಪಾಸ್ತಿ ಕೊಡೋ ತೊಗಳೊದು, ಮದುವೆ ಮತ್ತೊಂದು ಹಿಂಗೇ ಎಷ್ಟೋ ತರದ ಸಮಸ್ಯೆಗಳಿಗೆ ಆ ದೇವಿ, ಸೋಮ ಕೊಟ್ಟ ಉತ್ತರ, ಪರಿಹಾರಗಳನ್ನು ಜನಕ್ಕೆ ತಲುಪಿಸಿದ್ದೇನೆ, ಅವರಿಗೆ ಒಳ್ಳೇದಾಗ್ಯೆತೆ. ಅದಕ್ಕೆ ಈನಾಡೀ ಜನ.

ಈಗಿನ ಬದುಕೇ ಬೇರೆ, ನನ್ನ ಮನೆ, ಅಷ್ಟಿಷ್ಟು ಹೊಲ, ಮಳೆ ನೋಡಿ ಬಿತ್ತಿ ಬೆಳೀಬೇಕು. ಕುರಿ ಮೇಕೆ ಆಳಬೇಕು. ಅಂತೂ ಸಣ್ಣ ಪೌಳಿಯೊಳಗೇ ಇಂದಿನ ಬದುಕು. ಹೊತ್ತಿಗೆ ಸರಿಯಾಗಿ ತಿಂಡಿ, ಊಟ, ಕೆಲಸ ಕಾರ್ಯಗಳು ನಡೆದೇ ಹೋಗುತ್ತವೆ.

ಪಟ್ಟದಲ್ಲಿದ್ದಾಗ ಇವುಗಳೆಲ್ಲಾ ನಿಗದಿಯಾಗಿ ಇಂಥಿಂಥಾ ಹೊತ್ತಿಗೇ ಅಂತಿರಲಿಲ್ಲ. ಆದರೇನು ಆಗಿನ ಪೂಜ್ಯತೆ, ಗೌರವವೇ ಬೇರೆ. ನನ್ನ ಕರಿಯಣ್ಣ, ಅಂತ ಯಾರೂ ಗುರುತಿಸುತ್ತಿರಲಿಲ್ಲ. ಸೋಮನ ಕರಿಯಣ್ಣ ಅನ್ನೋದೇ ರೂಢಿ. ಈಗಲೂ ಪಟ್ಟ ಬಿಟ್ಟರು ಜನ ಹಂಗೇ ಅನ್ನೋದಿದೆ. ನಮ್ಮ ಕಳ್ಳುಬಳ್ಳಿ, ನೆಂಟರಿಷ್ಟರುಗಳ ಮನೆಗಳಿಗೆ, ಕೆಲಸ ಕಾರ್ಯಗಳಿಗೆ ಮೊದಲು ನಾನು ಹೋಗಾಕೇ ಆಗ್ತಿರಲಿಲ್ಲ. ಈಗ ಅಲ್ಲೆಲ್ಲಾ ಹೊಕ್ಕಾಡಿ ಬರ್ತೀನಿ, ನನಗೆ ಬಿಡುವಾತು ನಿಜ, ಆದರೆ ನಮ್ಮ ಹೆಂಗಸರು ಅಮ್ಮನ ಪಾದ ಸೇರಿದ್ದು ಒಂದು ನೋವು, ಕಾಲಲ್ಲಿ ಎಚ್ಚೆಕೊಂಡ ಮುಳ್ಳಿನ ತರ, ಮನಸ್ಸಿನಲ್ಲಿ ಚಿಟಿ ಚಿಟಿ ಅಂತಿರುತ್ತೆ. ಏನೋ ಅವಳ ಅನ್ನದ ಋಣ ಅಷ್ಟೇ ಇತ್ತೇನೋ, ಈಗಿನಂಥಾ ಹೊತ್ತಿನಲ್ಲಿ ಅವಳು ಇದ್ದಿದ್ರೆ ನಾನು ಹೋಗೋ ಕಡಿಕೆಲ್ಲಾ ಕರಕೊಂಡು ಹೋಗಿದ್ದೆ, ಬಲು ಸಂತೋಷಪಡೋಳು.

ನಾನು ಸೋಮನ್ನ ಹಾಕಿಕೊಂಡು ದೇವರ ಕೆಲಸ ಕಾರ್ಯಗಳನ್ನು ಮಾಡ್ತಿದ್ದರೆ, ನನ್ನ ಹೆಂಡತಿ ಮನೆ ಕಡೆ ಪೂರ್ತಿಯಾಗಿ ನೋಡಿಕಂತಿದ್ದಳು. ಉಪ್ಪು ಐತೋ, ಬೆಲ್ಲ ಐತೋ ನನಗೇನು ಹೇಳ್ತಿರಲಿಲ್ಲ, ಪುಣ್ಯಾತಿಗಿತ್ತಿ ಪಾಪ ಎಲ್ಲಾ ಹೊಂದಿಸೋಳು, ಇದ್ದುದರಲ್ಲೇ ಕೈ ಬಿಗಿಹಿಡಿದು ಸಂಸಾರ ನಡೆಸಿದಳು. ಇದು ಬೇಕು, ಈ ಸೀರೆ, ರವಿಕೆ, ಈ ಬಳೆ ಅಂತಾ ಒಂದಿನ ಕೇಳಿದ್ದಲ್ಲ. ಅವಳು ಹಿಂಗೆ ಇಲ್ಲದೇ ಹೋಗಿದ್ರೆ ನಾನು ಈಸು

ವರ್ಷ ಸೋಮನ್ನ ಹೊತ್ತುಗೊಂಡು ನಾಡಾವಳಿನೆಲ್ಲಾ ಸುತ್ತಕೆ ಆಗ್ತಾ ಇತ್ತಾ? ಇಷ್ಟೆಲ್ಲಾ ದೇವರ ಕೆಲಸ, ಜನರ ಕೆಲಸ ಮಾಡಿದ್ದೀನಿ ಅಂತ ನಾನು ಹೇಳಿದ್ರೆ ಇದರಲ್ಲಿ ಸಮರ್ಥ ಪಾಲು ನನ್ನ ಹೆಂಡತೀದು ಐತೆ. ಒಂದು ದಿನವೂ ಅವಳು ನನ್ನ ಮನಸ್ಸನ್ನು ತಿವಿಯಲಿಲ್ಲ, ಹಿಂಡಲಿಲ್ಲ. ಅವಳು ಇದ್ದಾಗ ಇದ್ಯಾವುದು ನನಗೆ ಅಷ್ಟು ದೊಡ್ಡದಾಗಿ ಕಾಣಿಸುತ್ತಿರಲಿಲ್ಲ. ಈಗ ನೋಡಿದ್ರೆ ಖಂಡಿತ ಅವಳದು ಬಲು ದೊಡ್ಡ ಗುಣ, ಏಕನಾಥಮ್ಮ ಆದೆಂತಾ ಮನಸು ಕೊಟ್ಟಿದ್ದಳೋ, ಏನೋ ಕೈಯೆತ್ತಿ ಮುಗೀಬೇಕನ್ನಿಸುತ್ತೆ.

ಆದೇವಿಯಲ್ಲಿ ನಾನು ಬೇಡಿಕೊಳ್ಳೋದು ಇನ್ನೇನೈತೆ, ನನ್ನ ಮಗನ ಕಾಲದಲ್ಲೂ ಸರಿಯಾಗಿ ನಡೆಸಿಕೊಂಡು ಹೋಗವ್ವಾ ನಮ್ಮ ವಂಶ ನೀನೇ ಕಾಪಾಡಬೇಕು ಇಷ್ಟೇ. ಮಗ ಜಯಪ್ಪ ಯೋಗ್ಯ, ಒಂದಿನ ಇದುರಿಗೆ ನಿಂತು ಮಾತಾಡಿಲ್ಲ. ಅವನು ಸೇವಮಾಡೋ ಆ ತಾಯಿನೇ ಕಾಪಾಡಲಿ ಅವನ್ನ.

**ಈಗ ನನ್ನ ಕೆಲಸಕಾರ್ಯಗಳು**

ಇದುವರೆಗಿನ ಕೆಲಸಗಳೆಲ್ಲ ದೇವರ ಕೆಲಸಗಳಾಗಿದ್ದುವು. ಆಗಲೇ ತಿಳಿಸಿದಂತೆ ನಾನು ಈಗ ಸ್ವತಂತ್ರನಾಗಿದ್ದೇನೆ. ಇಷ್ಟು ವರ್ಷ ನನ್ನ ಕುಟುಂಬ, ನೆಂಟರು ಇಷ್ಟರು ಅಥವಾ ನನ್ನ ಬಗ್ಗೆ ಏನೊಂದೂ ಯೋಚಿಸಿರಲಿಲ್ಲ. ಈಗ ನೋಡಿ ಬೇಕಾದಷ್ಟು ಸಮಯ. ದಿನಾ ಬೆಳಗಾದರೆ ಒಂದಲ್ಲ, ಒಂದು ಊರಿಗೆ ಹೋಗ್ತಿನಿ, ಇಲ್ಲವೇ ಅವರೇ ಬಂದಿದ್ದಾರೆ, ಜೊತೆಗೆ ಮಾತಾಡ್ತೀನಿ, ಊಟ ಮಾಡ್ತೀನಿ. ಇರುವ ಒಂದು ಸಣ್ಣ ಜಮೀನು, ಊರಲ್ಲಿದ್ದರೆ ಅದನ್ನು ಬೆಳಗೂ ಬೈಗೂ ನೋಡ್ತೀನಿ, ನಮ್ಮವ್ವ ಇರೋದರಿಂದ ಈ ಕೆಲಸಗಳಿಗೂ ಒಂದು ಆಸರೆ ನೋಡಿ. ಇಷ್ಟೊಂದು ವಯಸ್ಸಾಗಿದ್ರೂ ನಮ್ಮವ್ವ ಹೊಲಕ್ಕೆ ಹೋಗುತ್ತೆ, ಕುರಿ ಮೇಕೆ ಆಡಿಸಿಕೊಂಡು ಬರುತ್ತೆ. ಮತ್ತೆ ನನಗೆ ಇನ್ನೇನು ಬಲು ಭಾರವಾದ ಕೆಲಸವಿಲ್ಲ. ಹೊತ್ತಿಗೆ ಸರಿಯಾಗಿ ಹೊಟ್ಟೆಗೆ ಬೀಳುತ್ತೆ. ನನಗೆ ಎಲೆ ಅಡಿಕೆ ತಲುಬು ಒಂದೈತೆ, ತಿಂಡಿ ಊಟವಾದ ಮೇಲೆ ಎರಡೆಲೆ, ಎರಡಡಿಕೆ ಚೂರು ಸಿಕ್ಕಿದರೆ ಸಾಕು.

ಮನ ಪಟ್ಟದಲ್ಲಿ ಮೊದಲಿನಂತೆ ಕೆಲಸ ಕಟ್ಟು ನಡಕಂಡು ಹೋಗ್ತವೆ. ಮಂಡಳ ಹಾಕೋದು ದೊಡ್ಡ ಪೂಜೆ ಪುನಸ್ಕಾರ ಅಂತ ಸೋಮ ಅಪ್ಪಣೆ ಮಾಡಿದ್ರೆ ಅಂತಾ ಕೆಲಸಗಳಲ್ಲಿ ನಾನು ಮೇಲುಸ್ತುವಾರಿಗೆ ಇದ್ದೀನಿ. ಇರಲೇ ಬೇಕಂತೇನೂ ಇಲ್ಲ, ನಾನಿದ್ರೆ ಮಗನಿಗೂ ಇವೆಲ್ಲಾ ಇನ್ನೂ ಚೆನ್ನಾಗಿ ಅನುಭವಕ್ಕೆ ಬರ್ತವೆ ಅಂತ ಇರೋದಷ್ಟೆ. ದೇವರ ಕೆಲಸ, ಕೈವಾಡದ ಕೆಲಸ ಅಂದ್ರೆ ಸ್ವಂತ ಮನೆಗೆ ಅಂತಾ ಲಾಬದ್ದೇನಲ್ಲ. ಯೋಚನೆ ಮಾಡಿ ನೋಡಿದ್ರೆ ನಮ್ಮ ಆಯುಷ್ಯದ ಬಹು ಕಾಲವೆಲ್ಲಾ ಜನಕ್ಕೆ ಕಳೆದು ಹೋಗುತ್ತೆ.

ಮುದುಕರಾಗುವಾಗ ಬಿಡತಿಯಾದ ಮನುಷ್ಯರಾಗ್ತೀವೆ, ಆದರೆ ಅಷ್ಟು ಹೊತ್ತಿಗೆ ರಕ್ತ ಪುಷ್ಟಿ ಕಮ್ಮಿಯಾಗಿರುತ್ತೆ. ಇದನ್ನು ಮಾಡಬೇಕು ಅದನ್ನು ಮಾಡಬೇಕು ಅನ್ನೋ ಉತ್ತೇಕ ಕಮ್ಮಿಯಾಗಿರುತ್ತೆ. ಈ ಮಾತು ಹೇಳ್ತಾ ಇರೋದು ಬೇಜಾರಿನಿಂದಲ್ಲ, ದೂರೂ ಅಲ್ಲ. ಯಾರೇ ದೇವರ ಕೆಲಸ ಮಾಡಲಿಕ್ಕೆ ಹೊರಟರೋ ಇಷ್ಟು ಆಗೋದೇ. ಇದರಿಂದ ನನಿಗೆ ಏನೂ ವ್ಯಥೆಯಿಲ್ಲ, ಬೆಳ್ಳಿಬಂಗಾರ, ಭೂಮಿ ಕಾಣಿ ಗಳಿಸಿಕೊಂಡೂ, ಒಂದು ದಿನ ಕಂತೆ ಒಗೆದು ಹೋಗಬೇಕು ತಾನೇ? ಇರೋತನಕ ಹೊತ್ತಿಗೆ ಒಂದು ಮುದ್ದೆ, ಒಂದು ಹಿಪ್ಪಡಿ ಅನ್ನ, ಎರಡು ಸೌಟು ಸಾರು ಇಷ್ಟು ಆದರೆ ಬೇಕಾದೋಟು ಆತು. ಮುಂದಿನ ಆಗು ಹೋಗಿನ ಚಿಂತೆ ನನಗಿಂತಾ ಹೆಚ್ಚಾಗಿ ಸೋಮನ್ನ ಹೊರಿಸಿ ಕೆಲಸ ಮಾಡಿಸಿಕೊಂಡಿರೋ ಆ ನಮ್ಮವ್ವನಿಗೆ ಗೊತ್ತಿಲ್ವೇ? ಅವಳಿಗೆ ಕಾಣದ್ದು ಯಾವುದೈತೆ, ಲೋಕ ಲೋಕಾತರವನ್ನೆಲ್ಲಾ ನಡೆಸುವ ಆ ತಾಯಿಗೆ ನನ್ನ ಜೀವ, ನನ್ನ ಮನೆ ನೆನಪಿಲ್ವೆ? ನಡಸ್ತಾಳೆ, ಬಯ್ನಾಗೇ ನಡಸ್ತಾಳೆ. ಇದೇ ನಂಬಿಕೆ ಈ ಹೊತ್ತು, ನಾಳೆಗೂ.

ನಾನು ಬಲ್ಲಂಗೆ ಏಕನಾಥವ್ವನ ಗುಡಿ ಮಗ್ಗುಲ ಬಂಡೆ ಯಾನಾಡಿ ಎತ್ತರ ಇತ್ತು ಅಂದ್ರೆ, ಗುಡಿ ಕಳಶ ಕಾಣ್ತಿರಲಿಲ್ಲ. ಈಚೀಚೆಗೆ ಆ ಅರೆಬಂಡೆ ಒಡೆದು ಒಡೆದೂ ಕಳಶ ಪೂರಾ ಕಾಣುವಂತೆ ಆಗೈತೆ. ಆ ಬಂಡೇಲಿ ಕನ್ನಿಕೇರ ಕೊಣ ಅಂತ ಇದ್ದು ಪೂಜೆ ಪುನಸ್ಕಾರ ಆ ದೊಣೆಗೆ ಆಗ್ತವೆ. ಒಂದು ಕಾಲಕ್ಕೆ ಅಲ್ಲಿಗೆ ಹೋಗೋಕು ಜನ ಅಂಜಿಕೊಳಿದ್ದರು. ಈಗ ಅಂಥಾದ್ದೇನೂ ಇಲ್ಲ, ಹಂಗೆ ಇದ್ದಿದ್ದರೆ ಗುಡಿಯ ಬಂಡೆ ಮುಸುಣಿ ಸುಡೋದಾಗಿತ್ತ? ಬಂಡೆ ಸೀಳ್ತಾ ಇದ್ರೆ ಏನೋ ಇಂಥದೆಲ್ಲಾ ನಡೀತವೆ. ಇದು ನಮ್ಮೂರಿನದೊಂದೇ ಕತೆಯಲ್ಲ. ಪೂರ್ವದಿಂದ ನಡಕೊಂಡು ಬಂದಿರೋ ಎಷ್ಟೋ ಗುಡಿಗಳಿಗೆ ಲಗತ್ತಾಗಿರುವ ಬಂಡೆಗಳು, ಗುಡ್ಡಗಳು ಈ ಕಾಲಕ್ಕೆ ಕರಗಿ ಹೋಗ್ತಾ ಇವೆ. ಇದು ಹಿಂಗೆ ಆಗಬಾರದಾಗಿತ್ತು. ಕಲ್ಲು, ಜಲ್ಲಿ, ಚಪ್ಪಡಿ ಬೇಕು ಅಂದ್ರೆ ಬಿಡತಿಯಾಗಿ ಗುಡ್ಡಗಳಿದ್ದಾವೆ. ಅವುಗಳಲ್ಲಿ ಆರಿಸಿಕೊಂಡು ಒಂದು ಕಡೆಯಿಂದ ಪೂರ್ತಿ ಒಡಕಂತಾ ಬರಬೇಕು. ಈ ತರ ಮಾಡಿದ್ರೆ ನಮ್ಮ ಗುಡ್ಡ ಉಳಕಂತವೆ, ಗುಡಿಗಳು ಉಳಕಂತವೆ, ದೇವರ ದರ್ಶನಕ್ಕೆ ಹೋದ ಜನ ಆ ಗುಡ್ಡ, ಗಿಡ ಮರ, ನೀರು ನಿಡಿ ಮಧ್ಯೆ ಸಂತೋಷವಾಗಿ ಒಂದಷ್ಟು ಹೊತ್ತು ಕಳೀಬಹುದು.

ಇದನ್ನೆಲ್ಲಾ ಬದುಕೋ ಜನ ನೋಡಿಕೋಬೇಕು. ನಮ್ಮ ಕಣ್ಣೆದುರಿಗೆ ಇವೆಲ್ಲಾ ಕಳೆದು ಹೋಗ್ತಾವಲ್ಲ ಅನ್ನೋ ಹೊಟ್ಟೆಉರಿ ನನಗೆ.

ಮೊದಲಿನ ಭಯ ಭೀತಿ ಈಗ ಇಲ್ಲದಂಗಾಗೈತೆ. ಧರ್ಮಸ್ಥಳಕ್ಕೆ ಹೋದವರು, ಮಕ್ಕಳೂ ಮರಿಯೊ ತಿಳಿದೇ ನದಿ ಮಗ್ಗಲಿನ ದುಂಡುಕಲ್ಲು ಆರಿಸಿಕಂಡು ಊರಿಗೆ

ತಂದ್ರೆ ಬೇಕಾದೋಟು ರಣಾ ರಂಪ ಆಗಿತ್ತು. ವಾಂತಿ, ರಗುತ ಭೇದಿ ಇಂಥದ್ದೆಲ್ಲಾ ಆಗಿ ಕಲ್ಲು ತಗೊಂಡು ಹೋಗಿ ಮತ್ತೆ ವಾಪಸು ಹಾಕಿ, ತಪ್ಪು ಕಾಣಿಕೆ ಸಲ್ಲಿಸಿ ಬಿಡುಗಡೆಯಾಗಿದ್ದರು! ಈಗಿನ ಜನ ಯಾವುದಕ್ಕೂ ಹೆದರೋದೂ ಇಲ್ಲ, ಅವರಿಗೆ ಏನೂ ಆಗೋದೂ ಇಲ್ಲ ಅನ್ನಿಸುತ್ತೆ. ನಂಬಿಕೆ ಅಲ್ಲವೇ? ನಮ್ಮ ಮನಸ್ಸು ಹೆಂಗೈತೋ ದೇವರು ಹಂಗೇ.

ಊರಿನ ಜನ, ದನ, ಪೈರು ಪಚ್ಚೆ, ಇವೆಲ್ಲವನ್ನೂ ಕಾಪಾಡುವ ಕೆಲಸ ಗ್ರಾಮ ದೇವತೆಗಳಿಗೆ ಸೇರಿದ್ದು, ಸುಮ್ಮನೆ ಬಡಿಯೋದು, ಊದೋದು, ಮೆರಸೋದಕ್ಕಲ್ಲ ಇವು ಇರೋದು. ಇದರಲ್ಲೂ ಸಣ್ಣದು, ದೊಡ್ಡದು ಅಂತ ಇದೆ. ನಮ್ಮ ಬನಸಿಹಳ್ಳಿ ಏಕನಾಥವ್ವ ದೊಡ್ಡವಳು, ಮುವ್ವತ್ತು, ಮೂರು ಹಳ್ಳಿ ನಾಡಾವಳಿ ದೇವಿ. ಅವಳ ಸೋಮ ಅಂದ್ರೆ ಅದೂ ಮೂವ್ವತ್ತು ಮೂರು ಹಳ್ಳಿ ಕಾರಭಾರ ಮಾಡುವಂಥದ್ದು. ಈ ದೊಡ್ಡ ದೇವಿ ಕೆಲಸಗಳನ್ನು ಚೂಟಿ ಮೊನೆಮೋಟು ಹೆಚ್ಚು ಕಮ್ಮಿ ಆಗದಂಗೆ ನಲವತ್ತೊಂದು ವರ್ಷ ನಾನು ನಡೆಸಿಕೊಂಡು ಬಂದೀನಿ. ನನ್ನ ಹೆಂಡತಿ, ಮಕ್ಕಳು, ಅಣ್ಣತಮ್ಮಗಳು ನೆಂಟರಿಷ್ಟರೆಲ್ಲಾ ಈ ಕೆಲಸಗಳಲ್ಲಿ ಸಹಕರಿಸಿದ್ದಾರೆ. ನಾನೊಬ್ಬನೇ ಇಷ್ಟೊಂದೆಲ್ಲಾ ಮಾಡಿದೆ ಅಂತ ಅನ್ನಕೆ ಆಗಲ್ಲ. ಅವರೆಲ್ಲಾ ನನ್ನ ಬಿಡತಿಯಾಗಿ ಇರೋಕೆ ಬಿಟ್ಟಿದ್ದರಿಂದಲೇ ಇಷ್ಟೊಂದು ವರ್ಷ ಪಟ್ಟದಲ್ಲಿ ಓಡಾಡಿದೆ.

ನಮ್ಮೂರಿನ ಜನ ಬಲು ಒಳ್ಳೆಯವರು, ಭಕ್ತಿವಂತರು, ಹಬ್ಬ ಹರಿದಿನಗಳಲ್ಲಿ ಅಮ್ಮನ ಸೇವೆಯನ್ನು ಮನಸ್ಸಿಟ್ಟು ಮಾಡ್ತಾರೆ. ಮನೇಲಿ ಒಂದು ಸಿಹಿ ಅಡುಗೆ ಮಾಡಿದ್ರೂ ಅಮ್ಮನಿಗೆ ಎಡೆ ಕಳಿಸ್ತಾರೆ. ಊರಿಂದೂರೇ ದೇವಿಯ ಕೆಲಸಕ್ಕೆ ನಡಕಟ್ಟಿ ನಿಂತಿರುತ್ತೆ, ಈ ಊರಲ್ಲಿ ಯಾರ ಮನೇಲೆ ಮೊದಲನೇ ಹೆಣ್ಣು ಮಗು ಹುಟ್ಟಿದರೂ ಪಾರ್ವತಮ್ಮ, ಗಿರಿಜಮ್ಮ, ಏಕನಾಥಮ್ಮ ಅಂತ ಹೆಸರಿಟ್ಟು ಕರೀತಾರೆ. ನಮ್ಮೂರಿನ ಜನ ಅಮ್ಮನ್ನ ಎಷ್ಟು ನಂಬಿದ್ದಾರೆ ಅನ್ನೋದಿಕ್ಕೆ ಇದೇ ಸಾಕ್ಷಿ. ಒಟ್ಟಿನಲ್ಲಿ ಹೇಳಬೇಕು ಅಂದ್ರೆ ಅವರು ನಡಕಂಡಂಗೆ ಪಡಕಂಡಿದಾರೆ. ಪೂರ್ವದಿಂದ ಏನೇನು ದೇವರ ಕೆಲಸ ನಿಗದಿಯಾಗಿ ಬಂದಿವೆಯೋ ಅವೆಲ್ಲಾ ಯಾವ ಕಾರಣಕ್ಕೂ ನಿಲ್ಲದೆ ನಡಕಂಡು ಬಾ ಇವೆ. ಇದಕ್ಕೆಲ್ಲಾ ಗ್ರಾಮದ ಜನ ಕಾರಣ. ಗುಡಿಯ ಗೌಡಿಕೆಯನ್ನು ಹೊತ್ತಿರುವ ಜಿ. ಆರ್. ಮಲ್ಲಿಕಾರ್ಜುನ ಅವರು ಬಲು ಜವಾಬ್ದಾರಿಯಿಂದ ಕೆಲಸ ಮಾಡ್ತಾರೆ, ಅವರ ಜೊತೇಲಿ ಇರುವ ಜನಗಳೂ ಅಂಥವರೇ. ಇವರೆಲ್ಲಾ ಒಂದು ಕೈಯಾಗಿ ಕೆಲಸ ಮಾಡದಿದ್ರೆ ಊರೊಟ್ಟಿನ ಕೆಲಸ, ದೇವರ ಕೆಲಸ ಆಗೋದೇ ಇಲ್ಲ, ನೋಡ್ರಿ. ಹೊಸಗುಡಿಕಟ್ಟೋ ಕೆಲಸ ಹಗಲೂ ಇರುಳೂ ನಡೀತೈತೆ. ಇದಕೆ ಅದೆಷ್ಟು ಲಕ್ಷ ಆಗ್ತಾವೋ ಏನೋ ಅವ್ವನಿಗೇ ಗೊತ್ತು,



ಇನ್ನೇನು ಹೇಳಿಕೊಳ್ಳೋದೈತೆ ನನ್ನದು. ಏಕನಾಥವ್ವ ಎಲ್ಲರಿಗೂ ಒಳ್ಳೇದು ಮಾಡಲಿ, ಅವಳ ದೂತ ಕರೆ ಸೋಮನ ನಿಗಾ ಎಲ್ಲಾರ ಮೇಲೂ ಇರಲಿ. ನಮ್ಮ ದೇವರಿಗೆ ಏನು ಪೂರ್ವದಿಂದ ಹೆಸರು ಐತೆ ಅದು ಉಳಕೊಂಡು ಬಂದ್ರೆ ಸಾಕು. ಅಸಾದಿ ಪದ ಹೇಳುವಾಗ ಅಮ್ಮನ್ನ ಕೊಂಡಾಡ್ತಾನೆ. ಉದಯದೊಳಗೆ ಎದ್ದು ಯಾರ್ಯಾರ ನೆನೆದೇವು ಹದಿನಾರು ಕೋಟಿ ಸಲವೋಳ, ಏಕನಾತಿಯ ನೆನೆದೇವು, ಇಡೀ ಬ್ರಹ್ಮಾಂಡ ಸಲಹೋ ತಾಯಿ ಇವಳು. ಅವಳು ಯಾವ ಊರಿಗೆ ಹೊರಟರೂ ಎಡೆ ಬಿಡಾರ, ಉತ್ಸವ. ಎಂಥಾ ಕಷ್ಟವನ್ನೂ ಕರಗುಸ್ತಾಳೆ, ಗೌಡರ ಮನಿಗೆ ಹೋಗಿ ಏನೇನು ಪಡೆದವ್ವ, ಸಾಲು ಸೀರೆ ಮಡಲಕ್ಕಿ ಪಡಕಂಡು ದಿಲ್ಲಿಯ ಗೆದ್ದು ಬರುತ್ತಾಳೆ. ನಮ್ಮ ದೇವಿ ದಿಲ್ಲಿ ಗೆದ್ದು ಬಂದೋಳು. ಅವಳನ್ನ ಮೀರಿದವರನ್ನ ಉಳಿಸೋಲ್ಲ, ಮೀರಿದವರ ಮನೆಯ ಮುರುದೋಳು ಏಕನಾತಿ ಅಂತ ಹಾಡ್ತಾರೆ. ಕಾಡಿನ ನಡುವೆ ಇದ್ರೇನೂ, ಕೇಳಿದ್ದು ಕೊಡೋ ಆ ತಾಯಿನ ಸೀರೆ ಸೆರಗೊಡ್ಡಿ ಬೇಡಿಕೋಬೇಕು. ಬಡತನ ಬಂದೈತೆ, ಬಂದು ಹೋಗೆ ಏಕನಾತಿ ಭಂಗ ಬಡತನ ನೀಗವ್ವ ಅಂತ ಕೈ ಮುಗಿದು ಕೇಳಿದರೆ ಮನುಷ್ಯನಿಗೆ, ಮನೆಗೆ ಹಿಡಕಂಡ ಗ್ರಹಚಾರನೆಲ್ಲಾ ಕಳೆಯುವ ಆ ನನ್ನ ತಾಯಿ ಬಲು ದೊಡ್ಡೋಳು. ಇನ್ನು ಅವಳ ದೂತ ಕರೆ ಸೋಮ, ಬಾಪುರೆ ಏಕನಾತಿ ನಿನ್ನ ಮಗ ಮಾನವ ದೂತ, ಅಂಗಿ ಮೇಲಂಗಿ ಸುಂದರ ನಡುಕಟ್ಟು, ಅಂಗಡಿ ಬೀದೀಲಿ ಬರುವೋನೆ ಅಂತ ಹೊಗಳಿಸಿಕೊಳ್ಳುತ್ತಾನೆ.

ಏನೋ ಇಷ್ಟು ವರ್ಷದ ಬದುಕು ಬಾಳು ನೆನಪಿಸಿಕೊಂಡು ಹೇಳಿದ್ದೀನಿ. ನನಿಗೆ ಮನಸ್ಸು ತೃಪ್ತಿ, ಆಗೈತೆ, ತುಂಬೈತೆ. ಇನ್ನೇನು ಬೇಕು ಹೇಳಿ? ಆಗೋ ಗಂಟೆ ಶಬ್ದ ಆಗುತ್ತೆ, ಏಕನಾಥವ್ವನ ಪೂಜೆ ನಡೀತೈತೆ, ನಡಿರಿ ಗುಡಿಗೆ ಹೋಗೋಣ.

---

ಪ್ರೊ. ಎಚ್ ಶ್ರೀಶೈಲ ಆರಾಧ್ಯ, ಕನ್ನಡ ಪ್ರಾಧ್ಯಾಪಕರು

ಸಿರಿ ಸಂಪಧ, ದೊಡ್ಡಪೇಟೆ ಚಿತ್ರಮರ್ಗ ೫೭೭ ೫೦೧



**ಸೋಬಾನೆ ಸಿದ್ದಮ್ಮ-ನೀಲಮ್ಮ**

**0 ಜಿ ಎಸ್ ಉಜ್ಜನಪ್ಪ**

ಸೋಬಾನೆ ಸಾಮ್ರಾಜ್ಯದ ಅನಭಿಷಕ್ತ ಸಾಮ್ರಾಜ್ಞಯರು ಸಿದ್ದಮ್ಮ-ನೀಲಮ್ಮ, ಒಂದು ಕಾಲಕ್ಕೆ ತುಂಬಾ ಚೆನ್ನಾಗಿ ಬಾಳಿ ಬದುಕಿದ ಮನೆಯಿಂದ ಬಂದವರು, ಈಗ ಕಡುಬಡತನದ ಬೆಂಕಿಯಲ್ಲಿ ಬೇಯುತ್ತಿದ್ದಾರೆ. ಸದ್ಯ ಈ ನೋವಿನಲ್ಲಿ ಹಾಡೊಂದೇ ಅವರ ಬದುಕಿನಲ್ಲಿ ಚೆಲುಮೆ. ಬದುಕು ಅಕ್ಕ-ತಂಗಿಯರಿಬ್ಬರ ಮಧ್ಯೆ ಮುನಿಸು ಬೇಸರಗಳನ್ನು ತಂದೊಡ್ಡಿ ಮಾತೇ ಬಿಟ್ಟಾಗ ಮತ್ತೆ ಕೂಡಿಸಿದ್ದು ಈ ಹಾಡೇ. ಸಿದ್ದಮ್ಮ- ನೀಲಮ್ಮನವರ ಸಿರಿದನಿಯ ಸೊಬಗಿನ ಹಿಂದೆ ಇರುವ ನೋವು ನಲಿವುಗಳ ಚಿತ್ರಣ ಇಲ್ಲಿದೆ.

ವೃತ್ತಿಯಿಂದ ಪತ್ರಿಕಾ ವರದಿಗಾರರಾಗಿರುವ ಜಿ. ಎಸ್. ಉಜ್ಜನಪ್ಪನವರು ಇಲ್ಲಿ ಆತ್ಮಕಥಾ ನಿರೂಪಕರಾಗಿ ಎರಡು ಜನಪದ ಕೋಗಿಲೆಗಳ ಬದುಕನ್ನು ಅಂತಃಕರಣ ಪೂರ್ವಕವಾಗಿ ತೆರೆದಿಟ್ಟಿದ್ದಾರೆ.

---

ಸೋಬಾನೆ ಸಿದ್ದಮ್ಮ-ನೀಲಮ್ಮ, ಗೌನಳ್ಳಿ ಅಂಚೆ

ಹಿರಿಯೂರು ತಾ, ಚಿತ್ರದುರ್ಗ ಜಿಲ್ಲೆ



**ಸಿದ್ದಮ್ಮ**

ನಮ್ಮ ಅಪ್ಪ ಅಮ್ಮ ಗೌಡಾಳಿಕೆ ಮನೆತನದೋರು. ಅಪ್ಪ ಹೆಂಜೇಗೌಡ್ರು, ತಾಯಿ ಪುಟ್ಟೇರಮ್ಮ: ಪುಟ್ಟಮ್ಮ ಅಂತಾಲೇ ಕರೀತೀದ್ರು. ನಮ್ಮ ದೊಡ್ಡಪ್ಪ ಸಿದ್ದೇಗೌಡ್ರು. ನಮ್ಮ ದೊಡ್ಡಪ್ಪ ಎಂತಾ ದೊಡ್ ಮನಿಷ್ಯ ಅಂದ್ರೆ ಸುತ್ತಲ ಏಳಳ್ಳೀಗೇ ಗೌರವಸ್ತ, ನಮ್ಮಪ್ಪ  ದೊಡ್ಡಪ್ಪ ಸಾಯೋತಕ ಜಗಳ ಆಡಿದೋರಲ್ಲ. ಅಷ್ಟೇ ಅಲ್ಲ ಜಮೀನು ಮನೆ ಆಸ್ತಿ ಹಂಚಿಗಂಡರಲ್ಲ.

ನಮ್ ದೊಡ್ಡಪ್ಪ ಒಂದ್ಸಲ ಇರಸಾಲು ತೀರ್‍ಗಿ ಅಸಗಂಡ್ ಬಂತಂತೆ. ನಮ್ಮಜ್ಜಿ ಬೈರಜ್ಜಿ, ಇದ್ದುದ್ದೊಂದ್ ಮುದ್ದೆ ಊಟಕ್ಕಿಟ್ರಂತೆ. ಅದೇ ಹೊತ್ಗೆ ಯಾರೋ ತಿರಕಂಡ್ ತಿಂಬಾರು ಬಾಗಲಾಗೆ ಬಂದು ಅಮ್ಮ ತಾಯಿ ಕವಳ ಅಂತ ಕೂಗಿದರಂತೆ. ಯಾತ್ರನ್ನ ಐತೇನವ್ವಾ ಅಂತ ದೊಡ್ಡಪ್ಪಯ್ಯ ಕೇಳ್ಯೆತೆ. ಇಲ್ಲಪ್ಪ ಅಂತ ಅಜ್ಜಿ ಹೇಳ್ಯೆತೆ. ಹಂಗಂದೇಟ್ಗೆ ದೊಡ್ಡಪ್ಪಯ್ಯ ತಟ್ಟೆಗಿದ್ದದ್ ಮುದ್ದೆ ಮುರ್‍ದ್ ಮುರುಕ್ ಮುದ್ದೇನಾ ತಿರಕಂಡ್ ತಿಂಬಾರಿಗೆ ಇಟ್ ಕಳ್ಯೆತೆ. ಇಂಥಾ ಮನಸಾ ನಮ್ ದೊಡ್ಡಪ್ಪಯ್ಯ.

ನನ್ ಖಾಸಾ ಅಕ್ಕಗಳು ಮೂರ್ ಜನ, ಆದ್ರೂ ನಮ್ಮ ದೊಡ್ಡಪ್ಪನ ಹೆಣ್ ಮಕ್ಳು ನಾಕ್ ಜನ ಸೇರಿ ನನಗೆ ಏಳ್ ಮಂದಿ ಅಕ್ಕಗಳು, ನನಗಿದ್ದೋನು ಒಬ್ಬ ತಮ್ಮ.

ದೊಡ್ಡಪ್ಪಯ್ಗೆ ಇಬ್ರು ಗಂಡು ಮಕ್ಳು, ಇಬ್ರೂ ನನಗಿಂತ ದೊಡ್ಡೋರು. ನಮ್ಮಪ್ಗೆ ನಾನೇ ಚಿಕ್ಕೋಳು. ದೊಡ್ಡಪ್ಪನ ಮಗಳೇ ನನಗಿಂತ ಸಣ್ಣೋಳು. ನಾನು ಹುಟ್ಟಿದ್ದು ಗೌನಳ್ಳಿ ಗೌಡ್ರ, ಮನೆಯಾಗಾದ್ರೂ, ಬೆಳೆದದ್ದು ನಮ್ಮ ಚಿಕ್ಕಮ್ಮ ಬೆಣ್ಣೆ ನಿಂಗಮ್ಮಂತಾಗೆ, ಕರೆಚಿಕ್ಕಯ್ಯನರೊಪ್ಪಾಗೆ, ನಿಂಗಮ್ಮಯ್ಯಗೆ ಮಕ್ಳಿರ್ಲಿಲ್ಲ. ನನ್ನ ಎಂಗ್ ಸಾಕಿದ್ಲೂ ಆ ಪುಣ್ಯಾತ್ಗಿತಿ ಅಂದ್ರೆ ನಾನು ಕೇಳಿದ್ದೇ ಆಗ್ಬೇಕು. ನನಿಗೆ ಇಂಥದೇ ಲಂಗ ಜಾಕೀಟು, ಬಳೆ ಬೇಕು ಅಂತ ಹಠ ಮಾಡ್ತಿದ್ದೆ. ನಿಂಗಪ್ಪಯ್ಯಾ, ನಿಂಗಮ್ಮಯ್ಯಾ ನನ್ನ ಸಾಕ್ತಾ ಸುಕ ಪಟ್ರೋ ಇಲ್ವೋ ನಾನು ಮಾತ್ರ ಸುಕವಾಗಿ ಬೆಳೆದೆ.

ನಾನು ಇಂಗೆ ದಾರ್ಬಾರ್ ಮಾಡ್ಕಂಡ್ ಕರೆಚಿಕ್ಕಯ್ಯನರೊಪ್ಲಾಗೆ ಬೆಳೀತಿದ್ರೆ, ಇಲ್ಲಿ ಗೌನಳ್ಳಿಗೆ ಒಂದು ವಿಚಿತ್ರ ನಡೀತಿತ್ತು. ನನ್ನ ಗಂಡಾ ಆಗಲಿದ್ದ ಗೊಂಚಿಗಾರ ಕರಿಯಪ್ಪನ ಮಗ ರಂಗಪ್ಪ, ನನಿಗೆ ನಿಮ್ಮ ಮಗಳು ಸಿದ್ದವ್ವನ್ನ ಕೊಡ್ಲಬೇಕು ಅಂತ ಅವರ ಕೂಡೆ ಇವರ ಕೂಡೆ ನಮ್ಮಪ್ಪ ನಮ್ಮಮ್ಮಾರಿಗೆ ಹೇಳಿಕೆ ಮಾಡ್ಸಿದ್ದರಂತೆ. ಅದೇ ರಂಗಪ್ಪನ ತಮ್ಮ ಹೊರಕೇರಪ್ಪಗೆ ನಮ್ಮಕ್ಕ ನಿಂಗಮ್ಮನ್ನ ಕೊಟ್ ಮದುವೆ ಮಾಡಬೇಕು ಅಂತ ಮಾತುಕತೆಯಾಗಿತ್ತಂತೆ. ಇದೇ ಮದುವೆ ಜತೆ ನಂದೂ ಆಗಬೇಕು ಅಂಬಾದು ರಂಗಪ್ಪನ ಆಲೋಚನೆ..... ಇದಕ್ಕೆ ನಮ್ಮಪ್ಪ-ಅಮ್ಮ, ದೊಡ್ಡಪ್ಪ-ದೊಡ್ಡಮ್ಮಾ ಯಾರೂ ಒಪ್ಪಲಿಲ್ಲವಂತೆ. ತಮ್ಮನಿಗೆ ಅಕ್ಕನ್ನ ಕೊಟ್ಟು, ತಂಗೀನ ಅಣ್ಣಗೆ ಕೊಡೋದು ಸರಿ ಅಲ್ಲ ಅಂತ ನಮ್ಮ ದೊಡ್ಡಪ್ಪ ಖಡಾಖಂಡಿತವಾಗಿ ಹೇಳಿದ್ರಂತೆ.

ಈ ಮಾರಾಯ ಬಿಡಬೇಕಲ್ಲ. ನಮ್ಮಮ್ಮಂತಕೋಗಿ ಗೋಳಾಡಿದ್ನಂತೆ. ನೀನಲ್ಲದೆ ಯಾರು ನನ್ನ ಕೈಲಿಡೀಬೇಕು, ಅಂತ ಅದೂ-ಇದೂ ಹೇಳಿ ಅಮ್ಮಯ್ಯನ್ನ ಒಪ್ಪಿಸ್ಕಂಡ್ ಬಿಟ್ರಂತೆ, ಸರಿ ಅಮ್ಮ ಒಪ್ಪಿದ್ ಮೇಲೆ ಅಪ್ಪಯಂತಾಗೆ ಪ್ರಸ್ತಾಪ ಮಾಡಿದ್ರಂತೆ. ಅದಕ್ಕೆ ನಮ್ಮಪ್ಪ ತಲೆ ಕೊಡವಿದ್ರಂತೆ. ತನ್ನ ಪಟ್ಟು ಬಿಡದಂಗೆ ಊರಾಗೆ ನಮ್ಮ ಮನೆ ಮುಂದೆ ದರಣಿ ಕುಂತನಂತೆ ರಂಗಪ್ಪ, ಇದೊಳ್ಳೆ ಗಾಚಾರ ಅಂದ್ಕೊಂಡು ದೊಡ್ಡಪ್ಪ, ನಮ್ಮಪ್ಪ, ದೊಡ್ಡಮ್ಮ ಎಲ್ಲೂ ಒಪ್ಪಿದ್ರಂತೆ.

ಈ ಸುದ್ದಿ ಕರೆಚಿಕ್ಕಯ್ಯನರೊಪ್ಪಕ್ಕೂ ಗೊತ್ತಾತು. ಇಲ್ಲಿ ನಿಂಗಪ್ಪಯ್ಯ, ಅಮ್ಮ ಯಾರೂ ಒಪ್ಪಲಿಲ್ಲ. ಅದೆಂಗ್ ಕೊಡ್ತಾರೆ. ಅವನಿಗೆ ಅರ್ಧವಯಸ್ಸಾಗೈತೆ. ನಮ್ಮುಡುಗೀಗೂ ಅವನಿಗೂ ಸರಿಹೊಂದಲ್ಲಾ ಅಂತ ಅಮ್ಮಯ್ಯ ತಲೆ ಕೊಡವಿದ್ಲು. ನಿಂಗಪ್ಪಯ್ಗೆ ಬಾಳ ಬೇಜಾರಾಗಿತ್ತು. ಏನು ಮಾಡಾಕಾಗುತ್ತೆ ಕಂಡೋರ ಮಕ್ಕಳ ಸಾಕಿದ್ರೆ ಇದೇ ಹಣೆಬರ ಅಂತ ಯಥೆಪಟ್ಟು. ಆಯಪ್ಪಗೆ - ನನ್ ರಂಗಪ್ಪಗೆ ಕೊಟ್ ಮದುವೆ ಮಾಡೋದು ಸುತಾರಾಂ ಇಷ್ಟ ಇರ್ಲಿಲ್ಲ.

ನನಿಗೆ ಯಾರೋ ಹೇಳಿದ್ದೇನಂದ್ರೆ ಈ ರಂಗಪ್ಪಗೆ ಸಣ್ಣಾವನಿದ್ದಾಗ ತಲೆಗೆ ಪೆಟ್ ಬಿದ್ದು, ಒಂದೊಂದ್ ಸಲ ಹೆಂಗೆಂಗೋ ಆಡ್ತಿದ್ದಂತೆ, ಇಂಥೋನಿಗೆ ನನ್ ಕಟ್ಟಾಕ್ತಾರಲ್ಲಪ್ಪ ದೇವ್ರ ಗುರು ಸಿದ್ರಾಮಾ ಅಂತ ಯೋಚ್ನೆ, ನಮ್ಮವ್ವನೆ ಕರೆಚಿಕ್ಕಯ್ಯನರೊಪ್ಪಕ್ಕೆ ಬಂದ್ಲು. ಬಂದೇಟ್ಗೆ ಅಪ್ಪಿಕೊಂಡು ಅತ್ತೆ. ಆಕೇನೂ ಅತ್ಲೂ. ನನ್ನ ತಲೇ ನೇವರಿಸಿ ಏಟೋ ಹೊತ್ಗೆ ಮಾತಾಡಿದ್ಲು.

ಋಣಾನುಸಂಬಂಧ ಕಣಮ್ಮಾ - ನಾವ್ ಕೈ ಹಿಡೀದಿದ್ರೆ ಅವನ್ನಾ ಯಾರ್ ಹಿಡೀತರಮ್ಮಾ ಅಂತ ಕಷ್ಟಪಟ್ ಆಂದ್ಲು, ಇದನ್ನ ಕೇಳಿದ ನನ್ನ ಸಾಕು ತಾಯಿ ಅವನಿನ್ನೇನ್ ಬ್ಯಾರೆ ಅಲ್ಲ. ಆದ್ರೆ ಅವನಿಗೆ ವಯಸ್ಸಾಗೈತಲ್ಲಮ್ಮ, ನಮ್ಮಗಳು ಇನ್ನೂ ಲಂಗಾ ಜಾಕೀಟ್ ಉಡುತ್ತಾಳೆ ಅಂದ್ಲು, ಎಲ್ಲ ಮುಗದೈತವ್ವಾ ಮಾತುಕತೆ ಎಲ್ಲಾ ಆತು. ಅಣ್ಣಿಗೆ ತಂಗಿ, ಅಕ್ಕಗೆ ತಮ್ಮ. ಇನ್ನು ಅದಿನೈದ್ ದಿನಕ್ಕೆ ಲಗ್ನಾ ಅಂದ್ಲು.

ನಿಂಗಪ್ಪಯ್ಯ ಹರ ಅನ್ನಲಿಲ್ಲ, ಶಿವ ಅನ್ನಲಿಲ್ಲ ಒಂದ್ ತರಾ ಒಳಗೇ ಅಸಮದಾನ ಆಯಪ್ಪಗೆ, ಮದುವೆಗೆ ಮೂರ್ ದಿನ ಇದ್ದಾಗ ಗೌನಳ್ಳೇರು ಬಂದ್ರು. ಮದ್ಲಿಂಗಿತ್ತಿ ಮಾಡಿದ್ರು. ಎಲ್ಲಾರೂ ಬಂದು ಧಾರೆ ಎರಕೊಟ್ರು. ಅಳಾದ್ ಬಿಟ್ರೆ ನನಗೇನೂ ಗೊತ್ತಿರ್ಲಿಲ್ಲ. ಮದಿವ್ಯಾದ್ರೂ ಒಂಥರಾ ಮೂಕಿಯಂಗಿದ್ದೆ.

ಮದಿವ್ಯಾಸ್ ಮ್ಯಾಗೆ ಸಂಸಾರ ಅಂದ್ರೇನು, ಗಂಡ-ಹೆಂಡ್ತಿ ಎಂಗಿರಬೇಕು ಅಂಬಾದೊ ಗೊತ್ತಿಲ್ಲ. ಒಂದೇ ಸಮಾದಾನ ಅಂದ್ರೆ ಜತೆಗೆ ನಮ್ಮಕ್ಕಯ್ಯ ಇದ್ಲು. ನಮ್ಮಜೆಮಾನ್ರಣ್ಣ ಬಾಳ ಮೆತ್ತನ್ನ ಮನಿಸ್ಯಾ, ಕೊನೆ ತಮ್ಮ ಕೆಲಸದಾಗಿದ್ದ. ಆಯಪ್ಪನ ಲಗ್ನ ಆಗಿದ್ದಿಲ್ಲ.

ಮನೆ ತುಂಬಾ ಜನಾ, ವಿಪರೀತ ಕೆಲಸ. ದಿನಾ ಬೆಳಗೀಲೆ ಎದ್ದೆಳಬೇಕು. ರಾತ್ರಿ ಬಾಳ ಹೊತ್ತಾಗಿ ಮಲಗಬೇಕು. ಹೊಲದ ಕೆಲಸ, ಮನೆ ಕೆಲಸ ಶಿವ ಶಿವಾ ಸಾಕು ಸಾಕಾಗಿತ್ತು ಅಂದ್ರೆ, ಮದುವೆ ಸಂಸಾರ ಅಂದ್ರೆ ಇದೇನೊ ಅಂಬಂಗಾಗಿತ್ತು. ಅಷ್ಟರಲ್ಲಿ ಮೈದುನನ ಲಗ್ನ ಆಯ್ತು.

ಆಯಪ್ಪನ ಹೆಂಡ್ತಿ ಗೌನಳ್ಳಿಗೆ ಬರಲಿಲ್ಲ. ತೌರುಮನೆಯಾಗೆ ಬಾಳದಿನ ಇದ್ದು. ಎಲ್ಲಾರೂ ಬೇರೆ ಬೇರೆಯಾದ್ವಿ, ಮೈದುನ ಹಿರಿಯೂರಗೆ ಬಾಡಿಗೆ ಮನೆ ಮಾಡಿ ಅಲ್ಲ ಇದ್ರು. ನಮ್ಮಕ್ಕ ನಾನು ಒಂದೇ ಮನೆಯಾಗಿದ್ವಿ. ನನಗಾಗಲೇ ನಾಲಕ್ಕೆಣ್ಣೂ ಮತ್ತೆ ಒಬ್ಬ ಮಗ ಆಗಿದ್ರು. ಎಂಗೆಂಗೋ ಇರತಿದ್ವಿ, ಆದರಾಗೆ ನನ ಗಂಡಗೆ ಕಾಯಿಲೆ ಆಗಿಬಿಡ್ತು.

ಹೊಟ್ಟೆ ಊತಬಂದು ಬಲು ತ್ರಾಸ ಪಡತಿದ್ರು, ಆಸ್ಪತ್ರೆ ಗೀಸ್ ಪತ್ರೆ ಎಲ್ಲ ಮುಗಿಸಿದ್ವಿ. ಇದ್ದಕ್ಕಿದಂಗೆ ಸತ್‌ಬಿಟ್ರು. ನನಗೆ ದಿಕ್ಕೇತೋಚದಂಗಾತು. ಮಕ್ಕಳೆಲ್ಲ ಸಣ್ಣವು. ಕೊನೆ ಮಗಳು ಗಂಗಮ್ಮಗೆ ಬಾಣ್ತಿಯಾಗಿದ್ದೆ.

ನಂದೇ ಒಂದ್ ಥರಾ ಕಣ್ಣೀರಿನ ಕತೆಯಾದ್ರೆ, ಅಲ್ಲಿ ನಮ್ಮಪ್ಪಯ್ಯಾರ ಮನಿಯಾಗೆ ನನ್ನ ಅಮ್ಮಗೂ ಕಾಯಿಲೆ, ದುರ್ಗ, ದಾವಣಗೆರೆ ಅಂತ ಆಸ್ಪತ್ರೆಗೆ ತೋರಿಸ್ಕಂಡ್ ಬಂದ್ರು, ಒಳಗೇ ನರಳುತಿದ್ದು ನಮ್ಮವ್ವ. ಈ ಮಾತಾಯೇನು ಉಳೀಲಿಲ್ಲ. ಆ ಹೊತ್ತಿಗಾಗ್ಲೆ ಈ ಇನ್ನೊಬ್ಬ ನನ ತಮ್ಮಗೆ ಕಾಕ್ಸಮ್ ಕಾಯಿಲೆ. ಆ ಮಾರಾಯ್ತು ಮಸಿಯಪ್ಪ ಸ್ವಾಮೇರು ಬೆಂಗಳೂರಿಗೆ ಕರಕಂಡೋಗಿ ಆಸ್ಪತ್ರೆಗೆ ತೋರಿಸ್ಕಂಡ್ ಬಂದ್ರು, ಬಾಳದಿನ ನಮ್ಮಪ್ಪ ನಮ್ಮವ್ವ ಮಾರಿಕಣಿಮೆ ಕಣುಮಕ್ಕನ ಗುಡಿಯಾಗಿದ್ದು ಬಂದ್ರು. ಈ ತಮ್ಮಾ ಕಾಕ್ಸಂ ಕಾಯಿಲೆ ಬಂದು ಬೆಂಕ್ಯಾಗೆ ಬಿದ್ದು ಸುಟ್ಟಗಂಡಿದ್ದ. ಒಂದಿನ ಅವನೂ ಈ ಲೋಕ ಬಿಟ್ಹೋದ. ಅಪ್ಪಯ್ಯನ ಮಕ ನೋಡಾಕಾಗ್ತಿರ್ಲಿಲ್ಲ. ಆಂಜನೇಯ ಸ್ವಾಮಿ ಗುಡಿ ಹಿಡಿದ್ ಬಿಟ್ಟಿದ್ರು. ಏಳ್ ಕೋಟಿ ಇದೆಂಥಾ ಶಿಕ್ಷೆ ಕೊಟ್ಯಲ್ಲಪ್ಪಾ ಅಂತ ಅಳೋರು. ನಮ್ಮಕ್ಕ ನಾನು ಅಳುತ ಕುಂತ್ರೆ ಶಿವನಾಜ್ಞೆ ಕಣ್ರಮ್ಮಾಪಾಲಿಸಲೇ ಬೇಕು ಅಂಬಾರು. ಅವರವರ ದುಕ್ಕ ಅವರವರಿಗೆ. ಸತ್ತೋರಿಗೆ ಎಷ್ಟು ದಿನಾಂತ ಅಳಾಕಾಗುತ್ತೆ. ನಿಧಾನವಾಗಿ ಮರೀತಾ ಬಂದ್ವಿ.

ನಮ್ಮನೆ ಕಡೆ ಬಾಳ ತ್ರಾಸ ಆಗ್ತಾ ಬಂತು. ನಮ್ಮಕ್ಕನ ಗಂಡಗೆ ಎದೆ ಉಬ್ಬಸ. ಬ್ಯಾಸಾಯ ಮಾಡರಿಲ್ಲದಂಗಾತು. ಕೋರಿಗೆ ಹೊಲ ಮಾಡ್ರಪ್ಪಾ ಅಂದ್ರೆ, ಮಳೆ ಬ್ಯಾರೆ ಇಲ್ಲಾ. ಕಷ್ಟ ಬಂದ್ರೆ ಹೆಂಗ್ ಬತ್ತವೇ ಅಂದ್ರೆ, ಅಂತಿಂಥರಾದ್ರೆ ಹೆದರ್ಕೋ ಬೇಕು, ಹಂಗಾಗುತ್ತೆ. ನಾನು ಬಗ್ಗಲಿಲ್ಲ. ಊರಿನಾಗೆ ಎಂಥೆಂಥೋರೋ ಕೂಲಿಗೋಗ್‌ತಿದ್ರು. ಅದೇ ನನಗೆ ಧೈರ್ಯ, ಮನೆ ಬಿಟ್ಟು ಕೂಲೀಗ್ ಹೊಳ್ತೆ, ನಮ್ಮಕ್ಕ ಮಾವ ಅತ್ರು. ಏನ್ ಮಾಡಾಕಾಗುತ್ತೆ? ಮೊದ ಮೊದ್ಲು ನಂನಮ್ಮೊರ ಹೊಲ್ದಾಗೇ ಕೂಲಿಗೋದೆ. ಆಮೇಲೆ ಎಲ್ಲಾರ ಹೊಲಕ್ಕೂ ಹೋದೆ.

ಕೂಲಿ ಕೆಲಸಕ್ಕೋಗ ಬೇಕು ಅಂದ್ರೆ ಖುಸಿಯಿಂದ ಹೋಗ್ತಿದ್ವಿ. ಯಾಕೆಂದ್ರೆ ಕೂಲಿ ಹೋದ್ ತಾವ ನಮ್ಮೂರ ಹೆಣ್ ಮಕ್ಳು ಎಂತೆಂಥಾ ಹಾಡು ಹೇಳ್ತಿದ್ರೂ ಅಂದ್ರೆ, ಅವನ್ನ ಕೇಳ್ತಾ ಕೇಳ್ತಾ ಕೆಲಸ ಮಾಡಿದ್ದೇ ಗೊತ್ತಾತ್ತಿರಲಿಲ್ಲ. ಒಂದೀಟೂ ಆಯಾಸ ಅಂಬದಾಗ್ತಿರಲಿಲ್ಲ.

ನಿಧಾನವಾಗಿ ಹಾಡು ಹೇಳೋರ ಜತಿಗೆ ದನಿಗೂಡಸೋದನ್ನ ರೂಢಿ ಮಾಡ್ಕಂಡೆ. ಆ ಮಾತಾಯೇರು ಸಿದ್ದವ್ವಾ ನಂ ಜತೀಗ್ ಬಾ, ನಂಜತೀಗ್ ಬಾ ಅಂತ ಕರೀತಿದ್ರು. ನಮ್ಮೂರಾಗೆ ಬ್ಯಾಸ್ಗೆ ಕಾಲ್ದಾಗೆ ಗಂಡು ಹುಡುಗರು ರಾತ್ರಿ ಹೊತ್ತಿನಾಗೆ ನಾಟ್ಕ ಪ್ರಾಕ್ಟಿಸ್

ಮಾಡ್ತಿದ್ರು. ನಂದು ಒಂದ್ ತರಾ ಹಾಗೇ ಆಯ್ತು. ಕೂಲಿ ಕೆಲಸಕ್ಕೆ ಹೋಗೋದೂ ಅಂದ್ರೆ ಹಾಡು ಹೇಳೋದ ಪ್ರಾಕ್ಟಿಸ್ ಮಾಡಿದಂಗೇ ಆಗ್ತಿತ್ತು. ಹಾಡು ಹೇಳೋರು ಒಂದ್ ಕಡೆ ತಮಾಷೆ ಮಾಡೋರು. ತಮ್ಮ ಗಂಡಂದಿರು ಹೆಂಗ್ ಮಾಡ್ತಾರೆ ಅಂಬೋದ್ನ ಹೇಳ್ಕೊಂಡು ನಗಾಡ್ತಿದ್ವಿ, ಒಬ್ರೆ ಇಬ್ರೆ ಎಲ್ಲಾರೂ ಒಂದೊಂದ್ ತರಾ ತಮಾಷೆ ಮಾಡ್ತಿದ್ವಿ. ಹಿಂಗಾಗಿ ಹಾಡು ಹೇಳೋದ್ ಕಲ್ಲುಗಂಡೆ, ಹಾಡ್ತಾ ಹಾಡ್ತಾ, ರಾಗ, ಕೆಮ್ತಾ, ಕೆಮ್ತಾ ರೋಗ ಅಂಬಂಗೆ ನಾನೂ ಕೂಡಾ ಹಾಡು ಹೇಳೋ ಹಂಗೆ ಆದೆ. ಮನೆ ಕೆಲಸ ಬಿಟ್ರೆ ಹೊಲದ ಕೆಲಸ ಅಂಬಾದು ಏನೇನೂ ಗೊತ್ತಿರಲಿಲ್ಲ, ಎಲ್ಲ ಕಲ್ಲುಗಂಡೆ ಅಂಬಾದ್ಕಿನ್ನಾ ಕಲಿಸಿದರು.

ಗದ್ದೆ ನಾಟಿ ಮಾಡೋದು ಕಳೆ ಕೀಳೋದು ಹೊಲ ಕೊಯ್ಯಾದು, ಆಮೇಕೆ ಕಣದ ಕೆಲಸ ಹಿಂಗೆ ಎಲ್ಲಾ ಕಲ್ತುಗೊಂಡೆ. ನಂ ಪಾಲಿಗೆ ಬಂದಿದ್ದ ಹೊಲ ಮಾಡಿಸಬೇಕು ಅಂದ್ರೆ ಬೀಜ ಗೊಬ್ಬರ ಕೂಡಿಸಬೇಕು. ಇವಿಷ್ಟೇ ಆದರೆ ಹೆಂಗೋ ಮಾಡಬಹುದಾಗಿತ್ತು, ಆದ್ರೆ ಹಂದಿ ಕಾಟ ಬೇರೆ. ರಾತ್ರಿ ಹೊತ್ತು ಹೊಲ ಕಾಯಾಕೆ ಹೋಗ್ಬೇಕೂ ಅಂದ್ರೆ ಕಷ್ಟ. ಹಿಂಗಾಗಿ ಹೊಲ ಕೋರಿಗೆ ಮಾಡೋರು ಕಮ್ಮಿಯಾದ್ರು: ಹೊಲ ಬೀಳು ಬಿದ್ರು ಸುಮ್ಮನೆ ನೋಡ್ಕಂಡಿರಂಗಾತು.

ಮಾರಾಯ್ತು ನನ್ನ ಮೈದನರು ನನ್ನವು ಎಲ್ಡ್ ಹೆಣ್ಮಕ್ಕಳಿಗೆ ಗಂಡು ಹುಡುಕಿದರು. ಬಲು ತ್ರಾಸಪಟ್ಟು ಮದುವೆ ಮಾಡಿದ್ವಿ. ನನ್ನಂಗೆ ಕೂಲಿ ನಾಲಿ ಅವರ ಅಣೆಯಾಗೆ ಬರ್ದಿರಲಿಲ್ಲ ಅಂತ ಕಾಣುತ್ತೆ. ಕೊಟ್ ಮನೇಗ್ ಇಬ್ರೂ ವೊದ್ರು.

ಇದ್ದ ಒಬ್ಬ ಮಗ ಓದಲೀ ಅಂತ ಮಾರಿಕಣಿವೆಗೆ, ಸಿದ್ಧಗಂಗೇಗೆ ಸ್ಕೂಲಿಗೆ ಸೇರಿಸಿದ್ವಿ. ಅವನ ಚಿಕ್ಕಪ್ಪನೇ ಎಲ್ಲಾ ಜವಾಬ್ದಾರಿ ತಗಂಡ್ ಸೇರಿಸಿಬಂದಿದ್ದರು. ಈ ಮಗ ಓದೋದ್ ಬಿಟ್ಟು ಫೇಲಾಗಿ ಕುಂತ್ಗಂಡ. ಮನೆ ಕಷ್ಟ ತಿಳಕೋಂಬೋಷ್ಟು ಪರಿಜ್ಞಾನ ಸಾಲದು. ನಾನೂ ಒಂದೀಟು ತಾತ್ಸಾರ ಮಾಡಿದೆ ಸಣ್ಣೋನು ಅಂತ. ಸೋಮಾರಿತನ ಬೆಳಸ್ಗಂಡ. ಹೋಗಲಿ ಹೊಲ ಮನೆಕೆಲಸ ನೋಡ್ಕೋ ಅಂದ್ರೆ, ಅವನಿಗೆ ಏನೊಂದೂ ಗೊತ್ತಿಲ್ಲ. ಅವನಿಗೆ ಕಲಿಸೋರ್ಯಾರು? ನನ್ನ ಕರ್ಮ ಅಂತ ಸುಮ್ಮಿರಾಕೂ ಆಗಲ್ಲ. ಒಂಥರಾ ಒಳಗೇ ನೋವು ಅನುಭವಿಸೋದೂ ನಡ್ಕಂಡ್ ಬಂದೈತೆ.

ಇಂಥದರಾಗೆ ದಿನಾ ಕೂಲಿ ಕೆಲಸಕ್ಕೆ ಹೋದ್ರೆ ಎಲ್ಲಾ ಮರೀಬೌದು. ದನಿಗೆ ದನಿ ಗೂಡಿಸಿದರೆ ಎಂಥೆಂಥವೋ ಕಥೆ ಬಂದೋಗ್ತವೆ - ಹೊತ್ತು ಹೋಗಿದ್ದೂ ಗೊತ್ತಾಗಲ್ಲ, ದಣಿವಾದ್ರೂ ಗೊತ್ತಾಗಲ್ಲ.

ಬೇಸಗೆ ಬಂತಂದ್ರೆ ಒಂದಿಟು ಕೂಲಿನಾಲಿ ಕಮ್ಮಿಯಾಗ್ತವೆ. ಕಣದ ಬದುಕು, ಅದು ಬಿಟ್ರೆ ಸಿರಾ ಕಡೆ ಸಾಬ್ರು ಬಂದು ಬೀಡಿ ಕಟ್ಟೋ ತೂಬರೆ ಎಲೆ ಕೂಡಿಕ್ಕೋ ಕೆಲಸ ಕೊಡ್ತಾರೆ. ಮೊದಲ ಕೋಳಿ ಕೂಗ್ತಲೇ ಎದ್ದು ತಿತಿಪಿತಿ ಅಂದ್ಕೊಂಡು ಓಡ್ತೀವಿ. ಮೊದುಮೊದಲು ಊರಿಗೆ ಹತ್ರ ಇರೋ ಗುಡ್ಡದಾಗೆ ತೂಬರೆ ಎಲೆ ಬಿಡಿಸುತ್ತಿದ್ವಿ. ಅವು ಮುಗಿದ ಮೇಲೆ ದೂರ ದೂರಕೆ ಅಂದ್ರೆ ಬಡೆತ್ತಿನ ಕಣಿವೆ ಸರ, ಆಲಗುಡ್ಡ, ಕೆನ್ನಳ್ಳಿ, ದೊಡ್ಡಕಮರದ ಮರದ ಬಯಲು, ಬೈರಜ್ಜಿ ಕಣಿಮೆ, ನೀರುಗುಡ್ಡ ಇಂಗೆ ಒಂದ್ ಕಡೆ ಅಂಬಂಗಿಲ್ಲ. ಒಂದೆಲೆ ಬಿಡದಂಗೆ ಕಿತ್ತು ಕಟ್ಟತಿದ್ವಿ.

ಒಳ್ಳೆ ಬೇಸಗೆ ಕಾಲ, ಚಿಕ್ಕೊಂಬತ್ತು ಆಗ್ತಾಲೆ ನೀರಿನ ದಾವರ, ತಗೊಂಡೋಗಿದ್ದ ನೀರು ಕುಡಿದರೆ ಮುಗಿತಾವೆ ಅಂಬೋದು ಒಂದೀಸೀಸ್ ಕುಡಿಯಾದು, ಎಲೆ ಕಿತ್ತು ಮೂಟೆ ಕಟ್ಟೋ ಹೊತ್ಗೆ ನೀರಿನ ಸೀಸ ಕಾಲಿಯಾಗ್ತಿದ್ದು, ಮೂಟೆ ಹೊತ್ಕಂಡ್ ತಿಣಿಕ್ಯಂಡು ಊರು ಸೇರೋ ಹೊತ್ಗೆ, ಹೊತ್ತು ನೆತ್ತಿಗೆ ಬಂದಿರುತ್ತೆ. ಮೂಟೆ ಕೆಳಗಾಕಿ ಒಂದು ಚೆಂಬು ನೀರು ಕುಡಿದ್ರೆ ಮುದ್ದೆ ಬ್ಯಾಡಾ ಯಾತ್ತು ಬ್ಯಾಡಾ ಅನ್ಸುತ್ತೆ.

ಒಂದಿನ ಮಗ ಅಮ್ಮ ತೂಬರೆ ಎಲೆ ಮೂಟೆ ಹೊತ್ಗಂಡು ಎಲ್ಲಾದ್ರೂ ಬಾ, ಪಂಚಾತಿ ಕಟ್ಟೆ ಮುಂದಂತು ಬರಬ್ಯಾಡ, ಪಂಚಾತಿ ಸೆಕೆಟ್ರಿ ನನ್ನ ಮಾನ ಕಳೀತಾರೆ ಅಂಬಾದೆ.

ಅಯ್ಯೋ ಮಗನೆ ಮಾಡ್ಕಂಡ್ ತಿನ್ನೋ ಅಂದ್ರೆ ಮರುವಾದೆ-ಗಿರುವಾದೆ ಅಂತೀಯಲ್ಲೋ, ನ್ಯಾಯವಾಗಿ ಬದುಕೋಕೆ ಮಾನ-ಮರುವಾದೆ ಅಡ್ಡ ಬರಲ್ಲಪ್ಪಾ ದುಡಿದು ಉಣ್ಣಾದು ಕಲಿ, ಉಂಡ ಅನ್ನಾ ಮೈಗತ್ತುತ್ತೆ, ಸೋಮಾರಿಯಾಗಬೇಡ" ಅಂದೆ.

ಹೊತ್ತು ಇಳಿಮುಖ ಆಗುತ್ತಲೇ ಮೂಟೆ ಬಿಚ್ಚಿ ಎಲೆ ಸುರ್ದು, ಕಟ್ಟುಜೋಡಿಸೋ ಕೆಲಸ ಚಾಲೂ ಆಗುತ್ತೆ, ಮಕ್ಕಳಿಬ್ರೂ ಕೈಜೋಡಿಸ್ತಾರೆ. ಮೈದಣಿವು ಕಮ್ಮಿಯಾದಂಗೆ ಪದಗಳು ಹೊರಬಾವೆ.

ಹೆತ್ತಾಸೆ ಇದ್ದಾರೆ ಮತ್ತಾರಿಗೆದರೇನು

ಹೆತ್ತಮ್ಮನಾಸೆ ಮಗನಾಸೇ | ಇದ್ದರೆ

ಹತ್ತೋಗ ರಥವ ತಡದೇನು

ಅಂಬದ್ನ ಹೇಳ್ಳೆಬೇಕು.

ನನ್ನ ಅಮ್ಮನ ನೆನಪಿನಾಗೆ

ತೌರುಮನೆಯಾ ಜ್ಯೋತಿ ತಣ್ಣಗುರಿಯದ ಕಂಡೆ
ತಲೆಬಾಗಿಲಲ್ಲೆ ಶರಣೆಂದೇ | ಜ್ಯೋತಮ್ಮ
ತನುವ ಕೊಡು ನನ್ನ ತವರೀಗೆ,

**ನನ್ನ ಸಾಕು ತಾಯಿ ಬೆಣ್ಣೆನಿಂಗಮ್ಮ ಅವಾಗವಾಗ ಹೇಳತಿದ್ಲು**

ಬಂಗಾರಕೆ ಬಳೆಯಡ್ಡ  ನಿಂಬೇಕೆ ಹುಳಿಯಡ್ಡ
ತಂಗಳನ್ನಕೆ, ಮೊಸರಡ್ತ  | ತಮ್ಮಯ್ಯ
ನೀನಪ್ಪ ನನ್ನ ಮಗಳಿಗೆ

ಸೆಜೆ ಅನ್ನಕೆ ಮಜ್ಜಿಗಿಲ್ಲ ಮಸರಿಲ್ಲ
ಆಹ್ವಾನದ ಕೊಂಪೆ ಗೌನಳ್ಳಿ | ಊರಮುಂದೆ
ಗುದ್ದಾಡುತ್ತಾರೆ ಸಗಣಿಗೆ

ಉಂಡ ಊಟ ಹೇಳು ಕಂಡ ಕನಸ ಹೇಳು
ಗಂಡನ ಮನೆಯೋರು ಬೈದಾರೆ
ಗಂಡನ ಮನೆಯೋರು ಬೈದಾರೆಂಬ ಸುದ್ದಿ
ತಂದೇಳಬ್ಯಾಡ ತವರೀಗೆ

ಈ ಪದಗಳು ಮತ್ತೆ ಮತ್ತೆ ನೆನಪಿಗೆ ಬತ್ತಾವೆ. ನನ ಮಗಳು ಗಂಗಾಳಿಗೆ ಇವು ಪಾಟ ಆಗ್ತವೆ. ಅವಳು ಹೇಳ್ತಾಳೆ, ಅಲ್ಲಮ್ಮ ಹಿಂದಿಂದೆಲ್ಲಾ ನೆನಿಸ್ಕಂಡ್ರೆ ಇನ್ನೋಟು ದುಕ್ಕ ಬರುತ್ತೇ ಅಂತಾಳೆ.

ಗಂಡು ಮಗನ್ನ ಹಡೆದೋಳಿಗೆ ಗಂಭೀರವೇನಮ್ಮ

ಕಂಬಳಿ ಕೋರಿ ಕಂಕುಳವಾಗೆ | ಇಟಗೊಂಡು

ಇಂಬಿಗೆ ಮನೆ ಮನೆಯ ತಿರುಗ್ತಾಳೆ

ಅಂಬಂಗಾಗ್ಯೆತಮ್ಮ ನನ ಬಾಳುವೆ ಅಂತೀನಿ. ಕೈ ಎಲೆ ಜೋಡಿಸ್ತಿದ್ರೆ, ತಲೆಯಾಗೆ ಏನೇನೋ ಹೊಳೀತವೆ. ಹೊತ್ತು ಮುಣುಗಿ ಕತ್ತಲಾಗೋ ತಂಕ ಎಲೆ ಕಟ್ಟು ಜೋಡಿಸ್ತೀವಿ. ಆವಾಗ ಮಗ ಎಲ್ಲಿಂದ್ರೂ ಬಂದು ಪ್ರತ್ಯಕ್ಷ ಆಗ್ತಾನೆ. ಬಂದೋನು ಜೋಡಿಸಿದ ಎಲೆಕಟ್ಟು ಹೊತ್ಕಂಡೋಗಿ ಲೆಕ್ಕ ತೀರೀಸ್ ಬತ್ತಾನೆ. ಎಲೆ ಇನ್ನಾ ಉಳಕೊಂಡ್ರೆ ಬೆಳಿಗ್ಗೆ ಮಗಳು ಜೋಡಿಸ್ತಾಳೆ.

ಒಂದೊಂದ್ ಸಲ ನಮ್ಮ ನೀಲಮ್ಮ ಬತ್ತಾಳೆ. ಆಕೆ ಬಂದ್ರೆ ಕುಣಿಯಂಗಾಗುತ್ತೆ. ಟೀ ಮಾಡಮ್ಮಾ ಅಂತ ಗಂಗಮ್ಮಗೆ ಹೇಳೋದೇ ಬೇಡ. ಅವಳು ಟೀ ಕಾಸ್ತಾಳೆ. ನೀಲಮ್ಮಂದು



ಹಾಸದಾದ್ರೆ ನಂದು ವದಿಯಾದು. ಇಬ್ರೂ ಪಡೆದದ್ದು ಬಡತನ. ಅವಳ ಮಗನೂ ಅನಿಷ್ಟ. ಕೆಲಸ ಮಾಡಿದ್ರೆ ಮಾಡ್ತಾನೆ, ಇಲ್ಲ ಅಂದ್ರೆ ಇಲ್ಲ. ತೀರಾ ನನ್ ಮಗನೋಟು ಸೋಂಬೇರಿ ಅಲ್ಲ.

ಟೀಕುಡಿದು ಅಡಿಕಲೆ ಹಾಕ್ಕೊಂಡ್ ಪದ ಹೇಳ್ತಿನಿ. ಇಂಥದೇ ಅಂತೇನಿಲ್ಲ. ಯಾರಾನ ಜೊತೆಗಾತೇರು ಬಂದ್ರೆ ಮುಗೀತು - ಮಾಡಕೆಲಸ ನಿಲ್ಲುತ್ತೆ, ಇಲ್ಲಾ ಎಲ್ಲಾರೂ ಸೇರ್ಕಂಡು ಇನ್ನಾ ಜೋರಾಗುತ್ತೆ. ನಾಳೆ ಚಿಂತೆ ಇಲ್ಲ. ಇವತ್ತುಂಡಿದ್ದು ಮಾತಾಡಿದ್ದು ನಮ್ ಪಾಲಿಗೆ, ಅದೇ ಸಾಕು ಅಂತೀವಿ, ಹೆಂಗಿದ್ರೂ ನಾಳೆ ಬೆಳಿಗ್ಗೆ ಕೋಳಿ ಕೂಗ್ತಾಲೇ ಎದ್ದು ಗುಡ್ಡಕ್ಕೊಗಿ ತೂಬರೆ ಎಲೆ ತರಬೇಕು. ಹಿಂಗಿರೋವಾಗ ಅಡಿಕೆ ಎಲೆ ಆಕ್ಕೊಂಡ್ ಮಾತಾಡ್ತೀವಿ, ಇಲ್‌ದಿದ್ರೆ ಬೇಜಾರಾಗಲ್ವೆ.

***

ಒಂದ್ಸಲ ಹೆಂಗಾತು ಅಂದ್ರೆ ಹತ್ತಿರದ ಗುಡ್ಡದಾಗಿನ ತೂಬರೇ ಎಲೆ ಎಲ್ಲಾ ಖಾಲಿಯಾಗಿದ್ದುವು. ಎಲೆ ತರೋರೆಲ್ಲ ಬೆಳಗೀಲೆ ಎದ್ದು ಆರೇಳು ಮೈಲಿ ನಡೆದು ಪಡುವಲ ಗುಡ್ಡ ಹತ್ತಿ ಇಳಿದು ನೀರಗುಡ್ಡಕ್ಕೋಗಿ ತೂಬರೆ ಎಲೆ ತರಬೇಕಾಗಿತ್ತು. ಮೊದಲ ಕೋಳಿ ಕೂಗ್ತಲೇ ಎದ್ದು ಮುಕ ತೊಳಕೊಂಡ ಶಿವಪೂಜೆ ಮಾಡ್ಕಂಡು, ಕುಡಿಯಾಕೆ ನೀರು ತಗಂಡು ತೂಬರೆ ಎಲೆಗಂತ ಹೊಲ್ದೆ. ಪಡುವಗಡೆ ಓಣೀಗೆ ಆಗಲೇ ನನಗಿಂತ ಮುಂಚೆ ಹೊಟ್ಟಿದ್ದೋರು ಮುಂದೆ ಮುಂದೆ ಹೋಗ್ತಾ ಇದ್ರು. ಹಿಂದೆಗಡೆ ಒಬ್ಬಾತ ಹೆಂಡ್ತಿ ಬಯ್‌ಕಂಡ್ ಬಾರ್ತಾ ಇದ್ದ. ಬಂಡೆಸರದ ತಾವ ಮುಂದ್ದೂರು, ಹಿಂದ್ಲೋರು ಕೂಡಿಕೊಂಡ್ವಿ. ಹಿಂದೆ ಬರೋ ಮನುಸ್ಯಾ ನಡಿ ನಿನ್ ಕಮರದಾಗೆಲ್ಲಾನ ಬಿಟ್ ಬತ್ತೀನಿ. ನೀ ತಂದ್ ಕಂಡ್ ಕರುಗಳಿಗೆ ಹುಲ್ಲಾಕ್ಕಂಡಿರೆ ಅಂದ್ರೆ ನಾನೂ ಬತ್ತೀನಿ ನಾನೂ ತಡ್ತೀನಿ ಅಂತ ಬಂದವ್ಳೇ. ಇವಳ ಕೈಲಿ ಗುಡ್ಡ ಹತ್ತೋಕ್ಕಾಗುತ್ತಾ, ಗುಡ್ಡ ಇಳಿಯೋಕಾಗುತ್ತಾ, ನೀರು ಗುಡ್ಡದಿಂದ ಎಲೆ ಮೂಟೆ ಹೊತ್ಕಂಡ್ ಬರಕಾಗುತ್ತಾ, ನೋಡ್ರಪ್ಪಾ-ನೋಡ್ರಮ್ಮ ಅಂತ ಹೇಳ್ತ ಕೂಡಿಕೊಂಡ. ಅವನ ಹಿಂದೆ ಮೂಕಿಯಾದ ಅವನ ಹೆಂಡ್ತಿ ನೂ ಬಂದ್ಲು.

ನಾನು ಅಂಗೆ ನೋಡ್ದೆ ಈ ಮಾತಾಯಿ ಗುಡ್ಡ ಹತ್ತೋದ್ ಬದ್ವೆ ಅಂದುಕೊಂಡೆ. ನಮ್ ಜತೆಗಿದ್ದೋರು ಬರಲಿ ಬಿಡು ಅಂದ್ರು. ಅಂಗಂತಲೇ ಮುಂದಕ್ಕೆ ಹೊಟ್ಟೆವು. ಗುಡ್ಡಗಾಡೇನು ರಸ್ತೆನಾ? ಕಾಲು ನಡೆದಿದ್ದೇ ದಾರಿ. ಸಾಲಾಗಿ ಒಬ್ಬರ ಹಿಂದೆ ಇನ್ನೊಬ್ಬರು ನಡಕಂಡ್ ಎಮ್ಮೆಕಣಿವೆಹತ್ತಿ ಪಡುವಲ ಮಗ್ಗುಲ ಇಳೀಬೇಕಾದ್ರೆ ಬೆಳಕು ಹರಿಯಿತು. ಬೆಳ್ಳಂಬೆಳಾಕಾದಾಗ ಹಿಂದಕ್ಕೆ ನೋಡಿದರೆ ಮೂಕವ್ವ ಕಷ್ಟಪಟ್ಗಂಡ್ ಗುಡ್ಡ ಇಳೀತಿದ್ದು ದೂರದಾಗೆ, ಎಲ್ಲರಿಗೂ ಏಟೋತ್ಗೆ ನೀರುಗುಡ್ಡಕ್ಕೆ ಹೋದೇವು, ಗಿಡ ಹುಡುಕಿ

ಎಲೆ ಕಿತ್ತೇವು ಅಂದ್ಕಂಡು ಸರಸರ ನಡೀತಿದ್ವಿ. ಮೂಕವ್ವನ ಗಂಡನೂ ನಮ್ಮಂತೇನೇ ಸರಬರ ನಡಕಂಡ್ ಬಂದ.

ನೀರುಗುಡ್ಡ ತಲುಪುತ್ತಲೇ ಗಿಡ ಹುಡುಕಿ ಎಲೆ ಕೀಳಲು ಎಲ್ಲರೂ ಚೆದುರಿದೆವು. ಯಾರಿಗೂ ಮೂಕವ್ವನನ್ನು ನೋಡುವ ಸಮಾಧಾನ ಇರಲಿಲ್ಲ.

ಚಿಕ್ಕುಂಬತ್ಗೆ ನಮ್ಮಲ್ಲಿ ಕೆಲವರು ಕಿತ್ತ ಎಲೆಗಳನ್ನು ಹಾದಿ ಸಮೀಪ ತಂದು ರಾಸಿ ಹಾಕಿ ಮತ್ತೆ ಗುಡ್ಡ ಹತ್ತಿದೆವು. ನಾನು ಎಲೆ ಮೂಟೆ ಹೊತ್ಕಂಡು ಬಂದು ಸುರಿದು ಮತ್ತೆ ಗುಡ್ಡ ಹತ್ತನಾ ಅಂತ ನೀರು ಕುಡಿಯಾಕೆ ನೀರಿನ ಸೀಸೆ ಇಟ್ಟಿದ್ದ ಜಾಗಕ್ಕೆ ಬಂದ್ರೆ ಅಲ್ಲಿ ಮೂಕವ್ವ ಕುಂತಿದ್ಲು, ನೀರುಕುಡಿದು ಎಲೆ ಕೀಳೋಲ್ವೆ ಎಂದು ಸನ್ನೆ ಮಾಡಿದೆ. ಹುಸಿನಗೆ ನಕ್ಕು ಸುಮ್ಮನಿದ್ದುದನ್ನು ಕಂಡು ಮತ್ತೆ ಗುಡ್ಡ ಅಡರಿದೆ.

ಎಲೆ ಕೀಳಬಹುದು, ಏಳೆಂಟು ಮೈಲಿ ಹೊರಬೇಕಲ್ಲ. ಅದರಗೂ ಗುಡ್ಡ ಹತ್ತ ಬೇಕಲ್ಲ ಅದಕ್ಕೆ ಎಷ್ಟು ಸಾಧ್ಯಾನೋ ಅಷ್ಟ ಎಲೆ ಕೀಳುತೀವಿ, ಮೈಯೆಲ್ಲಾ ಬೆವೆತು ಆಯಾಸವಾಗಿ ಸಾಕು ಶಿವನೇ ಅಂತ ಎಲೆ ಮೂಟೆ ಕಟ್ಟಣ ಅಂತ ಎಲೆ ರಾಸಿತಕ್ಕೆ ಬಂದೆ. ಆಗಲೆ ಅರ್ದ ಜನ ಬಂದು ಎಲೆ ಮೂಟೆ ಕಟ್ಟುತಿದ್ರು. ಇನ್ನರ್ಧ ಜನಾನೂ ಬಂದ್ರು. ಎಲ್ಲಾರೂ ಮೂಟೆ ಕಟ್ಟಿದ ಮೇಲೆ ಮೂಕವ್ವನ ಗಂಡ ತನ್ನ ಹೆಂಡ್ತಿಯನ್ನ ಜ್ಞಾಪಿಸಿಕೊಂಡ. ಅರೆರೆ ಮರ್ತೇ ಬಿಡ್ತಿದ್ವಿ, ಇಲ್ಲೆಲ್ಲೋ ಐದಾಳೆ ಹುಡಕಪ್ಪ ನಾನಾಗ್ಲೇ ಎಲೆ ಸುರುವಕೇಂತ ಬಂದಾಗ ಇಲ್ಲೆ ಕುಂತಿದ್ಲು ಅಂದೆ.

ಮೂಟೆ ಕಟ್ಟಿದವರೂ ಕೂಡ ಮೂಕವ್ವನ್ನ ಹುಡಿಕ್ಕಂಡು ದಿಕ್ಕಗೊಬ್ಬರಂತೆ ಹೊರಟರು. ನಾನೂ ಹೊರಟೆ. ಸುಮಾರು ಹೊತ್ತು ಹುಡುಕಾಟ ಮಾಡಿದ ಎಲ್ಲರಿಗೂ ಮೂಕವ್ವ ಸಿಗಲಿಲ್ಲ. ನಮಗೆಲ್ಲಾ ಬೇಜರಾತು. ಇವಳನ್ನ ಆರನ್ನಡವ್ಯಾಗೆ ಬಿಟ್ಟು ಎಂಗಪ್ಪಾ ಊರಿಗೆ ಹೋಗೋದು ಅಂದ್ಕಂಡ್ವಿ, ಕಮರದಾಗೆ ಎಲ್ಲಾದ್ರೂ ಬಿಟ್ ಬರ್ತೀನಿ ಅಂದಿದ್ದೆಲ್ಲಪ್ಪ ಅಂಗೆ ಆತಲ್ಲೋ ಅಂದೆ. ಅವಳ ಗಂಡಗೆ ತೀರ ಬೇಜಾರಾಗಿತ್ತು. ತೀರಾ ಹಠ ಮಾಡಿದ್ಲು, ನಾನು ಬರ್ತೀನಿ ಅಂತ, ಅದಕ್ಕೆ ಹಂಗಂದೆ. ಇವಳು ಎತ್ತಾಗಿ ಹೋಗಿರಬೌದು ಸಿದ್ದಮ್ಮ ಅಂದ ಆತ.

ಹೊತ್ತು ನೆತ್ತಿಮ್ಯಾಲಕೆ ಬಂತು. ಹೊಟ್ಟೆ ತೊಳಸ್ತಾ, ಐತೆ, ನೀರಿನ ದೊಣೆ ಹುಡುಕಿ ಕುಡಿಯಾಕೆ ಮೊದ್ಲು ನೀರ್ ತಗಂಬರ್ರೆಪ್ಪಾ ನೀರು ಕುಡಿದು ಉಡಕದೊ ಪಡಕದೊ ಮಾಡಾನಾ ಅಂದೆ. ಮೂವರು ಗಂಡಸ್ರು ಕಾಲೇಸೀಸೆ ತಗಂಡು ನೀರ್ ತರಾಕೇಂತ ಹೋದ್ರು.

ಉಳಿದೋರೆಲ್ಲಾ ಅಲ್ಲಲ್ಲೆ ಮರ ಗಿಡದ ನೆಳ್ಳಾಗೆ ಕುಂತ್ಗಂಡ್ವಿ. ಒಂದು ಗಿಡದ ನೆಳ್ಳಾಗ್ ಕುಂತ್ಗಂಡು, ನೀರು ಗುಡ್ಡದ ನೆತ್ತಿನೇ ನೋಡ್ತಾ ಇದ್ದೋಳಿಗೆ ಯಾತ್ತೋ ನೆತ್ತೆಗೆ ಮಿಸುಗಾಡ್ದಂಗೆ ಕಂಡಿತು. ನೋಡ್ತಾ ನೋಡ್ತಾ ಅದು ಮೂಕವ್ವಳೇ ಇರಬೇಕು ಅನ್ನಸಿತು.

ಆರನ್ನಾಡಿದ್ದಾಗೆ ತಿರುಗಿ ಹುಡುಕಿದೆವಲ್ಲೆ

ನೀರೆ ಸಿಗಲಿಲ್ಲ ನಮಗೆ | ನೆತ್ತಿಮಾರುವೋಳು

ಮೂಕವ್ವ  ಹೋಗಿ ಕರೆತರ್ಲೋ ಕೆಳಕೆ

ಅಂತ ನನ ಬಾಯಾಗೊಂದ್ ಪದ ತಾನಾಗಿ ಹೊರಬಿತ್ತು. ಏನು ಸಿದ್ದಪ್ಪಾ ಹೊಟ್ಟೆ ಹಸ್ದು ಬಾಯಾರಿ ಕಂಗಾಲಾಗಿರೋರ್ಗೆ ಇದ್ಯಾತ್ತೋ ಪದ ಹೇಳ್ತೀಯ, ಗುಡ್ಡ ಹತ್ತು ಅಂತೀಯ ಅಂದ್ರು ಒಂದಿಬ್ರು, ನೀರು ಗುಡ್ಡಾ ತೋರ್ಸಿ ಅಲ್ಲಿ ನನಗೆ ಮೂಕವ್ವ  ಕಾಣಿಸ್ತಳೇ, ಹೋಗಿ ಕರಕಂಡ್ ಬರ್ರೆಪ್ಪಾ ಅಂತ ದೈನೇಸಿ  ಪಟ್ಟೆ.

ಮನಸ್ಸಿಲ್ಲದ ಮನಸ್ಸಿಂದ ಬಂದಿಬ್ಬರೂ ಹತ್ತಿ ಹೋದರು. ಹೋದೋರ್ಗೆ ಅಲ್ಲಿ ಮೂಕವ್ವ ಅಳ್ತಾ ಕುಂತಿರೋದು ಕಂಡಿತು. ಎದ್ದಾಳೆ ಮಾರಾಗಿತ್ತಿ ಅಂತ ಆಕೇನಾ ಕರಕಂಡ್ ಕೆಳಗೆ ಬರೋ ಹೊತ್ಗೆ ನೀರಿಗೋದವರೂ ಬಂದ್ರು.

ಮೂಕವ್ವನ ಗಂಡ ಅಯ್ಯೋ ನಿನ್ನೌವ್ವ   ಈ ಉರಿ ಬಿಸಿಲಾಗಿ ಏಟು ಪಜೀತಿಗಿಟ್ನೆಲ್ಲೆ ಅಂದ. ನೀರು ಕುಡೀರ್ರಪ್ಪಾ. ಸಾಕು ಎದ್ದಾಳ್ರಿ ಊರು ಕಡೆ ಕಾಲಾಕಣಾ ಅಂದೆ. ಹಗಲೂಟದ ಹೊತ್ತು ಮೂಟೆ ಹೊತ್ಗೊಂಡು ಹೊಳ್ಟೆವು. ಹೊಟ್ಟೆ ಹೆಂಗ್ ಹಸಿದಿತ್ತು ಅಂದ್ರೆ ಒಬ್ಬೊಬ್ರೂ ಮಾತಾಡವಲ್ದು.

ಎಮ್ಮೆ ಕಣಿಮೆ ಹತ್ತೊ ಹೊತ್ಗೆ ಒಂದಾಳು ಉದ್ದ ಇತ್ತು ಹೊತ್ತು, ಇನ್ನೇನು ಊರು ಮುಟ್ಟೋ ಹೊತ್ತಿಗೆ ಹೊತ್ತು ಮುಣುಗುತ್ತಪ್ಪ ಅಂತ ಬಾಯಿ ಬಿಟ್ಟು ಜನ. ಅಲ್ಲಾ ಮರಾಗಿತ್ತಿ ಹೊಟ್ಟೆ ಹಸ್‌ದು ಕಣ್ಣು ಕಾಲು ಬಿಡಂಗಾಗೈತಿ. ನೀನು ಮೂಕವ್ವನ್ ಕಂಡೆ ಅಂತ ಪದ ಹೇಳ್ತೀಯ ಅಂದಳು ನನ್ನ ಜತೆಗಾತಿ. ಗುಡ್ಡದ ನೆತ್ತಿಮ್ಯಾಲೆ ಯಾತ್ತೊ ಮಿಸುಗಾಡಿದಂತೆ ಕಂಡಿತು. ಅದು ಮೂಕವ್ವನೇ ಇರಬೇಕು ಅಂದ್ಕಂಡೆ. ನನಗೆ ಅಂತ ಟೈಮಿನಾಗೆ ಹಾಡಾ ಹೇಳಂಗಾಗುತ್ತೆ ಕಣೇ ಅಂದೆ.

ನೀವು ನಡೀರಮ್ಮ ನಮ್ಮ ಯಜಮಾನಿ ಇನ್ನಾ ಹಿಂದೆ ಬಿದ್ದಾದಳೆ, ಅವಳನ್ನ ಕರಕಂಡ್ ಬತ್ತೀನಿ ಎಂದು ಮೂಟೆ ಕೆಳಗಾಕಿ ಕುಳಿತು ಕೊಂಡ ಮೂಕವ್ವನ ಗಂಡ. ನಾವೆಲ್ಲ ಮುಂದೆ ನಡೆದಿಪಿ. ಊರ ಜನ ಏನಾಗೈತೊ ಅಂತ ಇದಿರಿಗೆ ಬಂದ್ವಿ ಅಂತ

ನಾಕೈದು ಜನ ಎದುರಿಗೆ ಸಿಕ್ಕರು. ನನ್ನ ಮಗನೂ ಬಂದಿದ್ದ. ಎಲೆ ಮೂಟೆ ಅವನಿಗೆ ಹೊರಿಸಿ ಕುತ್ತೆ ಮುರಕಂಡೆ.

ಏನು ಹೇಳಾನಾ ನನ್ನ ಕತೆ. ಇದೂ ಒಂದ್ ಬದುಕೆ? ಬೆಳೆದ ಮಗಳಿಗೆ ಮದುವೆ ಮಾಡಿಲ್ಲ. ಮದುವೆ ನೆನಿಸ್ಕಂಡ್ರೆ ಭಯ ಆಗುತ್ತೆ. ಅವಳಿಗೆ ಒಳ್ಳೆ ಗಂಡ ಅಂಬೋನೋ ಎದಾನೊ ಏನೋ.

ಆಗ ಇನ್ನೊಂದಲ ಹೆಂಗಾತು ಅಂತೀಯ. ಆವಾಗ ತೊಬರೆ ಎಲೆ ಬಡೆತ್ತಿನ ಕಣಿಮೆ, ಕೆನ್ನಳ್ಳಿ ದೊಡ್ಡಕಮರದ ಮರದ ತಾವ ಸಿಗುತಿದ್ದು, ಮಾಮೂಲಿಯಂಗೆ ಮೊದಲ ಕೋಳಿ ಕೂಗಲ್ಲಿ ಎದ್ದು ಹೊಟ್ಟೆ. ನನಗೇನು ಅಂದಾಜು ಅಂದ್ರೆ ಎಲ್ಲಾ ಎದ್ದು ಹೋಗಿ ಬಿಟ್ಟಿದ್ದಾರೆ ಎಲೆ ಕೀಳೋಕೆ ಅಂತ. ಸುಮ್ಮನೆ ಒಬ್ಬಳೇ ಹೋಗ್ತಾ ಅದೀನಿ, ನೀನೇ ಅಂಬಾ ನರಪ್ರಾಣಿ ಹಿಂದಿಲ್ಲ-ಮುಂದಿಲ್ಲ. ಸುಮ್ಮನೆ ನಡೆದೂ ನಡೆದೂ ಬಡೆತ್ತಿನ ಕಣಿಮೆ ಸರ ದಾಟಿ ದೊಡ್ಡ ಕಮರದ ಮರದ ಕಡೆಗೆ ಹೋಗೊ ದಾರಿತಾವ ನಿಂತ್ಕಂಡೆ. ಮೂಡಗಡೆಗೆ ನೋಡ್ತೀನಿ ಬೆಳ್ಳಿ ಹುಟ್ಟಿತ್ತಾಗ್ಗೆ, ಇನ್ನೇನು ಬೆಳ್ಳಗಾಗುತ್ತೆ ಅಂದ್ಯಂಡು ದೊಡ್ಡ ಕಮರದ ಮರದ ತಾವ ತೂಬರೆ ಗಿಡ ಗುಂಪು ಗುಂಪಾಗಿ ಇದ್ದು, ಅಲ್ಲಿಗೆ ನಡೆದೆ. ಗಿಡ ಕಾಣಲೂ ರಾಪಾಟಿಗಂಡು ಎಲೆ ಕೀಳಿದ್ದೆ. ಮಗ್ಗುಲಾಗೆ ಯಾಕೋ ಹೊಸಮಣ್ಣು ಬಿದ್ದಿತ್ತು. ಕರಡೀನೋ ಪರಡೀನೋ ಗೊದ್ದ, ಸೆದಲಿಗೆ ಹುತ್ತ ಬಗೆದಿರಬೇಕು ಅಂದ್ಯಂಡು ಮುಂದ ಮುಂದಕೆ ಎಲೆ ಕಿತ್ಕಂಡು ನಡೆದೆ.

ಯಕೋ ಒಂದೀಟು ಮೂಡಗೆಡೆಗೆ ತಿರುಗಿದ್ನಪ್ಪಾ, ಎದೆ ಝುಲ್ ಅಂದ್‌ಬಿಡ್ತು. ಕೋಳಿ ಕೊಯ್ದು ತುಂಡು ಮಾಡಿ ಹಾಕೈದಾರೆ. ಕುಂಕುಮ, ಭಂಡಾರ, ಸೀಕ್ರೆಟ್ ಪ್ಯಾಕ್, ಊದಗಡ್ಡಿ, ತಂಗ್ಟೆ ಹೂವು ಇನ್ನಾ ಏನೇನೋ ಹರಡಿ ಬಿಟ್ಟಿದಾರೆ. ನೋಡ್ತಾ ನೋಡ್ತಾ. ಅಲ್ಲೆಲ್ಲಾ ಕಣದಡ್ಡಾರ ಅಗೆದು ಬಿಟ್ಟಿದ್ರು. ಅಲ್ಲೊಂದು ಕಡೆ ತಾಮ್ರದ ಅಂಡೇವು ಹೂಣಿದ್ದನ್ನ ಕಿತ್ಕಂಡ್ರೆ ಹೆಂಗ್ ಕಾಣುತ್ತೊ ಥೇಟ್ ಅಂಗೇನೆ ತಳ ಇದ್ದ ಜಾಗ ಕಂಡಿತು. ಮೈಯೆಲ್ಲಾ ಬೆವರಿ ಬಿಡ್ತು.

ಮೊದಲೇ ಆ ಜಾಗ, ಅಲ್ಲಿಗೆ ಹತ್ರ ಇರೊ ಬಾಣ್ತಿದೊಣ್ಣೆ, ಕೆನ್ನಳ್ಳಿ, ಬೈರಜಿ ಕಣಿವೆ ಎಲ್ಲಾ ಬಾಳ ಕೆಟ್ ಜಾಗ, ದೊಡ್ ಕಮರದ ಮರದ ತಾವ ಒಂದ್ ಗೊಲ್ಲರ ಹಟ್ಟಿ ಇತ್ತಂತೆ. ಕೆನ್ನಳ್ಳಿ ಮ್ಯಾಸನಾಯಕರು ಕೊಲೆ ಸುಲಿಗೆ ಮಾಡುತ್ತಿದ್ದನ್ನ ಕಂಡು ಹೆದರಿಕೊಂಡ್ ಊರ್‍ನೇ ಬಿಟ್ ಹೋದರಂತೆ. ಅಂಥ ಜಾಗದಾಗೆ ಯಾಕೆ ದುಡ್ಡು ಹೂಣಿರಬಾರ್‍ದು? ಅದ್ಕೇ ಕಣಮ್ಮಾ ಹತ್ ಹದಿನೈದು ದಿವಸದಿಂದ ಸಂಜೆ ಕಡೇಲಿ ಇತ್ಲಾಗ್ ತಾಯಿಗ್ಗಂಡ್ರು ಬತ್ತಿದ್ರು ಅಂದ್ಕಂಡೆ.

ಹಾರೆ ಸಲಿಕೆ, ಗ್ಯಾಸ್ ಲೈಟು ಇಂಥಾವೆಲ್ಲ ತಗಂಡು ಎಂಟು ಹತ್ತು ಜನ ಹತ್ ಹದಿನೈದು ದಿವ್ಸ ಸಂಜೆ ಕಡೆ ಬತ್ತಿದ್ರು. ಯಾಕೋಗ್ತಾರೋ, ಯಾರಿಗ್ಗೊತ್ತು, ಅಂದ್ಕಂಡು ಜನ ಮಾತಾಡಿಕಂಡ್ರು. ಎಂದೂ ಹೋಗದವರು ಈ ನಡುವೆ ಯಾಕೆ ಹೋಗ್ತಾರೇ ಅಂತ ಅನುಮಾನ ಪಟ್ಟು, ನಮಗ್ಯಾಕೆ ಉಸಾಬರಿ ಅಂತ ಸುಮ್ಮನಾಗಿದ್ರು.

ಏಟು ಸಿಕ್ಕಿತೋ, ಕೊಪ್ಪರಿಗೆ ದುಡ್ಡು ಅಂದ್ರೆ ಸುಮ್ಕೇನಾ? ಯಾವ ಮಾರಾಯ್ತು ಬಚ್ಚಿಕ್ಕಿದ್ರೊ, ಕಿರಾತರಿಗೆ ಸಿಕ್ಕೈತೆ ಅಂತ ಅನಕಂಡೇ ಎಲೆ ಕೀಳಾನ ಅಂತ ಮುಂದಕ್ಕೆ ಹೋದ್ರೆ ನಮ್ಮೂರಿನ ಇನ್ನೊಬ್ಬ ಆ ಮಗಳು ಇತ್ತಾಗೆ ಬರ್ತಿದ್ದು. ಅದಿನ್ಯಾವಾಗ ಬಂದೆ ಮಾರಾಗಿತ್ತಿ ಅಂತಲೇ ಬಂದ್ರು ಇನ್ನೊಂದಿಬ್ರು. ಅವರೆಲ್ಲರಿಗೂ ಇದನ್ನ ತೋರಿಸ್ದೆ. ಕಳ್ ನನ್ ಮಕ್ಕಳ್ರು ಕಷ್ಟಪಡಾಕಿಲ್ಲ ಹೊಟ್ಟೆ ತುಂಬಾ ಉಣ್ಣಾಕಿಲ್ಲ. ಯಾರೊ ಹೂಣಿದ್ದನ್ನು ಕದ್ದು ಬದುಕ್ತಾರೆ ಅಂದು ಶಾಪ ಕೊಟ್ರು.

ಬರ್ರೆಮ್ಮಾ ಇದನ್ನ ನೋಡ್ತಾ ನಿಂತ್ರೆ ಹೊತ್ತು ನೆತ್ತಿಗೆ ಬರುತ್ತೆ ಅಂತ ತೂಬರೆ ಎಲೆ ಕೀಳೋಕೆ ನಡೆದಿವಿ. ಹಿಂಗೆ ನಮ್ಮ ಬದುಕು ಕೋಳಿ ಕೂಗುತ್ಲೂ ಚಾಲು ಆಗುತ್ತೆ, ಎತ್ತು ಕಾಯಾ ಚುಕ್ಕೆ ಮುಣುಗಿದ ಮೇಲೆ ಮುಗಿಯುತ್ತೆ.

ನನ್ನ ತಮ್ಮ ಇದ್ದೋನೊಬ್ಬ ಸತ್ತ ಮ್ಯಾಲೆ ನಮ್ಮಪ್ಪ-ದೊಡ್ಡಪ್ಪನ ಮಕ್ಕಳೇ ನನ್ನ ಮಕ್ಕಳು ಅಂದ್ಕಂಡು ಒಂದು ಥರಾ ನೆಮ್ಮದಿಯಾಗಿರ್ತಿತ್ತು. ನಾವು ಹೆಣ್ಣುಮಕ್ಕಳು, ನಮಿಗೇನನಾ ಕೊಡ್ ಅಂತ ನಾನು, ನನ್ನ ಇನ್ನೊಬ್ಬು ಅಕ್ಕ ರುದ್ರಮ್ಮ (ಈಕೇನ ಕೊಳಾಳಿಗೆ ಕೊಟ್ಟೈತೆ.) ಇಬ್ರೂ ಕೇಳಿದಿವಿ. ಕೇಳಿದ್ದೇ ತಡಾ ನಮ್ಮಪ್ಪ ಛಟುಮ್ಮಂತ ಎದ್ದು ಮಾತಾಡ್‌ದಲೇ ಹೋಗಿ ಬಿಡ್ತು. ನಾವೇನ್ ಮಕ್ಕಳಲ್ವೆ? ಅಣ್ಣತಮ್ಮ ಸಾಯೋತಂಕ ಭಾಗ ಆಗಲ್ಲ ಅಂತ ಬಾಳಿದೋರು. ಹಂಗೆ ಬಾಳಲಿ, ಆದ್ರೆ ಬಡತನದಾಗಿರೋ ನಮ್ಮಿಗೆ ಎಳ್ಡೆಳ್ಡೆಕರೆನಾದ್ರೂ ಕೊಡು ಅಂತ ವರಾತ್ ಮಾಡಿದ್ವಿ.

ನಮ್ಮ ದೊಡ್ಡಪ್ಪನ ಮಕ್ಕಳು, ಅದರಾಗೂ ಸೂರ್ಯ-ಚಂದ್ರರಂಗಿರೋ ಗಂಡ್ ಮಕ್ಕಳು. ಮೂರುಕಣ್ಣಪ್ಪ, ತಮ್ಮ ಚೆಕ್ಕಣ್ಣ, ಚೆಕ್ಕಪ್ಪನ ಭಾಗದ ಜಮೀನು ಪೂರ್ತಿ ಕೊಟ್ರೂ ನಮದೇನು ತಕರಾರಿಲ್ಲ ಅಂತ ಖಡಾಖಂಡಿತವಾಗಿ ನಮ್ಮಪ್ಪಯ್ಯಗೇ ಹೇಳಿದ್ರು. ನಾನು ಆಸ್ತಿ ಭಾಗ ಮಾಡಲ್ಲಾಂತ ನಮ್ಮಪ್ಪ ಒಂದೇ ಪಟ್ಟು ಹಿಡೀತು. ಊರಾಗಿನ ಎಜಮಾನು ಯಾರ್‍ಯಾರೋ ಬಂದು ಹೇಳಿದ್ರು. ನಮ್ಮಪ್ಪಗೆ ಇವತ್ತೇನೋ ಆಸ್ತಿ ಭಾಗ ಆಗದಂಗಿರಬೌದು, ಮುಂದೆ ಇಂಗೇ ಇರುತ್ತೇಂತ ಹೇಳಾಕ್ ಬರುತ್ತಾ ಅಂದ್ರು, ಮುಂದಿಂದು ನನಗೆ ಬೇಕಿಲ್ತಯ್ಯಾ, ನಾನು ನಮ್ಮಣ್ಣ ಇಂಗೆ ಬಾಳಿದಿವಿ ಅಂಬೋದು ನನಗೆ ಮುಖ್ಯ. ನಾನು ನನ್ನ ಹೆಣ್ ಮಕ್ಕಳಿಗೆ ದ್ರೋಹ ಬಗದೇಂತ ಜನ ಆಡಿಕೊಂಡ್ರೂ ಆಡಿಕೊಳ್ಳಲಿ ಅಂದ್ರು. ಕಡೆಗೆ ಮಕ್ಕಳು ಕೊಟ್ರೆ ಇವರು ತಗಳಲಿ ಅಂತ ಒಂದು ಮಾತು ಆಡಿದರು.

ಊರೋರೆಲ್ಲಾ ಸೇರಿ ತಲಾಕ್ ಎರಡೆರಡೆಕರೆ ಕೊಟ್ರು. ನಮಿಗೊಂದ್ ಥರಾ ಆಯ್ತು, ಗಂಡನ ಆಸ್ತೀನೇ ಮಗ ಮಾಡಂಗಿಲ್ಲ ಇನ್ನು ಈ ಎರಡೆಕರೆ ಇನ್ಯಾತಗೆ ಅಂಬಂಗಾತು. ಹೂ ಎಂಥಾ ತಪ್ ಮಾಡಿದಿವಿ, ಮಾಡಿದ್ ಮ್ಯಾಲೆ ನೊಂದ್ ಕಂಡ್ರೆ ಏನು ಬಂದಂಗಾತು?

ನಮ್ಮಳ್ಳಿ ಕಡೆ ನಾವು ಮೈತೊಳಿಯೋದ್ ರಾತ್ರೆ ಹೊತ್ತಿನಾಗೆ ಬೆಳಿಗ್ಗೆ ಹೊತ್ತಿನಾಗೆ ಆಗಲ್ಲ. ದೇವರ ಪೂಜೆ ಮಾಡಿ ಉಂಡ ಮ್ಯಾಲೆ, ನನ್ನ ತೌರು ಮನೇಗ್ ಹೋಗೋ ಬೇಕು. ಇದೇ ಊರಾಗ್ ಕೊಟ್ಟಿರೋ ನಮ್ಮಕ್ಕಗಳೂ ಉಂಡು ಅಲ್ಲಿಗೆ ಬತ್ತಾರೆ. ನಮ್ಮಣ್ಣಗಳು, ಎಲ್ಲಾರೂ ಸೇರಂಡ್ ತಾಂಬೂಲ ಹಾಕ್ಕೊಂಡ್ ಅದೂ ಇದೂ ಮಾತಾಡತೀವಿ. ಮುಂದಲ ಮೂರ್ ಮನೇರು ಕೇಳಬೇಕು ಹಂಗೆ ನಗತಿವಿ.

ಒಂದೊಂದ್ ಸಲ ನೀಲಮ್ಮ ಮುಖ ಜೋಲು ಬಿಟಗಂಡ್ ಬತ್ತಾಳೆ. ಏನಾಗೈತೆ ಅಂತ ಅಳತೀಯಮ್ಮ ಕುರುಡರೂ ಕುಂಟರೂ ಜೀವನ ಮಾಡಲ್ವೆ? ಅಂತದ್ರಾಗೆ ನಮ್ಮದೇನು? ಕೂಲಿ ಮಾಡಕಂಡೋ ಇಲ್ಲ, ಇದ್ದಾ ಹೊಲ ಕೋರಿಗೆ ಕೊಟ್ಟಗಂಡ್ ಜೀವನ ಮಾಡಾನಾ ಅಂತ ಹೇಳುತೀನಿ. ನಂದೇನ್ ಗೋಳೋ, ಆಕೇದೂ ಅದೇನಾ, ನನ್ನ ಗಂಡ ತೀರಿಕೊಂಡ್ರು. ಆಕೆ ಎಜಮಾನರು ನನಗೆ ಮೈದುನಾ ಆಗಬೇಕು. ಆ ಮಾರಾಯ ಭೀಮಸೇನ ಇದ್ದಂಗಿದ್ದ. ಬರೇ ಯೋಚನೆ ಮಾಡ್ತಾ ಹದ್ದಿಗೆ ಕಡಿದಾಕಂಗಾಗಿದ್ದಾನೆ. ಮನುಷ್ಯಗೆ ಯೋಚನೇ ಅಂದ್ರೆ ಅಂಗೇಯ. ಎಲ್ಲಾರೂ ಒಂದಿನ ಸಾಯೋರೇ ತಾನೆ. ಅದಕ್ಯಾಕೆ ಯೋಚನೆ ಮಾಡಬೇಕು. ಹೆಣ್ ಹೆಂಗಸರಿಗೆ ಕಷ್ಟ ಬಂದ್ರೆ ಧೈರ್ಯ ಮಾಡತೀವಿ. ಈ ಗಂಡಸರು ಎಲ್ಲಾ ನೆಟ್‌ಗಿದ್ರೆ ಮಾತ್ರ ಯಜಮಾನಿಕೆ ಮಾಡ್ತಾರೆ. ಒಂದೀಟು ಮುಗ್ಗರಿಸಿದರೆ ಹೆಂಗಸಗಿಂತ ಕಡೆ.

ಒಂದಿನ, ಒಳ್ಳೆ ಬೇಸಗೆ ಕಾಲ. ತೂಬರೆ ಎಲೆ ಹೊತ್ಕಂಡು ಶಿವನೇ, ದೇವರೇ ಅಂತ ಬಾರ್ತಾ ಇದ್ದೀನಿ. ಅಯ್ಯಜ್ಜರ ರಂಗಪ್ಪ ಅಂಬ ಮನಿಸ್ಯಾ ಬಲು ಆತುರಗಾರ. ಇದಿರಿಗೆ ಓಡಿಬಂದು ಸರ ಸರ ಬಾರವ್ವ ಅಂತ ಕೂಗಿದ. ಏನಾಗಿದ್ದೀತು ಅಂತ ನಾನು ಹೆಜ್ಜೆ ಹಾಕ್ತಾ ಬಂದ್ರೆ, ಮನೆ ಮುಂದೆ ಬಿಳೀ ಕಾರು ನಿಂತಿತ್ತು. ನನಗೆ ನಮ್ಮಕ್ಕನ ಗಂಡ ಹೊರಕೇರಪ್ಪ ದುರ್ಗದ ಆಸ್ಪತ್ರೆಗೆ ಸೇರ್ಕಂಡಿದ್ದ. ಆಯಪ್ಪ ಏನಾದ್ರೂ ತೀರಿಕೊಂಡನೋ ಹೆಂಗೋ ಅಂಬಾ ದಡುಗು. ತೂಬರೆ ಎಲೆ ಗಂಟು ಇಳಿಸಿ ನೀರು ಕೊಡಮ್ಮಾ ಅಂತ ಇಸಗಂಡ್ ನೀರ್ ಕುಡದೆ.

ಮನೆ ಮುಂದೆ ಚಪ್ಪರದಾಗೆ ಅದ್ಯಾತಾತ್ನೋ ಬಿಚ್ಕಂಡು ಒಬ್ಬ ಮೇಡಮ್ಮ, ಇಬ್ಬರು ಗಂಡಸರು ಕುಂತಿದ್ರು. ರಂಗಪ್ಪ-ಬಾರವ್ವ  ಅವರು ಆಕಾಶವಾಣಿಯೋರು, ಬಂದ್ ಬಾಳ ಹೊತ್ತಾತು. ನಿನ್ನವು ಹಾಡು ರೆಕಾರ್ಡ್ ಮಾಡಾಕೆ ಬಂದಿದಾರೆ ಹೇಳು ಬಾ ಅಂದ. ಅಯ್ಯೋ ಶಿವನೆ ಒಂದೀಟು ಮೊದ್ಲೆ ಹೇಳಬಾರಾಗಿತ್ತೇ. ನೀಲಮ್ಮ ಇದ್ದಿದ್ರೆ ಚೆಂದಾಗಿತ್ತು ಅಂದುಕೊಂಡು ಹೋಗಿ ಕುತಗೊಂಡೆ. ಆ ಮೇಡಮ್ಮ ಸರ ಸರ ಏನೇನೋ ಕೇಳಿದಳು.



ಮಾಡ್ಕಳಮ್ಮಾ ಅಂತ ಬಾಯಿಗೆ ಬಂದಿದ್ದು ಹೇಳಿದೆ. ಊಟ ಮಾಡ್ಕಂಡ್ ಹೋಗ್ರಿ ಅಂದ್ರೆ ಭರ್‍ರಂತ ಹೋಗೇ ಬಿಟ್ರು. ಹಿಂಗೆ ನನ್ನ ಜೀವನದಾಗೆ ಯಾತ್ತೋ ಯಾವಾಗ್ಲೂ ಬರುತ್ತೆ, ಬಂದಂಗೇ ಹೋಗುತ್ತೆ. ಇಂಥದುಕ್ಕೆಲ್ಲಾ ಹೆಂಗೆ ಹೊಂದಿಕಂಡಿದ್ದೀನಿ ಅಂದ್ರೆ ಬಂದಾಗ ಬಾ ಅಂತೀನಿ, ಹೋದ್ರೆ ಹೋಗು ಅಂತೀನಿ. ಅದೇ ನನಗೆ ನಿರುಮ್ಮಳ.

ಈಗ ನೋಡಿ ಎಲ್ಲೋ ಬಿದ್ದಿದ್ದೋರ್‍ನ ದುರ್ಗಕ್ಕೆ ಕರೆಸಿದಿರಿ. ನಮ್ಮ ಮನೆಗೆ, ಕೇರೀಗೆ ಬಂದು ನಮ್ಮ ಪೋಟೋ ತಗಂಡ್ರಿ. ದುರ್ಗದಾಗೆ, ಮುರಿಗೇ ಸ್ವಾಮಿ ಮಠದಾಗೆ ಎರಡು ದಿನ, ನಮ್ಮಂಥ ಅನೇಕರನ್ನ ನೋಡೋ ಹಂಗೆ ಮಾಡಿದಿರಿ. ದೊಡ್ಡ ಮನಿಸ್ಕರ ಜತೆ ಮ್ಯಾಲೆ ಕುಂದರಿಸಿದಿರಿ. ಇದೆಲ್ಲಾ ನನಿಗೊಂದ್ ಥರಾ. ಯಾವ ಜನುಮದ ಪುಣ್ಯಾನೋ ಅಂದಂಡೆ, ನಿಮ್ಮೊಟ್ಟೆ ತಣ್ಣಗಿರ್‍ಲಿ.

ಇನ್ನೊಂದೇ ಕೊನೇ ವಿಷ್ಯಾ ಅಂದ್ರೆ ನನ ಮಗ ಶೇಖರಣ್ಣ ಧರ್ಮಸ್ಥಳಕ್ಕೊಗಿ ಬಂದ್ ಒಂದಿಟು ಜವಾಬ್ದಾರಿ ಮನಿಸ್ಕಾ ಆಗಿದ್ದಾನೆ. ಇದಕ್ಕಿಂತ ಸಂತೋಷದ ಸಮಾಚಾರ ಇನ್ನೇನೈತೆ?


# ನೀಲಮ್ಮ

ಗೌನಹಳ್ಳಿಯ ಇನ್ನೊಬ್ಬ ಗಾನ ಕೋಗಿಲೆ ನೀಲಮ್ಮನ ವಿಷಯಕ್ಕೆ ಬರೋಣ. ಸಿದ್ದಮ್ಮಳಂತೆ ನೀಲಮ್ಮಳೂ ದಿವಂಗತ ಗೊಂಚಿಗಾರ ಕರಿಯಪ್ಪರ ಸೊಸೆ, ಕರಿಯಪ್ಪರ ಎರಡನೇ ಪತ್ನಿ ನಿಂಗಮ್ಮಳ ಎರಡನೇ ಮಗ ಶಿಖರಪ್ಪನ ಮಡದಿ, ಈಕೆಯ ತೌರೂರು ಆದೇ ಹಿರಿಯೂರು ತಾಲ್ಲೂಕಿನ ತವನಿಧಿ, ತವನಿಧಿಯ ದಿವಂಗತ ಹುಚ್ಚಪ್ಪಗೌಡರ ಏಕಮಾತ್ರ ಪುತ್ರಿ, ಗಂಡ ಶಿಖರಪ್ಪನ ಖಾಸಾ ಅಕ್ಕ ಗಂಗೆ ಮಾಳವ್ವನ ಮಗಳು, ಸ್ಥಿತಿವಂತರಾದ ಹುಚ್ಚಪ್ಪಗೌಡರು ಅವರ ಅಣ್ಣಂದಿರು ಕೋಟೆಗೌಡರು ನೀಲಮ್ಮಳನ್ನು ತಮ್ಮ ಪ್ರೀತಿಯನ್ನು ಉಣ್ಣುಸಿಯೇ ಬೆಳಸಿದ್ದರು. ಈಕೆಯ ನಾಲ್ವರು ತಮ್ಮಂದಿರಿಗಿಂತಲೂ ಹೆಚ್ಚು ಧೈರಶಾಲಿಯಾಗಿ ಬೆಳೆದವಳೆಂದು ಆಕೆಯ ಹೇಳಿಕೆ.

ನಾನು ಚಿಕ್ಕವಳಾದಾಗಿಂದ ಬಂಗಾರದ ಸರಗಳ್ನ ಕೊರಳಗಾಕ್ಕೊಂಡೇ ಸ್ಕೂಲಿಗೆ ಹೋಗುತ್ತಿದ್ದೆ. ಸಾತ್ಕಾರ ಮಗಳು ಬಂದ್ಲು ಜಾಗ ಕೊಡಿರಮ್ಮಾ ಅಂತ ಮೇಸ್ಟರು ಹೇಳುತಿದ್ರು. ನಮ್ಮೂರ ಸ್ಕೂಲು ಓದು ಮುಗಿದ ಮ್ಯಾಲೆ-ನನಿಗೇನೋ ಓದಬೇಕು ಅಂತ ಮನಸ್ಸಿತ್ತು. ನಮ್ಮಪ್ಪ ಅಮ್ಮ ಸಾಕು ಬಿಡಮ್ಮ ಎಲ್ಲಿ ಓದುತ್ತೀಯ ಅನುಕೂಲ ಇಲ್ಲ. ಯಾವ ಊರಾಗೆ ಯಾರ ಮನೆಯಾಗೆ ನಿನ್ನ ಇರಿಸಾನಾ ಅಂದ್ರು. ನಿಮ್ಮಮ್ಮ ಬ್ಯಾರೆ ಒಬ್ಬಾಕೆ. ಹೊಲದಾಗೆ ಮನಿಯಾಗೇ ದಿನಾ ಕೂಲಿ ಆಳುಗಳು. ಅವರಿಗೆ ಅಡಿಗೆ ಮಾಡೇ ಸಾಕಾಗುತಿತ್ತು. ತಮ್ಮಂದಿರು ಎಲ್ಲಾರೂ ಸ್ಕೂಲಿಗೆ ಹೋಗುತ್ತಿದ್ದರು. ಹಿಂಗಾಗಿ ನಾನು ಓದು ನಿಲ್ಲಿಸಿದೆ.

ನಮ್ಮಪ್ಪ ಯಾರಾದರೂ ಕಷ್ಟದಾಗಿದಾರೆ ಅಂದ್ರೆ ಬಾಳ ಸಹಾಯ ಮಾಡತಿದ್ರು. ಅದರಾಗೆ ಕೆಲವರು ಪತ್ರ ಬರಕೊಟ್ಟು ಸಾಲ ಅಂತ ದುಡ್ಡು ಈಸಗೊಳ್ಳುತಿದ್ರು. ಆ ದುಡ್ಡಿನ ಲೆಕ್ಕಾಚಾರ ನಾನೇ ಮಾಡುತ್ತಿದ್ದೆ. ಎಲ್ಲಾ ಕಬ್ಬಿಣದ ಟ್ರೆಜರಿ ಒಳಗಿಟ್ಟು ಬೀಗ ಹಾಕಿ ಮತ್ತೆ ಬೀಗ ನನ್ನ ಕೈಗೆ ಕೊಡುತಿದ್ರು.

ಕೆಲವು ಸಲ ನಮ್ಮ  ದೊಡ್ಡಪ್ಪಗೆ ಟ್ರೆಜರಿ ಬೀಗ ತಗುದು ಪತ್ರ, ದುಡ್ಡು ತೋರಿಸಬೇಕಾಗಿತ್ತು. ನಮ್ಮಪ್ಪಗಳು ಆಸ್ತಿ ಭಾಗ ಮಾಡಿಕೊಂಡಿರಲಿಲ್ಲ. ನಮ್ಮ ದೊಡ್ಡಪ್ಪಗೆ



ಮದುವೆಯಾಗಿರಲಿಲ್ಲ. ನಮ್ಮವು ಒಂದಿನ್ನೂರು ದನ ಇದ್ದು, ಅವುನ್ನಾ ನೋಡಿಕಳೋ ಜವಾಬ್ದಾರಿ ನಮ್ಮ ದೊಡ್ಡಪ್ಪಂದು. ಆದ್ರೂ ಯಾವ ಹೊಲಕ್ಕೆ ಏನು ಬಿತ್ತಿಸಬೇಕು, ಗೊಬ್ಬರ ಹಾಕಬೇಕಾ ಇಂತಾವನ್ನ ನಮ್ಮಪ್ಪಗೆ ಹೇಳಿ ಮಾಡಿಸತಿದ್ರು. ನಮ್ಮಪ್ಪಗಳಿಬ್ರೂ ಎಷ್ಟು ಚಂದಾಗಿದ್ರೂ ಅಂದ್ರೆ ನಮ್ಮಪ್ಪ ಹಳೆ ಅಂಗಿ ಹಾಕ್ಕೊಂಡು ಹಿರಿಯೂರಿಗೆ ಹೊರಟರೆ, ದೊಡ್ಡಪ್ಪ ತಡೆದು ನಿಲ್ಲಿಸಿ, ಒಳ್ಳೆ ಅಂಗಿ ಹಾಕ್ಕೋ ಅಂತ ಬೈಯ್ಯುತ್ತಿದ್ದರು. ನಮ್ಮವ್ವ ನಾನು ಒಳಗೊಳಗೆ ನಗುತಿದ್ವಿ.

ನಮ್ಮಪ್ಪನೂ ಆಷ್ಟೆ, ದೊಡ್ಡಪ್ಪಯ್ಯಗೆ ಮನೆಯಾಗೆ ಹಬ್ಬ ಮಾಡಿದ್ದಾರೆ ಊಟ ಮಾಡಕೊಂಡ್ ಹೋಗು, ದನಗಳೇನೂ ಓಡಿ ಹೋಗೋಲ್ಲ ಅಂತ ಜಬರದಸ್ತಾಗಿ ಹೇಳತಿದ್ರು. ಇಂಥ ಮನುಷ್ಯರನ್ನ ಕಾಣಕಾದೀತೆ?

ಸುಖವಾಗಿ ಆಡಿಕೊಂಡು ಇದ್ರೆ ಒಳಗೊಳಗೇ ನನ್ನ ಲಗ್ನ ಮಾಡಬೇಕೂಂತ, ನಮ್ಮ ಅಜ್ಜಿ, ನಮ್ಮ ಅವ್ವ ಮಾತಾಡಿಕೊಂಡು ಬಿಟ್ಟಿದ್ರು. ನಮ್ಮ ಅಪ್ಪಾಜಿಗೆ ಇವರು ಹೇಳಿದಾಗ ಕಿಡಿ ಕಿಡಿಯಾಗಿ ಬಿಟ್ರಂತೆ, ಗಂಡು ಯಾರು ಗೊತ್ತೆ ನಮ್ಮವ್ವನ ತಮ್ಮ ಶಿಖರಪ್ಪ. ಅವರೂರಾಗೇ ಬಡೆತ್ತು ಕಟ್ಟಿಗೊಂಡು ಬಡಿವಾರ ಮಾಡ್ತಾನೆ ಗೊಂಚೆಗಾರ ಕರಿಯಣ್ಣಾ ಅಂತ ತಮಾಷೆ ಮಾಡ್ತಿದ್ರಂತೆ ಹುಡುಗರು. ಆ ಮನೆಗೆ ಕೊಡಬೇಕೂಂತ ಅಜ್ಜಿ ಉಪರಾಲು, ನಮ್ಮವ್ವನೂ ಒಪ್ಪಿದ್ರು, ಆದರೆ ಅಪ್ಪಯ್ಯರಿಬ್ರೂ ಒಪ್ಪಿರಲಿಲ್ಲ. ಅಯ್ಯೋ ಅಯ್ಯೋ ಇದೇ ಒಂದು ದೊಡ್ಡ ರಾದ್ಧಾಂತ ಆಗಿಬಿಡ್ತು. ಅಜ್ಜಿ ಅಮ್ಮ ಒಂದು ಕಡೆ, ನಮ್ಮಪ್ಪಯ್ಯರಿಬ್ರೂ ಇನ್ನೊಂದು ಕಡೆ.

ಹೊಸಾ ಸಂಬಂಧ ಮಾಡಾನ ಅಂತ ಅಪ್ಪಯ್ಯ ಇಷ್ಟ ಪಟ್ರೆ ನನ್ನ ತಮ್ಮಗೇ ನಾನು ಕೊಡಾದು ಅಂತ ನಮ್ಮವ್ವ. ಎಷ್ಟೋ ಸಲ ಅಮ್ಮ-ಅಪ್ಪ ಜಗಳ ಆಡಿದರೂ, ನಮ್ಮವ್ವ ಬಗ್ಗಲಿಲ್ಲ. ಕೊನೆಗೆ ನಮ್ಮವ್ವನೇ ಗೆದ್ದು. ನಮ್ಮಪ್ಪ ದೊಡ್ಡಪ್ಪ ಬಂದು ಧಾರೆ ಎರೆಕೊಟ್ರು. ಗೌನಳ್ಳೀರು ಮದುವೆಗೆ ತಂದಿದ್ದ ಅಡಿಕೆ ಸಾಲದೆ ಬಂತು. ನಮ್ಮಪ್ಪಯ್ಯ ಮನೆಯಾಗೆ ಅಡಿಕೆ ಇದ್ರೂ ಕೊಡಲಿಲ್ಲ. ಅವರು ಅಂಗಡಿಗೋಗಿ ಕೊಂಡಕಂಡು ಬಂದ್ರು. ಮದುವೆಯಾದ ಮೇಲೆ, ಮದಲಿಂಗಪ್ಪ ಅಳಿಯೂಟಕ್ಕೆ ಮೂರೇ ಮೂರು ದಿನ ಇದ್ರು. ಅಷ್ಟೇ ಅಲ್ಲ, ಮದುವೆಯಾದ ಮೇಲೆ ಮೂರು ವರ್ಷ ತೌರು ಮನಿಯಾಗೆ ಇದ್ದೆ. ಇವರು ಕರೆದೊಯ್ಯಬೇಕು ಅಂತ ಬಂದ್ರೆ ಇನ್ನೂ ನಾಲ್ಕು ದಿನ ಕಳಿಸೋಲ್ಲ ಅಂತ ಹಿಂದಕ್ಕೆ ಕಳಿಸುತಿದ್ರು ನಮ್ಮಪ್ಪ.

ಸರಿ ಗಂಡನ ಮನಿಗೆ ಬಂದೆ. ಮೂರುಜನ ಅಣ್ಣತಮ್ಮಗಳು ಒಂದೇ ಮನೆಯಾಗಿರಬಾರು ಅಂತ, ಬ್ಯಾರೆ ಮನೆ ಮಾಡಿದರು ನಮ್ಮೊರು. ಅಜ್ಜಿ ಆವಾಗಾಗ್ಲೆ ಅಂಗಡಿ ನಡೆಸುತಿದ್ರು. ನಮ್ಮೊರು ಅದನ್ನಾ ತಮ್ಮ ಸುಬರ್ದಿಗೆ ತಗಂಡು ಚೆನ್ನಾಗೇನೆ

ಅಂಗಡಿ ನಡೆಸಿದ್ರು. ಅತ್ತಾಗಿ ಬ್ಯಾಸಾಯಾನೂ ಮಾಡಿಸುತಿದ್ರು. ಇಂಗೇ ನಡೀತು ಕೆಲವು ವರ್ಷ. ಈವಾಗ ನನಿಗೊಂದ್ ಲಾಭ ಆಯ್ತು, ಹೆಂಗಂದ್ರೆ ನಮ್ಮಜ್ಜಿ ಅಂಗಡಿ ನಿಂಗಜ್ಜಿ ಅಂತಾಲೆ ಆಕೇನ ಕರೀತಿದ್ರು. ಈ ಪುಣ್ಯಾತಿ ಅಬ್ಬಬ್ಬಾ ಅದೆಷ್ಟು ಹಾಡು ಹೇಳತಿದ್ರು ಅಂದ್ರೆ ಪದ ಹೇಳದ ದಿನವೇ ಇಲ್ಲ. ಯಾರಾರೋ ಹೆಂಗಸರು ಬಂದು ಎಲೆ ಅಡಿಕೆ ಹಾಕ್ಕೊಂಡು ನಿಧಾನಕ್ಕೆ ರಾಗ ಹೊರಡಿಸಿದರೆ ಎರಡು ಮೂರು ಗಂಟೆ ನಿಲ್ಲಿಸುತ್ತಿರಲಿಲ್ಲ. ಇದನ್ನ ಕೇಳೋಕೆ ನನಿಗೊಂದು ಹಬ್ಬ.

ನನ್ನ ಮಕ್ಕಳು ನಮ್ಮಜ್ಜಿ ಸಂಗೀತ ಕೇಳ್ತಾಲೇ ಬೆಳೆದವು. ನನ್ನ ಮನಸ್ಸಿನಾಗೆ ನಾನೂ ಆಕೆಯಂಗೇ ಹಾಡೋದನ್ನ ಕಲೀಬೇಕು ಅಂಬ ಆಸೆ ಮಾತ್ರ ಬೆಟ್ಟದಷ್ಟು. ಅಜ್ಜಿ ಹಾಡ್ತಾ ಇದ್ರೆ ನಾನೂ ಕೂಡಾ ಗುಂಯ್‌ಗುಟ್ಟುತ್ತಿದ್ದೆ. ನನ್ನ ಹಿರೇಮಗಳು ರಂಗಮ್ಮ ಅಜ್ಜಿ ಹಾಡ್ತಾ, ಕುಂದ್ರೆ ಕಣ್ಣರಳಿಸಿಕೊಂಡು ಕೇಳಿತ್ತು, ಕಂದಮ್ಮನ್ನ ನೋಡ್ತಾನೇ ನಾನೂ ಅಜ್ಜಿ ಹಾಡಿಗೆ ದನಿಗೂಡಿಸಿದೆ.

ಒಂದ್ ಸಲ ಹೆಂಗಾತು ಅಂದ್ರೆ, ಅಯಯ್ಯೋ ಸುಮ್ ಸುಮ್ಕೆ ಮೂರು ವರ್ಷ ತವಂದೇ (ತವನಿಧಿಯ ಮೂಲ ನಾಮ)ಗೇ ಇದ್ದೆ. ಮದುವೆಯಾಗಲೆ ಗಂಡನ ಮನಿಗೆ ಬಂದಿದ್ರೆ, ಇನ್ನಷ್ಟು ಹಾಡು ಹೇಳಾದು ಕಲೀತಿದ್ದೆ ಅಂಬಂಗಾತು. ನಮ್ಮಜ್ಜಿ ಜತಿಗೆ ಹಾಡೋಕೆ ಬರೋ ಹೆಂಗಸ್ರು ಬರೇ ಅಜ್ಜಿ ಜತೆಗೆ ಹಾಡೋರೇ ಎಲ್ಲ - ತಾವು ತಾವೇ ಹಾಡೋ ಶಕ್ತಿ ಸಾಲದು. ಮೊದಲ ಸೊಲ್ಲು ಅಜ್ಜಿ ಎತ್ತಿಗಂಡ್ರೆ ಜತಿಗೆ ದನಿಗೂಡಿಸೋ ಮಂದಿ.

ಇಂಗೆ ಅಜ್ಜಿ ಮೊಮ್ಮಗಳು ಹಾಡು ಹೇಳೋ ಸಿರಿಯಾಗೇ ಇರಬೇಕಾದ್ರೆ. ಅಜ್ಜಿಗೆ ಕಾಯಿಲೆ ಕಾಣಿಸಿಕೊಂಡಿತು. ಆವಾಗಿನ್ನೇನು ನಾನು ಅಜ್ಜಿ ಇದ್ರೆ, ಒಂದೊಂದ್ ಸಲ ಅಜ್ಜಿ ಅದೇನೋ ಧ್ಯಾನಿಸಿಕೊಂಡು ಎಂಥಾ ರಾಗವಾಗಿ ಹಾಡುತಿದ್ರು ಅಂದ್ರೆ ಎಂಥ ಕಲ್ಲೆದೇನೂ ಕರಗಬೇಕು. ಅಂಥಾದ್ದು ಆಕೆಯ ದನಿ, ಮತ್ತೆ ಮನಸ್ಸು. ಅಜ್ಜಿ ಜೀವನದಲ್ಲಿ ಬಾಳ ನೊಂದವರು. ನಮ್ಮಜ್ಜಗೆ ಇಬ್ಬರು ಹೆಂಡಿರು. ಮೊದಲ ಹೆಂಡತಿ ರುದ್ರಜ್ಜಿ. ಈಕೆಯಿಂದೇನು ಚಿಕ್ಕ ಹೆಂಡ್ತಿಯಾಗಿದ್ದ ನಮ್ಮಜ್ಜಿಗೆ ತೊಂದರೆ ಇರಲಿಲ್ಲ. ಇಬ್ಬರೂ ತುಂಬಾ ಅನ್ನೋನ್ಯವಾಗೇನೇ ಇದ್ದವರು. ಅಜ್ಜ ಬದುಕಿರೋವಾಗಲೇ ಹಿರೇ ಹೆಂಡ್ತಿ ಮಕ್ಕಳು, ಚಿಕ್ಕ ಹೆಂಡ್ತಿ ಮಕ್ಕಳು ಆಸ್ತಿ ಪಾಲು ವಿಭಾಗ ಮಾಡಿಕೊಂಡಿದ್ರು. ಹಿಂಗಾಗಿ ನಮ್ಮಜ್ಜಿ ತನ್ನ ಮಕ್ಕಳ ಜತೆಗೆ ಇರತಿದ್ರು.

ನಮ್ಮಜ್ಜಿ ಮಕ್ಕಳು ಮೂರು ಜನಾದ್ರೂ, ನಮ್ಮೆಜಮಾನರ ಹತ್ತಿರಾನೆ ಇರತಿದ್ರು. ವಿಜಮಾನನ್ನ ಅಂಗಡೇಗೆ ಕೂಡ್ರಿಸಿ ಯಾರ ಮನೇಗೇನಾದ್ರೂ ಒಸಗೆ, ಶೋಭನ, ಲಗ್ನ ಇಂಥವಿದ್ರೆ ಅಜ್ಜಿ ಕರಿಯಾಕೆ ಬತ್ತಿದ್ರು. ಬತ್ತೀನ್ ನಡೀರಮ್ಮ ಅಂದ್ರೆ ಬಿಡತಿರಲಿಲ್ಲ. ಬಾರಜ್ಜಿ ಅಂತ ಜತಿಗೆ ಕರಕಂಡ್ ಹೋಗತಿದ್ರು. ಅಜ್ಜಿ ಅಲ್ಲಿಗೆ ಹೋದ ಕೂಡಲೇ ಎಲ್ಲಾ ಕಾವ್ಯಗಳೂ ಆರಂಭ.



ಈಗ ಅಜ್ಜಿಗೆ ಕಾಯಿಲೆ ಕಾಣಿಸಿಕೊಂಡು, ಹಾಡು ಹೇಳೋ ಹೆಣ್ಣು ಮಕ್ಕಳು ಕಮ್ಮಿಯಾದ್ರು, ಆವಾಗ ನಮ್ಮಂಥೋರಿಗೆ ಡಿಮ್ಯಾಂಡು. ಮೊದಮೊದಲು ನಾನು ಅಂಜಿಕೊಡ್ತಿದ್ದೆ. ನಮ್ಮ ಸಿದ್ದಮ್ಮಾ ಬಾರೆ ನೀಲ ಅದಕ್ಯಾಗೆ ನಾಚ್ಗೆ ಅಂತ ನನಿಗೆ ಹುರಿದುಂಬಿಸಿದ್ಲು. ಅಜ್ಜಿ ಜತೆಗೆ ಹೋಗಿ ನನಗೆ ರೂಢಿಯಾಗಿತ್ತು. ಹಿಂಗಾಗಿ ನಾನೂ ಹಾಡು ಹೇಳೋ ಹಾಗಾದೆ.

ಈ ನಡುವೆ ನನ್ನ ಹಿರೇ ಮಗಳು ರಂಗಮ್ಮ ತೀರಿಕೊಂಡ್ಲು, ನಮಗೆ ಏನೂ ತಿಳಿದಂಗಾತು. ಈ ಹುಡುಗಿ ಎಷ್ಟು ಸಲೀಸಾಗಿದ್ದೋಳು. ಅವಳು ನಡೆದಾಡಿದರೆ ತೇರು ಹರಿದಂಗೆ, ಮಾತಾಡಿದ್ರೆ ಮುತ್ತು ಉದುರುತಿದ್ದು. ಅವಳು ನಗಬೇಕು ಹಲ್ಲು-ಮುತ್ತು ಜೋಡಿಸಿದಂಗೆ, ಮನಸಾರೆ ನಗತಿದ್ಲು - ಇದ್ದಕ್ಕಿದ್ದಂಗೇ ಹೊರಟು ಹೋದ್ಲು, ಮಗಳು ಸತ್ತು ಸ್ವಲ್ಪ ದಿನಾ ಅಗಿಲ್ಲ. ಅಜ್ಜಿಗೆ ಕಾಯಿಲೆ ಸೀರಿಯಸ್ ಆಗಿಬಿಡ್ತು, ಆಸ್ಪತ್ರೆ, ಅಂಗಡಿ, ಬೇಸಾಯ ಯಾವುದನ್ನ ನೋಡ್ಕೊಬೇಕು ಅಂಬಂಗಾಗಿ ಬಿಡ್ತು. ಎಜಮಾನ್ರು ತಲೆ ಮೇಲೆ ಕೈ ಇಟ್ಟು ಕೂತಗೊಂಡು ಬಿಟ್ರು.

ಕಷ್ಟ ಮನುಷ್ಯರಿಗೆ ಬಾರದೆ ಮರಕ್ಕೆ ಬರುತ್ತಾ ಅನುಭವಿಸಬೇಕು. ಧೈರಗೆಡಬಾರ್ದು ಅಂತ ಊರಿನಾಗೆ ಎಜಮಾನರುಗಳು ಬಂದು ಧೈರ್ಯ ತುಂಬುತಿದ್ರು. ಆದರೂ ಅಂಗಡಿ ಡೀಲಾ ಅಗಿಬಿಡ್ತು.

ಅಂಗಡಿ ಮಾಡೋದನ್ನ ಬಿಟ್ಟೆವು. ಊರ ತುಂಬಾ ಬಾಕಿದಾರ್ರು. ಇಂಥ ಕಷ್ಟದಾಗ, ನಿಮ್ಮ ಬಾಕಿ ತೀರ್ಲಿ ಸಹಾಯ ಮಾಡ್ರಿ ಅಂದ್ರೆ ಒಬ್ಬೊಬ್ಬರು ಕೊಟ್ರು, ಕೊಟ್ಟು ಅಂಗಡಿ ನಡಸೀ ಬಿಡಬ್ಯಾಡ್ರಿ ಅಂತ ಹೇಳಿದರೆ ನಮ್ಮೆಜಮಾನ್ರಿಗೆ ಕಿವಿಯಾಗೆ ಹೋಗಲಿಲ್ಲ. ಬಾಕಿ ಇದ್ದೋರು ಬ್ಯಾರೆ ಅಂಗಡಿ ಹುಡುಕಿಕೊಂಡರೆ ವಿನಾ ನಮಗೆ ಕಷ್ಟಗಾಲದಾಗೆ ಸಹಾಯ ಮಾಡಲಿಲ್ಲ.

ಅಂಗಡಿ ಬಿಟ್ಟಿದ್ದೇ ಬಂತು ನಮಗೆ ಕೇಡುಗಾಲ, ಮಗ ಓದಲಿ ಅಂತ ತುಮಕೂರಿನ ಸಿದ್ಧಗಂಗಾ ಮಠದ ಸ್ಕೂಲಿಗೆ ಸೇರಿಸಿ ಬಂದ್ರು ಎಜಮಾನರು. ಈ ಮಗ ಓದೋದನ್ನ ಬಿಟ್ಟು ತುಮಕೂರಾಗೆ ಜವಳಿ ಅಂಗಡೀಲಿ ಕೆಲಸಕ್ಕೆ ಸೇರಿಕೊಂಡ. ಇವನೇನಾದ್ರೂ ಒಂದೀಟು ನಮಗೆ ಆಸರೆ ಆಗ್ತಾನೇಂತ ಅಂದುಕೊಂಡಿದ್ವಿ. ಅದು ಬರೇ ಕನಸಾತು. ಪೇಟೆಗೆ ಅವನು ಜೀವನ ಮಾಡೋದೇ ಕಷ್ಟ ಆಗಿರೋವಾಗ ನಮಗಿನ್ನೇನು ನೆರವಾಗ್ತಾನೆ? ವರ್ಷದಾಗೆ ಎರಡು ಸಲಾನೂ ಮೂರು ಸರ್ತಿನೋ ಬಂದು ಹೋದ. ಅವನು ಬಂದ್ರೆ ಅಂಗಡಿನಾದ್ರೂ ಮಾಡಾನಾಂತ, ಬಂದು ಬಿಡಪ್ಪಾಂತ ಎಜಮಾನರು ಹೇಳಿದರು. ಬರದೇನೋ ಬಂದ ಆದರೆ ಅಂಗಡಿ ಮಾಡಕಲ್ಲಾ ಉಂಡು ಅಡ್ಡಾಡಕೆ.

ಥೋ ಎಂಥ ಮಗನ್ನ ಹಡೆದಿಪಿ ಅಂದ್ಕಂಡ್ಡಿ ಗಂಡ ಹೆಂಡ್ತಿ, ಇವನಿಗೇನು ಕಮ್ಮಿ ಮಾಡಿದ್ವಿ ಅಂತ ಹಲುಬಿದ್ವಿ, ಏನು ಬಂತು? ಅವನಿಗಿಷ್ಟವಾದರೆ ಏನಾದರೂ ಮಾಡ್ತಾನೆ ಇಲ್ಲಂದ್ರೆ ಇಲ್ಲ. ಅಜ್ಜಿ ಹಾಸಿಗೆ ಹಿಡಿದ್ಯೆತೆ. ಗಂಡ ಎದೆ ನೋವು ಕೆಮ್ಮು ಅಂತ ಆಸ್ಪತ್ರೆ, ಮಾತ್ರೆ ಅಂತ ತಿರುಗಾಡ್ತಾರೆ. ಇಂಥ ಕಷ್ಟವಾಗೆ ನನ್ನವು ಎರಡು ಹೆಣ್ಣು ಮಕ್ಕಳು ಕೂಲಿಗೆ ಹೋಗ್ತಾರೆ. ಈ ಹೆಣ್ಣುಮಕ್ಕಳ ಅರಿವು ಇವನಿಗಿಲ್ಲ. ಹೋದವರ್ಷ ಸಿಕ್ಕಾಪಟ್ಟೆ ಮಳೆ ಬಂದು, ಮನೆ ಗೋಡೆ ಕುಸಗೊಂಡ್ ಬಿದ್ಯೆತೆ. ಅದನ್ನ ಸರಿಮಾಡಾಕೆ ಆಗ್ತಾ ಇಲ್ಲ.

ಹಿಂಗೇ ಬಡತನದಾಗೆ ಬೇಯಿತಾ ಇರಬೇಕಾದ್ರೆ ನಮ್ಮಜ್ಜಿ ಕಣ್ಣು ಮುಚ್ಚಿದಳು. ಹಾಡು ಹೇಳೋ ದೊಡ್ಡ ನಿಧೀನೇ ಕಣ್ಮುಚ್ಚಿದಂಗಾತು. ಇಡೀ ಊರಿಗೆ ಊರೇ ಗೋಳಾಡಿತು. ಇನ್ನ ನಮ್ಮಗತಿ ಏನೇಳೋದು, ಹೆಣ್ ಮಕ್ಕಳು ಕೂಲಿ ಮಾಡಬೇಕು ಬಾಳುವೆ ನಡೀಬೇಕು. ಜಮೀನಿದ್ರೂ ಬ್ಯಾಸಾಯ ಮಾಡೋರಿಲ್ದೆ ಬೀಳ ಬಿಡಂಗಾತು. ಸ್ವಲ್ಪ ದಿನ ಆದಮೇಲೆ ಎಜಮಾನರಿಗೆ ಕೆಮ್ಮು, ಎದೆ ನೋವು ಕಾಣಿಸಿಕೊಂಡವು. ಊರಾಗೆ ಎಂಥೆಂಥೋರೋ ಅಡಿಕೆ, ಬಾಳೆ ಅಂತ ಓಡಾಡುತಿದ್ರೆ ನಾವು ಕೂಲಿ ಮಾಡಿ ಜೀವನ ನಡೆಸೋ ಹಂಗೆ ಆಗಿಬಿಡ್ತು. ನಮ್ಮೆಜಮಾನರು ಆಸ್ಪತ್ರೆಗೆ ದುರ್ಗ, ಹಿರಿಯೂರು ಅಂತ ಅಲೆದಾಡಿದ್ರು. ಸದ್ಯ ಕಫ ಪರೀಕ್ಷೆ ಮಾಡಿದೋರು ಟಿ. ಬಿ. ಕಾಯಿಲೆ ಅಲ್ಲ ಅಲರ್ಜಿ ಅಂದ್ರು. ನಮ್ಮ ಮನಸ್ಸಿಗೆ ತುಸು ನೆಮ್ಮದಿ ಆಯ್ತು.

ಈ ನಡುವೆ ನನ್ನ ತೌರುಮನೆ ಸುದ್ದಿ ಹೇಳಲಿಲ್ಲ. ನಮ್ಮಪ್ಪ ಗಂಡನ ಮನಿಗೆ ಬರಲೇ ಇಲ್ಲ. ಅವರಿಗೆ ಎಂಥದ್ದೋ ಕಾಯಿಲೆ ಬಂತು. ನಾವು ನೋಡೋಕೆ ಹೋದಾಗ ಆಗಲೇ ಬಾಳಾ ಸುಸ್ತಾಗಿ ಬಿಟ್ಟಿದ್ರು. ಅವರು ಹೋಗೇ ಬಿಟ್ರು ಅಂತ ಸುದ್ದಿ ಬಂತು. ಅಣ್ಣತಮ್ಮಗಳು ಆಸ್ತಿ ಪಾಲು ವಿಭಾಗ ಮಾಡ್ಕಂಡ್ರು. ಎಂದಿದ್ರೂ ಒಂದಿನಾ ಆಗಲೇ ಬೇಕಿತ್ತು. ಆದರೆ ಎಲ್ಲರೂ ದೊಡೋರಾದ ಮೇಲೆ ಆಗಬಹುದಿತ್ತು.

ನಮ್ಮಪ್ಪಾರಿಗೂ ಇಬ್ಬರು ಹೆಂಡಿರು. ಹಿರೇ ಹೆಂಡತಿಗೆ ಒಬ್ಬರೇ ಮಗ ದೊಡ್ಡ ಭೀಮಣ್ಣ, ನಮ್ಮ ಅಮ್ಮನಿಗೆ ನಾಲ್ಕು ಜನ ಗಂಡು ಮಕ್ಕಳು, ನಾನೊಬ್ಬಳೇ ಹೆಣ್ಣು ಮಗಳು. ದೊಡ್ಡ ಭೀಮಣ್ಣ ಬೇರೆ ಇದ್ರು. ಇವರು ನಾಲ್ಕು ಜನ ಅಮ್ಮ ಬೇರೆ ಇದ್ರು. ಅಪ್ಪ ತೀರಿಕೊಂಡೋದ ಮೇಲೆ ತಮ್ಮ ಗೌನಳ್ಳಿಗೆ ಬಂದ್ರು. ಅವರಿಗೂ ಕಾಯಿಲೆ ಬಂತು.

ನೋಡ್ರಿ ಮನುಷ್ಯನಿಗೆ ಕಷ್ಟ ಬಂದ್ರೆ ಸರಮಾಲೆ, ಒಂದಾದ ಮೇಲೆ ಇನ್ನೊಂದು. ಅಂಗಡಿ ನಡೆಸೋದು ಬಿಟ್ಟಿ, ಬ್ಯಾಸಾಯ ಮಾತ್ರ ಕುಂಟಗಂಡು ನಡೀತಾ ಇತ್ತು. ಯಾತರ ಬ್ಯಾಸಾಯ? ಮನೆ ಮಗ ಗೇಯ್ಯ ಬೇಕು, ಬೆಳೆ ಬೆಳೆ ಬೇಕು. ಅಪ್ಪಗೆ ಕಾಯಿಲೆ, ಮಗ ಸೋಮಾರಿ, ನಾನಿದನ್ನೇ ಪಡಕಂಡು ಬಂದಿದ್ದೇಂತ ಕಾಣುತ್ತೆ.

ಕೂಳಿಗೆ ಬಡವರಾದ್ರೆ ಕುಲಕ್ಕೆ ಬಡವರೆ? ಊರತುಂಬ ಅಣ್ಣತಮ್ಮಗಳು ನೆಂಟರು. ಯಾವುದೇ ಶುಭಕಾರ ನಡೆದರೆ ತಪ್ಪದೇ ಕರೀತಿದ್ರು. ಅವರ ಮನೆಗಳಿಗೆ ಹೋದರೆ ಇನ್ನೇನು ಹಾಡು ಹೇಳಬೇಕು, ಇದ್ದದ್ದೇ ಬಡತನ ಹಾಗಂತ ಹಾಡೂ ಹೇಳಬಾರದೆ? ಹಾಡು ಹೇಳ್ತಾನಾದ್ರೂ ಕೆಲವು ಕಾಲ ಬಡತನ ಮರೀತೀವಿ, ಸ್ವಾಮಿ ಮೈಲಾರಲಿಂಗನ್ನ ನೆನೀತಾ ಹಾಡು ಚಾಲೂ ಆದ್ರೆ, ಆಯಪ್ಪನ ಹೆಸರೇಳಿ ಮುಕ್ತಾಯ ಮಾಡತೀವಿ. ಸ್ವಾಮಿಗಾದ್ರೂ ನಮ್ಮ ಮೇಲೆ ಕರುಣೆ ದಯ ಮೂಡಿದ್ರೆ ನಮ್ಮ ಕಷ್ಟ  ಬಗೆ ಹರದಾವು.

ನನ್ನ ಯಾವಜನ್ಮದ ಪುಣ್ಯವೋ, ನಮ್ಮ ಸಿದ್ದಮ್ಮ ನನಗೆ ಬೆಂಬಲವಾಗಿದ್ದಾಳೆ. ಹೆಣ್ಣು ಹೆಂಗು ನನಿಗೇನು ಸಪೋರ್ಟ್ ಕೊಟ್ಟಾಳು ಅಂದ್ಕೋಬೇಡಿ. ಎಂಥ ಕಷ್ಟದಾಗೂ ಧೈರ್ಯ  ಹೇಳ್ತಾಳೆ. ಆಕೇದು ನಂದೂ ಒಂದೇ ಥರಾ. ಇಬ್ರೂ ಒಂದೇ ಮನೆ ಸೊಸೆಯಂದಿರು. ಆಕೆಗೂ ನಾಲ್ಕು ಜನ ಹೆಣ್ಣುಮಕ್ಕಳು, ಒಬ್ಬನೇ ಮಗ. ನನಗೂ ಅಷ್ಟೆ. ಆಕೆ ಗಂಡ ತೀರಿಕೊಂಡೂ ಮಗ ಸೋಮಾರಿಯಾದ್ರೂ ತಲೆ ತಗ್ಗಿಸದೆ ಕೂಲಿ ನಾಲಿ ಮಾಡಿಕಂಡು ಜೀವನ ಮಾಡ್ತಾಳೆ. ಇಂಥವಳ ಧೈರ್ಯ ನಮ್ಮಂಥೋರಿಗೆ ಬಾಳ ನೆರವಾಗುತ್ತೆ.

ಮಾತಿಗೊಂದು ಗಾದೆ ಪದ ಹೇಳ್ತಾಳೆ ಈಕೆ. ಬಡತನ ಇದ್ರೆ ಒತ್ತಟ್ಟಿಗಿರುತ್ತೆ ಕಣೆ, ಉಳ್ಳೋರು ನಮ್ಮಹತ್ರ ಐತೇ ಅಂತ ನಮಗೆ ಕೊಟ್ಟಾರೆ? ಇನ್ನೂ ಇದ್ದೀತು, ಬಿಡು ಅಂತಾಳೆ.

ಹೆಣ್ಣು ಹೆಂಗ್ಸು ಕಣ ಕಾಯಾಕೆ ಹೋಗ್ತಾಳೆ. ನಮ್ಮೆಜಮಾನರು ಏನೋ ಕಷ್ಟಪಟ್ಟು ಬೋರು ಕೊರೆಸಿ, ಪಂಪುಸೆಟ್ ಹಾಕ್ಸಿದಾರೆ. ಈ ಅದ್ವಾನದ ಕರಂಟಾಗೆ, ರಾತ್ರಿ ಹೊತ್ತಿನಾಗ ಇಬ್ಬರೂ ಅಂದ್ರೆ ಸಿದ್ದಮ್ಮ ನಾನೂ ಹೋಗಿ ಬೋರಿನ ಮೋಟರ ಹತ್ರ ಮಲಗ್ತಿವಿ. ಕರಂಟ್ ಬಂದಾಗ ಎದ್ದು ನೀರು ಬಿಡುತೀವಿ.

ಈ ವರ್ಷ ನನ್ನ ಗಂಡ ಮಗ ಸೇರಿ ಒಂದೆಕೆರೆ ಗದ್ದೆ ಹೊಡಿದಿದ್ರು. ಮಗ್ಗುಲಾಗೆ ಸಿದ್ದಮ್ಮಂದೂ ಹೊಲ ಇತ್ತಲ್ಲ ಅದರಾಗೆ ಅರ್ಧನಾದ್ರೂ ಗದ್ದೆ ಹೊಡೀರಿ ಅಂದೆ. ಒಪ್ಪಿಕೊಂಡ್ರು. ಅಬ್ಬಬ್ಬ ನನ್ನ ಮಗ ಬಂದು ಈ ಕಾಂಗ್ರೆಸ್ ಗಿಡ ಕಿತ್ತ. ಅರ್ಧ ಎಕರೆ ಗದ್ದೆ ತುಳಿಸಿದೀಪಿ, ಒಂದೀಸು ಭತ್ತನಾದ್ರೂ ಆದ್ರೆ ಮಗಳ ಮದುವೆ ಕೂಡಿಬಂದ್ರೆ ಮಾಡಿ ಮುಗಿಸೋಣಾಂತ ನನ್ನ ಕಕಲಾತಿ ಅಂತ ಎಗ್ಗಿಲ್ಲದೆ ಹೇಳ್ತಾಳೆ. ಏನಮ್ಮಾ ಅಕ್ಕ ತಂಗಿದೀರು, ಈ ವರ್ಷ ಭತ್ತ ಬೆಳೆದು ಬಿಟ್ರೆ ಅಂತ ಹಾದ್ಯಾಗೋಗ ಜನ ಮಾತಾಡ್ತಾರೆ.

ಹಿಂಗೆ ನಮ್ಮ ಬದುಕು ಸಾಗತಿರಬೇಕಾದ್ರೆ ಊರ ಜನ ಎಲ್ಲಾ ಸೇರಿಕೊಂಡು ಮಂಡಲ ಪಂಚಾಯ್ತಿ ಮೆಂಬರು ಮಾಡಿದ್ರು, ಅಯ್ಯಯ್ಯಪ್ಪ ಎಲ್ಲೋ ಇದ್ದೋಳಿಗೆ

ಸಿದ್ದಮ್ಮ-ನೀಲಮ್ಮ | ೧೩.೫



ಇದ್ಯಾತ್ತೋ ಒಂದು ತಂದು ಕಟ್ಟಿದ್ರಲ್ಲಪ್ಪಾ ಅಂದ್ಕಂಡೆ. ತಿಂಗಳಿಗೆ ಒಂದು ಸರ್ತಿ ಪಂಚಾತಿ ಮೀಟಿಂಗ್ ಅಂತ ಸೂರಗಾನಳ್ಳಿಗೆ ಹೋಗಬೇಕಾಗಿತ್ತು. ನಮ್ಮೂರಾಗಿನ ಒಳಜಗಳ, ತರ್ಲೆ, ಎಲ್ಲಾ ಗೊತ್ತಾದಂಗಾತು. ಯಾವ್ಯಾವ ಜನ ಹೆಂಗ್ ನಾಟಕ ಆಡ್ತಾರೆ, ಹೆಂಗ್ ಬೇಕಾದ್ರೂ ಉಲ್ಟಾಪಲ್ಟಿಯಾಗ್ತಾರೆ ಅಂಬೋದು ತಿಳೀತು.

ಸೂರಗಾನಳ್ಳಿ, ಬೀರೇನಹಳ್ಳಿಯವರಿಗೆ ಪ್ರತಿಸಲ ಮೀಟಿಂಗ್‌ನಾಗೂ ಜಗಳ ಆಗಿತ್ತು, ನಾವು ಗೌನಳ್ಳಿಯೋರು, ಇಬ್ಬರಿಗೂ ಸಮಾಧಾನ ಹೇಳಬೇಕಾಗತಿತ್ತು. ಪಂಚಾತೆಗೆ ದುಡ್ಡ ಇಲ್ಲ ಅಂದ್ರೆ ನಮ್ಮೂರಾಗೆ ಅದು ಮಾಡಿಸಬೇಕು, ಇದು ಮಾಡಿಸಬೇಕು ಅಂತ ಉದ್ದುದ್ದ ಮಾತಾಡೋರೆ ಎಲ್ಲ. ನಾವು ಸುಮ್‌ಸುಮ್ಮೆ ತಿಂಗಳಿಗೊಂದು ಸಲ ಸೂರಗಾನಳ್ಳಿಗೋಗಿ ಬರಬೇಕು. ಸುಮ್ಮನೇ ಮನೆಯಾಗಿದ್ದೋಳಿಗೆ ಇದ್ಯಾತ್ತೊ ಒಂದು ಕಟ್ಟಿದರು. ಈ ಮುನಾಸಾಬು ಬ್ಯಾಡಾ ರಾಜೀನಾಮೆ ಕೊಡಾನ ಅಂತ ನಾವು ಹೇಳಿದರೆ ನಮ್ಮೂರ ಜನ ಅಲ್ಲಮ್ಮಾ ನಾವು ಯಾಕೆ ನಿನ್ನ ಮೆಂಬರ್ ಮಾಡಿದ್ದೀವಿ ಗೊತ್ತಾ, ನಿಮ್ಮಂಥೋರು ಒಬ್ರೊ-ಇಸ್ರೋ ಇದ್ರೆ ಎಲ್ಲಾ ಸರಿಯಾಗಿರುತ್ತೆ ಅಂದು ನಮ್ಮನ್ನೇ ಸುಮ್ಮನೆ ಮಾಡಿದರು.

ಅದೂ ಒಂದಾತು. ಈವಾಗ ಮಗ ಬಿಜೇಪಿ ಅಂತ ತಲೆ ಕೆಡಿಸಿಕೊಂಡು ಓಡಾಡ್ತಾನೆ.... ಏನು ಮಾಡಬೇಕೋ ತಿಳೀತಾ ಇಲ್ಲ

---

ಜಿ ಎಸ್ ಉಜ್ಜನಪ್ಪ, ವರದಿಗಾರರು

ಟೈಂಸ್ ಆಫ್ ಇಂಡಿಯಾ, ಚಿತ್ರದುರ್ಗ೫೭೭೫೦೧





ಬಯಲಾಟದ ನೇಮಕಲ್ಲಪ್ಪ

· ಬಿ.ಟಿ. ಚಂದ್ರಶೇಖರ

ಬಯಲು ಸೀಮೆಯಾದ ಚಿತ್ರದುರ್ಗ ಜಿಲ್ಲೆಯ ಪೂರ್ವ ಪ್ರಾಂತ್ಯದಲ್ಲಿ ಪ್ರಚಲಿತದಲ್ಲಿರುವ ಜನಪದ ರಂಗಭೂಮಿಯನ್ನು ಬಯಲಾಟ ಎಂದೇ ಕರೆಯುವುದು ವಾಡಿಕೆ. ಬಯಲಾಟದ ಅಪ್ಪಟ ಅಭಿಜಾತ ಪ್ರತಿಭೆ ನೇಮಕಲ್ಲಪ್ಪ, ಮೈಮನಗಳ ತುಂಬಾ ನಾಟಕದ ಗೀಳನ್ನು ತುಂಬಿಕೊಂಡ ನೇಮಕಲ್ಲಪ್ಪನ ಬದುಕು ಹೂವಿನ ಹಾಸಿಗೆಯಲ್ಲ. ಕಷ್ಟ ಕೋಟಲೆಗಳ ಮಧ್ಯೆಯೂ ಬಿಡದ ಸಂಗಾತಿಯಾಗಿ ತೊಡರಿಕೊಂಡದ್ದು ಈ ಕಲೆಯೊಂದೇ, ಇದರೊಂದಿಗೆ ಭಜನೆ, ಕೋಲಾಟಗಳೂ ಕೂಡಿಕೊಂಡು ನೇಮಕಲ್ಲಪ್ಪನನ್ನು ಪರಿಪೂರ್ಣ ಕಲಾವಿದನನ್ನಾಗಿಸಿದವು. ದ್ವೇಷ, ಅಸೂಯೆಗಳ, ಹುಟ್ಟಿದೂರಿನ ಪರಿಸರಕ್ಕೆ ತಂಪೆರೆಯುವ ತಂಗಾಳಿ ಈ ಕಲೆಯೊಂದೇ ಎಂಬುದನ್ನು ಅನುಭವದಿಂದ ಕಂಡುಕೊಂಡ ನೇಮಕಲ್ಲಪ್ಪನ ಜೀವನದರ್ಶನ ನಮ್ಮನ್ನು ಹಳೆಯ ಕಾಲದ ಗ್ರಾಮೀಣ ರಂಗಭೂಮಿಯತ್ತ ಸೆಳೆಯುತ್ತಾ, ನೀಡುವ ಇಣುಕು ನೋಟ ಅಪೂರ್ವವಾದುದು.

ಬಿ. ಟಿ. ಚಂದ್ರಶೇಖರ ಅವರು ತುಂಬಾ ಆಸಕ್ತಿಯಿಂದ ಈ ಗ್ರಾಮೀಣ ಕಲಾವಿದನ ಜೀವನ ಚಿತ್ರವನ್ನು ಅತ್ಯಂತ ವಿವರವಾಗಿ ದಾಖಲಿಸಿದ್ದಾರೆ. ಇಲ್ಲಿ ಆ ಕಲಾವಿದನ ಕೆಲವು ಅನುಭವಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

ನೇಮಕಲ್ಲಪ್ಪ, ಮಲ್ಲಪ್ಪನಹಳ್ಳಿ ಅಂಚೆ ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ

**ಜಾನುವಾರು ವೈದ್ಯ ತಾಯಜ್ಜಿ ಕರಿಯಣ್ಣ**

**0 ಈ ಮಹಾಲಿಂಗಪ್ಪ**

ಜಾನಪದ ವೈದ್ಯ ವಿದ್ಯೆ ಅತ್ಯಂತ ಪ್ರಾಚೀನವಾದುದು. ಇಂದು ಉನ್ನತವಾಗಿ ಬೆಳೆದಿರುವ ಎಲ್ಲಾ ವೈದ್ಯಶಾಖೆಗಳಿಗೆ ತಾಯಿ ಬೇರು. ಹಿಂದೊಮ್ಮೆ ಜಾನುವಾರುಗಳು ಸಮೃದ್ಧವಾಗಿದ್ದ ಕಾಲದಲ್ಲಿ ಹಳ್ಳಿ ಹಳ್ಳಿಗೂ ಇಂತಹ ನಾಟಿ ಪಂಡಿತರು ಸಿಗುತ್ತಿದ್ದರು. ಆದರೆ ಹುಲ್ಲುಗಾವಲುಗಳು ಕಡಿಮೆಯಾಗುತ್ತಾ ಬರುತ್ತಿದ್ದಂತೆ ಜಾನುವಾರುಗಳ ಸಂಖ್ಯೆಯೂ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿವೆ. ಹೀಗಾಗಿ ಪಂಡಿತರೂ ಅಪರೂಪವಾಗುತ್ತಿದ್ದಾರೆ. ಆದಾಗ್ಯೂ ಇಂದಿನ ಯಾಂತ್ರೀಕೃತ ಬೇಸಾಯದ ಸಂದರ್ಭದಲ್ಲೂ ಹಳ್ಳಿಯ ಬಡರೈತ ಇನ್ನೂ ಪಶುಗಳನ್ನೇ ನಂಬಿದ್ದಾನೆ. ಹೀಗಾಗಿ ಅಲ್ಲೊಬ್ಬ - ಇಲ್ಲೊಬ್ಬ ನಾಟಿ ವೈದ್ಯರು ಕಾಣುತ್ತಿದ್ದಾರೆ. ಮರೆಯಾಗುತ್ತಿರುವ ದೇಸಿ ವೈದ್ಯ ಪರಂಪರೆಯ ಪಳೆಯುಳಿಕೆಯೆಂಬಂತೆ ತಾಯಜ್ಜಿ ಕರಿಯಣ್ಣನವರು ಲಕ್ಷಕ್ಕೊಬ್ಬರು ಸಿಗುತ್ತಾರೆ.

ಈ. ಮಹಾಲಿಂಗಪ್ಪನವರು ಕರಿಯಣ್ಣನವರ ಚಿಕಿತ್ಸೆಯ ವಿಧಾನಗಳನ್ನು ಕೂಲಂಕುಶವಾಗಿ ಸಂಗ್ರಹಿಸಿದ್ದರೂ, ಇಲ್ಲಿ ಜನಪದ ವೈದ್ಯರ ಕಿರುಪರಿಚಯದೊಂದಿಗೆ ಅವರ ಅನುಭವದ ಘಟನೆಯೊಂದನ್ನು ಮಾತ್ರ ಪ್ರಸ್ತಾವಿಸಲಾಗಿದೆ; ಅವರು ನೀಡುವ ಇತರ ಚಿಕಿತ್ಸೆಯ ಪಿವರಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ.

---

ತಾಯಜ್ಜಿ ಕರಿಯಣ್ಣ, ಸಣ್ಣ ಕಿಟ್ಟದಹಳ್ಳಿ ಗೊಲ್ಲರ ಹಟ್ಟಿ

ಸಣ್ಣ ಕಿಟ್ಟದಹಳ್ಳಿ ಅಂಚೆ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



ನನ್ನ ಕೈಗುಣ

ನನ್ನೆಸ್ರು ಕರಿಯಣ್ಣ ಅಂತ. ನಮ್ಮುತ್ತಜ್ಜರು ಸಣ್ಣ ಕಿಟ್ಟದಳ್ಳಿಯಲ್ಲಿ ಹುಟ್ಟಿಬೆಳ್ದೋರು. ನಮ್ಮನೆಸ್ರು ಬುಡ್ಡಿರಜ್ಜ, ನನ್ನಪ್ಪನೆಸ್ರು ಸಣ್ಣಪ್ಪ ಅಂತ. ನಮ್ಮಮ್ಮನ ಹೆಸ್ರು ತಾಯಜ್ಜರ ನಾಗಮ್ಮ, ಅವರ್‍ಯಾರು ಈಗಿಲ್ಲ.

ನನಿಗೆ ಮೂರುಜನ ಗಂಡ್ಮಕ್ಳು, ಒಂದೆಣ್ಮಗ, ಮೊದಲ್ನೇ ಮಗ ಗೋವಿಂದಪ್ಪ ಕಾಲೇಜಿನವರ್‍ಗೂ ಓದವ್ನೆ. ಅವು ಬುದ್ಧಿವಂತೆ ಮೇಲೆ ಜೀವ ಮಾಡ್ತಾನೆ. ಉಳಿದಿಬ್ರೂ ಬ್ಯಾಸಾಯ ಕೂಲಿನಾಲಿ ಮಾಡಿ ಜೀವ್ನ ಮಾಡ್ತಾರೆ. ನನ್ನಣ್ತಿ ಹೆಸ್ರು ನಿಂಗಮ್ಮ, ಯಂಗೋ ಜೀವ್ನ ನಡಿಸ್ಕೊಂಡು ಹೋಗ್ತಿವಿ.

ನನಿಗೆ ವಯಸ್ಸು ಅರವತ್ತಾರು ವರ್ಸ. ನನ್ ಜೀವ್ನದಾಗೆ ಎರಡು ಬಿದ್ರಕ್ಕಿ ಬರ ಕಂಡೀನಿ. ನಾನು ಎರಡೊರ್‍ಸ ಇಸ್ಕೊಲ್ಗೊಗಿದ್ದೆ. ಚಿಕ್ಕೊಯಸ್ನಾಗೆ ಯಾರು ಕುರಿ ಕಾಯರಿಲ್ಲ ಅಂತ ನನ್ನ ಕುರಿಕಾಯಕಾಕಿದ್ರು. ಆಗ ಬರಗಾಲ, ತಿಂಬಕೆ ಕೂಳ್ಳಿಕ್ತಿರ್‍ಲಿಲ್ಲ; ಕಂಟ್ರೋಲ್ ಕಾಲ.

ನಮ್ಮಾವ ಅಜ್ಜಣ್ಣರ ನಿಂಗಜ್ಜ, ಹಿಂದ್ಲು ಕಾಲ್ದಿಂದ್ಲೂನು ಕುರಿದನಗಳಿಗೆ ಔಸ್ತಿ ಹೋಯ್ತಿದ್ರು. ಹುಳ ಮುಟ್ಟಿದ್ರೆ, ಎಂಥಾ ನಾಗ್ರಾವೆ ಕಡ್ದಿರ್‍ಲಿ ಅಜ್ಜಣ್ಣರ ಮನೆತನದೋರು


ಇವತ್ತೂ ಔಸ್ತಿ ಕೊಟ್ಟು ಬದುಕುಸ್ತಾರೆ. ನಮ್ಮಜ್ಜ ಔಸ್ತಿ ಕೊಡಾದ ನೋಡ್ತನೇ ಇದ್ದೆ. ಅಜ್ಜೆ ವಯಸ್ಸಾಗಿ ಕಣ್ಕ್ಕಾಣ್ಸಿರ್ಲಿಲ್ಲ. ಮದ್ಲಿಂದನೂ ನನಿಗೆ ಯಾವ ಕಾಯಿಲೆಗೆ ಯಾವ ಔಸದಿ ಕೊಡುಬೇಕೆಂಬದ ತೋರ್ಸಿದ್ದ. ಅದ್ರೆ ನಾನೇ ಔಸ್ತಿ ತಂದು ಕೊಡಾಕೆ ಸುರು ಮಾಡ್ದೆ.

ಅವಜ್ಜನ ಮಾತ್ನಂತೆ ಔಸ್ತಿ ಕೊಟ್ಟು ಕಂಬಂದೆ, ಕಾಯ್ಲೆ ವಾಸಿಯಾದ್ದು. ಮನುಸ ರೋಗ ರುಜಿನಿಗಳ್ಗೆ ಮಡ್ಕೊಡ್ತಿದ್ದೆ. ನಮ್ಮಜ್ಜ ಒಂದಿನ ನನ್ಕರ್ದು ನನ್ನಳಿಯ, ನಿನ್ ಕೈಗುಣ ಚೆನ್ನಾಗೈತೆ, ಮನ್ಸರ್ಗೂ, ಕುರಿಮ್ಯಾಕೆ, ಎಮ್ಮೆದನಿಗುಳ್ಗೂ ನಿನ್ಗೊಬ್ಬುನ್ ಕೈಲೆ ಔಸ್ತಿ. ಕೊಡಾಕಾಗಲ್ಲ, ಮನ್ನರ್ಗೆ ತೊಂದ್ರೆಯಾದ್ರೆ ಬಾಯ್ಬಿಟ್ಟೇಳ್ತಾರೆ, ಮೂಗ್ ಪ್ರಾಣಿಗಳು ಏನೇಳ್ತಾವೇಳು?

ಇವತ್ನಿಂದ ಮನುಸಿಗೆ ಔಸ್ತಿ ಕೊಡ್ಬೇಡ, ಜಾನುವಾರುಗುಳ್ಗೆ ಕೊಡು ಅಂತ ನಮ್ಮಜ್ಜೇಳ್ತು. ಅವತ್ನಿಂದ ಬರೆ ದನಕರುಗುಳ್ಗೆ ಔಸ್ತಿಕೊಟ್ಕಂ ಬಂದೆ. ಒಂದಿನ ದೀಪಾವಳಿಯಬ್ಬ, ಹಿರಿಯೂರು ತಾಲ್ಲೂಕಿನ ಕರಿಯೋಬೇನಳ್ಳಿ ಗೌಡ್ರು ಕುರಿಗಳು, ನಮ್ಮೂರಾಗೆ ಇದ್ದು, ಒಂದ್ಸರಿ ಬೆಳಿಗಿನಿಂದ್ಲೂ ಸೂಲುಸ್ತನೇ ಇತ್ತಂತೆ. ಈಯಿದಂಗಿರ ಕುರಿ ಹೊತ್ಕಂಬಂದು ಗೌಡ್ರ ಆಳುಗಳು ಮನೆಯಾಕೆ ಕಟ್ಯಾಕಿದ್ರು, ಕುರಿ ಹೊಟ್ಟೆಗೆ ಮರಿಸಿಕ್ಕಂಡ್ ವದ್ದಾಡದು. ಗೌಡ್ರ ಕರಿಯಣ್ಣ ಆಳುಗುಳ ಕರ್ದು ಯಾರಾದ್ರು ಮರಿ ತಗಿಯರ್ರೈದರೆ ಈ ಊರಾಗೆ ಅಂದಿದ್ಕೆ, ಪಕ್ದಾಗಿದ್ದ ಮಾಳಿಗೆ ಮನಿ ನಿಂಗಜ್ಜ ನಾನ್ ತಗೀತೀನಿ ಅಂದ್ನಂತೆ. ಆದ್ರೆ ಅವಜ್ನಿಂದ ಕುರಿ ಹೊಟ್ಯಾಗಿರ ಮರಿ ತಗಿಯಾಕಾಗ್ಲಿಲ್ಲ.

ಗೌಡ್ರು ಆಳುಗಳ್ನ ಕರ್ದು ಇನ್ಯಾರು ಮರಿ ತಗಿಯಾರಿಲ್ವೆ ಅಂದಿದ್ಕೆ ಅಜ್ಜಣ್ಣರ್ ನಿಂಗಜ್ಜ ಐದಾನೆ ಅಂದ್ರು, ಕರ್‌ಕಂಬರ್ರಿ ಅಂತ ಗೌಡ್ರು ಆಳುಗುಳ್ನ ಕಳಿಸಿದ್ರು. ಮಳೆ ಬಾರ್ತಾ ಇತ್ತು. ಆಳುಗಳು ನಿಂಗಜ್ಜನ್ನ ಕರುದ್ರು. ಅವಜ್ಜ ಕಾರಂಬ ಕತ್ಲು, ಬೋರಂಬ ಜಡಿಮಳೆ, ಕಣ್ ಕಾಣಲ್ಲ ನಾನೆಂಗೆ ಬರ್ಲಿ? ನನ್ನಳಿಯನ್ಗೆ ಯಲ್ಲ ಕಲ್ಸಿದೀನಿ, ಕುರಿಯಟ್ಟೆತಾಗೆ ಮನಿಗ್ಯೆದಾನೆ ಕರಕಂದೋಗ್ರಿ ಅಂತಂತೆ. ಗೌಡ್ರ ಆಳುಗ್ಳು ನನ್ ತಾಕೆ ಬಂದು ಕುರಿವಟ್ಯಾಗೆ ಮರಿಸಿಕಂಡ್ಯೆತೆ ಅಂದ್ರು, ಅಯ್ಯೋ ಮೂಗ್ಜಲ್ಮ ಅಂತ ನಾನು ಮಳಿಯಾಗೆ ಹೋಗಿ, ಮಡ್ಲಾಗಿಂದ ಕುರಿವಟ್ಟೆಯೊಳಿಕೆ ಕೈ ಇಕ್ಕಿ ನೋಡೆ, ಮರಿ ಅಡ್ಡದಿತ್ತು. ಮರಿಬಾಯಾಕೆ ಕೈಯಿಟ್ಟೆ ನನ್ ಬೆಳ್ ಚೀಪು. ಮರಿ ಬದಿಕೈತೆ ಅಂತ ಗೊತ್ತಾತು. ಅಡ್ಡ ಬಂದ ಮರಿಯ ಕೈಯಲ್ಲಿ ವಟ್ಟೆವಳ್ಗೆ ತಿರಿವಿ ಮುಂದುಲ್ ಕಾಲ ತಿರಿಸಿ, ಮಕ ನೆಟ್ಟುಗೆ ಮಾಡಿ ಕೈ ತೊಳ್ಕೊಂಡೆ. ಕುರಿ ಅರಿಸ್ಕೆಂಮ್ತು ಮನಿಕಂಡ್ತು,

ಮರಿ ತಗಿಯಲಿಲ್ವಲ್ಲ ಅಂತ ಗೌಡ್ರು ಕೇಳಿದ್ರು, ಅದ್ಕೆ ಯಾರು ಈಸಡ್ಬೇಡ, ತಾನಾಗೇ ಇನ್ನೈದ್ ನಿಂಸುಕ್ಕೆ ಈಯುತ್ತೆ ಅಂದೆ. ನಾನೇಳ್ದಂಗೆ ಐದೇ ನಿಮುಸ್ತಾಗೆ



ಕುರಿಮರಿಯಾಯ್ತು, ಗೌಡ್ರಿಗೆ ಆವಾಗ ಅಚ್ಚರ್ಯ, ಗೌಡ್ರು ಬಂದ್ ನನ್ ಕೈ ಇಡುಕೊಂಡು ಕರಿಯೋಬೆನಳ್ಳಿ ಮಾರಮ್ಮನ ಮೇಲೆ ಆಣೆಮಾಡ್ಲಿ, ನೋಡಪ್ಪ ಕರಿಯಣ್ಣ, ನೀನು ಎಂದೆಂದೂ ಬ್ಯಾರೇ ಮನಿಯಾಗೆ ಮನಗ್ಮಾರ್ದು, ಅರ್ದರಾತ್ರೊತ್ನಾಗ ಕಷ್ಟಾದರು ನಿನ್ನ ಉಡಿಕ್ಕೆಂಬತ್ತಾರೆ. ನಿನ್ನತ್ರ ಇರ ಇದ್ಯ ದೊಡ್ಡು, ನಿನ್ನೊಲ, ಮನೆ, ಕುರಿಹಟ್ಯಾಗೆ ಮಾತ್ರ ಮನುಗ್ಬೇಕು ಅಂತಂದ್ರು. ಆವತ್ನಿಂದ ನಮ್ಮ ಮನಿಯಾಗೆ ಮನಗ್ತಿನಿ. ದುಡ್ಡಿಗೆಂದೂ ಆಸೆಪಟ್ಟಿಲ್ಲ. ನನಗೀಗ ಕಣ್ ಕಾಣಲ್ಲ, ಕಿವಿ ಕೇಳಲ್ಲ. ಕೆಲವುರಿಗೆ ಔಸ್ತಿ ಗಿಡ ತೋರ್ಸಿದೀನಿ. ಅವ್ರು ಗಿಡ ಕಿತ್ಗಂಬತ್ತಾರೆ, ನಾನು ಆರ್ದು ಹೊಯ್ತಿನಿ.

ಸಾಯೋದ್ರೊಳ್ಗೆ ನನ್ಮಕಿಗೆ ಔಸ್ತಿ ಹಾಕದ ಕಲ್ಪನಾ ಅಂತ ಆಸೆ. ಕಲುತ್ಗೊಳ್ರೋ ಅಂತ ಮಕ್ಕಿಗೇಳಿದ್ರೆ— ಅಪ್ಪ ನಿನ್ನಂಗೆ ಮನಿಮಠ ಬಿಟ್ಟು ನಮ್ ಕೈಲೆ ತಿರ್ಗ ಕೆಲ್ಸ ಮಾಡಕಾಗಲ್ಲ, ರಾತ್ರಿನೊತ್ನಾಗೆ ಕಷ್ಟಾದರು ಬಂದು ನಿದ್ದೆ ಕೊಡಲ್ಲಾ ಅಂತಾರೆ. ಯಾರದ್ರೂ ಆಗ್ಲಿ ನಾನ್ಯಾಯದ್ರಾಗೆ ಕಲ್ತಂತೀನಿ ಅಂತ ಬಂದ್ರೆ ಕಲುಸ್ತೀನಿ.

ಕರಿಯಣ್ಣನವರ ಜನಪದ ನಾಟಿ ವೈದ್ಯದ ವಿವರಗಳು

೧. ಎಮ್ಮೆದನಗಳ ಕಾಲುಮುರಿದರೆ ಕಟ್ಟುವುದು.

೨. ಕಾಲು ಮುರಿದ ದನಎಮ್ಮೆಗಳಿಗೆ ಔಷಧಿ ಕೊಡುವುದು.

೩. ಎಮ್ಮೆದನದ ಹೊಟ್ಟೆಯಲ್ಲಿ ತೊಂದರೆಯಾಗಿ ಕರುಗಳು ಸಿಕ್ಕಿಕೊಂಡರೆ ತೆಗೆಯುವುದು.

೪. ಕರ ತೆಗೆದಾಗ ಪ್ರಾಣಿಗಳಿಗೆ ನೋವಾದರೆ ಔಷಧಿ ಕೊಡುವುದು.

೫. ಕುರಿ ಮೇಕೆ ಹೊಟ್ಟೆಯಲ್ಲಿ ಮರಿ ಸಿಕ್ಕಿಕೊಂಡರೆ ತೆಗೆಯುವುದು.

೬. ಈಯುವುದಕ್ಕೆ ಮುಂಚೆ ಪ್ರಾಣಿಗಳಿಗೆ ಮರುಮಾಡಿದರೆ (ಬಿಳಿಸೆರಗು)ಔಷಧಿ ಹಾಕುವುದು.

೭. ಈದಮೇಲೆ ದನ ಎಮ್ಮೆ ಕರುಗಳಿಗೆ ಹಾಲು ಕುಡಿಸದೇ ಇದ್ದರೆ ಹಾಲು ಕುಡಿಸುವಂತೆ ಮಾಡುವುದು.

೮. ಮನುಷ್ಯರಿಗೆ ಕೈಕಾಲು ಸೊಂಟ ಉಳುಕಿದರೆ ಔಷದಿ ಕೊಟ್ಟು ವಾಸಿಮಾಡುವುದು.

೯. ಕುರಿಗಳಿಗೆ ಕೆಮ್ಮು ಆದರೆ ಔಷಧಿ ಕೊಡುವುದು.


೧೦. ಕುರಿ ಮೇಕೆಗಳಿಗೆ ಹುಚ್ಚು ಹಿಡಿದರೆ ಔಷಧಿ ಕೊಡುವುದು.

೧೧.ದನ ಕರುಗಳ ಕೂದಲು ಉದುರಿದರೆ ಹುಟ್ಟಲು ಔಷಧಿ.

೧೨. ದನ ಕರ ಕುರಿ ಮೇಕೆಗಳ ನೋವು ಕಂಡುಹಿಡಿಯುವುದು.

೧೩. ಎತ್ತುಗಳು ಕುಸ್ತಿ ಬಿದ್ದು ಹೊಟ್ಟೆ ಕೆಳಗಡೆ ನೋವಾದರೆ ಔಷಧಿ ನೀಡುವುದು.

೧೪. ಕುರಿ ಮೇಕೆಗಳು ಮೆಲುಕು ಹಾಗುವಾಗ ತಿಂದ ಆಹಾರವನ್ನು ಉಗುಳಿದರೆ ಔಷಧಿಕೊಡುವುದು.



೧೫.ಕುರಿಯ ತುಪ್ಪಟ ಕತ್ತರಿಸಿದಾಗ ಕುರಿಯ ಬೆನ್ನ ಮೇಲಿನ ಚರ ಹೊಡೆದು ಹೋದರೆ ಔಷಧಿ ಕೊಡುವುದು.

೧೬. ಕುರಿಗಳಿಗೆ ಮೂಗು ಹುಣ್ಣಾದರೆ ಔಷಧಿ ಕೊಡುವುದು.

೧೭.ಪ್ರಾಣಿಗಳಿಗೆ ಗುದದ್ವಾರ ಹೊರಗೆ ಬಂದರೆ ಔಷಧಿ.

೧೮. ಮಕ್ಕಳಿಗೆ ಗುದದ್ವಾರ ಹೊರಗೆ ಬಂದರೆ ಔಷಧಿ ಕೊಡುವುದು.

೧೯. ಮಕ್ಕಳಿಗೆ ಜ್ವರ ಬಂದರೆ ಔಷಧಿ,

೨೦. ಕುರಿ ದನದ ಕಣ್ಣುಗಳು ಹೊಡೆತ ಬಿದ್ದು ಹೊರಬಂದರೆ ಆಪರೇಷನ್ ಮಾಡುವುದು.

೨೧. ಎಮ್ಮೆ ದನಗಳಿಗೆ ಸೆಪ್ಪೆರೋಗಕ್ಕೆ ಔಷಧಿ,

೨೨. ದನಗಳಿಗೆ ಮಿಡ್ಸೆ ಕಾಯಿಲೆಗೆ ಔಷಧಿ.

೨೩. ಎಮ್ಮೆಗೆ ಮತ್ತು ಎತ್ತುಗಳಿಗೆ ನಲ್ಡೆಯ ರೋಗಕ್ಕೆ ಔಷಧಿ.

೨೪. ಕುರಿಗಳ ಹೊಟ್ಟೆ ಉದಿಕೊಂಡರೆ ಔಷಧಿ.

೨೫. ಎತ್ತುಗಳಿಗೆ ಎದೆನೋವು ಬಂದರೆ ಔಷಧಿ.

೨೬. ಎಮ್ಮೆದನಗಳಿಗೆ ಗುಂಡಿಗೆ ಸೆಲೆ ರೋಗ ಬಂದರೆ ಔಷಧಿ.

೨೭. ಪಿತ್ತಕ್ಕೆ ಔಷಧಿ.

೨೮. ಉಳಿಕಿದ್ದಕ್ಕೆ ಔಷಧಿ ಕೊಡುವುದು.

---

ಈ. ಮಹಾಲಿಂಗಪ್ಪ, ಕನ್ನಡ ಉಪನ್ಯಾಸಕರು

ಎಚ್. ಪಿ. ಪಿ. ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ ೫೭೭೫೨೨ ಚಿತ್ರದುರ್ಗ ಜಿಲ್ಲೆ

## ಬಯಲಾಟದ ನೇಮಕಲ್ಲಪ್ಪ

**• ಬಿ.ಟಿ. ಚಂದ್ರಶೇಖರ**

ಬಯಲು ಸೀಮೆಯಾದ ಚಿತ್ರದುರ್ಗ ಜಿಲ್ಲೆಯ ಪೂರ್ವ ಪ್ರಾಂತ್ಯದಲ್ಲಿ ಪ್ರಚಲಿತದಲ್ಲಿರುವ ಜನಪದ ರಂಗಭೂಮಿಯನ್ನು ಬಯಲಾಟ ಎಂದೇ ಕರೆಯುವುದು ವಾಡಿಕೆ. ಬಯಲಾಟದ ಅಪ್ಪಟ ಅಭಿಜಾತ ಪ್ರತಿಭೆ ನೇಮಕಲ್ಲಪ್ಪ, ಮೈಮನಗಳ ತುಂಬಾ ನಾಟಕದ ಗೀಳನ್ನು ತುಂಬಿಕೊಂಡ ನೇಮಕಲ್ಲಪ್ಪನ ಬದುಕು ಹೂವಿನ ಹಾಸಿಗೆಯಲ್ಲ. ಕಷ್ಟ ಕೋಟಲೆಗಳ ಮಧ್ಯೆಯೂ ಬಿಡದ ಸಂಗಾತಿಯಾಗಿ ತೊಡರಿಕೊಂಡದ್ದು ಈ ಕಲೆಯೊಂದೇ, ಇದರೊಂದಿಗೆ ಭಜನೆ, ಕೋಲಾಟಗಳೂ ಕೂಡಿಕೊಂಡು ನೇಮಕಲ್ಲಪ್ಪನನ್ನು ಪರಿಪೂರ್ಣ ಕಲಾವಿದನನ್ನಾಗಿಸಿದವು. ದ್ವೇಷ, ಅಸೂಯೆಗಳ, ಹುಟ್ಟಿದೂರಿನ ಪರಿಸರಕ್ಕೆ ತಂಪೆರೆಯುವ ತಂಗಾಳಿ ಈ ಕಲೆಯೊಂದೇ ಎಂಬುದನ್ನು ಅನುಭವದಿಂದ ಕಂಡುಕೊಂಡ ನೇಮಕಲ್ಲಪ್ಪನ ಜೀವನದರ್ಶನ ನಮ್ಮನ್ನು ಹಳೆಯ ಕಾಲದ ಗ್ರಾಮೀಣ ರಂಗಭೂಮಿಯತ್ತ ಸೆಳೆಯುತ್ತಾ, ನೀಡುವ ಇಣುಕು ನೋಟ ಅಪೂರ್ವವಾದುದು.

ಬಿ. ಟಿ. ಚಂದ್ರಶೇಖರ ಅವರು ತುಂಬಾ ಆಸಕ್ತಿಯಿಂದ ಈ ಗ್ರಾಮೀಣ ಕಲಾವಿದನ ಜೀವನ ಚಿತ್ರವನ್ನು ಅತ್ಯಂತ ವಿವರವಾಗಿ ದಾಖಲಿಸಿದ್ದಾರೆ. ಇಲ್ಲಿ ಆ ಕಲಾವಿದನ ಕೆಲವು ಅನುಭವಗಳನ್ನು ಮಾತ್ರ ಸಂಗ್ರಹಿಸಲಾಗಿದೆ.

---

ನೇಮಕಲ್ಲಪ್ಪ, ಮಲ್ಲಪ್ಪನಹಳ್ಳಿ ಅಂಚೆ

ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ



ಮಲ್ಲಪ್ಪನ ಹಳ್ಳಿಯ ಸುತ್ತೇಳು ಗ್ರಾಮಗಳಲ್ಲಿ ಬಯಲಾಟದ ವಿಷಯ ಪ್ರಸ್ತಾಪವಾದೊಡನೆಯೆ ಕೇಳಿ ಬರುವ ಹೆಸರು ನೇಮಕಲ್ಲಪ್ಪ, ಬದುಕಿನುದ್ದಕ್ಕೂ ನೋವನ್ನೆ ಕಂಡು ಕಲೆಯಲ್ಲಿ ನಲಿವನ್ನು ಉಂಡ ಕೆಲವು ಜೀವಿಗಳಲ್ಲಿ ಈ ವ್ಯಕ್ತಿಯು ಒಬ್ಬರು. ಭಾಗವತರ ಸಾಲಿಗೆ ನನ್ನದೊಂದು ಹೆಸರು ಸೇರಿದರೆ ಸಾಕೆಂದು, ಬದುಕಿನ ಬವಣೆಯಲ್ಲಿ ಕಂಡ ಕನಸು ಇಂದು ನನಸಾದರೂ ಈ ಜೀವಿಗೆ ಇನ್ನೂ ಸಂತಸದ ಕ್ಷಣಗಳು ಬಂದಿಲ್ಲ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಐಮಂಗಲ ಹೋಬಳಿಯಲ್ಲಿರುವ ೫೦೦ ಮನೆಗಳ ಗ್ರಾಮವೆ ಈ ಮಲ್ಲಪ್ಪನಹಳ್ಳಿ, ಚಿತ್ರದುರ್ಗದಿಂದ ಸುಮಾರು ೩೦ ಕಿ. ಮಿ. ಇಲ್ಲವೆ ಹಿರಿಯೂರಿನಿಂದ ೯ ಕಿ. ಮಿ. ಅಂತರದಲ್ಲಿ ಈ ಹಳ್ಳಿ ಇದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಇಂದಿಗೂ ಯಕ್ಷಗಾನ ಬಯಲಾಟ, ಭಜನೆ, ಕೋಲಾಟ ಮುಂತಾದ ಜನಪದ ಕಲೆಗಳು ಹೆಚ್ಚು ಪ್ರಚಲಿತದಲ್ಲಿ ಉಳಿದುಬಂದಿರುವುದು ಈ ಹಳ್ಳಿಯಲ್ಲಿಯೇ. ಇಂದಿಗೂ ಜಾತ್ರೆ, ಉತ್ಸವಗಳಲ್ಲಿ ನಾಟಕಗಳನ್ನ ಜನ ನೋಡಲಿ, ಬಿಡಲಿ ಪ್ರದರ್ಶಿಸುವುದು ಈ ಊರಿನ ಜನತೆಗೆ ಸಂತಸದ ವಿಷಯ. ಈ ಊರಿನ ಹಲವು ಜಾನಪದ ಪಳೆಯುಳಿಕೆಗಳಲ್ಲಿ ಬಹುಮುಖ್ಯ ಜೀವ ಈ ನೇಮಕಲ್ಲಪ್ಪ,

ನನ್ನ ಕಥೆ ಬರೀತೀರ! ನನ್ನದೂ ಒಂದು ಕಥೇನೇ! ನನ್ನದೊಂದು ಬದುಕೇ? ಬಾಳೆ? ಬರೀರಿ, ಬರೀರಿ ನನ್ನ ನೋವಿನ ಕಥೇನ ಎಂದು ಪೀಠಿಕೆ ಹಾಕುವ ಈ ವ್ಯಕ್ತಿ

ಬದುಕಿನ ನೋವನ್ನು ಹೇಳುತ್ತಾ, ಪ್ರೀತಿಯಿಂದ ಕಲೆಯಲ್ಲಿ ಕಂಡದ್ದನ್ನು ಸ್ಮರಿಸುತ್ತಾರೆ. ನಾನು ಯಕ್ಷಗಾನ ಕಲಾವಿದ. ನನ್ನ ಹೆಸರು ಹೆಚ್. ನೇಮಕಲ್ಲಪ್ಪ, ಬಡತನ ಇನ್ನೂ ನಾಟಕ ಅಂದರೆ ಜೇನುತುಪ್ಪ ಸಿಕ್ಕಂಗೆ ಸಂತೋಷ ಆಗತಿತ್ತು. ನನಗೆ ಬಾಲ್ಯದಿಂದಲೂ ವಿದ್ಯಾಭ್ಯಾಸಕ್ಕಿಂತ ಸಾಂಸ್ಕೃತಿಕ ಚಟುವಟಿಕೆಯ ಕಡೆಗೆ ಆಸಕ್ತಿ ಹೆಚ್ಚು. ವಿದ್ಯಾಭ್ಯಾಸಕ್ಕೆ ಅಂದಿಗೆ ಸರಿಯಾದ ಅನುಕೂಲ ಇರಲಿಲ್ಲ. ನನ್ನ ವಿದ್ಯಾಭ್ಯಾಸದ ಮಟ್ಟ ೬ನೇ ತರಗತಿ ಮಾತ್ರ. ಓದಿಗೆ ಅನುಕೂಲ ಆಗಲೇ ಇಲ್ಲ. ಓದಿಗೆ ಶರಣು ಹೊಡೆದು ನಾಟಕ, ಭಜನೆ, ಕೋಲಾಟ ಎಲ್ಲಿ ಅಂದರೆ ಅಲ್ಲಿ ತಿರಗ್ತಾ, ಅದರ ಗೀಳು ಹತ್ತಿಸಿಕೊಂಡು ಬಿಟ್ಟೆ, ಬಾ ಬಾ ನಾಟಕದ ಹುಚ್ಚು ಹೆಚ್ಚಾಯಿತು ಎಂದು ಈ ೬೦ ರ ವಯಸ್ಸಿನಲ್ಲೂ ಕಣ್ಣು ಹೊಳಪಿಸುತ್ತಾ, ಜೇನುತುಪ್ಪ ತಿಂದಂಗೆ ನಾಲಗೆಯನ್ನು ಚಪ್ಪರಿಸುತ್ತಾರೆ.

ಇವರ ಬಾಲ್ಯ ಬಹಳ ಬಡತನದಿಂದ ಕೂಡಿತ್ತು. ಹನುಮಂತಪ್ಪ ಮತ್ತು ಕಣಿಮಕ್ಕನಿಗೆ ಮೂರು ಜನ ಮಕ್ಕಳು. ಮೊದಲನೆಯವರು ಹನುಮಕ್ಕ, ಎರಡನೆಯವರು ನೇಮಕಲ್ಲಪ್ಪ, ಮೂರನೆಯವರು ಭೀಮಣ್ಣ, ಜಾತಿಯಲ್ಲಿ ಬೆಸ್ತರು. ಶಿವನ ತಲೆ ಮೇಲಿರೋ ಗಂಗೆ ಮತಸ್ಥರು ನಾವು ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಮನೆಯಲ್ಲಿ ಕಿತ್ತು ತಿನ್ನುವ ಬಡತನ, ಹನುಮಂತಪ್ಪ ಬಹಳ ಸರಳ ಜೀವಿ. ಗಲಾಟೆ, ಗದ್ದಲ ಇಂತಹವುಗಳ ಬಗ್ಗೆ ಬಹಳ ಭಯ. ಅಲ್ಲದೆ ಜನಪದ ಕಲೆಗಳ ಬಗ್ಗೆಯೂ ಅಷ್ಟೇನೂ ಆಸಕ್ತಿ ಇರಲಿಲ್ಲ. ಮಗನ ನಾಟಕದ ಹುಚ್ಚನ್ನು ನೋಡಿ ಆಶ್ಚರ್ಯ ಪಡುತ್ತಿದ್ದರು. ತಾಯಿಗೆ ಮಗನ ಕಲೆಯ ಬಗ್ಗೆ ಹೆಮ್ಮೆ, ಆದರೆ ತುತ್ತಿಗಾಗಿ ಪರದಾಡುವ ನಾವು ಇವುಗಳ ಕಡೆ ಮನಸ್ಸು ಹಾಕಲು ಬರುವುದಿಲ್ಲ ಎಂಬ ವಾದ ತಾಯಿಯದು. ಈ ಎಲ್ಲ ಎಡರು ತೊಡರುಗಳ ನಡುವೆ ಈ ಬಾಲಕನ ಕಲಾಭಿರುಚಿ ಬೆಳೆಯುತ್ತಾ ಹೋಯಿತು. ನಾಟಕ, ಭಜನೆ, ಕೋಲಾಟಗಳಿಗೆ ಊರೂರು ಸುತ್ತುವ ಚಾಳಿ ಅಂಟಿಕೊಂಡಿತು. ಊಟ ತಿಂಡಿಗಳ ಪರಿವೆ ಇಲ್ಲದೆ ಗೆಳೆಯರೊಡನೆ ಈ ಕಲೆಗಳಲ್ಲಿ ಕಳೆಯುವ ಮನಸ್ಸಾಯಿತು.

ರಾತ್ರಿ ನಾಟಕ ನೋಡಿಕೊಂಡು ಬಂದು ಗೆಳೆಯರೆಲ್ಲ ಸೇರಿ ಬೆಳಿಗ್ಗೆ ರಾತ್ರಿಯ ನಾಟಕದ ಅನುಕರಣೆ ಮಾಡುತ್ತಿದ್ದರು. ನಾಟಕದ ಹಾವಭಾವಗಳನ್ನೆಲ್ಲಾ ಆಡಿಕೊಂಡು, ಹಾಡಿಕೊಂಡು ನಲಿಯುತ್ತಿದ್ದರು.

ಶಿವರಾತ್ರಿ ಬಂದರೆ ಪುಟ್ಟಯ್ಯನ ಕೇರಿ ಯಲ್ಲಿ ರಾತ್ರಿಯೆಲ್ಲ ನಾಟಕ. ಮಕ್ಕಳಿಗೆ ಬೆಳಿಗ್ಗೆನಿಂದಲೆ ನಾಟಕ ನೋಡುವ ತವಕ. ಹುಡುಗರೆಲ್ಲ ಅಲ್ಲಿ ಸೇರಿ ಬಿದಿರುಕಡ್ಡಿಗಳ ಬಿಲ್ಲು ಮಾಡಿ, ಆಪಿನ ಕಡ್ಡಿ ಬಾಣ ಮಾಡಿ, ಬಾಣದ ತುದಿಗೆ ಡಾಂಬರ್‌ನಂತಹ ಹುಣಸೇಹಣ್ಣು ಸಿಗಿಸಿ ಆಕಾಶಕ್ಕೆ ಹೊಡೆಯೋರು, ಸಾಯಂಕಾಲ ಕತ್ತಲಾಗುತ್ತಿದ್ದಂತೆಯೇ ನಾಟಕಕ್ಕೆ ಸಿದ್ಧತೆಗಳು ನಡೆಯುತ್ತಿದ್ದಂತೆ ಸುತ್ತಮುತ್ತಲ ಹಳ್ಳಿಗಳಿಂದ ಗಾಡಿ ಕಟ್ಟಿಕೊಂಡು

ಜನ ನಾಟಕ ನೋಡಲು ಬರುತ್ತಿದ್ದರಂತೆ. ಊರಿನ ಎಲ್ಲಾ ಜಾತಿಯ ಮಕ್ಕಳು ಯಾವುದೇ ಭೇದಭಾವವಿಲ್ಲದೆ ಒಟ್ಟಿಗೆ ನಲಿದು ನೋಡುವ ನಾಟಕಗಳು ಇಲ್ಲಿ ನಡೆಯುತ್ತಿದ್ದವು. ನಾಟಕದ ದಿನ ಎಂದರೆ ಊರಿನ ಜನಕ್ಕೆ ಹಬ್ಬದ ದಿನವಿದ್ದಂತೆ.

**ಭಜನೆ ಮಾಡಿಸಿದ ಮದುವೆ**

ಬಯಲು ಸೀಮೆಯಲ್ಲಿ ಕೂಲಿ ನಾಲಿ ಮಾಡಿಬದುಕುವವರ ಗೋಳು ಹೇಳತೀರದು. ಮಳೆಯನ್ನೆ ನಂಬಿ ಬದುಕು ಸಾಗಿಸುವವರು ಅವರು. ಮಳೆ ಬಂದರೆ ಬೆಳೆ, ಬೆಳೆ ಇದ್ರ  ಕೂಲಿ ಗೀಲಿ ಮಾಡೋಕೆ ಅವಕಾಶ. ಸಣ್ಣಪುಟ್ಟ ವ್ಯವಸಾಯ ಮಾಡಿಕೊಂಡು ಹನುಮಂತಪ್ಪ ಜೀವನ ಸಾಗಿಸುತ್ತಿದ್ದರು. ನೇಮಕಲ್ಲಪ್ಪನಿಗೆ ಸ್ವಲ್ಪ ಬುದ್ಧಿ ಬಂದ ಮೇಲೆ ವ್ಯವಸಾಯವನ್ನು ಆರಂಭಿಸಿದರು. ಆದರೆ ತಂದೆಗೆ ಮಗನ ಬಗ್ಗೆ ನಂಬಿಕೆ ಇರಲಿಲ್ಲ. ಇವನಿಗೆ ಬರೀ ನಾಟಕ ಕಲೆ. ವ್ಯವಸಾಯ ಕೂಲಿ ಮಾಡಾನಾ? ಎಂದು ಪ್ರಶ್ನಿಸುತ್ತಿದ್ದರು. ತಾಯಿಗೆ ಮಗನ ಬಗ್ಗೆ ಪ್ರೀತಿ ಇದ್ದರೂ ಇವನ ಬಗ್ಗೆ ಅಪನಂಬಿಕೆ. ಆ ಸಮಯದಲ್ಲಿ ನಂದ್ಯಾಳ್ ಮಲ್ಲಯ್ಯ ಎಂಬುವವರು ಗೋಪಾಲಪುರದಲ್ಲಿ ದರಖಾಸ್ತಿನಲ್ಲಿ ಆರು ಎಕರೆ ಭೂಮಿ ಕೊಡಿಸಿದರಂತೆ.

ಈ ಭೂಮಿಯ ವಿಷಯ ಬಂದಾಗ ನೇಮಕಲ್ಲಪ್ಪ ಸ್ವಲ್ಪ ಗೆಲುವಾಗಿ ಮಾತಿಗಾರಂಭಿಸಿದರು. ಜಮೀನು ಎಂಗೂ ಸಿಗಲ್ಲ. ನಾನು ಎರಡು ಎತ್ತು ಜೋಡಿಸಿಕೊಂಡು ಬಡತನ ನಿವಾರಣೆಗಾಗಿ ವ್ಯವಸಾಯನ ಹಿಡ್ದೆ. ಬಹಳಷ್ಟು ದಿನ ವ್ಯವಸಾಯಾನ ಮಾಡ್ತಾ ಇದ್ದೆ. ಆದರೆ ನನಗೆ ನಾಟಕದ ಹುಚ್ಚು ಇತ್ತಲ್ಲ. ಅಲ್ಲಿ ಇಲ್ಲಿ ನಾಟಕ ಅಂದ್ರೆ ಹೇಳೆ-ಕೇಳೆ ಹೋಗಿ ಬಿಡುತ್ತಿದ್ದೆ. ನಾನೂ ನಾಟಕ - ಪಾಟಕ ಆಡುತ್ತಿದ್ದೆ. ಜೊತೆಗೆ ನನಗೆ ಕೆಟ್ಟ ಹೆಸರು ಗಂಟು ಬಿದ್ದಿತ್ತು. ನಾನು ಆವಾಗ ಒಂಥರ ಉಡಾಳ ಅನ್ನಿಸಿಕೊಂಡು ಬಿಟ್ಟಿದ್ದೆ. ನನಗೆ ಕಾಮುಕ, ಕಾಮಾಂಧಕ ಅನ್ನುವ ಪಟ್ಟ ಕಟ್ಟಿ ಬಿಟ್ಟಿದ್ದರು. ಜೊತೆಗೆ ಸುತ್ತಲೆಲ್ಲ ಹಳ್ಳಿಗಳಲ್ಲಿ ಹಬ್ಬಿಸಿ ಬಿಟ್ಟಿದ್ದರು. ಹಾಗಾಗಿ ಎಲ್ಲರ ಕಣ್ಣಿಗೆ ನಾನು ಕೆಟ್ಟವನಾಗಿದ್ದೆ. ಆದರೆ ನಾನು ಕೆಟ್ಟವನು ಅಂತ ಅಂದುಕೊಂಡಿರಲಿಲ್ಲ. ನನ್ನ ಮೂಲ ಗೊತ್ತಿಲ್ಲದವರು ಹಾಗೆ ಅನ್ನುತ್ತಿದ್ದರು. ಇದು ಎಲ್ಲಿ ತನಕ ಹೋಯಿತು ಅಂದರೆ ನಮ್ಮಪ್ಪ ನಮ್ಮಮ್ಮನಿಗೆ ಕೆಲವರು ಏನೇನೋ ಹಚ್ಚಿಕೊಟ್ಟರು. ಅದರಲ್ಲಿ ಒಳ್ಳೆಯದು ಒಂದು ಹೇಳಿದರು – ನಿಮ್ಮ ಮಗನಿಗೆ ಮದುವೆ ಮಾಡಿದರೆ ಸರಿ ಹೋಗ್ತಾನೆ. ಇಲ್ಲದಿದ್ದರೆ ಯಾವುದಾರ ನಾಟಕದ ಹೆಂಗಸರ ಜೊತೆಗೆ ಓಡಿ ಹೋಗ್ತಾನೆ ಎನ್ನುವುದು. ಆವಾಗ ನಮ್ಮಪ್ಪ ನನ್ನ ಮದುವೆ ಮಾಡೋಕೆ ಹೆಣ್ಣು ಹುಡುಕಲು ತೊಡಗಿದರು. ಸುತ್ತಮುತ್ತಲ ಯಾವ ಹಳ್ಳಿಯಲ್ಲೂ ಹೆಣ್ಣು ಕೊಡಲು ಒಪ್ಪಲಿಲ್ಲ. ಜೊತೆಗೆ ನಿನ್ನ ಮಗ ಪೋಲಿ, ಅಪಾಪೋಲಿ ಎಂದರು. ಅಲ್ಲದೆ ಯಾರಾದರೂ ನಾಟಕದವರನ್ನು ಗಂಟು ಹಾಕ್ಕೊಳ್ತಾನೆ. ನೀನು ಸುಮ್ಮನೆ ಇದ್ದು ಬಿಡು ಎಂದು ನಮ್ಮಪ್ಪನಿಗೆ ಬುದ್ದಿ ಹೇಳಿದರು.



ಆವಾಗ ನನಗೂ ಮದುವೆ ಆಗಬೇಕು ಅನ್ನುವ ಆಸೆ ಶುರುವಾಯ್ತು. ನಂಗೆ ಆವಾಗ ಇಪ್ಪತ್ತು ವರ್ಷ. ಒಂದು ಸಾರಿ ಕಟ್ಟಿಗೆ ಮಾರೋಕೆ ಚಿತ್ರದುರ್ಗಕ್ಕೆ ಹೋಗಿದ್ದೆ. ಚಿತ್ರದುರ್ಗದಲ್ಲಿ ಒಂದು ಗಾಡಿ ಕಟ್ಟಿಗೆ ಮಾರಿ ಬುರುಜನರೊಪ್ಪಕ್ಕೆ ಹೋಗಿದ್ದೆ. ಕತ್ತಲಾಗಿತ್ತು. ಅಲ್ಲಿ ಗಾಡಿ ಬಿಟ್ಟುಕೊಂಡು ಪೀರಲದೇವರ ಗುಡಿ ಹತ್ತಿರ ಮಲಗಿದ್ದೆ. ಅಲ್ಲಿ ಹತ್ತಿರದಲ್ಲಿದ್ದ ಒಬ್ಬರ ಮನೇಲಿ ಒಬ್ಬರು ಮೇಷ್ಟ್ರು ಸತ್ತು ಬಿಟ್ಟಿದ್ದರು. ಹೆಣ ಇಟ್ಟುಗೊಂಡು ರಾತ್ರಿ ಭಜನೆ ಶುರು ಮಾಡಿದ್ದರು. ನನಗೆ ನಿದ್ದೆ ಬರುತ್ತಿರಲಿಲ್ಲ. ಅಲ್ಲದೆ ಭಜನೆ ಅಂದ್ರೆ ಪ್ರಾಣ. ಅವರ ಹತ್ತಿರ ಹೋಗಿ ಕುಳಿತೆ. ಅವರ ಜೊತೆ ಸೇರಿಕೊಂಡು ಭಜನೆ ಮಾಡೋಕೆ ಶುರು ಮಾಡ್ದೆ. ವಿರಾಮದಲ್ಲಿ ಒಮ್ಮೆ ಎಲ್ಲ ನನ್ನನ್ನು ಕೇಳಿದರು. ಯಾವೂರಯ್ಯ ನೀನು? ಇಲ್ಲಿಗ್ಯಾಕೆ ಬಂದಿದ್ದೆ? ಏನ್ ನಿನ್ನ ಕಸುಬು, ಭಜನೆ ಚೆನ್ನಾಗಿ ಮಾಡ್ತೀಯಾ ಎಂದರು. ನಾನು ಎಲ್ಲ ಹೇಳ್ದೆ. ನಾವು ಬೆಸ್ತರು, ಮಡ್ಡೇರು ಅಂತಾರೆ ಅಂದೆ.

ಮಡ್ಡೇರು ಅನ್ನಲು ಕಾರಣ, ಮಡ್ಡಿಗಿಡದ ಬೇರಿನಿಂದ ಬಣ್ಣ ತೆಗೆದು ಅದನ್ನ ನೂಲಿಗೆ ಹಚ್ಚಿ ಸೀರೆ ನೇಯಲು ನೇಕಾರರಿಗೆ ಕಳುಹಿಸಿಕೊಡುತ್ತಿದ್ದರಂತೆ. ಹಾಗಾಗಿ ಮಡ್ಡೇರು ಎನ್ನುವ ಹೆಸರು ಬಳಕೆಗೆ ಬಂತು. ಈಗಲೂ ಈ ಹೆಸರು ಚಾಲ್ತಿಯಲ್ಲಿದೆ. ಆವಾಗ ನನಗೆ ಒಂದು ಛಾನ್ಸ್ ಕೊಟ್ಟರು. ನೀನೆ ಒಂದು ಭಜನೆ ಮಾಡು ಎಂದರು. ರಾತ್ರಿ ೧೨ ಘಂಟೆಯಾಗಿತ್ತು ಅಂತ ಕಾಣ್ಸುತ್ತೆ. ನನಗೆ ಬಹಳ ಹುಮ್ಮಸ್ಸು ಬಂತು. ನನಗೆ ನೆನಪು ಇದ್ದಂಗೆ ಅವತ್ತು ಒಂದು ಪುರಂದರದಾಸರ ವೈರಾಗ್ಯದ ಪದ ಹಾಡ್ದೆ, ಲೀಲಾಜಾಲವಾಗಿ ಹಾಡಿದೆ. ನನ್ನ ಭಜನೆ ಪದ ಕೇಳಿ ಎಲ್ಲ ದಂಗಾದರು. ನಮ್ಮ ಕೆಳಗಿನ ಜಾತೀಲಿ ಆವಾಗ ಹಿಂಗೆ ಹಾಡುವವರು ಯಾರೂ ಇರಲಿಲ್ಲ ಅಂತ ಕಾಣ್ಸುತ್ತೆ. ಅಲ್ಲೆ ಇದ್ದ ಒಂದಿಬ್ಬರು ಹಿರಿಯರು ನಿಂಗೆ ಮದುವೆ ಆಗಿದೆಯೆ? ಎಂದು ಕೇಳಿದರು. ನಾನು ಇಲ್ಲ ಅಂದೆ. ನಿಮ್ಮ ಜಾತಿಯವರು ಇಲ್ಲಿ ಇದಾರೆ. ಆದರೆ ಬಹಳ ಬಡವರು. ನೀನ್ ಮದುವೆಯಾಗ್ತೀಯಾ ಅಂತ ಕೇಳಿದರು. ಆವಾಗ ನನಗೆ ಮತ್ತೆ ಆಸೆಬಂತು. ಸುತ್ತಿನ ಎಲ್ಲ ಹಳ್ಳಿಯಲ್ಲೂ ನನಗೆ ಹೆಣ್ಣು ಕೊಡೋಲ್ಲ ಎಂದಿದ್ದರು. ಇಲ್ಲಿ ಹೆಣ್ಣು ಕೊಟ್ಟರೆ ಸದ್ದಿಲ್ಲದಂತೆ ಮದುವೆ ಆಗಿಬಿಡಾನ ಅನ್ನಕೊಂಡು ಓ.. ಆಗ್ತಿನಿ ಅಂದೆ. ನೀನು ಒಳ್ಳೆ ಜಮೀನುದಾರ ಕಂಡಂಗೆ ಕಾಣೀಯ. ಬಡವರ ಮನೆ ಹೆಣ್ಣು ನಿಜಕ್ಕೂ ಆಗ್ತಿಯಾ ಅಂದು ಮರುಪ್ರಶ್ನೆ ಹಾಕಿದರು. ಅಲ್ಲದೆ ಅವರಿಗೆ ತಿನ್ನಲು ಏನೂ ಇಲ್ಲ. ಕೂಲಿ ಮಾಡಿಕೊಂಡು ಬದುಕುತ್ತಿದ್ದಾರೆ. ಏಳು ಜನ ಹೆಣ್ಣುಮಕ್ಕಳು ಎರಡು ಗಂಡುಮಕ್ಕಳು. ಅವರಿಗೆ ಮದುವೆ ಮಾಡೋಕೆ ಸಹಾ ಆಗಲ್ಲ ಎಂದರು.

ನಾನು ಬಡವನೆ. ಒಟ್ಟಿಗೆ ಹೆಣ್ಣು ಕೊಟ್ಟರೆ ಸಾಕು ಮದುವೆಯಾಗ್ತೇನೆ ಎಂದೆ. ಊರಾಗೆ ಸತ್ತ. ಮೇಷ್ಟ್ರು ಬಹಳ ಒಳ್ಳೆ ಜನ ಅಂತ ಕಾಣ್ಸುತ್ತೆ. ಹಾಗಾಗಿ ಬಹಳ ಜನ ಭಜನೆ ಮಾಡಾಕೆ ಸೇರಿದ್ದರು. ಅದರಾಗೆ ನನಗೆ ಹೆಣ್ಣು ಕೊಟ್ಟ ಅತ್ತೆ ಮಾವ ಸುಂಕಜ್ಜ,

ಸುಂಕಜ್ಜಿ ಬಂದು ಕುಂತುಕೊಂಡಿದ್ದರು. ಆ ಹುಡುಗೀನೂ ಅಂದರೆ ನನ್ನ ಹೆಂಡತಿ ಆಗೋಳೂ ಬಂದು ಕುಂತುಕೊಂಡಿದ್ದಳು. ಅವರು ನನಗೆ ಹೆಣ್ಣು ಕೊಡೋದು ಅಂತ ಅಲ್ಲೇ ತೀರ್ಮಾನ ಮಾಡಿದರು.

ಮೊದಲ ಮಗಳ ಮದುವೆ ಆಗಿತ್ತು. ಎರಡನೆ ಮಗಳು ಕೆಂಚಮ್ಮನನ್ನು ನನಗೆ ಕೊಡದು ಅಂತ ತಿಳೀತು. ನಾನು ಮಧ್ಯೆ ಪ್ರಶ್ನೆ ಹಾಕಿದೆ. ನೇಮಕಲ್ಲಪ್ಪರೆ, ಭಜನೆ ಮಾಡುವಾಗ, ಆ ಹೆಣದ ಮುಂದೆ ಮದುವೆ ಪ್ರಸ್ತಾಪ ಮಾಡಿದರೆ ಹೆಂಗೆ? ಹೌದು ಮೇಷ್ಟ್ರು, ಅದೇ ಯೋಗಾಯೋಗ. ಪಾಪ, ಅವರಿಗೂ ಬಹಳ ಹೆಣ್ಣುಮಕ್ಕಳು. ಮದುವೆ ಮಾಡೋದು ಕಷ್ಟ ಇತ್ತು. ನನಗೂ ಹೆಣ್ಣು ಕೊಡೋರು ಇರಲಿಲ್ಲ. ಅಲ್ಲಿಂದ ಊರಿಗೆ ಬಂದೆ. ನಮ್ಮಪ್ಪ ಆಗ್ಲೆ ನನ್ನ ಮೇಲೆ ಸಿಟ್ಟಾಗಿದ್ದ. ಎತ್ಲಾಗೋ ಹೋದ ಇವನು ಅಂದುಕೊಂಡಿದ್ದ. ನಾನು ಇಲ್ಲೇ ಬುರುಜನಕೊಪ್ಪಕ್ಕೆ ಗಾಡಿ ಕಟ್ಟಿಗೆ ತಗೊಂಡು ಹೋಗಿದ್ದೆ. ಅಲ್ಲಿ ಹಿಂಗೆ ಹಿಂಗೆ ಆತು ಹೆಣ್ಣು ಕೊಡ್ತೀವಿ ಅಂದ್ರು ಅಂದೆ.

ನಿಂಗೆ ಯಾರೋ ಹೆಣ್ಣು ಕೊಡ್ತೀವಿ ಅಂದೋರು ಸುತ್ತಿನ ಹಳ್ಳಿಯಲ್ಲೆಲ್ಲ ಹುಡುಕಿ ಸಾಕಾತು. ನೀನು ಎಲ್ಲಾರ ಈ ತಾಳ, ಢಕ್ಕಿ, ತಂಬೂರಿ ತಗಂಡು ಕಣ್ಣಿಗೆ ಕಾಣದಂಗೆ ಹೋಗು. ನೀನು ಹುಟ್ಟಿದ್ದಕ್ಕೆ ಏನು ಸಾರ್ಥಕ? ಎಂದು ಬಯ್ದ. ನೀನು ಎಂಥವನೇ ಆಗಿರು, ನಿನಗೆ ಹೆಣ್ಣು ಕೊಡ್ತೀವಿ, ಹೋಗಿ ನಿಮ್ಮಪ್ಪ ನಿಮ್ಮಮ್ಮನ್ನ ಕರಕಂಬಾ ಅಂತ ಸುಂಕಜ್ಜ, ಸುಂಕಜ್ಜಿ ಹೇಳಿದ್ದಾರೆ ಅಂದೆ! -

ಏನ್ ಕೊಡ್ತಾರಪ್ಪೋ. ನಿನ್ ಪುರಾಣ ಅವರಿಗೆ ಗೊತ್ತೈತೋ ಇಲ್ವೋ. ಹಳ್ಳಿ ಹಳ್ಳಿ ಸುತ್ತಿ ಸಾಕಾಗೈತೆ. ನೋಡಾನ ಇದೊಂದು ಹಳ್ಳಿಗೂ ಹೋಗಿ ಬರ್ತೀನಿ ಅಂತ ನಮ್ಮಪ್ಪ ಅಲ್ಲಿಗೆ ಹೋಗಿಬಂದ.

ಅಷ್ಟರೊಳಗೆ ಅವರಿಗೆ ಯಾರೋ ಏನೋ ಹೇಳಿದ್ದರಂತೆ. ಅವನ ಕಾಲಾವಳಿಯಾಗೆ ನನ್ನ ಮಗಳ ಪ್ರಾಣ ಒಂದೇ ದಿನಕ್ಕೆ ಹೋಗಲಿ, ನಾವು ಕೊಟ್ಟೆ ಕೊಡ್ತೀವಿ ಅಂತ ಅವರು ನಮ್ಮಪ್ಪನ ತಾವ ಹೆಣ್ಣು ಕೊಡಾಕೆ ಮಾತು ಕೊಟ್ಟರು. ಮಾತೇನೋ ಕೊಟ್ಟರು. ಮದುವೆ ಮಾಡೋ ಸ್ಥಿತಿ ಅವರಿಗೆ ಇರಲಿಲ್ಲ. ಸೌದೆ ಮುಂತಾಗಿ ಎಲ್ಲ ನಾವೇ ಕೊಟ್ಟು ಮದುವೆ ಮಾಡಿಕೊಂಡ್ರಿ, ಆವಾಗ ಮದುವೆ ಮಾಡಾಕೆ ಗಂಡಿನ ಮನೆಗೆ ಹೆಣ್ಣೆ ಬಂತು. ನಾವೇ ಹೆಣ್ಣು ಕರಕೊಂಡು ಬಂದು, ಅವರಿಗೆ ಬಸ್ ಚಾರ್ಜಿಗೆ ಸಹ ದುಡ್ಡು ಕೊಟ್ಟು ಮದುವೆ ಮಾಡಿಕೊಂಡಿ, ಏನೋ ಆ ಸಂದರ್ಭದಲ್ಲಿ ನಮ್ಮ ಕೈ ಸ್ವಲ್ಪ ನಡೀತಿತ್ತು. ಹಿಂಗೆ ನನ್ನ ಮದುವೆ ಆಯ್ತು ಎಂದು ನಿಟ್ಟುಸಿರು ಬಿಟ್ಟರು.

ಮದುವೆಯ ನಂತರ ಕೆಲವು ದಿನಗಳಲ್ಲಿ ನೇಮಕಲ್ಲಪ್ಪನ ಮನಸ್ಸು ಮತ್ತೆ ಹಳೆಯ ಚಾಳಿಗೆ ಅಂಟಿಕೊಂಡಿತು. ನಾಟಕ, ಭಜನೆ, ಕೋಲಾಟ, ಎಲ್ಲೆಂದರಲ್ಲಿ ಹೋಗಿ ಕಾಲ

ಕಳೆಯುವುದು ಆರಂಭವಾಯಿತು. ಮನೆಯಲ್ಲಿ ಎಲ್ಲರಿಗೂ ಇವರ ಬಗ್ಗೆ ಬೇಸರ ಉಂಟಾಯಿತು. ತಂದೆ-ತಾಯಿಯರಂತೂ ತುಂಬಾನೇ ನೊಂದುಕೊಂಡರು. ಗಂಡ- ಹೆಂಡತಿಯರನ್ನು ಮನೆಯಿಂದ ಹೊರಹಾಕಿ ನಿಮ್ಮಪಾಡು ನೀವು ನೋಡಿಕೊಳ್ಳಿ ಎಂದರು. ನೇಮಕಲ್ಲಪ್ಪನಿಗೆ ಬಹಳ ನೋವಾಯಿತು. ಕಷ್ಟಪಟ್ಟು ಕೆಲಸ ಮಾಡಿದವನಲ್ಲ. ಈಗ ಹೆಂಡತಿಯನ್ನು ಸಾಕುವ ಜವಾಬ್ದಾರಿ. ನನ್ನ ಪಾಲು ನನಗೆ ಕೊಡಿ. ನಾನು ಎಲ್ಲದರೂ ಕೂಲಿ ಮಾಡಿಕೊಂಡು ಜೀವಿಸುತ್ತೇನೆ ಎಂದು ಆಸ್ತಿಯ ಪಾಲಿಗಾಗಿ ದುಂಬಾಲು ಬಿದ್ದ. ತಂದೆ ತಾಯಿ ಇವನಿಗೆ ಆಸ್ತಿ ಕೊಟ್ಟರೆ ಏನೂ ಉಳಿಸುವುದಿಲ್ಲ. ಯಾವ ಕಾರಣಕ್ಕೂ ಕೊಡುವುದಿಲ್ಲ ಎಂದು ಹೊರಕ್ಕೆ ತಳ್ಳಿ ಬಿಟ್ಟರು. ವಿಧಿಯಿಲ್ಲದೆ ನೇಮಕಲ್ಲಪ್ಪ ಕೂಲಿ ಮಾಡತೊಡಗಿದರು. ಅವರಿವರ ಹೊಲಗಳಿಗೆ, ತೋಟಗಳಿಗೆ ಹೋಗಿ ಕೆಲಸ ಮಾಡತೊಡಗಿದರು.

**ನಾಯಕಿ ನಾಪತ್ತೆ**

ನೇಮಕಲ್ಲಪ್ಪನವರಿಗೆ ನಾಟಕದ ಬಗ್ಗೆ ವ್ಯಾಮೋಹ ಹೆಚ್ಚುತ್ತಿದ್ದ ಕಾಲದಲ್ಲಿ ಸ್ತ್ರೀಪಾತ್ರಗಳನ್ನು ಮಾಡಲು ಸ್ತ್ರೀಯರು ದೊರೆಯುತ್ತಿರಲಿಲ್ಲ. ಪುರುಷರೇ ಸ್ತ್ರೀಪಾತ್ರ ಮಾಡಬೇಕಾಗಿತ್ತು, ಸ್ತ್ರೀಪಾತ್ರ ಮಾಡಿ ಅವರ ಹಾವಭಾವಗಳನ್ನು ಅಭಿನಯಿಸಿ ಊರಿನ ಸ್ತ್ರೀಯರಿಂದ ಮೆಚ್ಚುಗೆ ಪಡೆಯಬೇಕೆಂಬ ಆಸೆ ಪಾತ್ರದಾರಿಗಳಿಗೆ, ಸ್ತ್ರೀಪಾತ್ರ ಮಾಡುವವರಿಗೆ ಊರಿನ ಸ್ತ್ರೀಯರು ತಮ್ಮ ತಮ್ಮ ಸೀರೆಗಳನ್ನು ಕೊಟ್ಟು ಪ್ರೋತ್ಸಾಹಿಸುತ್ತಿದ್ದರು. ನಾಟಕ ಆರಂಭಕ್ಕೆ ಬಹಳ ಮುಂಚೆಯೇ ಬಂದು ರಂಗದ ಹಿಂಬದಿಯಲ್ಲಿ ಸ್ತ್ರೀಪಾತ್ರದಾರಿ ಪುರಷರಿಗೆ ಸೀರೆಯನ್ನು ಉಡಿಸುತ್ತಿದ್ದರು. ಜೊತೆಗೆ ಚೌಲಿ ಕೂದಲು, ಸರ, ಮುಂತಾಗಿ ಕೊಡುತ್ತಿದ್ದರು.

ರಂಗದ ಮೇಲೆ ಸ್ತ್ರೀಯರ ಸೀರೆಗಳನ್ನು ಉಟ್ಟು ಬಂದಾಗ ನಾಟಕ ನೋಡುತ್ತಿದ್ದ ಸ್ತ್ರೀಯರು ನನ್ನ ಸೀರೆ, ಅದು ನನ್ನ ಸೀರೆ, ಎಷ್ಟು ಚೆನ್ನಾಗಿ ಕಾಣುತ್ತೆ. ಅವನು ಎಷ್ಟು ಚೆನ್ನಾಗಿ ಉಟ್ಟಿದ್ದಾನೆ ಎಂದು ತಮ್ಮ ಸೀರೆಗಳ ವರ್ಣನೆಯೊಂದಿಗೆ ಸಂಭ್ರಮ ಪಡುತ್ತಿದ್ದ ಕಾಲ ಅದು.

ಹೀಗೆ ಸ್ತ್ರೀಪಾತ್ರ ಪುರುಷರೇ ಅಭಿನಯಿಸುತ್ತಿದ್ದ ಕಾಲದಲ್ಲಿ ಸತಿ ತುಳಸಿ ಎಂಬ ಸ್ತ್ರೀಪಾತ್ರದೊಂದಿಗೆ ನೇಮಕಲ್ಲಪ್ಪನವರ ರಂಗ ಪ್ರವೇಶವಾಯಿತು. ಇವರಿಗೆ ಆಗ ಸುಮಾರು ೧೨ ವರ್ಷ ವಯಸ್ಸು. ಬಾಲ್ಯದಲ್ಲಿ ಇವರ ಪ್ರತಿಭೆ ಗುರುತಿಸಿದ ಹಿರಿಯರು ಮುಖ್ಯ ಪಾತ್ರ ನೀಡಿ ತರಬೇತಿ ನೀಡಲಾರಂಭಿಸಿದರು.

ಊರು ಎಂದ ಮೇಲೆ ಸಂತೋಷ ಪಡುವವರ ಮಧ್ಯೆ ಅಸೂಯಾಪರರು ಇರುತ್ತಾರೆ. ಹಾಗೆಯೇ ಜನರಲ್ಲಿ ದ್ವೇಷ-ವೈಷಮ್ಯಗಳು ಇರುತ್ತವೆ. ಮಲ್ಲಪ್ಪನಹಳ್ಳಿಯಲ್ಲಿ

ಆಗ ಎರಡು ಪಾರ್ಟಿ ಇದ್ದವು. ಗೌಡರದು ಒಂದು ಪಾರ್ಟಿ. ಗೊಂಚಕಾರರದು ಇನ್ನೊಂದು ಪಾರ್ಟಿ. ಗೌಡರು ಕೆಲವರಿಗೆ ಕರೆದು ಊಟಕ್ಕಿಟ್ಟರೆ, ಗೊಂಚಕಾರರು ಕೆಲವರಿಗೆ ಕರೆದು ಊಟಕ್ಕೆ ಇಡುತ್ತಿದ್ದರು. ಈ ಗುಂಪಿನಾಗೆ ಊಟ ಮಾಡಿದವರು ಆ ಗುಂಪಿಗೆ ಹೋಗಿ ಊಟ ಮಾಡುತ್ತಿರಲಿಲ್ಲ.

ಈ ಸಮಯದಲ್ಲಿ ಸತಿ ತುಳಸಿ ನಾಟಕದ ದಿನ ಬಂತು. ಮುಖ್ಯ ಪಾತ್ರದಲ್ಲಿ ನಟಿಸುತ್ತಿರುವ ಮೊದಲ ನಾಟಕ, ಈಗಾಗಲೆ ಕೆಲವು ನಾಟಕಗಳಲ್ಲಿ ಸಣ್ಣ ಪುಟ್ಟ ಪಾತ್ರಗಳನ್ನು ಮಾಡಿದ್ದರು. ಇಂದು ನಾನು ಚೆನ್ನಾಗಿ ಅಭಿನಯಿಸಬೇಕು. ಊರಿನಜನರ ಗಮನ ಸೆಳೆಯಬೇಕು. ಸ್ತ್ರೀಪಾತ್ರ ಎಂದರೆ ನೇಮಕಲ್ಲಪ್ಪನಿಗೆ ಕೊಡಬೇಕು ಎಂದು ಜನ ಅನ್ನಬೇಕು ಎಂಬ ಆಸೆ ನೇಮಕಲ್ಲಪ್ಪನಿಗೆ.

ನಾಟಕದ ವೇದಿಕೆ ಸಿದ್ಧವಾಗಿತ್ತು. ಜನ ಊಟ ಮಾಡಿ ನಾಟಕ ನೋಡಲು ತಯಾರಾಗಿ ಚಾಪೆ, ದಿಂಬು, ರಗ್ಗು, ತೆಗೆದುಕೊಂಡು ಬಂದು ಕಾಯತೊಡಗಿದರು. ಸಮಯ ರಾತ್ರಿ ೯. 00 ಘಂಟೆಯಾಗಿತ್ತು. ನಾಟಕ ಆರಂಭವಾಗಲು ಒಂದು ಘಂಟೆ ಇತ್ತು. ರಂಗದ ಹಿಂಬದಿಯಲ್ಲಿ ಪಾತ್ರದಾರಿಗಳು ಬಣ್ಣ ಹಚ್ಚಿಕೊಳ್ಳುತ್ತಿದ್ದರು. ನೇಮಕಲ್ಲಪ್ಪನಿಗೆ ಸಣ್ಣ ಸೊಂಟಕ್ಕೆ ದೊಡ್ಡ ಸೀರೆ ಸುತ್ತಿ ರೆಡಿ ಮಾಡಿದ್ದರು. ಮುಖಕ್ಕೆ ಪೌಡರ್ ಲೇಪಿಸಿಕೊಳ್ಳುತ್ತಾ ನಿಂತಿದ್ದರು.

ಈ ಕಡೆ ನಾಟಕವನ್ನು ಕೆಡಿಸಬೇಕೆಂಬ ಇನ್ನೊಂದು ಗುಂಪು, ನೇಮಕಲ್ಲಪ್ಪನ ಮಾವನ ಬಳಿ ಹೋಗಿ ಆತನ ತಲೆಗೆ ಏನೇನೋ ತುಂಬಿದರು. ಏನಾದರೂ ಮಾಡಿ ನಿನ್ನ ಅಳಿಯನನ್ನು ಕರಕೊಂಡು ಬಾ ಎಂದು ಕಳುಹಿಸಿದರು. ಅವರ ಮಾವ ಬಂದು ಅಪ್ಪಯ್ಯ ಕರಿತಾರೆ ಬಾ ಎಂದು ಇವರನ್ನು ಕರೆದುಕೊಂಡು ಹೊರಟರು. ನಾನು ನಮ್ಮ ಮಾವನ ಜೊತೆ, ಯಾಕಂತೆ? ಎಂದು ಪ್ರಶ್ನಿಸುತ್ತಾ, ಅವನ ಅಸಂಬದ್ಧ ಉತ್ತರದಿಂದ ತೃಪ್ತಿಯಾಗದೆ ಹೆಚ್ಚು ಪ್ರಶ್ನೆ ಮಾಡುತ್ತಾ ಹೋಗುತ್ತಿದ್ದೆ. ಸ್ವಲ್ಪ ದೂರ ಹೋಗುವುದರೊಳಗಾಗಿ ಒಂದು ಕತ್ತಲ ತಿರುವಿನಲ್ಲಿ ಯಾರೋ ಇಬ್ಬರು ಬಂದು ನನ್ನ ಬಾಯಿ ಮುಚ್ಚಿಕೊಂಡು, ಹೊತ್ತುಕೊಂಡು ಯಾವುದೋ ಒಂದು ಮನೆಗೆ ತೆಗೆದು ಕೊಂಡು ಹೋಗಿ ರೂಮಿನಲ್ಲಿ ಕೂಡಿಹಾಕಿದರು.

ಮನೀಗೆ ಹೋದೋನು ಇನ್ನು ಬರಲಿಲ್ಲ ಅಂತ ಈ ಕಡೆ ಸ್ಟೇಜ್ ಮ್ಯಾನೇಜರ್ ಕಾದೂ ಕಾದೂ ನಮ್ಮ ಮನೀಗೆ ಹೋಗಿ ಹುಡುಕಾಟ ನಡೆಸಿದ್ದಾರೆ. ಗಂಟೆ ೧೧.೦೦ ಆಯಿತು, ೧೨.೦೦ ಆಯಿತು. ಸತಿ ತುಳಸಿ ಇಲ್ಲ. ಒಂದು ಗುಂಪಿಗೆ ಸಂತೋಷ, ಇನ್ನೊಂದು ಗುಂಪಿಗೆ ಸಿಟ್ಟು, ನಾಟಕದ ಪಾರ್ಟಿಯವರೆಲ್ಲ ನಮ್ಮ ಮನೀಗೆ ಹೋಗಿ ನಮ್ಮ ಅಪ್ಪ ಅಮ್ಮನಿಗೆ ಬಹಳ ಜೋರು ಮಾಡಿದರು. ನೀವು ಯಾರ ಹತ್ತಿರವೊ ದುಡ್ಡು ಇಸಗೊಂಡು

ನಿಮ್ಮ ಮಗನ ಮುಚ್ಚಿ ಇಟ್ಟು ನಾಟಕ ಕೆಡಿಸೋದಿಕ್ಕೆ ಹೀಗೆ ಮಾಡ್ತಿದೀರ ಎಂದೆಲ್ಲಾ ಅರಚಾಡಿದರು. ಆಗ ಯಾರೋ ಒಬ್ಬರು ಬಾಯಿಬಿಟ್ಟರಂತೆ. ಇಂತಹವರ ಮನೇಲಿ ಬಚ್ಚಿಟ್ಟಿದ್ದಾರೆ ಅಂತ. ಅವರು ಎಲ್ಲ ಬಂದು ನನ್ನನ್ನು ಮುಚ್ಚಿಟ್ಟಿದ್ದ ಮನೆಮುಂದೆ ಗಲಾಟೆ ಆರಂಭಿಸಿದರು. ನನ್ನ ಬಾಯಿಗೆ ಬಟ್ಟೆ ಕಟ್ಟಿ, ಕೈಗೂ ಬಟ್ಟೆಕಟ್ಟಿ ಬಿಟ್ಟಿದ್ದರು. ಗಲಾಟೆ ಎಲ್ಲ ಕೇಳಿಸುತ್ತಿತ್ತು. ಇವರೂ ಸುಲಭಕ್ಕೆ ಬಿಡಲಿಲ್ಲ. ಆವಾಗ ಅವರು ಐಮಂಗಲಕ್ಕೆ ಹೋಗಿ ಪೊಲೀಸರನ್ನು ಕರಕೊಂಡು ಬಂದರು. ಪೊಲೀಸರು ಬಂದು ಏನೇನೋ ಮಧ್ಯಸ್ಥಿಕೆ ಆದಮೇಲೆ ನನ್ನನ್ನು ಬಿಟ್ಟರು. ಆವಾಗ ನಾಟಕ ಶುರುವಾಯ್ತು. ವಿರೋಧಿ ಗುಂಪಿನವರು ಎಲ್ಲಾ ಕೂತ್ಕಂಡು ನಾಟಕ ನೋಡಿದರು. ನಾಟಕ ಬಹಳ ಚೆನ್ನಾಗಿ ಆಯ್ತು. ಆಮೇಲೆ ನನಗೆ ಸ್ತ್ರೀಪಾತ್ರಗಳ ಬಗ್ಗೆ ಬಹಳ ವ್ಯಾಮೋಹ ಶುರುವಾಯ್ತು ಎಂದು ತಮ್ಮ ೧೨ನೇ ವಯಸ್ಸಿನಿಂದ ಆರಂಭವಾದ ನಾಟಕದ ಅಭಿರುಚಿ ಬೆಳೆದು ಹೆಮ್ಮರವಾದ ವಿಷಯಗಳನ್ನು ಪ್ರಸ್ತಾಪಿಸ ತೊಡಗಿದರು.

ಸತೀ ತುಳಸಿ ನಾಟಕಕ್ಕೆ ತಬಲ ಮಾಸ್ತರ್ ಆಗಿ ದುರ್ಗದ ನಂಜಪ್ಪ ಬಂದಿದ್ದರು. ಅಂದು ಪೈಲ್ವಾನ್ ನಂಜಪ್ಪ ಭಾರೀ ಕುಸ್ತಿ ಪಟುವಾಗಿ ಮೈಸೂರು ರಾಜ್ಯದಲ್ಲಿ ಹೆಸರುವಾಸಿಯಾಗಿದ್ದವರು. ದುರ್ಗದ ಬಂಡೆಗೆ ಕೈ ಕಾಲು ಮೂಡಿ ನಡೆದು ಬಂದಂತೆ ಭಾಸವಾಗುತ್ತಿದ್ದ ನಂಜಪ್ಪ ಐದು ಅಡಿ ಎತ್ತರದ ಮಟ್ಟಸವಾದ ಆಳು. ಮಹಾರಾಜರ ಅರಮನೆಗಳಲ್ಲಿ ಜಂಗಿ ಕುಸ್ತಿ ಮಾಡಿದಾತ. ದುರ್ಗದ ಹುಲಿ ಯೆಂದೇ ಪ್ರಖ್ಯಾತ. ನಮಗೆ ನಂಜಪ್ಪನನ್ನು ನೋಡಬೇಕೆನ್ನುವ ಆಸೆಯಿತ್ತು. ಅಂದಿನ ನಮ್ಮ ನಾಟಕದ ಅವಾಂತರಗಳಿಗೆ ನಂಜಪ್ಪ ಮೂಕ ಪ್ರೇಕ್ಷಕನಾಗಿದ್ದ.

**ಪೋಲೀಸರಿದ್ದಾರೆ........ ಎಚ್ಚರಿಕೆ!**

ಅಲ್ಲಿ ಇಲ್ಲಿ ನಾಟಕ ಆಡಿಕೊಂಡು ಕಾಲ ಕಳೆಯುತ್ತಿರುವಾಗ ಮಲ್ಲಪ್ಪನಹಳ್ಳಿಗೆ ಹತ್ತಿರದ ಕಾಪರಹಳ್ಳಿ ಯಲ್ಲಿ ಒಂದು ಶಾಲೆಯೋ, ರಂಗಮಂದಿರವೋ ಉದ್ಘಾಟನೆ- ಯಾಯಿತು. ಅಂದಿನ ಸಂಜೆಯ ಕಾರ್ಯಕ್ರಮಕ್ಕೆ ಎಂ. ಆರ್. ಲಕ್ಷ್ಮಣಪ್ಪನವರನ್ನು ಸಂಗೊಳ್ಳಿರಾಯಣ್ಣ ನಾಟಕದ ಒಂದು ದೃಶ್ಯವನ್ನು ಅಭಿನಯಿಸಲು ಆಹ್ವಾನಿಸಲಾಯಿತು.

ಎಂ. ಆರ್. ಲಕ್ಷ್ಮಣಪ್ಪನವರು ಆಗ ಚಲನಚಿತ್ರನಟರೆಂದು ಪ್ರಸಿದ್ಧರಾಗಿದ್ದರು. ಒಂದೆರಡು ಚಲನಚಿತ್ರಗಳಲ್ಲಿ ಅಭಿನಯಿಸಿದ್ದರು. ಇವರು ಪ್ರಸಿದ್ಧ ರಂಗಭೂಮಿಯ ಕಲಾವಿದ ರಾಜ್‌ಕುಮಾರ್, ನರಸಿಂಹರಾಜು, ಬಿ.ಸರೋಜಾದೇವಿಯವರ ಜೊತೆಯಲ್ಲಿ ಗುಬ್ಬಿ ವೀರಣ್ಣನ ನಾಟಕ ಕಂಪನಿಯಲ್ಲಿ ನಾಟಕ ಆಡಿದವರು. ಬೇಡರ ಕಣ್ಣಪ್ಪ ನ ಪಾತ್ರವನ್ನು ಅಭಿನಯಿಸುತ್ತಿದ್ದರು. ಸುಂದರವಾದ ಈ ವ್ಯಕ್ತಿ ಅಜಾನುಬಾಹುವಾಗಿದ್ದರು. ಜೊತೆಗೆ

ನೇಮಕಲ್ಲಪ್ಪನವರಿಗೆ ಮಾರ್ಗದರ್ಶಿ. ನೇಮಕಲ್ಲಪ್ಪ ನಾಟಕಗಳಲ್ಲಿ ಅಭಿನಯಿಸಲು ಲಕ್ಷ್ಮಣಪ್ಪನವರೇ ಸ್ಫೂರ್ತಿ. ಈಗ ಲಕ್ಷ್ಮಣಪ್ಪನವರು ನಿಧನರಾಗಿ ಬಹಳ ವರ್ಷಗಳೇ ಸಂದಿವೆ.

ಲಕ್ಷ್ಮಣಪ್ಪನವರು ಸಂಗೊಳ್ಳಿರಾಯಣ್ಣ ನಾಟಕದ ವೆಂಕನಗೌಡನ ಪಾತ್ರಕ್ಕೆ ನೇಮಕಲ್ಲಪ್ಪನಿಗೆ ತಿಳಿಸಿದರು. ಬ್ರಿಟೀಷ್ ಅಧಿಕಾರಿಯಾದ ಫ್ಲಿಕರಿಂಗನ ಪಾತ್ರಕ್ಕೆ ಎಂ. ಡಿ. ಜಯಣ್ಣನವರನ್ನು ಕರೆಸಲಾಯಿತು. ರಾಯಣ್ಣನನ್ನು ಬಂದಿಸಿ ಕರೆತರಲು ಇಬ್ಬರು ಪೋಲೀಸ್ ಪಾತ್ರಧಾರಿಗಳು ಬೇಕಿತ್ತು. ಅವರನ್ನು ಕಾಪರಹಳ್ಳಿಯಲ್ಲೇ ನೋಡಿಕೊಂಡ-ರಾಯಿತೆಂದು ಸಜ್ಜಾಗಿ ಹೊರಟಾಗ ಪೊಲೀಸ್ ಪಾತ್ರಧಾರಿಗಳಿಗೆ ಮಲ್ಲಪ್ಪನ ಹಳ್ಳಿಯ ಇಬ್ಬರು ಗೊಲ್ಲರ ಹುಡುಗರು ಸಿಕ್ಕರು. ಲಕ್ಷ್ಮಣಪ್ಪ ತಮ್ಮ ಬಳಿ ಇದ್ದ ಪೊಲೀಸ್ ಡ್ರಸ್ಸು, ಲಾಠಿ, ಬೂಟುಗಳನ್ನು ಕೊಟ್ಟು ತರಬೇತಿ ನೀಡಿದರು.

ವಂಕನಗೌಡ ಮತ್ತು ಬ್ರಿಟಿಷ್ ಅಧಿಕಾರಿ ಫ್ಲಿಕರಿಂಗ್ ಪಿತೂರಿ ನಡೆಸಿ ಸಂಗೊಳ್ಳಿರಾಯಣ್ಣನನ್ನು ಕರೆತಂದಿರುತ್ತಾರೆ. ರಾಯಣ್ಣನನ್ನು ಸರಪಳಿಯಲ್ಲಿ ಬಂದಿಸಿ ಎರಡು ಪಾರ್ಶ್ವಗಳಲ್ಲಿ ಪೋಲೀಸರು ಹಿಡಿದು ಬರುತ್ತಿರುತ್ತಾರೆ. ಫ್ಲಿಕರಿಂಗ್ ರಾಯಣ್ಣನಿಗೆ ಆಮಿಷಗಳನ್ನು ಒಡ್ಡುತ್ತಾನೆ. ಕ್ರುದ್ಧನಾದ ರಾಯಣ್ಣ ಪೋಲೀಸರಿಂದ ಜಗ್ಗಿಕೊಂಡು ಬಂದು ಫ್ಲಿಕರಿಂಗ್ ನನ್ನು ಥಳಿಸುವ ಸನ್ನಿವೇಶ. ರಾತ್ರಿ ೧೦.೦೦ ಘಂಟೆಗೆ ನಾಟಕ ಆರಂಭವಾಗಬೇಕಿತ್ತು. ಸಂಜೆ ೭.೦೦ ಘಂಟೆಗೆ ಎಲ್ಲರೂ ಮೇಕಪ್ ಮಾಡಿಕೊಳ್ಳತೊಡಗಿದರು. ಪೋಲೀಸ್ ಪಾತ್ರಧಾರಿಗಳು ಡ್ರಸ್ಸು ಹಾಕಿಕೊಂಡು ಹೊರಗೆ ಅಡ್ಡಾಡಿಕೊಂಡು ಬರಲು ಹೊರಟರು. ಲಾಠಿಯ ಬಡಿತ, ಬೂಟಿನ ಶಬ್ದ ಅವರ ತಲೆ ತಿರುಗಿಸಿತು.

ಆ ಹಳ್ಳಿಯಲ್ಲಿ ಒಂದು ಏಳೆಂಟು ಹುಡುಗರು ಒಂದು ಗುಡಿಸಲಿನಲ್ಲಿ ಚಿಮಣಿ ದೀಪ ಇಟ್ಟುಕೊಂಡು ಇಸ್ಪೀಟ್ ಆಡುತ್ತಿದ್ದರು. ಇದನ್ನು ತಿಳಿದಿದ್ದ ಈ ಪೋಲೀಸ್ ಪಾತ್ರಧಾರಿಗಳು ನಿಧಾನವಾಗಿ ಗುಡಿಸಲಿನ ಬಳಿ ಹೋಗಿ ಲಾಠಿಯಿಂದ ಜೋರಾಗಿ ಬಡಿದು, ಬೂಟಿನ ಶಬ್ದ ಮಾಡುತ್ತಾ, ಶಿಳ್ಳೆ ಹಾಕುತ್ತಾ ಅಪರಿಚಿತ ಧ್ವನಿಯಿಂದ ಕೂಗಿದರು. ಇವರನ್ನು ನೋಡಿದ್ದೇ ತಡ, ಪೋಲೀಸರು ಬಂದರು ಎಂದು ಕೂಗಿಕೊಂಡು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದರು. ಆ ಗುಡಿಸಲಿಗೆ ಒಂದೇ ಬಾಗಿಲಿತ್ತು. ಪೋಲೀಸರು ಬಾಗಿಲ ಬಳಿ ಇದ್ದುದರಿಂದ ಹಿಂಬದಿಯ ಗುಡಿಸಲನ್ನೇ ಕಿತ್ತು ಹಾರಿ ಓಡಿ ಹೋದರು. ಇಸ್ಪೀಟ್ ಎಲೆಗಳು, ದುಡ್ಡು ಅನಾಥವಾಗುಳಿದವು. ಅಲ್ಲಿದ್ದ ದುಡ್ಡನ್ನು ಜೇಬಿಗೆ ಇಳಿಬಿಟ್ಟುಕೊಂಡು ಈ ಡೂಪ್ಲಿಕೇಟ್ ಪೋಲೀಸರು ನಗುತ್ತಾ ಹಿಂತಿರುಗಿದರು.

ಹುಡುಗರು ಹಾರಿ ಓಡಿ ಹೋಗುವಾಗ ಅನೇಕ ಅನಾಹುತಗಳಾದವು. ಗುಡಿಸಲ ಹಿಂಬಾಗದಲ್ಲಿ ಹಾಳು ಬಾವಿಯಿತ್ತು. ಅಕ್ಕಪಕ್ಕಗಳಲ್ಲಿ ಸೀಮೆ ಜಾಲಿ ಒತ್ತಾಗಿ ಬೆಳೆದಿತ್ತು. ಅವಸರದಲ್ಲಿ ಒಂದಿಬ್ಬರು ಬಾವಿಗೆ ಬಿದ್ದರು. ಒಬ್ಬನ ಕೈ ಮುರಿದರೆ, ಇನ್ನೊಬ್ಬನ ಕಾಲು

ಮುರಿಯಿತು. ಒಬ್ಬರು ಸೊಂಟ ಉಳುಕಿಸಿಕೊಂಡರು. ಮಿಕ್ಕವರು ಸೀಮೆ ಜಾಲಿಯಿಂದ ಮೈ ಕೈ ಎಲ್ಲಾ ಪರಚಿಕೊಂಡರು. ತಮಾಸೆ ಹೋಗಿ ಅಮಾಸೆಯಾಯಿತು.

ಸ್ವಲ್ಪ ಹೊತ್ತಿನಲ್ಲೇ ನಿಜಾಂಶ ತಿಳಿಯಿತು. ಇವರು ನಿಜವಾದ ಪೋಲೀಸರಲ್ಲ. ನಾಟಕ ಆಡಲು ಮಲ್ಲಪ್ಪನಹಳ್ಳಿಯಿಂದ ಬಂದಿರುವ ಜನಗಳು ಎಂದು ಅನಾಹುತ ಮಾಡಿಕೊಂಡ ಹುಡುಗರು, ಅವರ ಕೆಲವು ಬಂಧುಗಳು ಸಿಟ್ಟಿನಿಂದ ವೇದಿಕೆ ಮುಂದೆ ಜಮಾಯಿಸಿದರು. ಯಾರು ಅವರು ಕಳ್ಳ ಪೋಲೀಸಿನವರು. ಮಲ್ಲಪ್ಪನ ಹಳ್ಳಿಯವರು, ನಾಟಕ ಆಡೋಕೇ ಅಂತ ಇಲ್ಲಿ ಬಂದು ಅವಾಂತರ ಮಾಡಿದ್ದಾರೆ. ಅವರಿಗೆ ಹೊಡೆದು ಬಿಡುತ್ತೇವೆ. ಕಡಿದು ಬಿಡುತ್ತೇವೆ. ಅದೆಂಗೆ ನಾಟಕ ಆಡುತ್ತಾರೆ? ನೋಡಿಬಿಡುತ್ತೇವೆ? ಎಂದು ದೊಡ್ಡ ಗಲಾಟೆ ಆರಂಭಿಸಿಬಿಟ್ಟರು.

ಇದಾವುದು ತಿಳಿಯದ ಸಂಗೊಳ್ಳಿರಾಯಣ್ಣ, ವೆಂಕನಗೌಡ, ಫ್ಲಿಕರಿಂಗ್ ಪಾತ್ರಧಾರಿಗಳು ಪೊಲೀಸರನ್ನು ಹುಡುಕತೊಡಗಿದರು. ಅನಾಹುತ ಸೃಷ್ಟಿಸಿದ್ದ ಪೊಲೀಸರು ಮರೆಯಲ್ಲಿ ನಿಂತು ನೋಡತೊಡಗಿದ್ದರು. ಪರಿಸ್ಥಿತಿ ವಿಕೋಪಕ್ಕೆ ಹೋಗತೊಡಗಿತ್ತು.

ಅಷ್ಟರಲ್ಲಿ ಆ ಊರಿನ ಯಜಮಾನ ನಿಜಸ್ಥಿತಿ ತಿಳಿದು, ಲೇ, ಪಾಪ...ಅವರು ನಾಟಕ ಆಡಕ್ಕೆ ಅಂತ ಬಂದಿದ್ದಾರೆ. ಪೊಲೀಸರ ವೇಷ ಹಾಕಿಸಿ ದುರುದ್ದೇಶದಿಂದ ಏನೂ ನಿಮ್ಮ ಬಳಿ ಕಳುಹಿಸಿಲ್ಲ. ಅವರದೇನೂ ತಪ್ಪಿಲ್ಲ ಎಂದು ನೆರೆದ ಜನರನ್ನು ಸಮಾಧಾನಪಡಿಸಿ ನಾಟಕ ಆಡಲು ಅನುಮತಿ ಕೊಡಿಸಿದರು.

ನಾಟಕ ಮುಗೀಲಿ, ಆಮೇಲೆ ಅವರ ವಿಚಾರ ಮಾಡುತ್ತೇವೆ ಎಂದು ಜನರು ಗದರಿಸಿ ನಾಟಕ ನೋಡಲು ಕುಳಿತರು. ಇವರು ನಾಟಕ ಬಹಳ ಚೆನ್ನಾಗಿ ಆಡಿದರು, ನಾಟಕ ಮುಗಿದ ಮೇಲೆ ಮತ್ತೇನು ಕಾದಿದೆಯೋ? ಎಂದು ಸಮಾಧಾನ ಮಾಡಿದ ಯಜಮಾನನನ್ನು ಜೊತೆಯಲ್ಲಿರಿಸಿಕೊಂಡು ಅವರ ಮನೆಗೆ ಹೋದರಂತೆ.

ಯಜಮಾನ ಮನೆಯಲ್ಲಿ ಅಷ್ಟು ಹೊತ್ತಿನಾಗೆ ಊಟ ಹಾಕಿಸಿದ ಮನೇಲಿ ದೀಪ ಆರಿಸಿಕೊಂಡು ಸ್ವಲ್ಪ ಹೊತ್ತು ಇದ್ದು, ಜನ ಎಲ್ಲಾ ಹೋಗುವ ತನಕ ಕಾದು ಕತ್ತಲಲ್ಲಿ ಕಳ್ಳರಂತೆ ಕಾಪರಹಳ್ಳಿಯಿಂದ ಹೊರಟು ಬೆಳಗಾಗುವುದರೊಳಗಾಗಿ ಮಲ್ಲಪ್ಪನಹಳ್ಳಿ ಸೇರಿದ ಕತೆಯನ್ನು ನೇಮಕಲ್ಲಪ್ಪ ತಮಾಷೆ, ಭಯ, ಕಾತುರತೆಯಿಂದ ತಿಳಿಸಿದರು.

**ರಂಗಸಜ್ಜಿಕೆಯಲ್ಲಿ ಅವಮಾನ**

ಮಲ್ಲಪ್ಪನ ಹಳ್ಳಿಯಲ್ಲಿ ವೀರ ಅಭಿಮನ್ಯು ಅರ್ಥಾತ್ ಚಕ್ರವ್ಯೂಹ ನಾಟಕವನ್ನು ಒಮ್ಮೆ ಅಭಿನಯಿಸುತ್ತಿದ್ದರು. ನಾಟಕದ ಮಧ್ಯೆ ಒಂದು ದೋಷ ಕಾಣಿಸಿಕೊಂಡಾಗ ಒಂದು

ಪಾತ್ರ ವಹಿಸಿದ್ದ ನೇಮಕಲ್ಲಪ್ಪ ಅದನ್ನು ಸೂಚಿಸಿ ತಿದ್ದಲು ಹೊರಟರು. ಇತರ ಪಾತ್ರಧಾರಿಗಳಲ್ಲೊಬ್ಬ ನೇಮಕಲ್ಲಪ್ಪನ ಎದೆ ಹಿಡಿದು ತಳ್ಳಿದ. ಭಾಗವತನಂಗೆ ಇಲ್ಲಿ ದೊಡ್ಡಸ್ಥಿಕೆ ಮಾಡಾಕೆ ಬಂದಿದ್ದೀಯಾ? ಹೋಗೋ, ನೀನು ಯಾವ ಸೀಮೆ ಭಾಗವತ ಎಂದು ಜರಿದ. ಗ್ರಾಮಸ್ಥರ ಎದುರಿಗೆ ಆದ ಈ ಅವಮಾನದಿಂದ ನಾನೊಬ್ಬ ಶ್ರೇಷ್ಠ ಭಾಗವತನಾಗಬೇಕೆಂಬ ಛಲ ಮೂಡಿತು. ಕಾರ್ಯರೂಪಕ್ಕಿಳಿಸುವ ಪ್ರಯತ್ನ ತಕ್ಷಣ ಆರಂಭವಾಯಿತು. ತನ್ನ ಗುರು ಚಿಕ್ಕತಿಮ್ಮಯ್ಯನನ್ನು ನೆನೆದು ಯುವಕರ ತಂಡ ರೂಪಿಸಿಕೊಂಡು ಪ್ರಾಕ್ಟಿಸ್ ಕೊಡಲಾರಂಭಿಸಿದರು. ತನ್ನ ಜೊತೆಗೆ ನಾಟಕ ಆಡುತ್ತಿದ್ದ ಟಿ. ಭೀಮಯ್ಯ, ಕುರಿ ತಿಮ್ಮಯ್ಯ, ಸಾರಥಿ ಚಿಕ್ಕಪ್ಪ ಮೊದಲಾದವರು ಸಹಕಾರ ನೀಡಿದರು.


ನಾಟಕ ಏನೋ ರೆಡಿಯಾಯಿತು. ನಾಟಕವನ್ನು ಎಲ್ಲಿ ಆಡಿಸಬೇಕು ಎಂಬ ಚಿಂತೆ ನನಗೆ ಶುರುವಾಯಿತು. ನಾಟಕ ಚೆನ್ನಾಗಿ ಬರೆದಿದ್ದರೆ ಎಂಬ ಭಯ ಕಾಡತೊಡಗಿತು. ಮೊದಲೆ ಅವಮಾನವಾಗಿದೆ, ಅಂತದ್ದರಲ್ಲಿ ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡರು ಅನ್ನಂಗೆ ಆಗಿಬಿಟ್ಟರೆ ಏನುಗತಿ? ಎಂದೆಲ್ಲಾ ಯೋಚಿಸಿದೆ. ಕೊನೆಗೆ ನಾಟಕವನ್ನು ಎ.ಕೆ. ಕಾಲೋನಿಯಲ್ಲಿ ಆಡಿಸುವುದು ಎಂದು ತೀರ್ಮಾನಿಸಿದೆ. ಅವರಿಗೆ ನಾಟಕ ಬೇಕಾಗಿತ್ತು. ನನಗೆ ಭಾಗವತ ಅನ್ನಿಸಿಕೊಳ್ಳಬೇಕಾಗಿತ್ತು. ನಾಟಕ ಆರಂಭವಾಗುವ ಸಮಯದಲ್ಲಿ ಸುಮ್ಮನೆ ಕೆಲವು ಕಿಡಿಗೇಡಿಗಳು ಗಲಾಟೆ ಎಬ್ಬಿಸಿ ನಾಟಕಕ್ಕೆ ಭಂಗ ತರಲು ಯತ್ನಿಸಿದರು. ಆಗ ಅಲ್ಲಿದ್ದ ಕೆಲವು ಹಿರಿಯರು ಅವರೆಲ್ಲರಿಗೂ ಗಲಾಟೆ ಮಾಡಿ ನೀವು ನಾಟಕ ಆಡುವವರಿಗೆ ತೊಂದರೆ ಕೊಡಬ್ಯಾಡಿರಿ. ಇಲ್ಲದಿದ್ದರೆ ನೀವು ನಾಟಕ ಆಡಿರಿ. ನಾವು ನೋಡ್ತೀವಿ. ನಿಮ್ಮದು ಏನು ಗಲಾಟೆ? ಬೆಳಗ್ಗೆ ನೋಡಿಕೊಳ್ಳಾನ ಎಂದು ನಾಟಕ ಆಡಲು ಅವಕಾಶಮಾಡಿಕೊಟ್ಟರು. ನಾಟಕ ಬಹಳ ಚೆನ್ನಾಗಿ ಬಂತು. ನನ್ನ  ಗುರು ಚಿಕ್ಕತಿಮ್ಮಯ್ಯ ನವರ ಸಾವಿನಿಂದ ಈ ಕಲೆ ಎಲ್ಲಿ ನಶಿಸಿಹೋಗುವುದೋ ಎಂಬ ಭಯದಲ್ಲಿ ನನ್ನ ವಯಸ್ಸಿನ ಹುಡುಗರೆಲ್ಲಾ ಸೇರಿ ನನ್ನನ್ನು ನಾಟಕ ಆಡಿಸಲು ಪ್ರೇರೇಪಿಸಿದರು. ನನ್ನ ಪ್ರಯತ್ನ ಫಲ ನೀಡಿತು. ಆಗ ಊರಿನ ಹಿರಿಯರೆಲ್ಲಾ ಪರವಾಗಿಲ್ಲ ಕಣಯ್ಯಾ ನಾಟಕ ಚೆನ್ನಾಗಿ ಆಡಿಸಿದೆ.  ಚಿಕ್ಕತಿಮ್ಮಯ್ಯನವರ ನಂತರ ಒಳ್ಳೆಯ ಭಾಗವತ ಅನ್ನಿಸಿಕೊಂಡೆ ಬಿಡು ಎಂದು ಬೆನ್ನು ತಟ್ಟಿದರು ಎಂದು ನೇಮಕಲ್ಲಪ್ಪ ತಮ್ಮ ಮೊದಲ ನಾಟಕದ

ವೈಭವವನ್ನು ನೆನಪಿಸಿಕೊಂಡರು...

---

ಬಿ ಟ ಚಂದ್ರಶೇಖರ, ಕನ್ನಡ ರೀಡರ್

ಮಹಾರಾಜ ಮದಕರಿನಾಯಕ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ ೫೭೭ ೫೦೧



## ಜನಪದ ವಸ್ತ್ರವಿನ್ಯಾಸಕಾರ ಮಹೇಶ್ವರ ರಾವ್

**ಬಾಗೂರು ನಾಗರಾಜಪ್ಪ**


ಜನಪದ ಕಲೆಗಳು ಮುನ್ನೆಲೆಯಿಂದ ಹಿನ್ನಲೆಗೆ ಸರಿಯುತ್ತಿರುವ ಈ ಸಂದರ್ಭದಲ್ಲಿ ಅಂಥ ಕಲೆಗಳಿಗಾಗಿ ವಸ್ತ್ರ ವಿನ್ಯಾಸ ಮಾಡುವ ಕಲಾವಿದರು ದೊರೆಯುವುದೂ ದುರ್ಲಭವೇ ಆಗಿದೆ. ಏಕೆಂದರೆ ಜನಪದ ದೈವ, ಜಾತ್ರೆ, ಆಚರಣೆಗೆ ಸಂಬಂದಿಸಿದ ವಸ್ತ್ರ ಪರಿಕರಗಳು ಸಿದ್ಧಮಾದರಿಯಲ್ಲಿ ಸಿಗುವುದೇ ಇಲ್ಲ. ಎತ್ತುಗಳ ಮೈ ಅಲಂಕಾರಕ್ಕೆ ಬಳಸುವ ಮೈಜೂಲು, ದೇವರ ಉತ್ಸವ ಹೊರಟಾಗ ಅಕ್ಕ-ಪಕ್ಕ ಹಿಡಿಯುವ ಸೂರ್ಯಪಾನು-ಚಂದ್ರಪಾನು, ಜಾತ್ರೆಯ ಸಂದರ್ಭದಲ್ಲಿ ಏರಿಸುವ ಜಾಂಡೇವು, ತೇರಿನ ಅಲಂಕಾರಕ್ಕಾಗಿ ಇಳಿಬಿಡುವ ವ್ಯಾಸರಾಯನ ತೋಳು (ಇಳಿದಿಂಬು), ದೇವರ ಭಂಟರಾಗಿ ಕುಣಿಯುವವರ ನಿಲುವಂಗಿ, ಬಯಲಾಟದ ಪಾತ್ರಧಾರಿಗಳ ಉಡುಪುಗಳು ಹಾಗೂ ದೇವರ ಹೂವಿನ ಪಲ್ಲಕ್ಕಿ ತಯಾರಿಕೆ ಇಂಥ ಅಪರೂಪದ ವಸ್ತುಗಳ ನಿರ್ಮಾಣದಲ್ಲಿ ಸಿದ್ಧಹಸ್ತರಾಗಿರುವ ಮಹೇಶ್ವರರಾವ್ ಅವರ ಬದುಕಿನ ಚಿತ್ರಣ ಇಲ್ಲಿದೆ.

ಅಪರೂಪದ ಕಲಾವಿದನನ್ನು ಪರಿಚಯಮಾಡುತ್ತಿರುವ ಬಾಗೂರು ನಾಗರಾಜಪ್ಪನವರು ವೃತ್ತಿಯಿಂದ ಭೂಮಾಪನ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರೂ, ಪ್ರವೃತ್ತಿಯಿಂದ ಸಾಹಿತ್ಯಾಸಕ್ತರಾಗಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲ್ಲೂಕಿನ ಜಾನಪದವನ್ನು ಕುರಿತು ಗಂಭೀರವಾದ ಕೆಲಸ ಮಾಡಿರುವ ಅವರು ಹೊಸದುರ್ಗದ ಸುತ್ತ, ಹೊಸದುರ್ಗ ತಾಲ್ಲೂಕು ದರ್ಶನ ಕೃತಿಗಳನ್ನು ಪ್ರಕಟಿಸಿದ್ದಾರೆ.

---

ಮಹೇಶ್ವರ ರಾವ್, ಜನಪದ ವಸ್ತ್ರವಿನ್ಯಾಸಕಾರ,

ಬಾಗೂರು ಅಂಚೆ, ಹೊಸದುರ್ಗ ತಾ, ಚಿತ್ರದುರ್ಗ ಜಿಲ್ಲೆ



**ಊರಿನ ವೈಭೋಗ**

ನನ್ನೆಸ್ರು ಮಯೇಸ್ವರ್ರಾವ್ ಅಂತ. ನಮ್ಮಪ್ಪನ ಕಾಲ್ದಿಂದ್ಲೂ ಬಾಗೂರಲ್ಲೆ ಬೆಳ್ದೋನು. ನಮ್ಮಪ್ಪನ್ಹೆಸ್ರು ನಾಗೇಂದ್ರಪ್ಪ, ನಮ್ಮವ್ವನ್ಹೆಸ್ರು ಗಂಗಮ್ಮ, ಅವ್ರೆಲ್ಲರೂ ಈಗ ಇಲ್ಲ. ಬಾಗೂರು ಅಂದ್ರೆ ನಂಗೆ ಸ್ಯಾನೆ ಪ್ರೀತಿ, ಯಿಂದಿನ ಕಾಲ್ದಾಗೆ ಸಣ್ಣಕ್ಕಿ ಬಾಗೂರು ಅಂತಿದ್ರಂತೆ. ಈಗ್ಲೂ ಏಸೋಜನ ಅಂಗೇ ಕರಿಯಾದು. ತುಂಬಾ ಯಿಂದಿನ್ ಕಾಲ್ದಾಗೆ ಬಾಗ್ಯಪುರ ಅಂತಿದ್ರಂತೆ. ಅಂಗಂತಾ ಸಾಸುನದ ಕಲ್ಲಾಗೆ ಬರ್ದಿದಾರೆ ಅಂತ, ತಿಳ್ದಾರು ಕತೆ ಸಮೇತವಾಗಿ ಯೇಳ್ತಾರೆ. ಬಾಗೂರು ಬೋ ಸುಂದ್ರುವಾದ ಅಳ್ಳಿ.

ಈ ಊರು ನೋಡಾಕೆ ತುಂಬಾ ಚನಾಗೈತೆ, ಮೂಗ್ಗಡೆ ಮುತ್ತಿನಕೆರೆ ಇದ್ರೆ, ಪಡುಗಡೆ ಇರಾದೇ ಚಿನ್ನದಕೆರೆ . ಕೇರಿಗಳ್ ಸುತ್ತಾ ಸುಂದ್ರವಾದ ತೆಂಗಿನ್ ತ್ವಾಟಗಳು, ಗದ್ದೆಗ್ಳು ಅದಾವೆ. ಊರ್ತುಂಬಾ ವಿಪರೀತ ಗುಡಿಗ್ಳು – ಮಟ - ಮಂದ್ರ ಅದಾವೆ. ಈ ಊರ್ನಾಗಿರೋವಷ್ಟು ಸಾಸ್ನದ ಕಲ್ಗುಳು ಇಡೀ ತಾಲ್ಲೋಕ್ನಾಗೆ ಯಾವೂರ್ನಾಗು ಇಲ್ಲ. ಯಿಂದೆ ಪಾಳೇಗಾರು ಆಳ್ತಿದ್ದಾಗ ಬಾಗ್ಯಪುರ ಬಾಳಾ ಸ್ತ್ರೀಮತ್ತಾಗಿತ್ತಂತೆ, ಬೂದಾಳು ಪಾಳೇಗಾರ ಈ ಊರಿನ ಪಾಳೇಗಾರ ಒಳ್ಳೆ ಗೆಣೆಯ್ರಾಗಿದ್ರಂತೆ. ವೈರಿಗ್ಳು ದಂಡೆತ್ತಿ ಬಂದು ಬಾಗ್ಯಪುರಾನೆಲ್ಲ ದೋಚಿ ಬರೇಡ್ಮಾಡಿದ್ರಂತೆ.

ಬಾಗೂರಿನ ಗೆದ್ದೆಗಳಾಗೆ ಬೆಳೀತಿದ್ದ ಸಣ್ಣಕ್ಕಿ ಸೀಮೆ ತುಂಬ ಯೆಸ್ತಾಗಿತ್ತು. ಇಲ್ಲಿನ ಸಣ್ಣಕ್ಕಿ ದೂರದ ಊರ್ಗಳಿಗೆಲ್ಲಾ ಓಗ್ತಿತ್ತಂತೆ. ಕೆರೆ ತುಂಬಿದ್ದರ್ಸ ಕೇಸದೇವ್ರ ತೆಪ್ಪಾ' ಮಾಡ್ತಾರೆ. ವರ್ಸಕ್ಕೊಂದ್ಸಲ ಚನ್ನಕೇಸವನ ರತೋತ್ಸುವ ಪುಬ್ಬಾ ನಕ್ಷತ್ರದ ದಿವ್ಸ  ನೆಡತ್ತೆ. ತೇರಾದಾಗ್ನಿಂದ ಉಗಾದಿ ಅಬ್ಬದತಂಕಾ ದನಗಳ ಜಾತ್ರೆ ನೆಡ್ಯುತ್ತೆ. ಯಿಂದೆಲ್ಲಾ ಬಾಳಾ ಜೋರಾಗಿರ್ತಿತ್ತು. ಈಗ ಅಸ್ಟಕಷ್ಟೇ.

ವಸದುರ್ಗ ಮತ್ತು ವಸದುರ್ಗ ರೇಲುನಿಲ್ದಾಣದ ಮಾರ್ಗ ಮಧ್ಯದಾಗಿರೋ ಈ ಬಾಗೂರು, ನಂಗೆ ಬಾಳಾ ಇಷ್ಟ. ಈ ಊರಿನ ಬಗ್ಗೆ ನಂಗೆ ಎಲ್ಲಿಲ್ಲ ಗೌರ್ವ ಐತೆ. ಅಬ್ಬ ಹರಿದಿನಗಳಾಗೆ ಊರ ಜನ್ಗಳ ಸದಗ್ರ ಹೇಳತೀರ್ದು. ದಸ್ರದಾಗಂತೂ ಊರಿನ ಎಲ್ಲಾ ದೇವ್ರುಗಳ ವೊಲ್ಸಿಸ್ಕೊಂಡು, ಊರ ವೊರಗಿನ ತೋಪಿಗೆ ಅಂಬುವೊಡಿಯೋಕೆ ವಾದ್ಯಗಳ ಸದ್ದಿನೊಂದಿಗೆ ಮೋಗಿಬರುವ ದೃಶ್ಯವನ್ನು ಮರ್ಯಾಕೇ ಆಗಲ್ಲ. ಜನ್ಗುಳ ಸಂಭ್ರಮ ಅಂಥಾದ್ದು. ಈ ಊರ್ರಿನ ನೂರಾರು ಜನ್ರು ವಿದ್ಯಾವಂತ್ರಾಗಿ ನೌಕ್ರಿಮ್ಯಾಗೆ ಬ್ಯೇರೆ ಕಡೀಕೆ ವೋಗಿದ್ದಾರೆ. ಕೇಸರ್ದೇವ್ರು ತೇರಿನ ಸಂದರ್ಭದಾಗೆ ಅವೆಲ್ಲಾ ಊರಿಗೆ ಬತ್ತಾರೆ.

ಬಾಗೂರಿನ ಸುತ್ತಾ ಅನಿವಾಳ, ಕೊಂಡಾಪುರ, ನಾಗೇನಹಳ್ಳಿ, ವೊನ್ನೇಕ್ಯೆರೆ, ಅಳ್ಳಿಅಳ್ಳಿ, ನೀರ್ಗುಂದ, ಪಾಳದ್ದ ಳ್ಳಿ, ಶ್ರೀರಂಗಪುರ, ವೊಸಕುಂದೂರು, ಅಳೇಕುಂದೂರು, ಬಳ್ಳೇಕೆರೆ, ಕೃಷ್ಣಾಪುರ ಮುಂತಾದ ಅಳ್ಳಿಗುಳದಾವೆ. ನೀರ್ಗುಂದಕ್ಕೆ ಯಿಂದಿನ ಕಾಲ್ದಾಗೆ ನೀಲಾವತೀ ಪಟ್ಟ ಅಂತಿದ್ರಂತೆ. ಅದು ಪ್ರಾಚೀನ ಕಾಲದ್ದು ಅಂತಾರೆ. ವೊನ್ನೇಕೆರ್ಯಾಗೆ ಸೀಮಂತರಿದ್ರಂತೆ, ಬಾಗೂರಿನ ಸುತ್ತ ಕ್ವಾಟೆ ಕೊತ್ತ  ಇತ್ತಂತೆ. ಈಗೂ ಅದ್ರ ಕುರುವು ಅದಾವೆ. ಸ್ವತಂತ್ರ ವೋರಾಟದ ಕಾಲ್ದಾಗೆ ಈ ಊರಿನ ಬಾಳಾಜನ ಮನೆ ಮಟ ತೊರ್ದು ಮೂವರು ಇದುವರೀಗೆ ಈ ಸ್ವತಂತ್ರ ವೋರಾಟಕ್ಕೆ ಹೋಗಿದ್ರು, ಬಾಗೂರಿನ ಇಬ್ರು – ತಾಲ್ಲೋಕ್ನ ಎಮ್ಮೆಲ್ಯೆ ಆಗಿದ್ದಾರೆ! ತಾಲ್ಲೂಕಿನ ಇನ್ನೂರಿಪ್ಪತ್ತೈದು ಅಳ್ಳಿಗುಳಾಗೆ ಬಾಗೂರಿನದೇ ಒಂದು ಬಿಗುಮಾನದ ಕತೆ, ಬಾಗೂರಿನ ಸಂತೆ ಕೂಡಾ ಯಿಂದಿನ ಕಾಲ್ದಾಗೆ ಯೆಸ್ರುವಾಸಿಯಾಗಿತ್ತು. ಯಿಂದಿನ ಕಾಲ್ದಾಗೆ ಬಾಗೂರಗೆ ಮುಸಲ್ಮಾನ್ನು ಬ್ಹಾಳಾಜನ ಇದ್ರಂತೆ, ಯಿಂದ ರೇಲ್‌ದಾರಿ ಬಾಗೂರು ಮೂಲ್ಕ ಆದುವೋಗಂಗೆ ಸರ್ವೆ ಆಗಿತ್ತಂತೆ. ಆದ್ರೆ ಜನ ಯೆದಿರೊಂಡು ಊರ್ಹತ್ರ ರೈಲು ಬರೋದು ಬ್ಯಾಡ ಅಂತ ವೋರಾಟ ಮಾಡಿದ್ರಿಂದ ರೈಲು ದಾರಿ ಸ್ವಲ್ಪ ದೂರಕ್ಕೆ ವೋತಂತೆ. ರೇಲು ಅತ್ರದಾಗಿದ್ರೆ ರೋಗರುಜ್ನು ಯೆಚ್ಚಾಗುತ್ತೆ, ಅಂತ ಆಗಿನ ಜನಕ್ಕೆ ಯೆದ್ರಿಕತ್ತು. ಯಾಕಂದ್ರೆ ಯಿಂದೆಲ್ಲಾ ಪ್ಲೇಗು, ಕಾಲ್ರ  ಮುಂತಾದ ರೋಗಕ್ಕೆ ವಿಪ್ರೀತ ಜನ ಬಲಿಯಾಗಿದ್ರು.

ಬಾಗೂರ್ನಾಗೆ ನಾನಾ ಜಾತಿ ಜನ ಒಗ್ಗಟ್ಟಿಂದ ಅದಾರೆ, ಬಾಗೂರಿನ ಜನ ಅಂದ್ರೆ ವೋರಾಟದ ಬಾವ್ನೆ ಇರೋ ಜನಾಂತ ತಾಲ್ಲೋಕ್ಕಾಗೆ ಈಗ್ಲೂ ಯೆಸ್ರೈತೆ.

ಪಾಳೇಗಾರ್ರ ಕಾಲ್ದಾಗೆ ಬಾಗೂರು ಎಲ್ತು ಊರಾಗಿತ್ತಂತೆ, ಒಂದು ಬಾಗ್ಯಪುರಿ ಅಂತೂ ಮತ್ತೊಂದು ಚಂದ್ರಾಪುರಿ ಅಂತೂ ಯೆಸ್ರು ಪಡ್ಸಿದ್ದು, ಯೆಲ್ಡೂರ್ನಾಗು ಯೆಬ್ಬಾಗ್ಲು ಇದ್ದಂತೆ. ಕೇಸೇದೇವ್ರ ಗುಡಿ ಮುಂದಿನ ಜಾಗ್ದಗೆ ದೊಡ್ಡ ಬುರ್ಜು ಇತ್ತೂಂತ ಯೇಳ್ತಾರೆ. ಆ ಬುರ್ಜು ಕೆಡ್ಡಿ ತಗ್ಗು ರಸ್ತೆ ಮಾಡಿದ್ದಾರೆ.

ಚನ್ನಕೇಸೇದೇವು ತೇರಿನ ಮ್ಯಾಲೆ ನೆಯ್ದು, ಗಾಂದಿ ಗೊಂಬೆಗಳ್ನ ಕೆತ್ತಿರಾದ ಈ ಊರಿನ ಜನಕ್ಕೆ ದೇಸಪ್ರೇಮ ಎಸ್ಟೂ ಅನ್ನಾದನ್ನ ತೋರ್‍ಸ್ತೆತೆ. ಈ ಊರಿನ ನರಸಿಂಮ್ರೆಡ್ಡಿ, ನಾಗಣ್ಣ, ಯೆಂಕಟ್ರಾಮಯ್ಯ, ರಾಮಯ್ಯ, ಕರೀಂಖಾನ್ರು, ಸೇಕ್ ಸಾಬ್ರು............ ಮುಂತಾದೋರು ಸ್ವಂತಂತ್ರ ವೋರಾಟಗಾರಾಗಿ ಯಸ್ರು, ಪಡುದ್ರು.

ಚನ್ನಕೇಸವ ಗುಡಿಯಾಗಿರೋ ಆಳೆತ್ರದ ಗಲ್ದ (ಕಂಚಿನ್ಗರ್ದ) ಮೂರ್ತಿ ಪಾಳೇಗಾರ್ರು ಕಾಣೆ ಕೊಟ್ಟಿದ್ರು. ನೋಡಾಕೆ ತುಂಬಾ ಸುಂದ್ರವಾಗೈತೆ, ಗುಡಿ ಮುಂದಿನ ಗರುಡ್ದಂಬ ಇನ್ನೊಬ್ಬ ಪಾಳೇಗಾರ ಆಕ್ಸಿದ್ದು, ಆಯ್ವತ್ತಡಿ ಎತ್ರದ ಒಂದೇ ಕಲ್ಲಿಂದು. ಓರ್ಗಲ್ಲಮ್ಮನ ಗುಡಿ, ಬನಶಂಕರಿ ಗುಡಿ, ಪಾಂಡುರಂಗ, ಮೈಲಾರದೇವ್ರ ಗುಡಿ, ಪರಪ್ಪಸ್ವಾಮಿ ಮಠ, ಬಯಲು ಬಸವಣ್ಣ, ಕೋಡ್ಡಲ್ಪತ್ರದ ತೋಪು ಮುಂತಾದವೆಲ್ಲಾ ಬಾಗೂರಗೆ ನೋಡ್ಬೇಕಾದಂತವು. ರೇವಣ್ಣಪ್ಪನ ಗದ್ದುಗೈತೆ. ಯಿಂದಿನ ಕಾಲ್ದಾಗೆ ನಾಕು ಲಿಂಗಾಯ್ತರ (ಜಂಗಮ) ಮಟಗಳಿದ್ದಂತೆ. ಈ ಊರಿನ ಯಿಂದಿನಕಾಲ್ದ ವೈಭೋಗಾನೆಲ್ಲ ತಿಳ್ಕಾಬೇಕಾದ್ರೆ ಸಿರ್ರಮ್ಮಣ್ಣನಾಯಕ್ನ ಕತೆ ಓದ್ಬೇಕಂತೆ.

**ಒಂದು ತಮಾಸೆ ಕತೆ**

ಬಾಗೂರು ಯಿಂದಿನಕಾಲ್ದಾಗೆ ತುಂಬ ಸಂಪತ್ತುಳ್ಳ ಪಟ್ಟ ಆಗಿತ್ತಂತೆ. ಸುತ್ತುಮುತ್ತಲ ಬ್ಯಾರೆ ರಾಜಿಗೆಲ್ಲಾ ಬಾಗುರಿನ ಮ್ಯಾಗೆ ಕಣ್ಣು ಬಿದ್ದಿತ್ತಂತೆ. ಯಂಗೇ ಇರ್ಬೇಕಾದ್ರೆ, ಒಬ್ಬ ಎದ್ರಾಳಿ ದೊರೇ ಸೈನ್ಯದ ಮುಕಂಡ ಒಂದಿಟು ಸೈನ್ಯ ತಗಂಡು ಬಾಗೂರ್ಮ್ಯಾಗೆ ಮುತ್ಗೇ ಆಕ್ಬೇಕಂತ ಬರ್ತಿದ್ನಂತೆ, ಬಾಗೂರು ಇನ್ನೂ ತುಂಬಾ ದೂರಾ ಇರೋವಾಗ, ದಾರ್‍ಯಾಗೆ ಎದುರಿಗೆ ಸಿಕ್ಕಿದ ಒಬ್ಬ ಮುದುಕನ್ನ ಆ ಸೈನ್ಯದ ಮುಕಂಡ ಕೇಳಿದ್ನಂತೆ, ಏನಜ್ಜಾಯಜ್ಜಾನ, ಬಾಗೂರು ಅನ್ನಾ ಪಟ್ಟ ಇನ್ನೂ ಎಷ್ಟು ದೂರ ಐತಪ್ಪಾ? ಅಂತ. ಆ ಮುದ್ಕ ಬ್ಹಾಳಾ ಕಿಲಾಡಿ ಮುದ್ಕ ಅಂತ ಆ ಸೈನಿಕಮುಕಂಡಗೆ ಗೊತ್ತಿರ್ಲಿಲ್ಲ. ಅಷ್ಟೇ ಅಲ್ಲ, ಅವಜ್ಜ ಬಾಗೂರ, ಕಡೆವು ಅಂತ್ಲೂ ಗೊತ್ತಿರ್ಲಿಲ್ಲ. ಆ ಮುದ್ಕ ಯೋಚ್ನೆ ಮಾಡಿ ತಕ್ಷಣ ಚಾಣಾಕ್ಷತನದಿಂದ ಯೋಳಿದ್ನಂತೆ- ಸ್ವಾಮಿ, ನೀವು ಬಾಗೂರ್‍ಪಟ್ಣ ಮುಟ್ಬೇಕಾದ್ರೆ ಗಂಗಸಮುದ್ರ - ಗುಂಡಸಮುದ್ರ - ಚನ್ನಸಮುದ್ರ ದಾಟಿ ವೋಗ್ಬೇಕು ಅಂದ್ನಂತೆ. ಸೈನ್ಯದ ಮುಕಂಡ ಒಂದಲ್ಲ, ಎಲ್ಲಲ್ಲ ಮೂರು ಸಮುದ್ರ ದಾಟಾದು

